| | | |
|---|---|---|
| | | ಯೋಜನೆಗಳು ಪೂರ್ಣಗೊಂಡಿದ್ದು, ಕೂಡ್ಲಿಗಿ ತಾಲೂಕಿನ 2 ಹೊಸಪೇಟೆ ತಾಲೂಕಿನ 1 ಹಾಗೂ ಬಳ್ಳಾರಿ ತಾಲೂಕಿನ 1 ಯೋಜನಾ ಗ್ರಾಮಗಳಿಗೆ ನೀರು ಸರಬರಾಜು ಮಾಡಲಾಗುತ್ತಿರುವ ಕುರಿತು.<br>• ಉಳಿದ ಎಲ್ಲಾ ತಾಲೂಕುಗಳಲ್ಲಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳು ಚಾಲನೆಯಲ್ಲಿರುವುದರ ಬಗ್ಗೆ ಎಲ್ಲಾ ಯೋಜನೆಗಳಿಗೆ ನೀರು ಸರಬರಾಜು ಅಗುತ್ತಿರುವ ಬಗ್ಗೆ ವರದಿ ಸಲ್ಲಿಸಿದರು ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ರವರಿಗೆ ಸೂಚಿಸಿದರು.<br>• ನಂತರ ಕೊಳಗಲ್ಲು ಗ್ರಾಮದ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯ ಸ್ಥಳ ಪರಿಶೀಲನೆ ಕೈಗೊಳ್ಳಲಾಯಿತು ಹಾಗೂ ಶುಧಿಕರಿಸಿದ ನೀರಿನ ಗುಣ ಪರೀಕ್ಷೆ ಮಾಡಿಸಲು ಸ್ಥಳದಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು. |
| c) | ಕ್ಷೇತ್ರ ವೀಕ್ಷಣೆ | 1. ಬಳ್ಳಾರಿ ತಾಲೂಕು ಪರಮದೇವನಹಳ್ಳಿ ಗ್ರಾಮ<br>2.ಕರ್ನಾಟಕ ಗೃಹ ಮಂಡಳಿಯ ವತಿಯಿಂದ ನಿರ್ಮಿಸಲಾಗುತ್ತಿರುವ ಜಿಲ್ಲಾ ಸಂಕಿರ್ಣಕ್ಕೆ ಭೇಟಿ<br>3.ಬಳ್ಳಾರಿ ತಾಲೂಕು ಹಲಕುಂದಿ ಗ್ರಾಮದಿಂದ ಬುರನಾರಕನಹಳ್ಳಿ ಗ್ರಾಮದ ರಸ್ತೆ ಕಾಮಗಾರಿ<br>4.ಬಳ್ಳಾರಿ ತಾಲೂಕು ಕೊಳಗಲ್ಲು ಗ್ರಾಮದಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆ |

| ಕ್ರಮ ಸಂಖ್ಯೆ | ಭೇಟಿ ನೀಡಿದ ತಾಲೂಕು / ಹಳ್ಳಿ | ಭೇಟಿ ನೀಡಿದ ಸ್ಥಳ | ಗಮಿನಿಸಿದ ಅಂಶಗಳು |
|---|---|---|---|
| 1 | 1. ಬಳ್ಳಾರಿ ತಾಲೂಕು ಪರಮದೇವನಹಳ್ಳಿ ಗ್ರಾಮ<br>2. ಬಳ್ಳಾರಿ ನಗರ<br>3. ಬಳ್ಳಾರಿ ತಾಲೂಕು ಹಲಕುಂದಿ ಗ್ರಾಮ<br>4. ಬಳ್ಳಾರಿ ತಾಲೂಕು ಕೊಳಗಲ್ಲು ಗ್ರಾಮ | 1. ಸಹಿಪ್ರಾ ಪೌಡ ಶಾಲೆ<br>2. ಜಿಲ್ಲಾ ಸಂಕಿರ್ಣ<br>3. ಲೋಕೋಪಯೋಗಿ ಇಲಾಖೆ ರಸ್ತೆ ಕಾಮಗಾರಿ<br>4. ಬಹುಗ್ರಾಮ ಕುಡಿಯುವ ನೀರಿ ಯೋಜನೆ | ಬಹುಗ್ರಾಮ ಕುಡಿಯುವ ನೀರಿನ ಯೋಜನೆ<br>• ಜಿಲ್ಲೆಯಲ್ಲಿ 69 ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿದ್ದು, ಈ ಪೈಕಿ 65 ಯೋಜನೆಗಳು ಪೂರ್ಣಗೊಂಡಿದ್ದು, ಕೂಡ್ಲಿಗಿ ತಾಲೂಕಿನ 2 ಹೊಸಪೇಟೆ ತಾಲೂಕಿನ 1 ಹಾಗೂ ಬಳ್ಳಾರಿ ತಾಲೂಕಿನ 1 ಯೋಜನಾ ಗ್ರಾಮಗಳಿಗೆ ನೀರು ಸರಬರಾಜು ಮಾಡಲಾಗುತ್ತಿರುವ ಕುರಿತು.<br>• ಉಳಿದ ಎಲ್ಲಾ ತಾಲೂಕುಗಳಲ್ಲಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳು ಚಾಲನೆಯಲ್ಲಿರುವುದರ ಬಗ್ಗೆ ಎಲ್ಲಾ ಯೋಜನೆಗಳಿಗೆ ನೀರು ಸರಬರಾಜು ಅಗುತ್ತಿರುವ ಬಗ್ಗೆ ವರದಿ ಸಲ್ಲಿಸಿದರು ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ರವರಿಗೆ ಸೂಚಿಸಿದರು.<br>ನಂತರ ಕೊಳಗಲ್ಲು ಗ್ರಾಮದ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯ ಸ್ಥಳ ಪರಿಶೀಲನೆ ಕೈಗೊಳ್ಳಲಾಯಿತು ಹಾಗೂ ಶುಧಿಕರಿಸಿದ ನೀರಿನ ಗುಣ ಪರೀಕ್ಷೆ ಮಾಡಿಸಲು ಸ್ಥಳದಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು. ಬಹುಗ್ರಾಮ ಕುಡಿಯುವ ನೀರಿನ ಯೋಜನೆ<br>• ಜಿಲ್ಲೆಯಲ್ಲಿ 69 ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿದ್ದು, ಈ ಪೈಕಿ 65 ಯೋಜನೆಗಳು ಪೂರ್ಣಗೊಂಡಿದ್ದು, ಕೂಡ್ಲಿಗಿ ತಾಲೂಕಿನ 2 ಹೊಸಪೇಟೆ ತಾಲೂಕಿನ 1 ಹಾಗೂ ಬಳ್ಳಾರಿ ತಾಲೂಕಿನ 1 ಯೋಜನಾ ಗ್ರಾಮಗಳಿಗೆ ನೀರು ಸರಬರಾಜು ಮಾಡಲಾಗುತ್ತಿರುವ ಕುರಿತು. |

| | | | |
|---|---|---|---|
| | | | • ಉಳಿದ ಎಲ್ಲಾ ತಾಲೂಕುಗಳಲ್ಲಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳು ಚಾಲನೆಯಲ್ಲಿರುವುದರ ಬಗ್ಗೆ ಎಲ್ಲಾ ಯೋಜನೆಗಳಿಗೆ ನೀರು ಸರಬರಾಜು ಅಗುತ್ತಿರುವ ಬಗ್ಗೆ ವರದಿ ಸಲ್ಲಿಸಿದರು ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ರವರಿಗೆ ಸೂಚಿಸಿದರು.<br>5. ನಂತರ ಕೊಳಗಲ್ಲು ಗ್ರಾಮದ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯ ಸ್ಥಳ ಪರಿಶೀಲನೆ ಕೈಗೊಳ್ಳಲಾಯಿತು ಹಾಗೂ ಶುಧಿಕರಿಸಿದ ನೀರಿನ ಗುಣ ಪರೀಕ್ಷೆ ಮಾಡಿಸಲು ಸ್ಥಳದಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು. |

ಶ್ರೀಕರ್. ಎಂ.ಎಸ್., ಭಾ.ಆ.ಸೇ.,
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.
ಬಳ್ಳಾರಿ ಜಿಲ್ಲೆ ಉಸ್ತುವಾರಿ
ಕಾರ್ಯದರ್ಶಿಗಳು

ಜಾವೇದ್ ಅಖ್ತರ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ದೂರವಾಣಿ : 080-22255324
080-22034234
ಫ್ಯಾಕ್ಸ್ : 080-22353916
ಇ-ಮೇಲ್: prs-hfw@karnataka.gov.in
ಕೊಠಡಿ ಸಂಖ್ಯೆ: 105, ಮೊದಲನೇ ಮಹಡಿ
ವಿಕಾಸ ಸೌಧ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು-560 001

ಸಂಖ್ಯೆ: ಆಕುಕ 278 ಪ್ರಕಾ 2019 ದಿನಾಂಕ:27.12.2019

**ಟಿಪ್ಪಣಿ**

ಮಂಡ್ಯ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯಾಗಿ ನಾನು ದಿನಾಂಕ: 19.12.2019 ರಂದು ಜಿಲ್ಲೆಗೆ ಭೇಟಿ ನೀಡಿದ್ದು, ಪ್ರವಾಸ ವರದಿಯನ್ನು ಈ ಕೆಳಕಂಡಂತೆ ಸಲ್ಲಿಸಲಾಗಿದೆ :

| ಕ್ರ. ಸಂ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಉಸ್ತುವಾರ ಜಿಲ್ಲೆಯ ಹೆಸರು | ಮಂಡ್ಯ ಜಿಲ್ಲೆ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಜಾವೇದ್ ಅಖ್ತರ್ |
| 3 | ಪ್ರವಾಸ ಕೈಗೊಂಡ ದಿನಾಂಕ | 19.12.2019 |

| | |
|---|---|
| **A** | **ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ** |
| **ಅ)** | **ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು ಮತ್ತು ನಿರ್ದೇಶನ ನೀಡಿದ ಬಗ್ಗೆ ಸಾರಾಂಶ** |
| | 1. ಮಂಡ್ಯದ ಕೆ.ಆರ್. ಪೇಟೆ ತಾಲ್ಲೂಕಿನ ಮೈ ಷುಗರ್ ಸಂಸ್ಥೆಯು 2018-19ನೇ ಸಾಲಿನಲ್ಲಿ 1,31,686 ಟನ್‌ಗಳ ಕಬ್ಬನ್ನು ಅರೆಯಲಾಗಿದ್ದು, ಪ್ರಸಕ್ತ ವರ್ಷದಲ್ಲಿ working capital ಇಲ್ಲದೇ ಇರುವುದರಿಂದ ಕಬ್ಬು ಅರೆದಿರುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ working capital ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿರುತ್ತಾರೆ ಎಂಬುದನ್ನು ಗಮನಿಸಲಾಯಿತು. |
| | 2. ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯು 2015-16ನೇ ಸಾಲಿನಲ್ಲಿ ಒಟ್ಟು 3,38,416 ಟನ್ ಕಬ್ಬನ್ನು ಅರೆಯಲಾಗಿತ್ತು. ಆದರೆ, 2016-17ನೇ ಸಾಲಿನಿಂದ ಸಂಸ್ಥೆಯು ಕಾರ್ಯನಿರ್ವಹಿಸುತ್ತಿಲ್ಲ. ಸದರಿ ಸಂಸ್ಥೆಯನ್ನು ಆರಂಭಿಸಲು ರೂ.67.50 ಕೋಟಿ ಹಣ ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ ಎಂಬುದನ್ನು ಗಮನಿಸಲಾಯಿತು. |
| | 3. ಆಗಸ್ಟ್-2019 ರ ಮಾಹೆಯಲ್ಲಿ ಉಂಟಾದ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಮನೆಗಳ ಪುನರ್ ನಿರ್ಮಾಣದ ಬಗ್ಗೆ ಪರಿಶೀಲನೆ ನಡೆಸಲಾಯಿತು. ಮಂದಗೆರೆ ಗ್ರಾಮ |

| | |
|---|---|
| | ಪಂಚಾಯತ್‌ನ ಚಿಕ್ಕಮಂದಗೆರೆ ಹಾಗೂ ಬೇವಿನಹಳ್ಳಿ ಕೊಪ್ಪಲು ಗ್ರಾಮಗಳ ಗ್ರಾಮಸ್ಥರೊಂದಿಗೆ ಚರ್ಚಿಸಲಾಯಿತು. ಮಂದಗೆರೆ ಗ್ರಾಮ ಪಂಚಾಯತ್‌ನ ಚಿಕ್ಕಮಂದಗೆರೆ ಗ್ರಾಮದಲ್ಲಿ ಒಟ್ಟು 24 ಮನೆಗಳು ಹಾಗೂ ಬೇವಿನಹಳ್ಳಿ ಕೊಪ್ಪಲು ಗ್ರಾಮದಲ್ಲಿ ಒಟ್ಟು 3 ಮನೆಗಳು ಪೂರ್ಣಪ್ರಮಾಣದಲ್ಲಿ ಹಾನಿಯಾಗಿರುತ್ತದೆ. ಸದರಿ ಮನೆಗಳ ಮಾಲೀಕರೊಂದಿಗೆ ಹಾಗೂ ಇತರೆ ಗ್ರಾಮಸ್ಥರೊಂದಿಗೆ ಚರ್ಚೆ ನಡೆಸಲಾಯಿತು. ಜಿಲ್ಲಾಡಳಿತವು ಮನೆ ನಿರ್ಮಾಣಕ್ಕೆ ಚಿಕ್ಕಮಂದಗೆರೆ ಗ್ರಾಮದಲ್ಲಿ ಸರ್ಕಾರಿ ಭೂಮಿಯನ್ನು ಗುರುತಿಸಲಾಗಿದ್ದು, ಇದು ಎತ್ತರದ ಮಟ್ಟದಲ್ಲಿರುವುದರಿಂದ ಪ್ರವಾಹದಿಂದ ಮನೆಗಳಿಗೆ ನೀರು ನುಗ್ಗುವ ಸಾಧ್ಯತೆ ಕಡಿಮೆ ಇರುತ್ತದೆ. ಅಲ್ಲದೆ, ಈಗಾಗಲೇ ವಸತಿ ಇಲಾಖೆ ಹಾಗೂ NDRF ವತಿಯಿಂದ ಪ್ರಥಮ ಹಂತವಾಗಿ ತಲಾ ರೂ. 1.00 ಲಕ್ಷದಂತೆ ಒಟ್ಟು 27 ಲಕ್ಷ ಅನುದಾನವನ್ನು ಮನೆಗಳ ಪುನರ್ ನಿರ್ಮಾಣಕ್ಕೆ ಬಿಡುಗಡೆ ಮಾಡಿರುತ್ತದೆ. ಅದರಲ್ಲಿ 10 ಮನೆಗಳ ಅಡಿಪಾಯ ನಿರ್ಮಾಣ ಮಾಡಿರುತ್ತಾರೆ.<br><br>ಅಲ್ಲದೆ, ಪೂರ್ತಿ ಗ್ರಾಮವನ್ನು ಸದರಿ ಸ್ಥಳಕ್ಕೆ ಸ್ಥಳಾಂತರಿಸಿದಲ್ಲಿ ಕಾವೇರಿ ನೀರಾವರಿ ನಿಗಮದ ವತಿಯಿಂದ ತಲಾ ರೂ.30.00 ಲಕ್ಷವನ್ನು ನೀಡಲಿದ್ದಾರೆಂದು ಗ್ರಾಮಸ್ಥರು ತಿಳಿಸಿರುತ್ತಾರೆ. |
| **b)** | **ನಿರ್ದೇಶನ ನೀಡಿದ ಬಗ್ಗೆ ಸಾರಾಂಶ** |
| | ಈಗಾಗಲೇ ವಸತಿ ಇಲಾಖೆ ಹಾಗೂ NDRF ವತಿಯಿಂದ ಪ್ರಥಮ ಹಂತವಾಗಿ ತಲಾ ರೂ. 1.00 ಲಕ್ಷದಂತೆ ಒಟ್ಟು 27 ಲಕ್ಷ ಅನುದಾನವನ್ನು ಮನೆಗಳ ಪುನರ್ ನಿರ್ಮಾಣಕ್ಕೆ ಬಿಡುಗಡೆ ಮಾಡಲಾಗಿರುವುದರಿಂದ ಮನೆ ನಿರ್ಮಾಣವನ್ನು ಕೂಡಲೇ ಕೈಗೊಳ್ಳುವಂತೆ ಹಾಗೂ ಮುಂದಿನ ಹಂತದ ಮನೆ ನಿರ್ಮಾಣ ಮಾಡಿಕೊಂಡು ಮುಂದಿನ ಹಂತದ ಅನುದಾನವನ್ನು ಪಡೆದುಕೊಳ್ಳಲು ಮಾಲೀಕರಿಗೆ ಹಾಗೂ ನೆರೆ ಸಂತ್ರಸ್ಥರಿಗೆ ಸೂಚಿಸಲಾಗಿರುತ್ತದೆ.<br><br>ಅಲ್ಲದೆ, ಪೂರ್ತಿ ಗ್ರಾಮವನ್ನು ಸ್ಥಳಾಂತರ ಮಾಡಿಕೊಳ್ಳುವ ಪ್ರಕ್ರಿಯೆ ತಡವಾಗುವುದರಿಂದ ಇಲಾಖೆಯಿಂದ ನೀಡಲಾಗುವ ಪರಿಹಾರವನ್ನು ಬಳಸಿಕೊಂಡು ಮನೆ ನಿರ್ಮಾಣ ಮಾಡಲು ಸೂಚಿಸಲಾಯಿತು ಹಾಗೂ ಅಗತ್ಯವಿದ್ದಲ್ಲಿ ಗ್ರಾಮದ ಸ್ಥಳಾಂತರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು. |
| **B)** | **ಕ್ಷೇತ್ರ ವೀಕ್ಷಣೆ** |

| ಕ್ರಮ ಸಂಖ್ಯೆ | **ಭೇಟಿ ನೀಡಿದ ತಾಲ್ಲೂಕು / ಹಳ್ಳಿ** | **ಭೇಟಿ ನೀಡಿದ ಸ್ಥಳ** | **ಗಮನಿಸಿದ ಅಂಶಗಳು** |
|---|---|---|---|
| 1. | ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕು | ಕೃಷ್ಣಾಪುರ ಗ್ರಾಮದ ಚೌಡೇನಹಳ್ಳಿ ಗ್ರಾಮ ಹಾಗೂ ಕಿಕ್ಕೇರಿ ಗ್ರಾಮ | ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಕೃಷ್ಣಾಪುರ ಗ್ರಾಮದ ಚೌಡೇನಹಳ್ಳಿ ಗ್ರಾಮ ಪಂಚಾಯತ್‌ನ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಭೇಟಿ ನೀಡಲಾಯಿತು. ಅಲ್ಲಿನ ಘಟಕವು ಯಾವುದೇ ತೊಂದರೆಯಿಲ್ಲದೆ ಕಾರ್ಯನಿರ್ವಹಿಸುತ್ತಿದೆ. ಆದರೆ, ಕಿಕ್ಕೇರಿ ಗ್ರಾಮದ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಭೇಟಿ ನೀಡಿದಾಗ ಅಲ್ಲಿನ ಯಂತ್ರವು ಅಳವಡಿಸಿದ |

| | | | |
|---|---|---|---|
| | | | ದಿನದಿಂದಲೇ ಕಾರ್ಯನಿರ್ವಹಿಸುತ್ತಿಲ್ಲ ಎಂದು ಸಾರ್ವಜನಿಕರು ತಿಳಿಸಿರುತ್ತಾರೆ. ಸದರಿ ಯಂತ್ರವನ್ನು ಕರ್ನಾಟಕ ಭೂ ಸೇನಾ ನಿಗಮವು ಅಳವಡಿಸಿದ್ದು, ಸರಿಯಾದ ನಿರ್ವಹಣೆ ಇಲ್ಲದೆ ಕಾರ್ಯನಿರ್ವಹಿಸುತ್ತಿಲ್ಲವೆಂದು ಹಾಗೂ ಅದನ್ನು ಗ್ರಾಮ ಪಂಚಾಯತಿಗೆ ಇನ್ನೂ ಹಸ್ತಾಂತರಿಸಿಲ್ಲವೆಂದು ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿರುತ್ತಾರೆ.<br><br>ಕಿಕ್ಕೇರಿ ಗ್ರಾಮದಲ್ಲಿ ಕರ್ನಾಟಕ ಭೂ ಸೇನಾ ನಿಗಮವು ಸ್ಥಾಪಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಮುಂದಿನ 15 ದಿನಗಳೊಳಗೆ ಗ್ರಾಮ ಪಂಚಾಯತಿಗೆ ಹಸ್ತಾಂತರಿಸಲು ಹಾಗೂ ಘಟಕವು ಸರಿಯಾಗಿ ಕಾರ್ಯನಿರ್ವಹಿಸುವಂತೆ ನಿರ್ವಹಣೆ ಮಾಡಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.<br><br>ಅಲ್ಲದೆ, ಒಂದು ಗ್ರಾಮದಲ್ಲಿ ಮಾತ್ರ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗುತ್ತಿದ್ದು, ಕೂಡಲೇ ಪರ್ಯಾಯ ವ್ಯವಸ್ಥೆ ಮಾಡಲು ಸೂಚಿಸಲಾಯಿತು. |
| 2. | ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕು | ಮಂದಗೆರೆ ಗ್ರಾಮ ಪಂಚಾಯತ್‌ನ ಚಿಕ್ಕಮಂದಗೆರೆ ಗ್ರಾಮ ಹಾಗೂ ಬೇವಿನಹಳ್ಳಿ ಕೊಪ್ಪಲು ಗ್ರಾಮ | ಆಗಸ್ಟ್-2019 ರ ಮಾಹೆಯಲ್ಲಿ ಉಂಟಾದ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಮನೆಗಳ ಪುನರ್ ನಿರ್ಮಾಣದ ಬಗ್ಗೆ ಪರಿಶೀಲನೆ ನಡೆಸಲಾಯಿತು. ಮಂದಗೆರೆ ಗ್ರಾಮ ಪಂಚಾಯತ್‌ನ ಚಿಕ್ಕಮಂದಗೆರೆ ಹಾಗೂ ಬೇವಿನಹಳ್ಳಿ ಕೊಪ್ಪಲು ಗ್ರಾಮಗಳ ಗ್ರಾಮಸ್ಥರೊಂದಿಗೆ ಚರ್ಚಿಸಲಾಯಿತು. ಮಂದಗೆರೆ ಗ್ರಾಮ ಪಂಚಾಯತ್‌ನ ಚಿಕ್ಕಮಂದಗೆರೆ ಗ್ರಾಮದಲ್ಲಿ ಒಟ್ಟು 24 ಮನೆಗಳು ಹಾಗೂ ಬೇವಿನಹಳ್ಳಿ ಕೊಪ್ಪಲು ಗ್ರಾಮದಲ್ಲಿ ಒಟ್ಟು 3 ಮನೆಗಳು ಪೂರ್ಣಪ್ರಮಾಣದಲ್ಲಿ ಹಾನಿಯಾಗಿರುತ್ತದೆ. ಸದರಿ ಮನೆಗಳ ಮಾಲೀಕರೊಂದಿಗೆ ಹಾಗೂ ಇತರೆ ಗ್ರಾಮಸ್ಥರೊಂದಿಗೆ ಚರ್ಚೆ ನಡೆಸಲಾಯಿತು. ಜಿಲ್ಲಾಡಳಿತವು ಮನೆ ನಿರ್ಮಾಣಕ್ಕೆ ಚಿಕ್ಕಮಂದಗೆರೆ ಗ್ರಾಮದಲ್ಲಿ ಸರ್ಕಾರಿ ಭೂಮಿಯನ್ನು ಗುರುತಿಸಲಾಗಿದ್ದು, ಇದು ಎತ್ತರದ ಮಟ್ಟದಲ್ಲಿರುವುದರಿಂದ ಪ್ರವಾಹದಿಂದ ಮನೆಗಳಿಗೆ ನೀರು ನುಗ್ಗುವ ಸಾಧ್ಯತೆ ಕಡಿಮೆ ಇರುತ್ತದೆ. |

| | | | |
|---|---|---|---|
| | | | ಅಲ್ಲದೆ, ಈಗಾಗಲೇ ವಸತಿ ಇಲಾಖೆ ಹಾಗೂ NDRF ವತಿಯಿಂದ ಪ್ರಥಮ ಹಂತವಾಗಿ ತಲಾ ರೂ. 1.00 ಲಕ್ಷದಂತೆ ಒಟ್ಟು 27 ಲಕ್ಷ ಅನುದಾನವನ್ನು ಮನೆಗಳ ಪುನರ್ ನಿರ್ಮಾಣಕ್ಕೆ ಬಿಡುಗಡೆ ಮಾಡಿರುತ್ತದೆ. ಅದರಲ್ಲಿ 10 ಮನೆಗಳ ಅಡಿಪಾಯ ನಿರ್ಮಾಣ ಮಾಡಿರುತ್ತಾರೆ. |

ಮಾಹಿತಿಗಾಗಿ,

(ಜಾವೇದ್ ಅಖ್ತರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಸಿಆಸುಇ (ಆಡಳಿತ ಸುಧಾರಣೆ),
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

**ಪ್ರತಿ:**
ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ವಿಧಾನ ಸೌಧ

ನಮೂನೆ

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರಮ ಸಂಖ್ಯೆ | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಮೈಸೂರು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಡಾ॥ ಜಿ. ಕಲ್ಪನ |
| 3 | ಪ್ರವಾಸ ಕೈಗೊಂಡ ದಿನಾಂಕ | 18.12.2019 ಮತ್ತು 19.12.2019 |
| | | |
| A | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಸಮ್ಮೇಳನ ಸಭೆಗೆ ಮಾಹಿತಿ ಒದಗಿಸುವ ಸಲುವಾಗಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಇವರುಗಳೊಂದಿಗೆ ಪೂರ್ವಭಾವಿ ಸಭೆ ನಡೆಸಲಾಯಿತು.<br>ಚಾಮುಂಡೇಶ್ವರಿ ಬೆಟ್ಟದ ವ್ಯೂ ಪಾಯಿಂಟ್ ಬಳಿ ನಂದಿ ವಿಗ್ರಹಕ್ಕೆ ತೆರಳುವ ಮಾರ್ಗದಲ್ಲಿ ಭೂ ಕುಸಿತ ಉಂಟಾಗಿದ್ದ ಸ್ಥಳದಲ್ಲಿ ರಸ್ತೆ ಪುನರ್‌ನಿರ್ಮಾಣ ಕಾಮಗಾರಿ ಕುರಿತು ಪ್ರಗತಿ ಪರಿಶೀಲನೆ ನಡೆಸಲಾಯಿತು. |
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | -- |
| b) | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | ನೆರೆಯಿಂದ ಹಾನಿಗೊಳಗಾದ ಪ್ರದೇಶಗಳ ಪುನರ್‌ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುವಂತೆ ಹಾಗೂ ಶೀಘ್ರವಾಗಿ ಪರಿಹಾರ ವಿತರಿಸುವಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. |
| B) | ಕ್ಷೇತ್ರ ವೀಕ್ಷಣೆ | |

| ಕ್ರಮ ಸಂಖ್ಯೆ | ಭೇಟಿ ನೀಡಿದ ತಾಲ್ಲೂಕು / ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| 1 | ಚಾಮುಂಡಿ ಬೆಟ್ಟ | ಚಾಮುಂಡಿ ಬೆಟ್ಟದಿಂದ ನಂದಿ ವಿಗ್ರಹಕ್ಕೆ ತೆರಳುವ ಮಾರ್ಗದಲ್ಲಿ ಭೂ ಕುಸಿತ ಉಂಟಾಗಿರುವ ಸ್ಥಳ | ಭೂ ಕುಸಿತದಿಂದ ಉಂಟಾದ ಸ್ಥಳದಲ್ಲಿ ರಸ್ತೆ ಪುನರ್‌ನಿರ್ಮಾಣ ಕಾಮಗಾರಿಯನ್ನು ಡಿಸೆಂಬರ್ ಅಂತ್ಯದೊಳಗಾಗಿ ಪೂರ್ಣಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು ಎಂದು ಲೋಕೋಪಯೋಗಿ ಇಲಾಖೆಯ ಕಿರಿಯ ಅಭಿಯಂತರರಿಂದ ಮಾಹಿತಿ ಪಡೆಯಲಾಯಿತು. |

| c) | ಇತರೆ ವಿಷಯಗಳು | |
|---|---|---|
| | | |

Kalpana G

ಡಾ: ಜಿ. ಕಲ್ಪನ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಕರ್ನಾಟಕ ಸರ್ಕಾರ

## ದಿನಾಂಕ: 05.12.2019 ಹಾಗೂ 06.12.2019 ರಂದು ತುಮಕೂರು ಹಾಗೂ ಶಿವಮೊಗ್ಗ ನಗರಕ್ಕೆ ಭೇಟಿ ನೀಡಿದ ವರದಿ.

ದಿನಾಂಕ: 05.12.2019 ರಂದು ಬೆಳ್ಳಗೆ 11.30 ಗಂಟೆಗೆ ಮಾನ್ಯ ಲೋಕಸಭಾ ಸದಸ್ಯರ ಸೂಚನೆಯಂತೆ, ಜಿಲ್ಲೆಯ ರೈತ ಸಮುದಾಯದ ನಿರುದ್ಯೋಗಿ ಯುವಕ/ ಯುವತಿಯರಿಗೆ ಕೌಶಲ್ಯ ತರಬೇತಿ ನೀಡುವ ಮೂಲಕ ರೈತರ ಆದಾಯವನ್ನು 2022ರ ವೇಳೆಗೆ ದುಪ್ಪಟ್ಟುಗೊಳಿಸುವ ಸಂಬಂಧ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕ ಕೇಂದ್ರ, ತುಮಕೂರು ಕಛೇರಿಯಲ್ಲಿ ಕರೆದಿದ್ದ ಸಭೆಯಲ್ಲಿ ಪಾಲ್ಗೊಂಡು ಈ ಕೆಳಕಂಡ ಅಂಶಗಳ ಬಗ್ಗೆ ಚರ್ಚಿಸಲಾಯಿತು. ಎಂಎಸ್ಎಂಇ ಟೆಕ್ನಾಲಜಿ ಸೆಂಟರ್ ಅನುಷ್ಠಾನದ ಬಗ್ಗೆ.

- ತುಮಕೂರು ಜಿಲ್ಲೆಯಲ್ಲಿ ಸಂಶೋಧನಾ ಕೇಂದ್ರ ಮತ್ತು ಸ್ಕಿಲ್ ಪಾರ್ಕ್ ಸ್ಥಾಪಿಸುವ ಬಗ್ಗೆ.
- ತುಮಕೂರು ಜಿಲ್ಲೆಯಲ್ಲಿ ಸ್ಮಾರ್ಟ್ ಆಪ್ ಇನ್ನೊವೇಷನ್ ಹಬ್ ಸ್ಥಾಪಿಸುವ ಬಗ್ಗೆ.
- ಆಹಾರ ಸಂಸ್ಕರಣ ಹಬ್ ಸ್ಥಾಪಿಸುವ ಬಗ್ಗೆ.

ಸಭೆಯಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು. ಪ್ರಸ್ತಾವನೆಯ ವಿವರ ಲಗತ್ತಿಸಿದೆ.

2. ಮಧ್ಯಾಹ್ನ 12.15 ಗಂಟೆಗೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಆಟೋರಿಕ್ಷಾ ವಾಹನಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ಇಸ್ರೋ ಅಧಿಕಾರಿ, ಪ್ರಾದೇಶಿಕ ಸಾರಿಗೆ ಅಧಿಕಾರಿ, ಪೋಲಿಸ್ ಉಪ ಅಧೀಕ್ಷಕರು, ಜಿಲ್ಲೆಯಲ್ಲಿರುವ ವಿವಿಧ ಆಟೋ ಚಾಲಕ ಸಂಘದವರು ಹಾಗೂ ಒಕ್ಕೂಟಗಳ ಪಧಾಧಿಕಾರಿಗಳು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಳ್ಳಲಾಯಿತು. ಆಟೋ ಚಾಲಕರ ಸಹಾಕರ ಸಂಘ ಸ್ಥಾಪಿಸಿ ನಗರದಲ್ಲಿರುವ ಅರ್ಥಿಕವಾಗಿ ಹಿಂದುಳಿದಿರುವ ಆಟೋ ಚಾಲಕರನ್ನು ಈ ಸಂಘದಲ್ಲಿ ಸದಸ್ಯತ್ವ ನೀಡಿದಲ್ಲಿ ಹೆಚ್ಚಿನ ಅನುಕೂಲವಾಗುತ್ತದೆ. ನಗರದಲ್ಲಿ ಚಾಲ್ತಿಯಲ್ಲಿರುವ ಆಟೋ ಚಾಲಕರ ಪರವಾನಗಿಯ ಕುರಿತು ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಂದ ಮಾಹಿತಿ ಪಡೆದು, ಸಹಕಾರ ಸಂಘವನ್ನು ಸ್ಥಾಪಿಸುವುದರಿಂದ ಆಟೋ ಚಾಲಕರಿಗೆ ಪರಿಸರ ಸ್ನೇಹಿ ಆಟೋ ಖರೀದಿಸಲು ಹಾಗೂ ಸಾಲ ಸೌಲಭ್ಯ ಪಡೆಯಲು ಸಹಾಯಕವಾಗಲಿದೆ ಎಂದು ಸಭೆಯಲ್ಲಿರುವವರಿಗೆ ಅರ್ಥೈಸಲಾಯಿತು. ನಗರದಲ್ಲಿ ಪರಿಸರ ಸಂರಕ್ಷಣೆ ಎಲ್ಲರ ಜವಾಬ್ದಾರಿಯಾಗಿದ್ದು, ತುಮಕೂರು ನಗರವನ್ನು ಪ್ರದೂಷಣ ರಹಿತ ಸ್ಮಾರ್ಟ್ ನಗರವನ್ನಾಗಿ ಮಾಡಲು ನಗರದಲ್ಲಿರುವ ಹೆಚ್ಚು ಹೊಗೆ ಸೂಸುವ ಹಳೆಯ ಆಟೋಗಳನ್ನು ಬದಲಾಯಿಸಬೇಕಾಗಿದ್ದು, ಆಸಕ್ತರಿರುವವರು ಹಾಗೂ ಇ-ಆಟೋ ಖರೀದಿ ಮಾಡಲು ಆರ್ಥಿಕವಾಗಿ ಹಿಂದುಳಿದಿರುವ ಆಟೋ ಚಾಲಕರನ್ನು ಆಯ್ಕೆ ಮಾಡಿ ಮೊದಲ ಆದ್ಯತೆ ನೀಡಿ ಅಂತಹವರಿಗೆ ನೆರವಾಗುವುದು ಹಾಗೂ ಬಿಎಸ್-4, ಬಿಎಸ್-5 ಆಟೋ ಹೊಂದಿರುವ ಚಾಲಕರನ್ನು ಕೂಡ ಈ ಸಂಘದಲ್ಲಿ ಸದಸ್ಯತ್ವ ಕೊಡುವುದು ಈ ಸಂಘದ ಮುಖ್ಯ ಉದ್ದೇಶವಾಗಿರಬೇಕು ಎಂದು ತಿಳಿಸಲಾಯಿತು. ಪರಿಸರ ಸಂರಕ್ಷಣೆಯ ಬಗ್ಗೆ ಕಾಳಜಿಯಿರುವ ಆಟೋ ಚಾಲಕರಿಗೆ ಸಹಕಾರ ಸಂಘಗಳ ಉಪ ನಿಬಂಧಕರು ಸಹಕಾರ ಸ್ಥಾಪಿಸಲು ನೆರವು ನೀಡಲ್ಲಿದ್ದು, ಅದಲ್ಲದೇ ಆಟೋಗಳ ಮೇಲೆ ಜಾಹೀರಾತು ಪ್ರಕಟಿಸಲು ಸಹಕಾರ ನೀಡಿ ಹಾಗೂ ಸಂಘದಲ್ಲಿ ಏನಾದರೂ ಗೊಂದಲಗಳುಂಟಾದಲ್ಲಿ ಬಗೆಹರಿಸಲಾಗುವುದೆಂದು ಸಭೆಯಲ್ಲಿ ಜಿಲ್ಲಾಧಿಕಾರಿಗಳು ತಿಳಿಸಿದರು.

3. ಮಧ್ಯಾಹ್ನ 03.30 ಗಂಟೆಗೆ ತುಮಕೂರು ಸ್ಮಾರ್ಟ್ ಸಿಟಿ ಯೋಜನೆಯಡಿ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳು, ಆಯುಕ್ತರು – ತುಮಕೂರು ಮಹಾನಗರ ಪಾಲಿಕೆ, ಮುಖ್ಯ ಅಭಿಯಂತರರು – ತುಸ್ಮಾಸಿ, ಕಾರ್ಯಪಾಲಕ ಅಭಿಯಂತರರುಗಳು ಹಾಗೂ ಇತರೆ ಅಭಿಯಂತರರೊಂದಿಗೆ ಸ್ಥಳ ಪರಿಶೀಲನೆಗೆ ತೆರಳಲಾಯಿತು. ಪ್ರತ್ಯೇಕ ವಿವರ ಈ ಕೆಳಕಂಡಂತಿದೆ.

- **ಜನರಲ್ ಕಾರಿಯಪ್ಪ ರಸ್ತೆ:–** ಸ್ಮಾರ್ಟ್ ಸಿಟಿ ಯೋಜನೆಯಡಿ ಸ್ಮಾರ್ಟ್ ರಸ್ತೆ ಪರಿಕಲ್ಪನೆಯಲ್ಲಿ ಪ್ರಾಯೋಗಿಕವಾಗಿ ಈ ರಸ್ತೆಯನ್ನು ಆಯ್ಕೆಮಾಡಿ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಕಾಮಗಾರಿಯ ಅವಧಿಯು ಸಹ ಮುಕ್ತಾಯಗೊಂಡಿದ್ದರೂ ಈವರೆಗೂ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಈಗಾಗಲೇ ಹಲವಾರು ಭಾರಿ ಖುದ್ದಾಗಿ ಸ್ಮಾರ್ಟ್ ಸಿಟಿ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿ ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳು ದೂರುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ತುರ್ತಾಗಿ ಪೂರ್ಣಗೊಳಿಸುವಂತೆ ಸೂಚಿಸಲಾಗಿತ್ತು. **ಅದಾಗ್ಯೂ ಸಹ ವಾಸ್ತುಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೆ ಮಂದಗತಿಯಲ್ಲಿ ಕಾಮಗಾರಿಯನ್ನು ನಡೆಸುತ್ತಿರುತ್ತಾರೆ.** ಅಲ್ಲಲ್ಲಿ ಛೇಂಬರ್‌ಗಾಗಿ ಅಗೆದ ಮಣ್ಣು, ಜೆಲ್ಲಿಕಲ್ಲು ಹಾಗೂ ಅನುಪಯೋಗಿ ಕಸದ ರಾಶಿಯನ್ನು ಸರಿಯಾದ ರೀತಿಯಲ್ಲಿ ತೆಗೆಯದೆ ಸಂಚಾರ ದಟ್ಟಣೆಗೆ ಅಡಚಣೆಯಾಗುತ್ತಿರುತ್ತದೆ.






- **ಹೊರಪೇಟೆ ರಸ್ತೆ :–** ಈ ರಸ್ತೆಯನ್ನು ಸ್ಮಾರ್ಟ್ ರಸ್ತೆ ಪ್ಯಾಕೇಜ್ – 1 (04 ರಸ್ತೆಗಳು – ಎಂ.ಜಿ ರಸ್ತೆ, ವಿವೇಕಾನಂದ ರಸ್ತೆ, ಹೊರಪೇಟೆ ರಸ್ತೆ, ಜೆ.ಸಿ ರಸ್ತೆ) ಅಡಿಯಲ್ಲಿ ಅಭಿವೃದ್ಧಿ ಪಡಿಸುತ್ತಿದ್ದು, ದಿನಾಂಕ: 01.02.2019 ರಂದು **ಕಾರ್ಯಾದೇಶ ನೀಡಿ ಈಗಾಗಲೇ 10 ತಿಂಗಳಾದರೂ ಸಹ ಶೇ. 50% ರಷ್ಟು ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ.** ಈಗಾಗಲೇ ಹಲವಾರು ಭಾರಿ ತುರ್ತಾಗಿ ಪೂರ್ಣಗೊಳಿಸುವಂತೆ ಸೂಚಿಸಲಾಗಿರುತ್ತದೆ. ಈ ಎಲ್ಲಾ ಸ್ಮಾರ್ಟ್ ರಸ್ತೆಗಳಲ್ಲು ಹಸಿರೀಕರಣ ಗಮನದಲ್ಲಿಟ್ಟುಕೊಂಡು ರಸ್ತೆಯ ಎರಡು ಬದಿಗಳಲ್ಲಿ Landscaping ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಪ್ರಶ್ನಿಸಿದಾಗ ನಕ್ಷೆಗಳನ್ನು ತಯಾರಿಸಿರುವ ಪಿಎಂಸಿ ಸಿಬ್ಬಂದಿಗಳಲ್ಲಿಯೇ ಸದರಿ ರಸ್ತೆಯ ನಕ್ಷೆಯಲ್ಲಿ Landscaping ಒಳಗೊಂಡಿದೆಯೇ ಇಲ್ಲವೆಂಬ ಸ್ಪಷ್ಟೀಕರಣವಿರುವುದಿಲ್ಲ. ಹಾಗೆಯೇ ಅಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರು ಡ್ರೈನ್‌ನಲ್ಲಿರುವ ಕಸದ ರಾಶಿಯನ್ನು ತೆಗೆದು ರಸ್ತೆಯ ಬದಿಯಲ್ಲೇ ಹಾಕುತ್ತಿದ್ದನ್ನು ಕಂಡು ಪ್ರಶ್ನಿಸಿದಾಗ ಕವರ್ ಸ್ಲಾಬ್ಸ್ ಮುಚ್ಚುವುದಕ್ಕಿಂತ ಮುಂಚೆ ಡ್ರೈನ್‌ನ್ನು ಸ್ವಚ್ಛಗೊಳಿಸಲಾಗುತ್ತಿದೆ ಎಂದು ಉತ್ತರಿಸಿದರು. ಮಳೆಗಾಲದಲ್ಲಿಯೆ ರಸ್ತೆಯ ಬದಿಯಲ್ಲಿ ಇರುವ ಕಸದ ರಾಶಿಯನ್ನು ತೆರವುಗೊಳಿಸಿ ಒಳ್ಳೆಯ ಮಣ್ಣನ್ನು ಹಾಕಿದ್ದರೆ ಇಷ್ಟರಲ್ಲಿ ಸಸಿಗಳನ್ನು ನೆಡಬಹುದಾಗಿತ್ತು. ಹಾಗಾಗಿ ಸದರಿ ರಸ್ತೆಯ ಡ್ರೈನ್ ಬದಿಯಲ್ಲಿ Landscaping ಮಾಡಲು ಸೂಚಿಸಲಾಯಿತು. ಈಗಾಗಲೇ ಜಿಲ್ಲಾಧಿಕಾರಿಗಳು ಪ್ರಸ್ತುತ ಅಗೆದಿರುವ ರಸ್ತೆಗಳ ಕಾಮಗಾರಿಯನ್ನು

ಪೂರ್ಣಗೊಳಿಸುವವರೆಗೂ ಬೇರೆ ಯಾವ ರಸ್ತೆಗಳನ್ನು ಅಗೆಯಬಾರದು ಎಂದು ಸೂಚಿಸಿದ್ದರಿಂದ ಸದರಿ ರಸ್ತೆಯಲ್ಲಿ ಕ್ರಾಸ್ ಡ್ರೈನ್ ಕೆಲಸವನ್ನು ಪ್ರಾರಂಭಿಸಿರುವುದಿಲ್ಲ, ಆದ ಕಾರಣ ಪೋಲಿಸ್ ಸಹಯೋಗದೊಂದಿಗೆ ರಸ್ತೆಯನ್ನು ತಡೆದು ಕ್ರಾಸ್ ಡ್ರೈನ್ ಕೆಲಸವನ್ನು ಪ್ರಾರಂಭಿಸುತ್ತೇವೆ ಎಂದು ಕಾರ್ಯಪಾಲಕ ಅಭಿಯಂತರರು ಸ್ಥಳದಲ್ಲಿ ಒಪ್ಪಿಗೆ ಕೇಳಿದರು. ಈ ಸಂಬಂಧ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಮುಂದಿನ ಕ್ರಮವಹಿಸಲು ಸೂಚಿಸಲಾಯಿತು.







- **ಅಶೋಕ ರಸ್ತೆ :–** ಈ ರಸ್ತೆಯನ್ನು ಸ್ಮಾರ್ಟ್ ರಸ್ತೆ ಪ್ಯಾಕೇಜ್ – 3ಎ (02 ರಸ್ತೆ – ಅಶೋಕ ರಸ್ತೆ ಹಾಗೂ ಡಿಸಿ ಕಛೇರಿ ರಸ್ತೆ) ಅಡಿಯಲ್ಲಿ ಅಭಿವೃದ್ಧಿ ಪಡಿಸುತ್ತಿದ್ದು, ದಿನಾಂಕ:27.04.2019 ರಂದು **ಕಾರ್ಯಾದೇಶ ನೀಡಿ ಈಗಾಗಲೇ 07 ತಿಂಗಳಾದರೂ ಸಹ ರಸ್ತೆಯಲ್ಲಿ ಶೇ. 50% ರಷ್ಟು ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ**. ಅದರಲ್ಲೂ ಈವರೆಗೂ ರಸ್ತೆಯ ಒಂದು ಭಾಗದಲ್ಲಿ ಮಾತ್ರ ಕಾಮಗಾರಿಯನ್ನು ಕೈಗೊಂಡಿದ್ದು, ಅದೂ ಸಹ ಮಂದಗತಿಯಲ್ಲಿ ನಡೆಸುತ್ತಿರುತ್ತಾರೆ. ಸದರಿ ರಸ್ತೆಯಲ್ಲಿ ಈಗಾಗಲೇ ಡ್ರೈನ್ ಅಸ್ತಿತ್ವದಲ್ಲಿದ್ದು, ಛೇಂಬರ್ಸ್ ಹಾಗೂ ಡ್ರೈನ್ ನಡುವೆCarriageway ತುಂಬಾ ಅಂತರವಿರುತ್ತದೆ. ಅಶೋಕ ರಸ್ತೆಯು ನಗರ ಕೇಂದ್ರ ಭಾಗವಾಗಿದ್ದು, ಸಾಕಷ್ಟು ವಾಹನ ಸಂಚಾರ ಕೂಡಿರುತ್ತದೆ. ಈ ಅಂಶವನ್ನು ಅರಿತು Carriagewayನ್ನು ಕಡಿಮೆಗೊಳಿಸಿ ಛೇಂಬರ್ಸ್‌ಗಳನ್ನು ಮಾಡಿದ್ದರೆ ಟ್ರಾಫಿಕ್‌ಗೆ ತೊಂದರೆಯಾಗುತ್ತಿರಲಿಲ್ಲ. ಈಗಾಗಲೇ ದಿನಾಂಕ: 27.11.2019 ರಂದು ಹಾಗೂ ದಿನಾಂಕ: 05.12.2019 ರಂದು ನಗರದ ಮಾಜಿ ಜನಪ್ರತಿನಿಧಿಯೊಬ್ಬರೂ ಈ ರಸ್ತೆಯಲ್ಲಿನ
- ಕಾಮಗಾರಿಯು ಗುಣಮಟ್ಟದಲ್ಲ ಎಂದು ಗಂಭೀರ ಆರೋಪವನ್ನು ಮಾಡಿರುತ್ತಾರೆ. ಹಾಗೆಯೇ ಸದರಿ ರಸ್ತೆಯಲ್ಲಿ ಕೆಲವು ಕಟ್ಟಡಗಳು ಒತ್ತುವರಿಯಾಗಿರುವುದು ಗಮನಕ್ಕೆ ಬಂದಿರುತ್ತದೆ. ಹಾಗಾಗಿ ಕೂಡಲೇ ಇದನ್ನು ಪರಿಶೀಲಿಸಲು ಆಯುಕ್ತರು, ತುಮಕೂರು ಮಹಾನಗರ ಪಾಲಿಕೆ ಇವರಿಗೆ ಸೂಚಿಸಲಾಯಿತು.






- **ನಾರ್ಥ್ ಬಸ್ ಸ್ಟಾಂಡ್ ರಸ್ತೆ :-** ಈ ರಸ್ತೆಯನ್ನು ಸ್ಮಾರ್ಟ್ ರಸ್ತೆ ಪ್ಯಾಕೇಜ್ – 2 (06 ರಸ್ತೆಗಳು) ಅಡಿಯಲ್ಲಿ ಅಭಿವೃದ್ಧಿ ಪಡಿಸುತ್ತಿದ್ದು, ಈ ದಿನ ನಾರ್ಥ್ ಬಸ್ ಸ್ಟಾಂಡ್ ರಸ್ತೆಯ ಸ್ಥಳ ಪರಿಶೀಲನೆ ಮಾಡಲಾಯಿತು. **ಸದರಿ ಪ್ಯಾಕೇಜ್‌ಗೆ ದಿನಾಂಕ: 28.02.2019 ರಂದು ಕಾರ್ಯದೇಶ ನೀಡಿ ಈಗಾಗಲೇ 10 ತಿಂಗಳಾಗಿರುತ್ತದೆ.** ಈ ರಸ್ತೆಯಲ್ಲಿ ಡಕ್ಟಿಂಗ್ ಒಳಗೊಂಡಿಲ್ಲದ ಮತ್ತು ರಾಜಕಾಲುವೆ ಮೇಲೆ ಶೇ. 50% ರಷ್ಟು ಫುಟ್‌ಪಾತ್ ಕೆಲಸವು ಮುಕ್ತಾಯಗೊಂಡಿರುತ್ತದೆ. ಇದು NGT ಮಾರ್ಗಸೂಚಿಯಂತೆ ಇದೆಯೇ ಎಂಬ ಬಗ್ಗೆ ಪರಿಶೀಲಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.

- 




- **ಜೆ.ಸಿ.ರಸ್ತೆ :-** ಈ ರಸ್ತೆಯನ್ನು ಸ್ಮಾರ್ಟ್ ರಸ್ತೆ ಪ್ಯಾಕೇಜ್ – 1 (04 ರಸ್ತೆಗಳು – ಎಂ.ಜಿ ರಸ್ತೆ, ವಿವೇಕಾನಂದ ರಸ್ತೆ, ಹೊರಪೇಟೆ ರಸ್ತೆ, ಜೆ.ಸಿ ರಸ್ತೆ) ಅಡಿಯಲ್ಲಿ ಅಭಿವೃದ್ಧಿ ಪಡಿಸುತ್ತಿದ್ದು, ದಿನಾಂಕ: **01.02.2019 ರಂದು ಕಾರ್ಯಾದೇಶ ನೀಡಿ ಈಗಾಗಲೇ 10 ತಿಂಗಳಾದರೂ ಸಹ ಶೇ. 50% ರಷ್ಟು ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ. ಸದರಿ ರಸ್ತೆಯ ಎರಡು ಬದಿಯಲ್ಲಿ ಹೂ ಹಾಗೂ ಹಣ್ಣಿನ ವ್ಯಾಪಾರಿಗಳು ಇದ್ದು, ದಿನನಿತ್ಯ ಬದಿಯಲ್ಲಿ ಇರುವ ರಾಜಗಾಲುವೆಯಲ್ಲಿ ಬಹಳಷ್ಟು ಕಸ ಸಂಗ್ರಹಣೆಯಾಗುತ್ತಿರುತ್ತದೆ.** ಆದ್ದರಿಂದ ಸದರಿ ರಸ್ತೆ ಬದಿಯಲ್ಲಿರುವ ವ್ಯಾಪಾರಿಗಳನ್ನು ಹಾಗೂ ವಿನಾಯಕ ಮಾರುಕಟ್ಟೆ ಬದಿಯಲ್ಲಿರುವ ತರಕಾರಿ ವ್ಯಾಪಾರಿಗಳನ್ನು ಗಮನದಲ್ಲಿಟ್ಟುಕೊಂಡು ವೆಂಡಿಂಗ್ ಜೋನ್ಸ್ ಪ್ರಸ್ತಾವನೆಯನ್ನು ಸಿದ್ಧಪಡಿಸಲು ಸೂಚಿಸಲಾಯಿತು. ಹಾಗೆಯೇ ವಿನಾಯಕ ಮಾರುಕಟ್ಟೆ ಜಾಗದಲ್ಲಿ ಅಪಾರವಾಗಿ ಸಂಗ್ರಹವಾಗಿರುವ ಕಸದ ರಾಶಿಯನ್ನು ಕೂಡಲೇ ತೆರವುಗೊಳಿಸಲು ಆಯುಕ್ತರು, ತುಮಕೂರು ಮಹಾನಗರ ಪಾಲಿಕೆಗೆ ಸೂಚಿಸಲಾಯಿತು.




- **ರಿಂಗ್ ರಸ್ತೆ (ಫೇಸ್ – 1 & ಫೇಸ್ – 2 ) :-** ತುಮಕೂರು ವರ್ತುಲ ರಿಂಗ್ ರಸ್ತೆ ಅಭಿವೃದ್ದಿ ಸಂಬಂಧವಾಗಿ ಫೇಸ್ – 1 ಗೆ ದಿನಾಂಕ: 23.11.2018 ರಂದು ಕಾರ್ಯಾದೇಶ ನೀಡಿದ್ದು ಹಾಗೂ ಫೇಸ್ – 2ಗೆ ದಿನಾಂಕ: 29.05.2019 ರಂದು ಕಾರ್ಯಾದೇಶ ನೀಡಲಾಗಿರುತ್ತದೆ. **ಸದರಿ ಯೋಜನೆಯಲ್ಲಿ ಫೇಸ್ – 01 ಕಾಮಗಾರಿಯು ಕಾರ್ಯಾದೇಶದ ಪ್ರಕಾರ ದಿನಾಂಕ: 22.11.2019 ರಂದು ಪೂರ್ಣಗೊಳಿಸಬೇಕಾಗಿತ್ತು. ಆದರೆ ಫೇಸ್-1 ಕಾಮಗಾರಿಯು ಶೇ. 50-60% ಮಾತ್ರ ಪೂರ್ಣಗೊಂಡಿರುತ್ತದೆ.** ಈ ವಿಷಯವಾಗಿ ಗುತ್ತಿಗೆದಾರರಲ್ಲಿ ಪ್ರಶ್ನಿಸಿದಾಗ ರಸ್ತೆಯ ಬದಿಗಳಲ್ಲಿರುವ ಮರಗಳ ಸ್ಥಳಾಂತರ, ಕೆಲವು ಕಟ್ಟಡಗಳ ಒತ್ತುವರಿ ಹಾಗೂ ಇತ್ಯಾದಿ ಕಾರಣಗಳಿಂದ ವಿಳಂಬವಾಗುತ್ತಿದೆ ಎಂದು ಉತ್ತರಿಸಿದರು. **ಆದ್ದರಿಂದ ಒತ್ತುವರಿಯಾಗಿರುವ ಕಟ್ಟಡಗಳ ತೆರವಿಗೆ ಖುದ್ದಾಗಿ ಒಬ್ಬರು ತಹಸಿಲ್ದಾರ್ ರವರನ್ನು ನಿಯೋಜಿಸಲು ಜಿಲ್ಲಾಧಿಕಾರಿಯವರಿಗೆ ಸೂಚಿಸಲಾಯಿತು.** ಇದನ್ನು ಹೊರತುಪಡಿಸಿ ಉಳಿದಿರುವ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಸೂಚಿಸಲಾಯಿತು.





- **ಆಯುಷ್ ಆಸ್ಪತ್ರೆ :-** ತುಮಕೂರು ಸ್ಮಾರ್ಟ್ ಸಿಟಿ ವತಿಯಿಂದ ಆಯುಷ್ ಆಸ್ಪತ್ರೆಯನ್ನು ನಿರ್ಮಿಸುತ್ತಿದ್ದು, ಇದನ್ನು ನಿರ್ಮಿಸಲು ಯೋಜಿಸಿರುವ ಸ್ಥಳವನ್ನು ಪರಿಶೀಲಿಸಲು ತೆರಳಲಾಯಿತು. **ಸದರಿ ಸ್ಥಳದ ಪಕ್ಕದಲ್ಲಿಯೇ ಉದ್ಯಾನವನದ ಜಾಗವಿದ್ದು, ಆಸ್ಪತ್ರೆಗೆ ಅದನ್ನು ಒಳಗೂಡಿಸಿ ಉದ್ಯಾನವನ್ನು ನಿರ್ಮಿಸಲು TUDA ದಿಂದ ಬೇಕಾದ ಆದೇಶಗಳನ್ನು ನೀಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.**





- **ಮಹಾತ್ಮ ಗಾಂಧಿ ಸ್ಟೇಡಿಯಂ ನಿರ್ಮಾಣ :-** ಈ ಯೋಜನೆಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸ್ಮಾರ್ಟ್ ಸಿಟಿ ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿದ್ದು, ದಿನಾಂಕ: 27.09.2019 ರಂದು ಕಾರ್ಯಾದೇಶ ನೀಡಿರುತ್ತಾರೆ. ಪ್ರಸ್ತುತ ಸ್ಟೇಡಿಯಂನಲ್ಲಿ ತೆರವುಗೊಳಿಸುವ ಕಾರ್ಯವು ಪ್ರಗತಿಯಲ್ಲಿದ್ದು, ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಪಡೆದು ತ್ವರಿತಗತಿಯಲ್ಲಿ ಪ್ರಾರಂಭಿಸುವಂತೆ ಸೂಚಿಸಲಾಯಿತು.



- **ಸೈನ್ಸ್ ಥೀಮ್ ಪಾರ್ಕ್ @ ಅಮಾನಿಕೆರೆ** :- ಈ ಪಾರ್ಕ್‌ನ್ನು ಅಮಾನಿಕೆರೆ ಒಂದು ಭಾಗದಲ್ಲಿ ವಿಜ್ಞಾನವನ್ನು ಪರಿಕಲ್ಪನೆಯಾಗಿಟ್ಟುಕೊಂಡು ನಿರ್ಮಿಸಲಾಗಿದ್ದು, ದಿನಾಂಕ: 16.11.2019 ರಂದು ಕಾಮಗಾರಿಯು ಪೂರ್ಣಗೊಂಡಿರುತ್ತದೆ. **ಸದರಿ ಪಾರ್ಕ್ ಪ್ರವೇಶಕ್ಕೆ ಎರಡು ದ್ವಾರಗಳಿದ್ದು, ಮುಖ್ಯ ದ್ವಾರದಲ್ಲಿ ಮಾತ್ರ ಪ್ರವೇಶ ಶುಲ್ಕ ಪಾವತಿಸಿಕೊಳ್ಳುತ್ತಿರುತ್ತಾರೆ. ಆದರೆ ಈ ಪಾರ್ಕ್‌ಗೆ ಮತ್ತೊಂದು ದ್ವಾರವಿರುವುದರಿಂದ ಪ್ರತ್ಯೇಕವಾಗಿ ಪ್ರವೇಶ ಶುಲ್ಕವಿದ್ದರೆ ಉತ್ತಮವೆಂದು ಅಭಿಪ್ರಾಯ ವ್ಯಕ್ತಪಡಿಸಲಾಯಿತು.** ಹಾಗೆಯೇ ಅಮಾನಿಕೆರೆ ಪಾದಚಾರಿ ಮಾರ್ಗದಲ್ಲಿ ಹಾಗೂ ಸೈನ್ಸ್ ಥೀಮ್ ಪಾರ್ಕ್‌ನಲ್ಲಿ ಕಡಿಮೆ ದೀಪಗಳಿರುವುದು ಕಂಡುಬಂದಿದ್ದು, **ಆಕರ್ಷಕ ವಿನ್ಯಾಸ ದೀಪಗಳನ್ನು ಅಳವಡಿಸಲು ಸೂಚಿಸಲಾಯಿತು.** ಹಾಗೆಯೇ ಅಮಾನಿಕೆರೆಯಲ್ಲಿ ಕೈಗೊಂಡಿರುವ ಇನ್ನುಳಿದ ಯೋಜನೆಗಳ ಪ್ರಗತಿಯ ಬಗ್ಗೆ ಮಾಹಿತಿಯನ್ನು ಪಡೆಯಲಾಯಿತು.






- **ಭಗವಾನ್ ಮಹಾವೀರ್ ರಸ್ತೆ** :- ದಿನಾಂಕ: 06.12.2019 ರಂದು ಬೆಳ್ಳಗ್ಗೆ 06.00 ಗಂಟೆಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಈ ರಸ್ತೆಯನ್ನು ಸ್ಮಾರ್ಟ್ ರಸ್ತೆ ಪ್ಯಾಕೇಜ್ – 2 (06 ರಸ್ತೆಗಳು) ಅಡಿಯಲ್ಲಿ ಅಭಿವೃದ್ಧಿ ಪಡಿಸುತ್ತಿದ್ದು, ಸದರಿ ಪ್ಯಾಕೇಜ್‌ಗೆ ದಿನಾಂಕ: 28.02.2019 ರಂದು ಕಾರ್ಯದೇಶ ನೀಡಿ ಈಗಾಗಲೇ 10 ತಿಂಗಳಾಗಿರುತ್ತದೆ. ಅದಾಗ್ಯೂ ಸಹ ಕಾಮಗಾರಿಯು ಶೇ. 50% ರಷ್ಟು ಪೂರ್ಣಗೊಂಡಿರುವುದಿಲ್ಲ. ಈ ಹಿಂದೆ ಅಂದರೆ ದಿನಾಂಕ: 19.10.2019 ರಂದು ಈ ರಸ್ತೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಗುತ್ತಿಗೆದಾರರಿಗೆ **ಒಂದು ವಾರದ ಗಡುವನ್ನು ಅಂದರೆ ದಿನಾಂಕ: 20.10.2019 ರಿಂದ 27.10.2019ರೊಳಗೆ ಸಂಪೂರ್ಣ ರಸ್ತೆಯಲ್ಲಿರುವ ಮಣ್ಣಿನ ರಾಶಿಯನ್ನು ರೋಲರ್ ಯಂತ್ರದಿಂದ ಸಮಗೊಳಿಸಿ ಹಾಗೂ ಡ್ರೈನ್ ನಿರ್ಮಿಸುವ ಕಾರ್ಯವೂ ಸಹ ಪೂರ್ಣಗೊಳಿಸುವಂತೆ** ಗುತ್ತಿಗೆದಾರರಿಗೆ ಸೂಚಿಸಲಾಗಿತ್ತು.ಇಲ್ಲವಾದಲ್ಲಿ ಕರಾರನ್ನು ಅಂತಿಮಗೊಳಿಸಲು ಟೆಂಡರ್

**ನಿಯಮಾವಳಿಗಳ ಪ್ರಕಾರ ಕ್ರಮವಹಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಗಿತ್ತು.** ಅದಾಗ್ಯೂ ಸಹ ಆ ದಿನ ನೋಡಿದಕ್ಕೂ ಈ ದಿನಕ್ಕು ಯಾವುದೇ ಬದಲಾವಣೆಯಾಗಿರುವುದಿಲ್ಲ. ಅದರಲ್ಲು ಈ ದಿನದ ವೀಕ್ಷಣೆಯಲ್ಲಿ ಗಮನಿಸಿದ ಪ್ರಮುಖ ಅಂಶಗಳು ಈ ಕೆಳಕಂಡಂತಿದೆ:

- ಈ ಹಿಂದೆ ಸೂಚಿಸಿದಂತೆ ರಸ್ತೆಯಲ್ಲಿರುವ ಸಂಪೂರ್ಣ ಮಣ್ಣಿನ ರಾಶಿಯನ್ನು ತೆರವುಗೊಳಿಸುವುದರ ಬಗ್ಗೆ ಯಾವುದೇ ರೀತಿ ಕ್ರಮ ಕೈಗೊಂಡಿರುವುದಿಲ್ಲ.









- ಈ ರಸ್ತೆಯಲ್ಲಿ ಗಮನಿಸಿದಂತೆ ಕೆಲವು ಕಡೆ ಡ್ರೈನ್ ಹಾದುಹೋಗಿರುತ್ತದೆ. ಇನ್ನು ಕೆಲವು ಕಡೆ ಡ್ರೈನ್ ಸೌಲಭ್ಯವೇ ಇರುವುದಿಲ್ಲ. ಕಾರಣ ಒತ್ತುವರಿ (encroachment) ಇರುತ್ತದೆ. ಆದುದರಿಂದ, ಜಿಲ್ಲಾಧಿಕಾರಿಗಳು ಕೂಡಲೇ ಸ್ಥಳ ಪರಿಶೀಲಿಸಿ ವರದಿ ಸಲ್ಲಿಸಲು ಸಂಬಂಧಪಟ್ಟವರಿಗೆ ಸೂಚಿಸಿದೆ. (ಕ್ರಮ: **ಜಿಲ್ಲಾಧಿಕಾರಿಗಳು ಹಾಗೂ ಆಯುಕ್ತರು, ತುಮಕೂರು ಮಹಾನಗರ ಪಾಲಿಕೆ**).





- ಈ ರಸ್ತೆಯಲ್ಲಿ ಟ್ರಕ್ಸ್ ಹಾಗೂ ದೊಡ್ಡ ವಾಹನಗಳನ್ನು ನಿಲಿಸುತ್ತಿದ್ದು, ಇದನ್ನು ತೆರವುಗೊಳಿಸಲು ಸಂಬಂಧಪಟ್ಟವರಿಗೆ ಕೂಡಲೇ ಸೂಚಿಸತಕ್ಕದ್ದು. (ಕ್ರಮ: **ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು, ತುಮಕೂರು ಜಿಲ್ಲೆ**)





- ಸ್ಮಾರ್ಟ್ ರಸ್ತೆ ಬದಿಯಲ್ಲಿ ಇರುವ ಪ್ರಥಮ ದರ್ಜೆ ಕಾಲೇಜು, ಲಿಂಕ್ ರಸ್ತೆಯನ್ನು ಅಭಿವೃದ್ಧಿಪಡಿಸುವುದು.




- ಸದರಿ ರಸ್ತೆಯಲ್ಲಿ ಕೆಲವು ಕಟ್ಟಡಗಳು ಒತ್ತುವರಿಯಾಗಿದ್ದು, ಕಾಂಪೌಂಡ್‌ಗಳನ್ನು ತೆರವುಗೊಳಿಸಬೇಕಾಗಿರುತ್ತದೆ. ಅದರಲ್ಲಿ ಕೆಲವು ಕಟ್ಟಡದ ಕಾಂಪೌಂಡ್‌ಗಳನ್ನು ತೆರವುಗೊಳಿಸಲು ಒಪ್ಪಿರುತ್ತಾರೆ. ಇನ್ನುಳಿದಂತೆ ತುಮಕೂರು ವಿಶ್ವವಿದ್ಯಾನಿಲಯದ ಮಹಿಳಾ ವಿದ್ಯಾರ್ಥಿ ನಿಲಯ ಕಟ್ಟಡ ಕಾಂಪೌಂಡ್ ಸಹ ಒಂದಾಗಿದ್ದು, ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು. (ಕ್ರಮ: **ಕುಲಪತಿಗಳು, ತುಮಕೂರು ವಿಶ್ವ ವಿದ್ಯಾನಿಲಯ ಹಾಗೂ ಆಯುಕ್ತರು**)





- ದುರಸ್ತಿಯಲ್ಲಿರುವ ವಾಹನಗಳನ್ನು ಸ್ಥಳಾಂತರಿಸಲು ಹಾಗೂ ಸದರಿ ರಸ್ತೆಯಲ್ಲಿ ಆಟೋ ರಿಕ್ಷಾಗಳನ್ನು ಹೊರಗೆ ನಿಲ್ಲಿಸುತ್ತಿದ್ದು,ರಸ್ತೆಯಲ್ಲಿ ನಿಲ್ಲಿಸದಂತೆ ನೋಡಿಕೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸತಕ್ಕದ್ದು. (**ಕ್ರಮ: ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತುಮಕೂರು ಜಿಲ್ಲೆ**)





- ಸದರಿ ರಸ್ತೆಯ ಬದಿಯಲ್ಲಿ ಕೆಲವು ಹಳೆ ಕಟ್ಟಡಗಳಿದ್ದು, ಅದರ ಕಾಂಪೌಂಡ್ ಗೋಡೆಗಳು ದುರಸ್ಥಿಯಾಗಿರುತ್ತದೆ. ಅಂತಹದನ್ನು ಗುರುತಿಸಿ ಸರಿಪಡಿಸಲು ಗುತ್ತಿಗೆದಾರರು ಹಾಗೂ ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸತಕ್ಕದ್ದು. (**ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್**)





- ಈ ರಸ್ತೆಯ ಕೆಲವು ಕಡೆ ಡ್ರೈನ್ ವ್ಯವಸ್ಥೆಯು ತೀವ್ರ ಹದಗೆಟ್ಟಿದ್ದು, ಕೂಡಲೇ ಸಂಬಂಧಪಟ್ಟವರಿಗೆ ಕ್ರಮ ಕೈಗೊಳ್ಳಲು ಸೂಚಿಸತಕ್ಕದ್ದು. (**ಕ್ರಮ: ಆಯುಕ್ತರು, ತುಮಕೂರು ಮಹಾನಗರ ಪಾಲಿಕೆ**)





➢ ಈ ರಸ್ತೆಯಲ್ಲಿ ಶಿಕ್ಷಣ ಇಲಾಖೆಯ ಹಳೆಯ ಸರ್ಕಾರಿ ಪುಸ್ತಕಗಳ ಡಿಪೋವಿದ್ದು, ಬಳಸಲಾಗುತ್ತಿಲ್ಲ. ಆದ್ದರಿಂದ ಈ ಕಟ್ಟಡವನ್ನು ವಸತಿ ನಿಲಯಕ್ಕಾಗಿ ಯಾವುದಕ್ಕಾಗಿ ಬಳಸಬಹುದೆಂದು ಚಿಂತನೆ ನಡೆಸಿ ವರದಿ ಸಲ್ಲಿಸತಕ್ಕದ್ದು. **(ಕ್ರಮ: ಮು.ಕಾ.ನಿ., ಜಿ.ಪಂ., ತುಮಕೂರು ಜಿಲ್ಲೆ)**





➢ ಈ ರಸ್ತೆಯಲ್ಲಿ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಅತಿಥಿ ಗೃಹ ಬಳಕೆಯಾಗುತ್ತಿರುವುದಿಲ್ಲ. ಆದ್ದರಿಂದ ಸದರಿ ಕಟ್ಟಡವನ್ನು ಮಹಿಳೆಯರ ಹಾಸ್ಟೆಲ್‌ನ್ನಾಗಿ ಏಕೆ ಪರಿವರ್ತಿಸಬಾರದು ಎಂದು ಪರಿಶೀಲಿಸಿ ವರದಿ ಸಲ್ಲಿಸತಕ್ಕದ್ದು. **(ಕ್ರಮ: ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ)**

➢ **ಒಟ್ಟಾರೆ ಈ ರಸ್ತೆಯಲ್ಲಿ ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರರಿಗೆ ಈಗಾಗಲೇ ಹಲವಾರು ಭಾರಿ ಸೂಚಿಸಿದಾಗ್ಯೂ ಸಹ ಯಾವುದೇ ರೀತಿ ಗಣನೆಗೆ ತೆಗೆದುಕೊಳ್ಳದೆ ಬೇಜವ್ದಾರಿಯಿಂದ ಕೆಲಸ ನಿರ್ವಹಿಸಿರುತ್ತಾರೆ. ಆದ್ದರಿಂದ, ಸದರಿ ಗುತ್ತಿಗೆದಾರರ ಕರಾರನ್ನು ಒಂದು ವಾರದೊಳಗೆ ರದ್ದುಗೊಳಿಸತಕ್ಕದ್ದು. ಈ ಆದೇಶವನ್ನು ಪಾಲಿಸದೇ ತಪ್ಪಿದಲ್ಲಿ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಲಾಗುವುದು.** (ಕ್ರಮ: **ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಅಭಿಯಂತರರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್)**

- **ಡಾ॥ ರಾಧಕೃಷ್ಣ ರಸ್ತೆ:**ಈ ರಸ್ತೆಯನ್ನು ಸ್ಮಾರ್ಟ್ ರಸ್ತೆ ಪ್ಯಾಕೇಜ್ – 3ಬಿ (03 ರಸ್ತೆಗಳು) ಅಡಿಯಲ್ಲಿ ಅಭಿವೃದ್ಧಿ ಪಡಿಸುತ್ತಿದ್ದು, ಸದರಿ ಪ್ಯಾಕೇಜ್‌ಗೆ ದಿನಾಂಕ: 06.03.2019 ರಂದು ಕಾರ್ಯದೇಶ ನೀಡಿ ಈಗಾಗಲೇ 09 ತಿಂಗಳಾಗಿರುತ್ತದೆ. ಈ ರಸ್ತೆಗೆ ದಿನಾಂಕ: 19.10.2019 ರಂದು ಭೇಟಿ ನೀಡಿದಾಗ **ಸಂಬಂಧಪಟ್ಟ ಗುತ್ತಿಗೆದಾರರಿಗೆ ದಿನಾಂಕ: 19.10.2019 ರಿಂದ 26.10.2019 ರೊಳಗಾಗಿ ಸಂಪೂರ್ಣ ಒಂದು ಭಾಗದ ರಸ್ತೆಯಲ್ಲಿ ಛೇಂಬರ್‌ಗಳು, ಪೈಪ್‌ಲೈನ್ ಅಳವಡಿಕೆ, ಡ್ರೈನ್ ನಿರ್ಮಾಣ ಹಾಗೂ ಪಾದಚಾರಿ ಮಾರ್ಗವನ್ನು ಪೂರ್ಣಗೊಳಿಸಲು ಸೂಚಿಸಲಾಗಿತ್ತು. ಆದರೆ ಇನ್ನು ಪಾದಚಾರಿ ಮಾರ್ಗ ಸಂಪೂರ್ಣವಾಗಿ ಪೂರ್ಣಗೊಳಿಸಿರುವುದಿಲ್ಲ.**

ಅದರಲ್ಲು ಈ ದಿನದ ವೀಕ್ಷಣೆಯಲ್ಲಿ ಗಮನಿಸಿದ ಪ್ರಮುಖ ಅಂಶಗಳು ಈ ಕೆಳಕಂಡಂತಿದೆ:

➢ ಈ ರಸ್ತೆಯಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿದ್ದು, ಈ ಕೆಳಕಂಡ ಅಂಶಗಳು ಗಮನಕ್ಕೆ ಬಂದಿರುತ್ತದೆ. ಸಂಬಂಧ ಪಟ್ಟವರ ಮೇಲೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

  ❖ ವಿದ್ಯಾರ್ಥಿ ನಿಲಯದಲ್ಲಿ ವಾರ್ಡನ್ ಇರುವುದಿಲ್ಲ.

  ❖ ವಿದ್ಯಾರ್ಥಿ ನಿಲಯದಲ್ಲಿ ಸ್ವಚ್ಛತೆ ಕಾಪಾಡಿಕೊಂಡಿರುವುದಿಲ್ಲ.

❖ ವಿದ್ಯಾರ್ಥಿ ನಿಲಯದಲ್ಲಿ ಅಡಿಗೆ ಮಾಡುವವರು ಒಟ್ಟು 240 ಮಕ್ಕಳು ಇರುತ್ತಾರೆ ಎಂದು ಹೇಳುತ್ತಾರೆ. ಆದರೆ ಪ್ರಸ್ತುತ ಅಲ್ಲಿ ಕೇವಲ 30–40 ಮಕ್ಕಳು ಮಾತ್ರ ಇರುವುದು ಕಂಡುಬಂದಿರುತ್ತದೆ.

❖ ವಿದ್ಯಾರ್ಥಿ ನಿಲಯದ ಪಕ್ಕದಲ್ಲಿ ನಿರ್ಮಿಸುತ್ತಿರುವ ಮತ್ತೊಂದು ಹಾಸ್ಟೆಲ್ ಕಟ್ಟಡ ನಿರ್ಮಾಣ ಅಪೂರ್ಣ. ಅದಕ್ಕಾಗಿ ಬಾಕಿ ಅನುದಾನ ಒದಗಿಸುವುದು

**(ಕ್ರಮ: ಮು.ಕಾ.ನಿ., ಜಿ.ಪಂ. ತುಮಕೂರು ಜಿಲ್ಲೆ)**









➢ ಈ ರಸ್ತೆಯಲ್ಲಿನ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಕಛೇರಿ ಮುಂಭಾಗದಲ್ಲಿ ಖಾಲಿ ಜಾಗವಿದ್ದು, ಪಾರ್ಕಿಂಗ್ ವ್ಯವಸ್ಥೆ ನಿರ್ಮಿಸುವ ಬಗ್ಗೆ ಚಿಂತನೆ ನಡೆಸಿ ವರದಿ ಸಲ್ಲಿಸತಕ್ಕದ್ದು. (ಕ್ರಮ: **ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ**)



**ಪ್ರಸ್ತುತ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಅಡಿಯಲ್ಲಿ ಆಯ್ಕೆ ಮಾಡಿಕೊಂಡಿರುವ ಎಲ್ಲಾ ಸ್ಮಾರ್ಟ್ ರಸ್ತೆಗಳಲ್ಲಿ ಸುಮಾರು ಒಟ್ಟು 550–600 ಬೀದಿ ವ್ಯಾಪಾರಿಗಳು ದಿನನಿತ್ಯ ವ್ಯಾಪಾರ ಮಾಡುತ್ತಿದ್ದು, ಇವರನ್ನೆಲ್ಲ ಗಮನದಲ್ಲಿಟ್ಟುಕೊಂಡು ಸೂಕ್ತ ಸ್ಥಳಗಳಲ್ಲಿ ವೆಂಡಿಂಗ್ ಜೋನ್ಸ್‌ಗಳನ್ನು ನಿರ್ಮಿಸಲು ಜಿಲ್ಲಾಧಿಕಾರಿಗಳು ಹಾಗೂ**

ಆಯುಕ್ತರು, ತುಮಕೂರು ಮಹಾನಗರ ಪಾಲಿಕೆ ಇವರೊಂದಿಗೆ ಚರ್ಚಿಸಿ ಪ್ರಸ್ತಾವನೆಯನ್ನು ತಯಾರಿಸುವಂತೆ ಪಿಎಂಸಿಯವರಿಗೆ ಸೂಚಿಸತಕ್ಕದ್ದು. (ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್)

ಒಟ್ಟಾರೆ ಈ ಮೇಲ್ಕಂಡ ಎಲ್ಲಾ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿದಾಗ ಯಾವ ಒಂದು ಕಾಮಗಾರಿಯೂ ಸಹ ಪೂರ್ಣಗೊಳ್ಳುವ ಹಂತದಲ್ಲಿ ಇರುವುದಿಲ್ಲ. ಇದರಿಂದ ದಿನನಿತ್ಯ ಸಾರ್ವಜನಿಕರಿಗೆ ತೀವ್ರ ಸಮಸ್ಯೆಗಳು ಉಂಟಾಗುತ್ತಿದ್ದು ಹಾಗೂ ಜನಪ್ರತಿನಿಧಿಗಳು ಸಾರ್ವಜನಿಕರಿಗೆ ಉತ್ತರಿಸಲು ಸಾಧ್ಯವಾಗುತ್ತಿಲ್ಲ. ಪ್ರತಿ ಮಾಹೆಯ ಸ್ಥಳ ವೀಕ್ಷಣೆಯಲ್ಲಿಯೂ ಎಲ್ಲಾ ಗುತ್ತಿಗೆದಾರರಿಗೂ ಹಾಗೂ ಸ್ಮಾರ್ಟ್ ಸಿಟಿ ಅಧಿಕಾರಿಗಳಿಗೂ ಕಾಮಗಾರಿಗಳನ್ನು ವಿಳಂಬ ಮಾಡದೇ ತ್ವರಿತಗತಿಯಲ್ಲಿ ಪೂರ್ಣಗೊಳಿಸಿ, ತಪ್ಪಿದಲ್ಲಿ ಅಂತಹವರ ಮೇಲೆ ನಿಯಮಾನುಸಾರ ಕ್ರಮಕೈಗೊಳ್ಳತಕ್ಕದ್ದು ಎಂದು ಉಸ್ತುವಾರಿ (ಪ್ರ) ವ್ಯವಸ್ಥಾಪಕ ನಿರ್ದೇಶಕರಿಗೆ ಆದೇಶಿರುತ್ತೇನೆ.

ಗೌರವಗಳೊಂದಿಗೆ,

ತಮ್ಮ ವಿಶ್ವಾಸಿ,

ಶ್ರೀ ವಿಜಯ್ ಭಾಸ್ಕರ್ ಟಿ ಎಂ ಭಾ.ಆ.ಸೇ
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ, ವಿಧಾನಸೌಧ,
ಬೆಂಗಳೂರು.

Aes ) DPAAr

<u>ಜಿಲ್ಲಾಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ</u>

| ಕ್ರ.ಸಂ | ಅಂಶಗಳು | |
|---|---|---|
| 1 | ಉಸ್ತುವಾರಿಜಿಲ್ಲೆಯ ಹೆಸರು | ಬೆಂಗಳೂರು ನಗರ ಜಿಲ್ಲೆ |
| 2 | ಜಿಲ್ಲಾಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ತುಷಾರ್‌ಗಿರಿನಾಥ್.ಭಾ.ಅ.ಸೇ., |
| 3 | ಪ್ರವಾಸಕೈಗೊಂಡ ದಿನಾಂಕ | 20-12-2019 |
| | **ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ** | |
| 4 | ಜಿಲ್ಲಾಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | 1. ನರೇಗಾ ಯೋಜನೆಯಡಿ 1,30,000 ಮಾನವ ದಿನಗಳ ಗುರಿಗೆ ಎದುರಾಗಿ 72,000 ಮಾನವ ದಿನಗಳು ಉತ್ಪತ್ತಿಯಾಗಿರುವ ಅಂಶಗಳು ಗಮನಿಸಿದರು.<br>2. ಜಲಾಮೃತ ಯೋಜನೆಯಡಿ 58.68 ಲಕ್ಷ ಬಿಡುಗಡೆಯಾಗಿದ್ದರೂ ಇನ್ನು ಕಾಮಗಾರಿ ಪ್ರಾರಂಭವಾಗದೆ ಇರುವ ಅಂಶ ಗಮನಿಸಿದರು.<br>3. ಪಿ.ಎಂ.ಜಿ.ಎಸ್.ವೈ ಯೋಜನೆಯಡಿ 3ನೇ ಹಂತದ ಕ್ರಿಯಾ ಯೋಜನ ೆತಯಾರಿಕೆ ಸಂಬಂಧಅವಶ್ಯ ಅಂಕಿ ಅಂಶಗಳು ಇನ್ನುಅಂತರ್ಜಾಲದಲಲ್ಲಿ ಆರೋಹಣವಾಗದೆ ಇರುವ ಅಂಶವನ್ನು ಗಮನಿಸಿದರು.<br>4. ಸಿ.ಎಂ.ಜಿ.ಎಸ್.ವೈ (ಜಿ.ಪಂ)ಅಡಿ 75 ಲಕ್ಷಅನುದಾನ ಬಿಡುಗಡೆಯಾಗಿದ್ದರೂ 57 ಲಕ್ಷ ಮಾತ್ರ ವೆಚ್ಚವಾಗಿರುವ ಅಂಶವನ್ನು ಗಮನಿಸಿದರು.<br>5. ಸಿ.ಎಂ.ಜಿ.ಎಸ್.ವೈ ಟಾಸ್ಕಫೋರ್ಸ್ ಯೋಜನೆಯಡಿ ಕೇವಲ 9ನ ಕಾಮಗಾರಿಗಳನ್ನು ಮಾತ್ರ ಪೂರ್ಣಗೊಳಿಸಿರುವ ಮತ್ತು 75.5 ಲಕ್ಷ ಬಿಡುಗಡೆಯಾಗಿದ್ದರೂ 25 ಲಕ್ಷ ಮಾತ್ರ ವೆಚ್ಚವಾಗಿರುವ ಅಂಶವನ್ನು ಗಮನಿಸಿದರು.<br>6. ಮುಖ್ಯಮಂತ್ರಿಯವರ ಗ್ರಾಮ ವಿಕಾಸ ಯೋಜನೆಯಡಿ 18 ಕೋಟಿ ಬಿಡುಗಡೆಯಾಗಿದ್ದರೂ 11.74 ಕೋಟಿ ಮಾತ್ರ ವೆಚ್ಚವಾಗಿರುವಅಂಶವನ್ನು ಗಮನಿಸಿದರು.<br>7. ಘನ ತ್ಯಾಜ್ಯ ಪ್ರಗತಿ ಬಗ್ಗೆ ನೀರಿಕ್ಷೀತ ಮಟ್ಟದಲ್ಲಿ ಪ್ರಗತಿಆಗದೆಇರುವ ಬಗ್ಗೆ ಗಮನಿಸಿದರು.<br>8. ಎನ್.ಆರ್.ಡಿ.ಡಬ್ಲೂ. ಪಿ ಯೋಜನೆಯಡಿ 5 ಲಕ್ಷಕ್ಕಿಂತಕಡಿಮೆ ಮೊತ್ತ ಹೊಂದಿರುವ 245 ಕಾಮಗಾರಿಗಳ ಪೈಕಿ ಇನ್ನೂ 74 ಕಾಮಗಾರಿಗಳು 5 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳ ಪೈಕಿ 176 ಕಾಮಗಾರಿಗಳಿಗೆ ವರ್ಕ್‌ಆರ್ಡರ್ ವಿತರಣೆ ಆಗದೆ ಇರುವ, ಮತ್ತು 5 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳ ಪೈಕಿ ಮುಂದುವರೆದ 117 ಕಾಮಗಾರಿಗಳ ಪೈಕಿ ಇನ್ನೂ 35 ಕಾಮಗಾರಿಗಳು ಮುಕ್ತಾಯವಾಗದೆ ಇರುವ ಅಂಶವನ್ನು ಗಮನಿಸಿದರು.<br>9. 664 ಡಬ್ಲ್ಯೂ.ಪಿ.ಪಿ.ಗಳು ಕೆಲಸ ನಿರ್ವಹಿಸುತ್ತಿರುವೆಎಂಬುದಾಗಿ ನೀಡಿರುವ ವರದಿಯನ್ನು ಗಮನಿಸಿದರು. |

| | | |
|---|---|---|
| | | 10. ಆನೇಕಲ್ ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಇನ್ನು 9 ಗ್ರಾಮಗಳಲ್ಲಿ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗುತ್ತಿದೆ ಎಂದು ನೀಡಿರುವ ವರದಿಯನ್ನು ಗಮನಿಸಿದರು. |
| 5 | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | 1. ಮುಂದುವರೆದ ಎಲ್ಲಾ ಕಾಮಗಾರಿಗಳನ್ನು ಕನವರಿ 15ರೊಳಗೆ ಮುಕ್ತಾಯಗೊಳಿಸಬೇಕು, ಅಂತೆಯೇ ಈವರೆಗೆ ಬಿಡುಗಡೆಯಾಗಿರುವ ಅನುದಾನವನ್ನು ಜನವರಿ 15ರ ಒಳಗೆ ವೆಚ್ಚ ಮಾಡಬೇಕುಎಂದು ತಿಳಿಸಿದರು. ನರೇಗಾ ಯೋಜನೆಯಡಿ ನೀಡಿರುವ ಗುರಿಯನ್ನು ಶೀಘ್ರ ತಲುಪಬೇಕು. ವಿಶೇಷವಾಗಿ ಕುಡಿಯುವ ನೀರು ಸೇರಿದಂತೆ ಎಲ್ಲಾ ಯೋಜನೆಗಳ ಮುಂದುವರೆದ ಕಾಮಗಾರಿಗಳನ್ನು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು ಎಂದು ನಿರ್ದೇಶನ ನೀಡಿದರು. |

## ಕ್ಷೇತ್ರ ವೀಕ್ಷಣೆ

| ಕ್ರಮ ಸಂಖ್ಯೆ | ಭೇಟಿ ನೀಡಿದತಾಲ್ಲೂಕು/ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| 6 | ಆನೇಕಲ್‌ತಾಲ್ಲೂಕು ಹಳ್ಳಿಗಳು:- ಕಲ್ಲುಬಾಳು ಮತ್ತು ಹೆನ್ನಾಗರ | ಕಲ್ಲುಬಾಳು ಕೆರೆ, ಹೆನ್ನಾಗರಗ್ರಾ.ಪಂ ಕಾರ್ಯಾಲಯ, ಹೆನ್ನಾಗರ ಮಾಧ್ಯಮಿಕ ಶಾಲೆ, ಹೆನ್ನಾಗರ ಅಂಗನವಾಡಿ ಕೇಂದ್ರ, ಹೆನ್ನಾಗರದಲ್ಲಿ ಎ.ಡಿ.ಎ. ಅಡಿ ನಿರ್ಮಾಣವಾಗಿರುವ ರಸ್ತೆಯ ಸ್ಥಳ. | 1. ಜೆ.ಎಸ್.ಎ ಅಡಿ ಅಭಿವೃದ್ಧಿಗೊಂಡಿರುವ ಹೆನ್ನಾಗರ ಕೆರೆಯ ಅಭಿವೃದ್ಧಿ.<br>2. ಹೆನ್ನಾಗರ ಮಾಧ್ಯಮಿಕ ಶಾಲೆಯಲ್ಲಿ ಬಿಸಿಯೂಟ ಗುಣಮಟ್ಟದ ಪರಿಶೀಲನೆ.<br>3. ಅದೇ ಶಾಲೆಯ ಆವರಣದಲ್ಲಿರುವ ಈ ಲಜ್ ಕ್ಲಿನಿಕ್ ಕಾರ್ಯಕ್ಷಮತೆಯ ಪರಿಶೀಲನೆ.<br>4. ಎ.ಡಿ.ಎ ಅನುದಾನದಲ್ಲಿ ಅದೇ ಗ್ರಾಮದಲ್ಲಿ ನಿರ್ಮಾಣವಾಗಿರುವ ರಸ್ತೆ ಪರಿಶೀಲನೆ. |
| 7 | ಇತರೆ ವಿಷಯಗಳು | - | - |

(ತುಷಾರ್ ಗಿರಿ ನಾಥ್)

# ನಮೂನೆ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರಮ.ಸಂ. | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಬಳ್ಳಾರಿ. |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಹೆಸರು | ಶ್ರೀ ಎಂ.ಎಸ್. ಶ್ರೀಕರ್ |
| 3 | ಪ್ರವಾಸ ಕೈಗೊಂಡ ದಿನಾಂಕ | 26.12.2019 |
| A | **ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ** | |
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | 1. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಪ್ರಾಧಿಕಾರ<br>ಅ. 2015-16, 2016-17 ಹಾಗೂ 2017-18 ನೇ ಸಾಲಿನ ಕಾಮಗಾರಿಗಳಿಗೆ ಪೈಕಿ ಒಟ್ಟು 31 ಕಾಮಗಾರಿಗಳು ಬಾಕಿ ಇರುತ್ತವೆ.<br>ಆ.2019-20ನೇ ಸಾಲಿನ ಕೆಲವು ಕಾಮಗಾರಿಗಳು ಪ್ರಾರಂಭಿಸದೇ ಇರುವುದು.<br>2. ಬಹು ಗ್ರಾಮ ಕುಡಿಯುವ ನೀರಿನ ಯೋಜನೆ<br>ಜಿಲ್ಲೆಯಲ್ಲಿ 69 ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿದ್ದು, ಈ ಪೈಕಿ 65 ಯೋಜನೆಗಳು ಪೂರ್ಣಗೊಂಡಿದ್ದು, ಕೂಡ್ಲಿಗಿ ತಾಲೂಕಿನ 2 ಹೊಸಪೇಟೆ ತಾಲೂಕಿನ 1 ಹಾಗೂ ಬಳ್ಳಾರಿ ತಾಲೂಕಿನ 1 ಯೋಜನಾ ಗ್ರಾಮಗಳಿಗೆ ನೀರು ಸರಬರಾಜು ಮಾಡಲಾಗದಿರುವುದು.<br>3. ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಎಲ್ಲಾ ತಾಲೂಕುಗಳಿಗೆ ನೀರು ಸರಬರಾಜು ಆಗುತ್ತಿರುವ ಕುರಿತು ವರದಿಯನ್ನು ನೀಡಲು ಸೂಚಿಸಿರುತ್ತಾರೆ.<br>4. ಬಳ್ಳಾರಿ ನಗರದಲ್ಲಿ ನಿರ್ಮಿತವಾಗುತ್ತಿರುವ ಮಿನಿ ವಿಧಾನ ಸೌಧ ಕಾಮಗಾರಿಯ ಪ್ರಗತಿ |

| | | |
|---|---|---|
| | | |
| b) | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಪ್ರಾಧಿಕಾರ<br><br>• 2015-16, 2016-17 ಹಾಗೂ 2017-18 ನೇ ಸಾಲಿನ ಕಾಮಗಾರಿಗಳಿಗೆ ಪೈಕಿ ಒಟ್ಟು 31 ಕಾಮಗಾರಿಗಳು ಬಾಕಿ ಇರುತ್ತದೆ. ಸದರಿ ಕಾಮಗಾರಿಗಳನ್ನು ಜನವರಿ 2020 ಒಳಗಾಗಿ ಭೌತಿಕ ಪ್ರಗತಿ ಸಧಿಸಿ, ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ತಿಳಿಸಿರುತ್ತಾರೆ.<br>• 2018-19 ನೇ ಸಾಲಿಗೆ ಸಂಬಂಧಿಸಿದಂತೆ 3 ಕಾಮಗಾರಿಗಳು ಪ್ರಾರಂಭವಾಗದೇ ಇದ್ದು, ಅದರ ಪೈಕಿ ಒಂದು ಕಾಮಗಾರಿಯು ನಿವೇಶನ ವಿಲ್ಲದ ಕಾರಣ ಪ್ರಾರಂಭವಾಗದೇ ಇರುತ್ತಾರೆ. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಎರಡು ಕಾಮಗಾರಿಗಳನ್ನು ಪ್ರಾರಂಭಿಸಲು ತಿಳಿಸಿರುತ್ತಾರೆ, ಉಳಿದ ಕಾಮಗಾರಿಗಾಗಿ ನಿವೇಶನವನ್ನು ಪಡೆಯಲು ತಿಳಿಸಿರುತ್ತಾರೆ.<br>• ಮುಂದುವರೆದು, 2018-19ನೇ ಸಾಲಿನ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ಹಾಗೂ 2019-20ನೇ ಸಾಲಿನ ಪ್ರಾರಂಭಿಸಲಾಗಿಲ್ಲದ ಕಾಮಗಾರಿಗಳನ್ನು ಪ್ರಾರಂಭಿಸಲು ತಿಳಿಸಿರುತ್ತಾರೆ.<br><br>ಬಹುಗ್ರಾಮ ಕುಡಿಯುವ ನೀರಿನ ಯೋಜನೆ<br>• ಜಿಲ್ಲೆಯಲ್ಲಿ 69 ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿದ್ದು, ಈ ಪೈಕಿ 65 |

**ದಿನಾಂಕ: 19.12.2019 ರಂದು ಮಾನ್ಯ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಶ್ರೀ ತುಷಾರ್ ಗಿರಿನಾಥ್ ಭಾ.ಆ.ಸೇ., ರವರ ಅಧ್ಯಕ್ಷತೆಯಲ್ಲಿ ಜರುಗಿದ ಬೆಂಗಳೂರು ನಗರ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭಾ ನಡವಳಿ.**

ಪ್ರಥಮವಾಗಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಅಧ್ಯಕ್ಷರು, ಬೆಂಗಳೂರು ಜಲ ಮಂಡಳಿ ಹಾಗೂ ಬೆಂಗಳೂರು ನಗರ ಜಿಲ್ಲೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಸಭೆಯಲ್ಲಿ ಉಪಸ್ಥಿತರಿದ್ದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹಾಗೂ ಸಭೆಗೆ ಹಾಜರಿದ್ದ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು ಸಭೆಗೆ ಸ್ವಾಗತಿಸಿ, ಸಭೆಯನ್ನು ನಡೆಸಿಕೊಡುವಂತೆ ಅಧ್ಯಕ್ಷರನ್ನು ಕೋರಿದರು. ನಂತರ ಅಧ್ಯಕ್ಷರು ಈ ಕೆಳಕಂಡ ಇಲಾಖೆಯ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸಿದರು.

**01.ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:**

2019–2020ನೇ ಸಾಲಿಗೆ 1.30 ಲಕ್ಷ ಮಾನವ ದಿನಗಳ ಭೌತಿಕ ಗುರಿ ನಿಗಧಿಯಾಗಿದ್ದು, ಇಲ್ಲಿಯವರೆವಿಗೆ 75886 ಮಾನವ ದಿನಗಳನ್ನು ಸೃಜಿಸಲಾಗಿದೆ. ಹಾಗೂ ವಿವಿಧ ಕಾಮಗಾರಿಗಳಿಗಾಗಿ ರೂ.247.20 ಲಕ್ಷಗಳನ್ನು ವೆಚ್ಚ ಮಾಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿರುವುದನ್ನು ಪರಿಶೀಲಿಸಿ, ಹೆಚ್ಚಿನ ಮಾನವ ದಿನಗಳನ್ನು ಸೃಜನೆ ಮಾಡಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದರು. ಮುಂದುವರೆದು ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತಿ ಇವರು ಮಾತನಾಡುತ್ತಾ, ಕೃಷಿ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ಹೆಚ್ಚಿನ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ವಸತಿ ಯೋಜನೆಯಲ್ಲಿ ಮನೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆಯೆಂದು ಸಭೆಯ ಗಮನಕ್ಕೆ ತಂದರು.

**ಜಲಾಮೃತ ಯೋಜನೆ –2019** ಯೋಜನೆಯಡಿ ಒಟ್ಟು 28 ಕೆರೆಗಳಲ್ಲಿ ಹೂಳು ತೆಗೆಯುವ ಕಾಮಗಾರಿಗಳ ಕ್ರಿಯಾ ಯೋಜನೆಯು ರೂ.180.00 ಲಕ್ಷ ಅನುಮೋದನೆಯಾಗಿದ್ದು, ಅದರಂತೆ ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಪಿ.ಡಿ.ಓ.ಗಳಿಗೆ ಕೆರೆ ಸಮಿತಿ ರಚಿಸಲು ನಿರ್ದೇಶನ ನೀಡಲಾಗಿರುವುದನ್ನು ಸಭೆಯು ಪರಿಶೀಲಿಸಿತು. ಕೆರೆ ಸಮಿತಿಯನ್ನು ತ್ವರಿತವಾಗಿ ರಚಿಸಿ, ನಿಗಧಿಯಾಗಿರುವ ಅನುದಾನವನ್ನು ಪೂರ್ಣವಾಗಿ ವೆಚ್ಚ ಮಾಡಿ ಪ್ರಗತಿ ಸಾಧಿಸುವಂತೆ ಸೂಚನೆ ನೀಡಲಾಯಿತು.

(ಕ್ರಮ: ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು)

**02. ಸ್ವಚ್ಛ ಭಾರತ್ ಮಿಷನ್:**

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ವ್ಯಾಪ್ತಿಯ 4 ತಾಲ್ಲೂಕುಗಳ ಪೈಕಿ ಘನ ಮತ್ತು ದ್ರವ ತ್ಯಾಜ್ಯ ಘಟಕಗಳನ್ನು ನಿರ್ಮಾಣ ಮಾಡಲು 2019–20ನೇ ಸಾಲಿಗೆ ಒಟ್ಟು 40 ಘಟಕಗಳ ಭೌತಿಕ ಗುರಿ ನಿಗಧಿಪಡಿಸಲಾಗಿದ್ದು, ಬೆಂಗಳೂರು ಉತ್ತರ ತಾಲ್ಲೂಕಿನ ಚಿಕ್ಕಜಾಲ ಗ್ರಾಮ ಪಂಚಾಯತಿಯಲ್ಲಿ ಘಟಕ ಕಾರ್ಯಾನುಷ್ಠಾನಗೊಳಿಸಲಾಗುತ್ತಿದೆ. ಬೆಂ.ಉ.ತಾ: ಮಾದನಾಯಕನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಜಾಗದ ಲಭ್ಯತೆ ಇಲ್ಲ. ಉಳಿದಂತೆ ಗುರ್ತಿಸಿರುವ ಜಾಗಗಳು ಒಟ್ಟು 33 ಆಗಿದ್ದು, ಗ್ರಾಮ ಪಂಚಾಯತಿಗಳಿಗೆ

ಪೂರ್ಣಗೊಂಡಿದ್ದು ಕಾರ್ಯನಿರ್ವಹಿಸುತ್ತಿವೆ. ಸಿಂಗನಾಯಕನಹಳ್ಳಿ ಘಟಕ ನಿರ್ಮಾಣ ಪ್ರಗತಿಯಲ್ಲಿದೆ. ಪ್ರಸ್ತುತ ಸಾಲಿನಲ್ಲಿ ಮಂಜೂರಾಗಿರುವ ಘಟಕಗಳ ಪೈಕಿ ಉಳಿದ 5 ಘಟಕಗಳಿಗೆ ಸೈಟ್ ಲಭ್ಯವಿಲ್ಲ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಭೆಗೆ ತಿಳಿಸಿದರು.

ಮುಂದುವರೆದು, ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತಾ, ಈಗಾಗಲೇ ಗುರ್ತಿಸಿರುವ ನಿವೇಶನಗಳನ್ನು 2020ನೇ ಜನವರಿ 15 ರೊಳಗೆ ಗ್ರಾಮ ಪಂಚಾಯತಿಗಳಿಗೆ ಹಸ್ತಾಂತರಿಸುವಂತೆ ಹಾಗೂ ಒತ್ತುವರಿ ಇದ್ದಲ್ಲಿ ಕಂದಾಯ ಭೂ ಕಾಯಿದೆ ಪ್ರಕಾರ ಕ್ರಮಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟ ಎಲ್ಲಾ ತಹಶೀಲ್ದಾರ್‌ರವರಿಗೆ ಸೂಚನೆ ನೀಡಿದರು. ಅಲ್ಲದೆ, ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿಗಳು, 2 ಉಪ ವಿಭಾಗದ ಉಪ ವಿಭಾಗಾಧಿಕಾರಿಗಳು ಒತ್ತುವರಿಯಾಗಿರುವ ಜಾಗಗಳನ್ನು ಪರಿಶೀಲನೆ ಮಾಡಲು ತಿಳಿಸಿದರು.

(ಕ್ರಮ: ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಉಪ ಕಾರ್ಯದರ್ಶಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತಿ, ಬೆಂಗಳೂರು ಉತ್ತರ ಹಾಗೂ ದಕ್ಷಿಣ ಉಪ ವಿಭಾಗದ ಉಪ ವಿಭಾಗಾಧಿಕಾರಿಗಳು, ಎಲ್ಲಾ ತಾಲ್ಲೂಕು ತಹಶೀಲ್ದಾರ್‌ರವರು)

**03.ವಸತಿ ಯೋಜನೆ:**

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಬರುವ ಒಟ್ಟು 4 ತಾಲ್ಲೂಕುಗಳಲ್ಲಿ ವಿವಿಧ ವಸತಿ ಯೋಜನೆಯಡಿ 2538 ಮನೆ ನಿರ್ಮಾಣ ಮಾಡಲು ಭೌತಿಕ ಗುರಿ ನಿಗಧಿಯಾಗಿದ್ದು, ಈ ಪೈಕಿ 688 ಮನೆಗಳು ಪೂರ್ಣಗೊಂಡಿದ್ದು, ಉಳಿದ 1850 ಮನೆಗಳ ನಿರ್ಮಾಣ ಆಗಬೇಕಾಗಿರುವುದನ್ನು ಸಭೆಯು ಪರಿಶೀಲಿಸಿ, ಉಳಿದ ಮನೆಗಳನ್ನು ಶೀಘ್ರಗತಿಯಲ್ಲಿ ನಿರ್ಮಾಣ ಮಾಡಲು ಅಗತ್ಯ ಕ್ರಮವಹಿಸುವಂತೆ ಸೂಚನೆ ನೀಡಲಾಯಿತು.

(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು)

**04. ಕೃಷಿ ಇಲಾಖೆ:**

**ಬೆಳೆ ಸಮೀಕ್ಷೆ:** ಬೆಂಗಳೂರು ನಗರ ಜಿಲ್ಲೆಯ 4 ತಾಲ್ಲೂಕುಗಳ ಒಟ್ಟು 594 ಗ್ರಾಮಗಳಲ್ಲಿ ಬೆಳೆ ಸಮೀಕ್ಷೆ ಕೈಗೊಳ್ಳಲಾಗಿದ್ದು, ಇಲ್ಲಿಯವರೆಗೆ 577 ಗ್ರಾಮಗಳಲ್ಲಿ ಸಮೀಕ್ಷೆ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು ನಿಗಧಿತ ಸಮಯದೊಳಗೆ ಪೂರ್ಣ ಪ್ರಗತಿ ಸಾಧಿಸುವಂತೆ ತಿಳಿಸಿದರು.

(ಕ್ರಮ: ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ)

**05. ಪ್ಲೇಸ್ ಆಫ್ ಸೇಫ್ಟಿ:**

18 ವರ್ಷ ವಯಸ್ಸಿನ ಹೆಣ್ಣು ಮಕ್ಕಳು ಕಾನೂನು ಬಾಹಿರವಾಗಿ ಚಟುವಟಿಕೆ ನಡೆಸಿ, ಹೊರಗುಳಿದವರಿಗೆ ಸುರಕ್ಷತಾ ಸಂಸ್ಥೆಯನ್ನು ಸ್ಥಾಪಿಸಲು 3 ರಿಂದ 4 ಎಕರೆ ಸರ್ಕಾರಿ ಜಾಗದ ಅವಶ್ಯಕತೆ ಇದೆಯೆಂದು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಸಭೆಗೆ

ತಿಳಿಸಿದರು. ಅವಶ್ಯವಿರುವ ಜಾಗವನ್ನು ಗುರ್ತಿಸಿ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸುವಂತೆ ಮಾನ್ಯ ಸಭಾಧ್ಯಕ್ಷರು ಸೂಚನೆ ನೀಡಿದರು.

(ಕ್ರಮ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು ಜಿಲ್ಲೆ)

**06. ಅಕ್ಷರ ದಾಸೋಹ ಮತ್ತು ಕ್ಷೀರಭಾಗ್ಯ ಯೋಜನೆ:**

ಬೆಂಗಳೂರು ನಗರ ಜಿಲ್ಲೆಯಲ್ಲಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳು ಒಟ್ಟು 2110 ಶಾಲೆಗಳ ಪೈಕಿ 15 ಎನ್.ಜಿ.ಓ.ಸಂಸ್ಥೆಗಳು 2001 ಶಾಲೆಗಳಿಗೆ ಹಾಗೂ 109 ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಶಾಲಾ ಅಡಿಗೆ ಕೇಂದ್ರಗಳಿಂದ ಮಧ್ಯಾಹ್ನ ಬಿಸಿಯೂಟ ತಯಾರಿಸಿ ನೀಡಲಾಗುತ್ತಿದ್ದು, ಇದರಿಂದ 3.16 ಲಕ್ಷ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟ ನೀಡಲಾಗುತ್ತಿದೆ ಹಾಗೂ ಇಲ್ಲಿಯವರೆಗೆ ರೂ.29.55 ಕೋಟಿಗಳನ್ನು ವೆಚ್ಚ ಮಾಡಲಾಗಿದೆಯೆಂದು ತಿಳಿಸಿದರು. ಆಹಾರದ ಗುಣಮಟ್ಟದ ಬಗ್ಗೆ ಅಧಿಕಾರಿಗಳು ಪರಿಶೀಲನೆ ಮಾಡುವಂತೆ ಸೂಚನೆ ನೀಡಿದರು.

(ಕ್ರಮ: ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಬೆಂಗಳೂರು ನಗರ ಜಿಲ್ಲೆ)

**07. ವಯಸ್ಕರ ಶಿಕ್ಷಣ ಇಲಾಖೆ:**

2019-20ನೇ ಸಾಲಿಗೆ ಮೂಲ ಸಾಕ್ಷರತಾ ಕಾರ್ಯಕ್ರಮಕ್ಕಾಗಿ ರೂ.37.86 ಲಕ್ಷ ನಿಗಧಿಯಾಗಿದ್ದು, ಇಲ್ಲಿಯವರೆಗೆ ರೂ.7.89 ಲಕ್ಷ ವೆಚ್ಚ ಮಾಡಲಾಗಿದೆ. ಮೂರು ತಾಲ್ಲೂಕುಗಳಲ್ಲಿನ 5 ಗ್ರಾಮ ಪಂಚಾಯತಿಗಳ 71 ಗ್ರಾಮಗಳಲ್ಲಿ 11473 ಜನ ಅನಕ್ಷರಸ್ಥರಿಗೆ ಮೂಲ ಸಾಕ್ಷರತಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿರುವುದನ್ನು ಸಭೆಯು ಪರಿಶೀಲಿಸಿ, ಬಿಡುಗಡೆಯಾಗಿರುವ ಅನುದಾನವನ್ನು ಸಂಪೂರ್ಣವಾಗಿ ನಿಗಧಿತ ಅವಧಿಯೊಳಗೆ ವೆಚ್ಚ ಮಾಡಿ ಪ್ರಗತಿ ಸಾಧಿಸಲು ಸೂಚನೆ ನೀಡಲಾಯಿತು.

(ಕ್ರಮ: ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ)

**08. ತೋಟಗಾರಿಕೆ ಇಲಾಖೆ:**

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ತೋಟಗಾರಿಕಾ ವಿವಿಧ ಯೋಜನೆಯಡಿ ರೂ.518.43 ಲಕ್ಷ ವಾರ್ಷಿಕ ಆರ್ಥಿಕ ಗುರಿ ನಿಗಧಿಯಾಗಿದ್ದು, ಇಲ್ಲಿಯವರೆಗೆ ರೂ.179.16 ಲಕ್ಷ ಬಿಡುಗಡೆಯಾಗಿ ರೂ.162.16 ಲಕ್ಷಗಳನ್ನು ವೆಚ್ಚ ಭರಿಸಿ ಶೇ.90 ರಷ್ಟು ಪ್ರಗತಿ ಸಾಧಿಸಿರುವುದನ್ನು ಸಭೆಯು ಪರಿಶೀಲಿಸಿತು. ನಿಗಧಿತ ಸಮಯಕ್ಕೆ ಪೂರ್ಣ ಪ್ರಗತಿ ಸಾಧಿಸಲು ಸೂಚನೆ ನೀಡಲಾಯಿತು.

(ಕ್ರಮ: ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು ನಗರ ಜಿಲ್ಲೆ)

**09. .ಡಿ.ದೇವರಾಜ ಅರಸು/ವಿಶ್ವಕರ್ಮ ಸಮುದಾಯ ಅಭಿವೃದ್ಧಿ ನಿಗಮ:**

**ಗಂಗಾಕಲ್ಯಾಣ ಯೋಜನೆ:**

ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಗಂಗಾಕಲ್ಯಾಣ ಯೋಜನೆಯಡಿ 18 ಭೌತಿಕ ಗುರಿ ನಿಗಧಿಯಾಗಿದ್ದು, ಈ ಪೈಕಿ ಸಾಧನೆ ಶೂನ್ಯವಾಗಿರುವುದನ್ನು ಸಭೆಯು ಪರಿಶೀಲಿಸಿ, ಈವರೆವಿಗೂ ಪ್ರಗತಿ ಸಾಧಿಸದೆ ಇರುವ ಬಗ್ಗೆ ಪ್ರಶ್ನಿಸಿ, ಆರ್ಥಿಕ ವರ್ಷ ಮುಕ್ತಾಯವಾಗುವುದರ ಒಳಗಾಗಿ ಸಂಪೂರ್ಣ ಪ್ರಗತಿ ಸಾಧಿಸುವಂತೆ ತಿಳಿಸಿದರು.

ವಿಶ್ವಕರ್ಮ ಸಮುದಾಯ ಅಭಿವೃದ್ಧಿ ನಿಗಮದ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಗಂಗಾಕಲ್ಯಾಣ ಯೋಜನೆಯಡಿ 1 ಭೌತಿಕ ಗುರಿ ನಿಗಧಿಯಾಗಿದ್ದು, ಇಲ್ಲಿಯವರೆವಿಗೂ ಪ್ರಗತಿ ಸಾಧಿಸದ ಕಾರಣ ಆರ್ಥಿಕ ವರ್ಷ ಮುಕ್ತಾಯವಾಗುವುದರ ಒಳಗಾಗಿ ಪೂರ್ಣ ಪ್ರಗತಿ ಸಾಧಿಸುವಂತೆ ತಿಳಿಸಿದರು.

ಎಲ್ಲಾ ನಿಗಮ ಮಂಡಲಿಯವರು ತಮ್ಮ ಇಲಾಖಾ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಕಾರ್ಯಕ್ರಮಗಳನ್ನು ಆರ್ಥಿಕ ವರ್ಷ ಅಂತ್ಯವಾಗುವುದರೊಳಗೆ ಪೂರ್ಣ ಪ್ರಗತಿ ಸಾಧಿಸುವಂತೆ ನಿರ್ದೇಶನ ನೀಡಿದರು.

(ಕ್ರಮ: ಡಿ.ದೇವರಾಜ ಅರಸು/ವಿಶ್ವಕರ್ಮ ಸಮುದಾಯ/ಡಾ: ಅಂಬೇಡ್ಕರ್/ಮಹರ್ಷಿ ವಾಲ್ಮೀಕಿ/ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ, ಬೆಂಗಳೂರು ನಗರ ಜಿಲ್ಲೆ)

**10. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ:**

ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಬರುವ ಕೆರೆಗಳ ಸರ್ವೆಗೆ ಸಂಬಂಧಿಸಿದಂತೆ ಈಗಾಗಲೇ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಇಂಜಿನಿಯರ್‌ಗಳಿಂದ ಸರ್ವೆ ಮಾಡಿಸಲಾಗಿದ್ದು, 26 ಕೆರೆ ಒತ್ತುವರಿ ತೆರವುಗೊಳಿಸಲಾಗಿದೆ. 311 ಬಾಕಿ ಉಳಿದಿರುತ್ತದೆ. ಸದರಿ ಕೆರೆಗಳನ್ನು ಸರ್ವೆ ಮಾಡಿಸಲು ಸರ್ವೆ ಇಲಾಖೆಯಿಂದ ಸರ್ವೆಯರ್‌ನ್ನು ನಿಯೋಜಿಸಿಕೊಡುವಂತೆ ಕಾರ್ಯಪಾಲಕ ಅಭಿಯಂತರರು ಸಭೆಯನ್ನು ಕೋರಿದರು. ಮುಂದುವರೆದು, ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತಾ ಈಗಾಗಲೇ ತೆರವುಗೊಳಿಸಿರುವ ಕೆರೆಗಳಿಗೆ ನೆರಿಗಾ ಯೋಜನೆಯಡಿ ಟ್ರಂಚ್ ಮತ್ತು ತಂತಿ ಬೇಲಿ ನಿರ್ಮಾಣ ಮಾಡಿಕೊಳ್ಳುವಂತೆ ಹಾಗೂ ಟೆಂಡರ್ ಮುಖಾಂತರ ಖಾಸಗಿ ಸರ್ವೆಯರ್‌ಗಳನ್ನು ನೇಮಿಸಿಕೊಂಡು ನಕಾಶೆಯಂತೆ ಕೆರೆಗಳ ಹದ್ದುಬಸ್ತು ಗುರ್ತಿಸಿ ಒತ್ತುವರಿ ತೆರವುಗೊಳಿಸಲು ಕ್ರಮಕೈಗೊಳ್ಳುವಂತೆ ಸೂಚನೆ ನೀಡಿದರು.

(ಕ್ರಮ: ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂ.ನ.ಜಿಲ್ಲೆ)

**11. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ:**

ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಸಂಬಂಧಿಸಿದಂತೆ 684 ಘಟಕ ನಿರ್ಮಾಣ ಮಾಡಲು ಮಂಜೂರಾತಿ ಪಡೆಯಲಾಗಿದ್ದು, ಈ ಪೈಕಿ 634 ಘಟಕಗಳನ್ನು ನಿರ್ಮಾಣ ಮಾಡಿ ಕಾರ್ಯನಿರ್ವಹಿಸುತ್ತಿರುವುದನ್ನು ಸಭೆಯು ಪರಿಶೀಲಿಸಿತು. ಉಳಿದ 50 ಘಟಕಗಳನ್ನು ನಿರ್ಮಾಣ ಮಾಡಲು ಹಾಗೂ ಹಾಲಿ ಇರುವ ಘಟಕಗಳನ್ನು ಪರಿಶೀಲಿಸಿ, ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸಿ ಸಾರ್ವಜನಿಕರಿಗೆ ಗುಣಮಟ್ಟದ ಕುಡಿಯುವ ನೀರಿನ ಸೌಲಭ್ಯವನ್ನು ಪೂರೈಸುವಂತೆ ಸೂಚನೆ ನೀಡಲಾಯಿತು.

ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಯಡಿ ಉಳಿಕೆಯಾದ ಹಾಗೂ ಇಲ್ಲಿಯವರೆಗೆ ಬಿಡುಗಡೆಯಾದ ಒಟ್ಟು ಲಭ್ಯವಿರುವ ಅನುದಾನ ರೂ.1028.12 ಲಕ್ಷಗಳಲ್ಲಿ ತಹಲ್‌ವರೆವಿಗೆ ರೂ.694.54 ಲಕ್ಷಗಳನ್ನು ವೆಚ್ಚ ಮಾಡಿ ಶೇ.67 ರಷ್ಟು ಪ್ರಗತಿ ಸಾಧಿಸಲಾಗಿದೆಯೆಂದು ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು. ಬಾಕಿ ಇರುವ ಅನುದಾನವನ್ನು ನಿಗಧಿತ ಅವಧಿಯೊಳಗೆ ವೆಚ್ಚ ಮಾಡಿ ಪೂರ್ಣ ಪ್ರಗತಿ ಸಾಧಿಸುವಂತೆ ತಿಳಿಸಲಾಯಿತು.

ಉಳಿದಂತೆ ವಿಶೇಷ ಘಟಕ ಯೋಜನೆಯಡಿ ಲಭ್ಯವಿರುವ ರೂ.277.60 ಲಕ್ಷಗಳಲ್ಲಿ ತಹಲ್‌ವರೆವಿಗೆ ರೂ.174.45 ಲಕ್ಷಗಳನ್ನು ಹಾಗೂ ಗಿರಿಜನ ಉಪ ಯೋಜನೆಯಡಿ ಲಭ್ಯವಿರುವ ರೂ.27.16 ಲಕ್ಷಗಳಲ್ಲಿ ತಹಲ್‌ವರೆವಿಗೆ ರೂ.7.78 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ.83.69 ಲಕ್ಷ ಅನುದಾನ ಲಭ್ಯವಿದ್ದು, ಇಲ್ಲಿಯವರೆವಿಗೆ ರೂ.70.62 ಲಕ್ಷ ಅನುದಾನ ವೆಚ್ಚ ಮಾಡಿರುವುದನ್ನು ಸಭೆಯು ಪರಿಶೀಲಿಸಿ, ಸಂಪೂರ್ಣ ಅನುದಾನವನ್ನು ಅವಧಿಯೊಳಗೆ ವೆಚ್ಚ ಮಾಡಿ ಶೇ 100 ರಷ್ಟು ಪ್ರಗತಿ ಸಾಧಿಸುವಂತೆ ಸೂಚನೆ ನೀಡಲಾಯಿತು.

(ಕ್ರಮ: ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈ.ವಿಭಾಗ, ಬೆಂಗಳೂರು ನಗರ ಜಿಲ್ಲೆ)

12. **ಕಂದಾಯ ಇಲಾಖೆ:**

**1) ಸಾಮಾಜಿಕ ಭದ್ರತಾ ಯೋಜನೆಗಳು:**

ಬೆಂಗಳೂರು ನಗರ ಜಿಲ್ಲೆಯಲ್ಲಿ ನವೆಂಬರ್ 2019 ರ ಅಂತ್ಯಕ್ಕೆ ವೃದ್ಧಾಪ್ಯ ವೇತನ,ವಿಧವಾ ವೇತನ, ಅಂಗವಿಲ ವೇತನ, ಸಂಧ್ಯಾ ಸುರಕ್ಷಾ, ಮನಸ್ವಿನ ಯೋಜನೆ, ಮೈತ್ರಿ ಯೋಜನೆ, ರೈತ ಪತ್ನಿ ವಿಧವಾ ವೇತನ, ಅಸಿಡ್ ದಾಳಿಗೆ ಒಳಗಾದ ಮಹಿಳೆ/ಹೆಣ್ಣುಮಕ್ಕಳ ಸಹಾಯಧನ, ರಾಷ್ಟ್ರೀಯ ಕುಟುಂಬ ನೆರವು ಯೋಜನೆ, ಅಂತ್ಯ ಸಂಸ್ಕಾರ ಯೋಜನೆ, ಆದರ್ಶ ವಿವಾಹ ಯೋಜನೆಯಡಿ ಸಾಧಿಸಲಾದ ಪ್ರಗತಿಯನ್ನು ಈ ಕೆಳಕಂಡಂತೆ ಪರಿಶೀಲಿಸಲಾಯಿತು.

| ಕಾರ್ಯಕ್ರಮ | ಸ್ವೀಕೃತಿ | ವಿಲೇವಾರಿ | ಬಾಕಿ | ಫಲಾನುಭವಿಗಳ ಸಂಖ್ಯೆ | | |
|---|---|---|---|---|---|---|
| | | | | ಪ.ಜಾ | ಪ.ಪಂ | ಇತರೆ |
| ವೃದ್ಧಾಪ್ಯ ವೇತನ | 1597 | 967 | 630 | 20473 | 14307 | 40959 |
| ವಿಧವಾ ವೇತನ | 1305 | 586 | 719 | 21386 | 22163 | 83626 |
| ಅಂಗವಿಕಲ ವೇತನ | 707 | 199 | 508 | 9482 | 6424 | 40372 |
| ಸಂಧ್ಯಾಸುರಕ್ಷಾ | 1905 | 1110 | 795 | 37069 | 22632 | 124308 |
| ಮನಸ್ವಿನಿ ಯೋಜನೆ | 88 | 27 | 61 | 881 | 407 | 2514 |
| ಮೈತ್ರಿ ಯೋಜನೆ | 2 | 2 | 0 | 172 | 174 | 463 |
| ಅಸಿಡ್ ದಾಳಿಗೆ ತುತ್ತಾದ ಮಹಿಳೆ/ಹೆಣ್ಣುಮಕ್ಕಳ ಸಹಾಯ ಧನ | 1 | 1 | 0 | 0 | 0 | 1 |
| ರಾಷ್ಟ್ರೀಯ ಕುಟುಂಬ ನೆರವು ಯೋಜನೆ | 1289 | 255 | 1034 | 1280 | 1023 | 1613 |
| ಅಂತ್ಯ ಸಂಸ್ಕಾರ ಯೋಜನೆ | 1367 | 1207 | 160 | 487 | 298 | 1303 |

ವಿವಿಧ ಯೋಜನೆಗಳಡಿ ಜಿಲ್ಲೆಯಲ್ಲಿ ಒಟ್ಟು 8261 ಅರ್ಜಿಗಳು ಸ್ವೀಕೃತವಾಗಿದ್ದು, ಅದರಲ್ಲಿ 4354 ಅರ್ಜಿಗಳು ವಿಲೇವಾರಿಯಾಗಿದ್ದು, ಬಾಕಿ ಇರುವ 3907 ಅರ್ಜಿಗಳ ಬಗ್ಗೆ ಪರಿಶೀಲಿಸಿ, ಬಾಕಿ ಇರುವ ಅರ್ಜಿಗಳ ಬಗ್ಗೆ ಶೀಘ್ರವಾಗಿ ವಿಲೇವಾರಿ ಮಾಡುವಂತೆ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು

**(ಕ್ರಮ: ಉಪ ವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ/ದಕ್ಷಿಣ ಉಪವಿಭಾಗ, ಬೆಂಗಳೂರು ಜಿಲ್ಲೆ)**

**2. ಪಿಂಚಣಿ ಅದಾಲತ್ತು:**

ಬೆಂಗಳೂರು ನಗರ ಜಿಲ್ಲೆಯಲ್ಲಿ 2019-20ನೇ ಸಾಲಿನಲ್ಲಿ ದಿನಾಂಕ:01/04/2019 ರಿಂದ ದಿನಾಂಕ: 30/11/2019ರ ಮಾಹೆಯ ಅಂತ್ಯಕ್ಕೆ ಒಟ್ಟು 26 ಪಿಂಚಣಿ ಅದಾಲತ್ತು ನಡೆದಿದ್ದು, ಒಟ್ಟು 1879 ಅರ್ಜಿಗಳು ಸ್ವೀಕೃತವಾಗಿದ್ದು, ಇದರಲ್ಲಿ 1875 ಅರ್ಜಿಗಳು ವಿಲೇವಾರಿ ಆಗಿದ್ದು, 4 ಅರ್ಜಿಗಳು ಬಾಕಿ ಇರುವುದನ್ನು ಸಭೆಯು ಪರಿಶೀಲಿಸಿ, ಬಾಕಿ ಇರುವ ಅರ್ಜಿಗಳನ್ನು ಸಹ ಶೀಘ್ರವಾಗಿ ವಿಲೇವಾರಿ ಮಾಡುವಂತೆ ಅಧ್ಯಕ್ಷರು ಸೂಚಿಸಿದರು.

**( ಕ್ರಮ: ಸಹಾಯಕ ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ಶಾಖೆ, ಬೆಂಗಳೂರು ನಗರ ಜಿಲ್ಲೆ)**

**3. ಸಕಾಲ ಯೋಜನೆ:**

1ನೇ ಡಿಸೆಂಬರ್ 2019 ರಿಂದ 16/12/2019 ರವರೆಗೆ ಒಟ್ಟು ಸಕಾಲದಡಿ ಬೆಂಗಳೂರು ನಗರ ಜಿಲ್ಲೆಯ ಒಟ್ಟು 5 ತಾಲ್ಲೂಕಿಗಳಿಗೆ ಸಂಬಂಧಿಸಿದಂತೆ 27317 ಅರ್ಜಿಗಳು ಸ್ವೀಕೃತಿಯಾಗಿ ಬಾಕಿ 28267 ವಿಲೇವಾರಿಯಾಗಿರುವುದನ್ನು ಸಭೆಯು ಪರಿಶೀಲಿಸಿತು. ಆದಾಗ್ಯೂ ಅವಧಿ ಮೀರಿದ ಕಂದಾಯ ಇಲಾಖೆಯ 492ಅರ್ಜಿಗಳು ಇರುವುದನ್ನು ಸಭೆಯಲ್ಲಿ ಪರಿಶೀಲಿಸಲಾಯಿತು. ಅವುಗಳನ್ನು ತುರ್ತಾಗಿ ವಿಲೇವಾರಿ ಮಾಡುವಂತೆ ತಿಳಿಸುತ್ತಾ, ಇನ್ನು ಮುಂದೆ ಇಂತಹ ಅವಧಿ ಮೀರಿದ ಅರ್ಜಿಗಳನ್ನು ಇಟ್ಟುಕೊಳ್ಳಬಾರದೆಂದು ಕಟ್ಟುನಿಟ್ಟಾಗಿ ಸೂಚನೆಯನ್ನು ನೀಡಿದರು.

**(ಕ್ರಮ: ಉಪವಿಭಾಗಾಧಿಕಾರಿಗಳು, ಉತ್ತರ/ದಕ್ಷಿಣ ಉಪವಿಭಾಗ, ನಗರ ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳು)**

**4. ಆರ್‌ಟಿಸಿ ತಿದ್ದುಪಡಿ ಪೈಕಿ ಆರ್.ಟಿ.ಸಿ.:**

ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಐದು ತಾಲ್ಲೂಕುಗಳಿಂದ ಒಟ್ಟು 3,06,643 ಆರ್‌ಟಿಸಿಗಳಿದ್ದು ಇವುಗಳನ್ನು ಪೈಕಿ ಆರ್‌ಟಿಸಿಯಾಗಿ 2,90,635 ಗಳನ್ನು ದಿನಾಂಕ:17/12/2019 ಕ್ಕೆ ಮುಗಿಸಿದ್ದು, 16008 ಗಳನ್ನು ಪೈಕಿ ಆರ್‌ಟಿಸಿಯಾಗಿ ಬದಲಾಯಿಸಲು ಬಾಕಿ ಉಳಿದಿರುವುದನ್ನು ಸಭೆಯಲ್ಲಿ ಗಮನಿಸಿ, ಉಳಿಕೆಯನ್ನು ಕೂಡ ಶೀಘ್ರವಾಗಿ ಮುಗಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು.

**(ಕ್ರಮ: ತಹಶೀಲ್ದಾರ್, ಬೆಂಗಳೂರು ಉತ್ತರ,ದಕ್ಷಿಣ, ಉತ್ತರ(ಅಪರ), ಆನೇಕಲ್, ಕೆ.ಆರ್.ಪುರ ತಾಲ್ಲೂಕು)**

**5. ಬೆಂಗಳೂರು ನಗರ ಜಿಲ್ಲೆ ಆರ್‌ಟಿಸಿ ಕಲಂ 3 ಮತ್ತು 9 ವ್ಯತ್ಯಾಸಗಳ ಸರಿಪಡಿಸುವಿಕೆ:**

ಬೆಂಗಳೂರು ನಗರದಲ್ಲಿ ಒಟ್ಟು 5 ತಾಲ್ಲೂಕುಗಳಲ್ಲಿರುವ ಆರ್‌ಟಿಸಿ ಸಂಖ್ಯೆಗಳು 306643 ಗಳಾಗಿದ್ದು, ಇದರಲ್ಲಿ ಅಕ್ಟೋಬರ್ 2019 ರ ಮಾಹೆಯಿಂದ 16ನೇ ಡಿಸೆಂಬರ್ 2019 ರ ಮಾಹೆಯವರೆಗೆ ಒಟ್ಟು 2,85,254 ಆರ್‌ಟಿಸಿಗಳಲ್ಲಿನ ಕಲಂ 3 ಮತ್ತು 9 ರ ವ್ಯತ್ಯಾಸಗಳನ್ನು ಸರಿಪಡಿಸಿದ್ದು, ಇನ್ನು ಬಾಕಿ 21389 ಆರ್‌ಟಿಸಿಗಳನ್ನು ಪರಿಶೀಲಿಸುವ ಕಾರ್ಯ ಬಾಕಿ ಇರುವುದನ್ನು ಸಭೆಯಲ್ಲಿ ಗಮನಿಸಲಾಯಿತು. ಇವುಗಳನ್ನು ಸಹ ಆದ್ಯತೆ ಮೇರೆಗೆ ಮುಗಿಸುವಂತೆ ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳು ಹಾಗೂ ವಿಶೇಷ ತಹಶೀಲ್ದಾರ್‌ರವರಿಗೆ ಸೂಚಿಸಲಾಯಿತು.

(ಕ್ರಮ: ಉಪವಿಭಾಗಾಧಿಕಾರಿಗಳು, ಉತ್ತರ/ದಕ್ಷಿಣ ಉಪವಿಭಾಗ ಹಾಗೂ ವಿಶೇಷ ತಹಶೀಲ್ದಾರ್, ಬೆಂಗಳೂರು ಉತ್ತರ, ದಕ್ಷಿಣ, ಉತ್ತರ(ಅಪರ), ಆನೇಕಲ್, ಕೆ.ಆರ್.ಪುರ ತಾಲ್ಲೂಕು)

6. ಸಾರ್ವಜನಿಕ ಉಪಯೋಗಕ್ಕಾಗಿ ಸರ್ಕಾರಿ ಭೂಮಿ ಕಾಯ್ದಿರಿಸುವಿಕೆ:

ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಕಳೆದ 5 ವರ್ಷಗಳಿಂದ ವಿವಿಧ ಸಾರ್ವಜನಿಕ ಉದ್ದೇಶಗಳಿಗೆ ಸುಮಾರು 700 ಎಕರೆ ಸರ್ಕಾರಿ ಜಮೀನನ್ನು ಸಾರ್ವಜನಿಕ ಸ್ಮಶಾನ, ಸರ್ಕಾರಿ ಶಾಳೆ, ಸರ್ಕಾರಿ ಹಾಸ್ಟೆಲ್, ಸಾರ್ವಜನಿಕ ಸಮುದಾಯ ಭವನ, ಸರ್ಕಾರಿ ಕಚೇರಿಗಳು ಹಾಗೂ ಇನ್ನಿತರ ಉದ್ದೇಶಗಳಿಗೆ ಕಾಯ್ದಿರಿಸಿರುವ ಬಗ್ಗೆ ಅಪರ ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

ಅ). ಸಮಾಜ ಕಲ್ಯಾಣ ಇಲಾಖೆ:

ಜಿಲ್ಲಾ ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳು ಹಾಗೂ ಅವುಗಳಿಗೆ ಸ್ವಂತ ಕಟ್ಟಡ, ಬಾಡಿಗೆ ಕಟ್ಟಡ ಹಾಗೂ ನಿವೇಶನಗಳ ಅಗತ್ಯತೆ ಬಗ್ಗೆ ಚರ್ಚಿಸಿದಾಗ, ಒಟ್ಟು 63 ವಿವಿಧ ಹಂತದ ವಿದ್ಯಾರ್ಥಿನಿಲಯಗಳು ಅಸ್ತಿತ್ವದಲ್ಲಿದ್ದು, ಈ ಪೈಕಿ ಆನೇಕಲ್ ತಾಲ್ಲೂಕು ಚಂದಾಪುರದಲ್ಲಿ ನಡೆಯುತ್ತಿರುವ ಒಂದು ವಿದ್ಯಾರ್ಥಿನಿಲಯಕ್ಕೆ ನಿವೇಶನದ ಅಗತ್ಯತೆ ಇದೆ. ಈ ಬಗ್ಗೆ ಹೊಮ್ಮದೇವನಹಳ್ಳಿಯಲ್ಲಿ ಸರ್ಕಾರಿ ಜಾಗವನ್ನು ಗುರ್ತಿಸಲಾಗಿದೆ. ಕಂದಾಯ ಇಲಾಖೆಯಿಂದ ಜಾಗವನ್ನು ಇಲಾಖೆಗೆ ಹಸ್ತಾಂತರಿಸಿಕೊಡಬೇಕಾಗಿದೆಯೆಂದು ಜಂಟಿ ನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯವರು ಸಭೆಗೆ ತಿಳಿಸಿದರು. ಮುಂದುವರೆದು ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತಾ, ಬೆಂಗಳೂರು ದಕ್ಷಿಣ ಉಪ ವಿಭಾಗದ ಉಪ ವಿಭಾಗಾಧಿಕಾರಿಗಳು, ಆನೇಕಲ್ ತಾಲ್ಲೂಕು ತಹಶೀಲ್ದಾರ್‌ರವರು ಜಾಗವನ್ನು ವಿದ್ಯಾರ್ಥಿನಿಲಯಕ್ಕಾಗಿ ಮಂಜೂರು ಮಾಡಲು ಅಗತ್ಯ ಕ್ರಮವಹಿಸುವಂತೆ ಹಾಗೂ ಅಪರ ಜಿಲ್ಲಾಧಿಕಾರಿಗಳು ಸಹ ಈ ಬಗ್ಗೆ ಗಮನ ನೀಡಲು ತಿಳಿಸಿದರು.

(ಕ್ರಮ:ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಉಪ ವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ವಿಭಾಗ, ತಹಶೀಲ್ದಾರ್, ಆನೇಕಲ್ ತಾಲ್ಲೂಕು, ಜಂಟಿ ನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ)

ಆ). ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಬೆಂಗಳೂರು ನಗರ ಜಿಲ್ಲೆಯ 4 ತಾಲ್ಲೂಕುಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಒಟ್ಟು 51 ವಿವಿಧ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 16 ಸ್ವಂತ ಕಟ್ಟಡ, 35 ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿದ್ದು, ಸರ್ಕಾರದಿಂದ ಒಟ್ಟು 15 ನಿವೇಶನಗಳು ಇಲಾಖೆಗೆ ಹಸ್ತಾಂತರವಾಗಿದ್ದು, ಈ ಪೈಕಿ 5 ವಿದ್ಯಾರ್ಥಿನಿಲಯಗಳ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ. 10 ನಿವೇಶನಗಳ ಅಗತ್ಯತೆ ಇದೆ. ಮಂಜೂರು ಮಾಡುವ ವಿಸ್ತೀರ್ಣ ಒಂದು ಎಕರೆಗಿಂತ ಜಾಸ್ತಿ ಇದ್ದ ಪಕ್ಷದಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಮಾಡಬಹುದಾಗಿದೆಯೆಂದು ಅಭಿಪ್ರಾಯವನ್ನು ತಿಳಿಸಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಕೋಗಿಲು ಹಾಗೂ ಸೋಮಶೆಟ್ಟಿಹಳ್ಳಿಯಲ್ಲಿ ನಿವೇಶನಗಳನ್ನು ಗುರ್ತಿಸಲಾಗಿದೆ ಎಂದು ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು ಸಭೆಗೆ ತಿಳಿಸಿದಾಗ, ಅವಶ್ಯವಿರುವ ವಿದ್ಯಾರ್ಥಿನಿಲಯಗಳ ಪಟ್ಟಿ ನೀಡುವಂತೆ ತಿಳಿಸುತ್ತಾ, ಬಿ.ಬಿ.ಎಂ.ಪಿ. ವ್ಯಾಪ್ತಿ ಹಾಗೂ ಬಿ.ಡಿ.ಎ. ವ್ಯಾಪ್ತಿಯಲ್ಲಿ ನಡೆಯುವ ವಿದ್ಯಾರ್ಥಿನಿಲಯಗಳಿಗೆ ನಿವೇಶನದ ಬಗ್ಗೆ ಚರ್ಚೆ ಮಾಡಲು ಸಂಬಂಧಪಟ್ಟ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರೆ ಚರ್ಚೆಗೆ ಅನುಕೂಲವಾಗುವುದರಿಂದ ಮುಂದಿನ ಸಭೆಗೆ 2 ಇಲಾಖೆಯ ಅಧಿಕಾರಿಗಳನ್ನು ಆಹ್ವಾನಿಸುವಂತೆ ಸೂಚನೆ

ನೀಡಲಾಯಿತು. ಉಳಿದಂತೆ ಆನೇಕಲ್ ಯೋಜನಾ ಪ್ರಾಧಿಕಾರದಿಂದ ಸಿ.ಎ. ಸೈಟುಗಳು ಲಭ್ಯವಿದ್ದಲ್ಲಿ ಅವುಗಳನ್ನು ಗುರ್ತಿಸಿ ವಿದ್ಯಾರ್ಥಿನಿಲಯಕ್ಕೆ ಮಂಜೂರು ಮಾಡಲು ಹಾಗೂ ಉಪ ವಿಭಾಗಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ತಹಶೀಲ್ದಾರ್ ಗಳಿಂದ ಸರ್ಕಾರಿ ಜಾಗದ ಬಗ್ಗೆ ಮಾಹಿತಿ ಪಡೆದು ಮಂಜೂರು ಮಾಡಲು ಅಗತ್ಯ ಕ್ರಮವಹಿಸುವುದು, ಕಂದಾಯ ಜಮೀನು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಕಂದಾಯ ಜಮೀನು ಲಭ್ಯವಿಲ್ಲವೆಂದು ದೃಢೀಕರಣ ಪತ್ರವನ್ನು ತಹಶೀಲ್ದಾರರಿಂದ ಪಡೆದ ಪಕ್ಷದಲ್ಲಿ ಬಿ.ಬಿ.ಎಂ.ಪಿ ಅಥವಾ ಬಿ.ಡಿ.ಎ. ರವರಿಂದ ನಿವೇಶನ ಪಡೆಯಲು ಕ್ರಮವಹಿಸಬಹುದಾಗಿದೆ ಎಂದು ಮಾನ್ಯ ಸಭಾಧ್ಯಕ್ಷರು ಸೂಚನೆ ನೀಡಿದರು. ಮುಂದುವರೆದು ಆನೇಕಲ್ ಯೋಜನಾ ಪ್ರಾಧಿಕಾರದಿಂದ ಸಭೆಗೆ ಹಾಜರಾಗಿದ್ದ ಅಧಿಕಾರಿಗಳು 2 ಸೈಟುಗಳನ್ನು ಒಂದು ತಿಂಗಳೊಳಗಾಗಿ ನೀಡುವುದಾಗಿ ತಿಳಿಸಿದರು. ಶೀಘ್ರವಾಗಿ ಕ್ರಮವಹಿಸುವಂತೆ ಮಾನ್ಯ ಸಭಾಧ್ಯಕ್ಷರು ಸೂಚನೆ ನೀಡಿದರು.

(ಕ್ರಮ: ಅಪರ ಜಿಲ್ಲಾಧಿಕಾರಿಗಳು,ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ ಹಾಗೂ ದಕ್ಷಿಣ ವಿಭಾಗದ ಉಪ ವಿಭಾಗಾಧಿಕಾರಿಗಳು, ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಜಿಲ್ಲೆ)

**ಇ). ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ:**

ಬೆಂಗಳೂರು ನಗರ ಜಿಲ್ಲೆಯ 4 ತಾಲ್ಲೂಕುಗಳ ವ್ಯಾಪ್ತಿಯಲ್ಲಿ 14 ವಿದ್ಯಾರ್ಥಿನಿಲಯಗಳಿದ್ದು, 3 ಸ್ವಂತ ಕಟ್ಟಡದಲ್ಲಿ ನಡೆಯುತ್ತಿದ್ದು, 4 ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಉಳಿದ 7 ಕಟ್ಟಡಗಳ ಕಾಮಗಾರಿ ಪ್ರಗತಿಯಲ್ಲಿರುವುದಾಗಿ ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು. ಜಿಲ್ಲಾಧಿಕಾರಿಗಳು ಈ ಬಗ್ಗೆ ಪರಿಶೀಲಿಸಿ, ತುರ್ತಾಗಿ ನಿವೇಶನ ನೀಡುವಂತೆ ನಿರ್ದೇಶನ ನೀಡಿದರು.

(ಕ್ರಮ: ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಹಾಗೂ ಜಿಲ್ಲಾ ಅಧಿಕಾರಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ)

**ಈ). ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:**

ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 2420 ಅಂಗನವಾಡಿಗಳು ಕಾರ್ಯನಿರ್ವಹಿಸುತ್ತಿದ್ದು, 1008 ಅಂಗನವಾಡಿಗಳಿಗೆ ಸ್ವಂತ ಕಟ್ಟಡವಿದ್ದು, ಗ್ರಾಮ ಪಂಚಾಯತಿ/ ಬಿ.ಬಿ.ಎಂಪಿ. ವ್ಯಾಪ್ತಿಯಲ್ಲಿ 296, ಸಮುದಾಯ ಭವನಗಳಲ್ಲಿ 111, ಮಹಿಳಾ ಮಂಡಲಿಗಳಲ್ಲಿ 2, ಸರ್ಕಾರಿ ಶಾಲಾ ಆವರಣದಲ್ಲಿ 247, ಯುವಕ ಮಂಡಳಿಯಲ್ಲಿ 24, ಬಾಡಿಗೆ ಕಟ್ಟಡದಲ್ಲಿ 689, ಬಾಡಿಗೆ ರಹಿತ ಕಟ್ಟಡದಲ್ಲಿ 43 ಅಂಗನವಾಡಿಗಳು ನಡೆಯುತ್ತಿದೆ. ಆರ್.ಐ.ಡಿ.ಎಫ್. ಅನುದಾನದಿಂದ 47, ನರೇಗಾ ಯೋಜನೆಯಡಿ 20, ಎಸ್.ಟಿ.ಪಿ.ಅನುದಾನದಿಂದ 2 ಕಟ್ಟಡಗಳ ಕಾಮಗಾರಿ ಪ್ರಗತಿಯಲ್ಲಿದ್ದು, ಉಳಿದ 620 ಅಂಗನವಾಡಿಗಳಿಗೆ ನಿವೇಶನದ ಅಗತ್ಯತೆ ಇದೆಯೆಂದು ಇಲಾಖಾ ಅಧಿಕಾರಿಗಳು ಸಭೆಗೆ ಮಂಡಿಸಿದರು. 620 ಅಂಗನವಾಡಿಗಳು ನಡೆಯುತ್ತಿರುವ ಸ್ಥಳಗಳ ಬಗ್ಗೆ ಚರ್ಚಿಸಿದಾಗ, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ 300 ಹಾಗೂ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 300 ನಿವೇಶನಗಳ ಅಗತ್ಯತೆ ಇದೆ ಎಂದು ತಿಳಿಸುತ್ತಾ, ಗೋವಿಂದರಾಜಪುರ ಮಾನ್ಯ ಶಾಸಕರನ್ನು ಸಂಪರ್ಕಿಸಿ, ನಿವೇಶನದ ಅಗತ್ಯತೆ ಬಗ್ಗೆ ಚರ್ಚೆ ಮಾಡಿರುವುದಾಗಿ ಇಲಾಖಾ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು. ನಗರ ಪ್ರದೇಶದಿಂದ ಹೊರಗೆ ಪ್ರಸ್ತುತ ವರ್ಷದಲ್ಲಿ 50 ನಿವೇಶನಗಳನ್ನು ಗುರ್ತಿಸಲು ಕ್ರಮವಹಿಸಿ, ಆನೇಕಲ್ ತಾಲ್ಲೂಕಿನಲ್ಲಿ ಹೆಚ್ಚಿನ ಅವಶ್ಯಕತೆ ಇರುವುದರಿಂದ ಆನೇಕಲ್ ತಹಶೀಲ್ದಾರ್‌ರವರ ಜೊತೆ ಉಳಿದಂತೆ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳ

ವ್ಯಾಪ್ತಿಯ ಅಂಗನವಾಡಿಗಳಿಗೆ ನಿವೇಶನ ಪಡೆಯಲು ಬೆಂಗಳೂರು ಉತ್ತರ ಮತ್ತು ದಕ್ಷಿಣ ಉಪ ವಿಭಾಗದ ಉಪ ವಿಭಾಗಾಧಿಕಾರಿಗಳನ್ನು ಸಂಪರ್ಕಿಸಿ ಚರ್ಚೆ ಮಾಡುವಂತೆ ಇಲಾಖಾ ಅಧಿಕಾರಿಗಳಿಗೆ ಮಾನ್ಯ ಸಭಾಧ್ಯಕ್ಷರು ಸೂಚನೆ ನೀಡಿದರು.

(ಕ್ರಮ:, ಬೆಂಗಳೂರು ಉತ್ತರ ಹಾಗೂ ದಕ್ಷಿಣ ಉಪ ವಿಭಾಗದ ಉಪ ವಿಭಾಗಾಧಿಕಾರಿಗಳು, ಆನೇಕಲ್ ತಹಶೀಲ್ದಾರ್, ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು ಜಿಲ್ಲೆ)

ಉ).ಆರೋಗ್ಯ ಇಲಾಖೆ:

ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಉಪ ಕೇಂದ್ರ ಹಾಗೂ ಸಾರ್ವಜನಿಕ ಆಸ್ಪತ್ರೆ ಕಟ್ಟಡಗಳಿಗೆ ಜಾಗದ ಅವಶ್ಯಕತೆ ಬಗ್ಗೆ ಪ್ರಸ್ತಾಪಿಸಿದಾಗ, ಕೆಲವೊಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ, ಬಿ.ಬಿ.ಎಂ.ಪಿ, ವ್ಯಾಪ್ತಿಯಲ್ಲಿ ನಡೆಯುತ್ತಿರುವ 63 ವಾರ್ಡ್‌ಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಒಳಪಟ್ಟಿರುವುದಾಗಿ ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು. ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಸ್ಥಳಗಳ ಪಟ್ಟಿಯನ್ನು ನೀಡುವಂತೆ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಬಿ.ಡಿ.ಎ. ಆಯುಕ್ತರಿಗೆ ಪತ್ರ ಬರೆಯುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ಮಾನ್ಯ ಸಭಾಧ್ಯಕ್ಷರು ಸೂಚನೆ ನೀಡಿದರು.

(ಕ್ರಮ: ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ)

7. ರುದ್ರಭೂಮಿಗಾಗಿ ಸರ್ಕಾರಿ ಜಮೀನನ್ನು ಕಾಯ್ದಿರಿಸುವ ಬಗ್ಗೆ:

ಬೆಂಗಳೂರು ನಗರ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ರುದ್ರಭೂಮಿ ಅವಶ್ಯವಿದ್ದು, ಜಾಗವನ್ನು ಕಾಯ್ದಿರಿಸಲು ತೆಗೆದುಕೊಂಡ ಕ್ರಮದ ಬಗ್ಗೆ ಪ್ರಸ್ತಾಪಿಸಿದಾಗ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ 16, ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ 24, ಆನೇಕಲ್ ತಾಲ್ಲೂಕಿನಲ್ಲಿ 13, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ 11 ಕಡೆ ಜಾಗದ ಅವಶ್ಯಕತೆ ಇದೆ. ಈ ಪೈಕಿ ಯಲಹಂಕ ತಾಲ್ಲೂಕಿನಲ್ಲಿ ಶೇ.100 ರಷ್ಟು ಸ್ಥಳಾವಕಾಶ ಲಭ್ಯವಿರುವುದಾಗಿ ಅಪರ ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು. ಪ್ರಸ್ತುತ ಭೂಮಿಯ ಬೆಲೆ ಜಾಸ್ತಿಯಿರುವುದರಿಂದ ರುದ್ರಭೂಮಿಗಾಗಿ ಕಾಯ್ದಿರಿಸುವ ನಿವೇಶನ ಹದ್ದುಬಸ್ತು ಮಾಡಬೇಕಾಗಿದೆ. ಈ ಕೆಲಸವನ್ನು ಯಾರು ಮಾಡುತ್ತಿದ್ದಾರೆ ಎಂಬುದಾಗಿ ಪ್ರಶ್ನಿಸಿದಾಗ, ಇದಕ್ಕೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಉತ್ತರಿಸುತ್ತಾ, ಡಾ:ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಕಾರ್ಯಾನುಷ್ಠಾನವಾಗಬೇಕಾಗಿದೆ ಅಲ್ಲದೆ ಸರ್ಕಾರದ ಮಾರ್ಗಸೂಚಿಯನ್ವಯ ಗ್ರಾಮದಲ್ಲಿ ಶೇ.50 ಕ್ಕಿಂತ ಎಸ್.ಸಿ. /ಎಸ್.ಟಿ. ಜನಾಂಗದವರು ವಾಸ ಮಾಡುತ್ತಿದ್ದ ಪಕ್ಷದಲ್ಲಿ ಹದ್ದುಬಸ್ತು ಕಾರ್ಯವನ್ನು ಇಲಾಖಾವತಿಯಿಂದ ಮಾಡಬಹುದಾಗಿದೆ ಎಂದು ತಿಳಿಸಿದರು. ಈ ಬಗ್ಗೆ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಗಮನಹರಿಸುವಂತೆ ಹಾಗೂ ಸರ್ಕಾರಕ್ಕೆ ಸಾಮಾನ್ಯ ಜನಾಂಗದವರಿಗೆ ರುದ್ರಭೂಮಿ ಹದ್ದುಬಸ್ತು ಮಾಡಲು ಯಾವ ಇಲಾಖೆಯವರು ಕ್ರಮವಹಿಸಬೇಕು ಹಾಗೂ ಅದಕ್ಕೆ ವೆಚ್ಚವಾಗುವ ಅನುದಾನವನ್ನು ಮಂಜೂರು ಮಾಡುವ ವಿಷಯದ ಬಗ್ಗೆ ಪ್ರಸ್ತಾವನೆ ಸಲ್ಲಿಸುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಮುಂದುವರೆದು, ರುದ್ರಭೂಮಿಗಳಿಗೆ ನಿವೇಶನ ಮಂಜೂರು ಮಾಡಲು ಎರಡು ಉಪ ವಿಭಾಗದ ಉಪ ವಿಭಾಗಾಧಿಕಾರಿಗಳು ಎಲ್ಲಾ ತಹಶೀಲ್ದಾರ್‌ಗಳನ್ನು ಒಳಗೊಂಡಂತೆ ಸಭೆ ಕರೆದು 2020ನೇ ಜನವರಿ 15ನೇ ತಾರೀಖಿನೊಳಗೆ ಪೂರ್ಣ ಮಾಹಿತಿಯನ್ನು ಒದಗಿಸುವಂತೆ ಮಾನ್ಯ ಸಭಾಧ್ಯಕ್ಷರು ಸೂಚನೆ ನೀಡಿದರು.

(ಕ್ರಮ:ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಉಪ ವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ/ದಕ್ಷಿಣ ವಿಭಾಗ, ತಹಶೀಲ್ದಾರ್, ಬೆಂ.ಉ/ಬೆಂ.ದ/ಬೆಂ.ಪೂ/ಆನೇಕಲ್ ತಾಲ್ಲೂಕು, ಜಂಟಿ ನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ)

**8. ಸರ್ಕಾರಿ ಭೂ ಮಾಪಕರಿಂದ ಪ್ರಕರಣಗಳ ಭೂ ವಿಲೇವಾರಿ ಹಾಗೂ ಪರವಾನಿಗೆ ಹೊಂದಿದ ಭೂ ಮಾಪಕರಿಂದ ಮ್ಯುಟೇಷನ್ ಸ್ಕೆಚ್ ( 11ಇ) ಬಗ್ಗೆ:**

ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ, ಭೂ ಮಾಪನಾ ಜಂಟಿ ನಿರ್ದೇಶಕರು ಸಭೆಯಲ್ಲಿ ಮಾತನಾಡುತ್ತಾ ಅವರ ವ್ಯಾಪ್ತಿಯಲ್ಲಿ ಒಟ್ಟು 93 ಜನ ಸರ್ವೇಯರ್ ಇದ್ದು, ಅದರಲ್ಲಿ 50 ಜನ ಸರ್ವೇಯರ್ ಕಛೇರಿ ಕೆಲಸಕ್ಕೆ ನಿಯೋಜಿಸಿದ್ದು, 43 ಜನ ಸರ್ವೇಯರ್‌ಗಳು ಫೀಲ್ಡ್ ಕೆಲಸಕ್ಕೆ ನಿಯೋಜಿಸಿರುವುದಾಗಿಯೂ, 66 ಜನ ಲೈಸೆನ್ಸ್ ಸರ್ವೆಯರ್ ಇರುವುದಾಗಿ ಸಭೆಯಲ್ಲಿ ತಿಳಿಸುತ್ತಾ, ಕಛೇರಿ ಕೆಲಸ ನಿರ್ವಹಿಸುತ್ತಿರುವ ಸರ್ವೇಯರ್‌ಗಳು 11ಇ ಪ್ರಕರಣ, ಪೋಡಿ ಪ್ರಕರಣ, ರೆಕಾರ್ಡ್ ರೂಂ ಕರ್ತವ್ಯ, ಮಿಸಲೇನಿಯಸ್, ಆಪರೇಟಿಂಗ್ ಸಿಸ್ಟಂ, ಇನ್ನಿತರೆ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದು, ಸರ್ಕಾರವು ಪ್ರತಿ ಸರ್ವೇಯರ್‌ಗೆ 30ಪ್ರಕರಣವನ್ನು ತಿಂಗಳಿಗೆ ನಿಗಧಿಪಡಿಸಿದ್ದು, ಸಭೆಯಲ್ಲಿ ನೀಡಿರುವ ದಾಖಲೆಯಲ್ಲಿ ಪೋಡಿ ಪ್ರಕರಣಗಳ ವಿಲೇವಾರಿಯಲ್ಲಿ ಪ್ರಗತಿಯು ಕೇವಲ 20.16 ಇದ್ದದನ್ನು ಹಾಗೂ 11 ಎ ಸ್ಕೆಚ್‌ನಲ್ಲಿ ಮಾಹೆಯ ಸರಾಸರಿ ವಿಲೇವಾರಿ ಶೇಕಡ 14.04 ಇರುವುದನ್ನು ಗಮನಿಸಿದ ಅಧ್ಯಕ್ಷರು, ಇದು ತುಂಬಾ ಕಳಪೆ ಮಟ್ಟದಲ್ಲಿರುವ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿದಾಗ, ಡಿಡಿಎಲ್‌ಆರ್‌ರವರು, ಆನ್‌ಲೈನ್ ಹೊರತು ಪಡಿಸಿ ಇನ್ನಿತರೆ ಅರಣ್ಯ ಭೂಮಿ ಅಳತೆ, ರಾಜ ಕಾಲುವೆ ಅಳತೆ, ಬಿಬಿಎಂಪಿಯವರ ಸ್ವತ್ತುಗಳ ಕುರಿತು ಅಳತೆ ಹಾಗೂ ಬಿಎಂಆರ್‌ಸಿಎಲ್, ಪವರ್ ಗ್ರೀಡ್ ಇಂತಹ ಕೆಲವು ಕಡೆ ಸರ್ವೇ ಕಾರ್ಯಕ್ಕಾಗಿ ಸರ್ವೆಯರ್‌ನ್ನು ನಿಯೋಜಿಸಿದ ಬಗ್ಗೆ ಆನ್‌ಲೈನ್‌ನಲ್ಲಿ ಅವರ ಕೆಲಸವನ್ನು ದಾಖಲಿಸಲು ಅವಕಾಶವಿಲ್ಲದೆ ಇರುವ ಬಗ್ಗೆ ಸಭೆಯಲ್ಲಿ ತಿಳಿಸುತ್ತಾ,ಮುಂದಿನ ದಿನಗಳಲ್ಲಿ ಈ ಬಗ್ಗೆ ಸರಿಯಾದ ಮಾಹಿತಿಯನ್ನು ನೀಡುವುದಾಗಿ ತಿಳಿಸಿದರು. ಈ ಬಗ್ಗೆ ಸೂಕ್ತ ರೀತಿಯಲ್ಲಿ ಮಾರ್ಪಾಡು ಮಾಡಿಕೊಂಡು ಕರ್ತವ್ಯ ನಿರ್ವಹಿಸಿದ ಬಗ್ಗೆ ಸಮಾನಾಂತರ ದಿನಗಳಿಗೆ ತಾಳೆ ಹಾಕಿ ಆನ್‌ಲೈನ್‌ನಲ್ಲಿ ದಾಖಲಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಡಿಡಿಎಲ್‌ಆರ್‌ಗೆ ಸಮರ್ಪಕವಾಗಿ ಕ್ರಮ ವಹಿಸಲು ಸೂಕ್ತ ರೀತಿಯಲ್ಲಿ ಕರ್ತವ್ಯ ಹೊಂದಾಣಿಕೆ ಮಾಡಿಕೊಂಡು ಸಭೆಗೆ ವರದಿಯನ್ನು ಸಿದ್ಧಪಡಿಸುವ ಬಗ್ಗೆ ಮಾರ್ಗದರ್ಶನ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಮತ್ತು ಭೂ ದಾಖಲೆಗಳ ಉಪ ನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ)**

**9. ತಾಲ್ಲೂಕುವಾರು ಸರ್ವೆ ಕಾರ್ಯ ಪ್ರಗತಿ:**

ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಡಿಡಿಎಲ್‌ಆರ್‌ರವರು ಮಾತನಾಡುತ್ತಾ, ಖಜಭಿಂಟಿಜ ಖಣಡಿತಜಥಿ Taluk wise Supervisor Resurvey Progress Report ವರದಿಯನ್ನು ಈ ಕೆಳಕಂಡಂತೆ ವಿವರಿಸಿದರು.

1) ಬೆಂಗಳೂರು ಉತ್ತರ ತಾಲ್ಲೂಕು – ಬೇಡಿಕೆ ಬಂದ ಅರ್ಜಿಗಳು 574, ಅದರಲ್ಲಿ ಒಟ್ಟು 46 ರಿಸರ್ವೇ ಆಗಿರುವುದಾಗಿಯೂ,

2) ಬೆಂಗಳೂರು ದಕ್ಷಿಣ ತಾಲ್ಲೂಕು – ಬೇಡಿಕೆಕ ಬಂದ ಅರ್ಜಿಗಳು 716, ಅದರಲ್ಲಿ ಒಟ್ಟು 289 ರಿಸರ್ವೇ ಆಗಿರುವುದಾಗಿಯೂ,

3) ಆನೇಕಲ್ ತಾಲ್ಲೂಕು – ಬೇಡಿಕೆ ಬಂದ ಅರ್ಜಿಗಳು 1980, ಅದರಲ್ಲಿ ಒಟ್ಟು 292 ರಿಸರ್ವೇ ಆಗಿರುವುದಾಗಿ,

4) ಬೆಂಗಳೂರು ಉತ್ತರ (ಅಪರ) ತಾಲ್ಲೂಕು – ಬೇಡಿಕೆ ಬಂದ ಅರ್ಜಿಗಳು 683, ಅದರಲ್ಲಿ ಒಟ್ಟು 67 ರಿಸರ್ವೇ ಆಗಿರುವುದಾಗಿ ಸಭೆಯಲ್ಲಿ ತಿಳಿಸುತ್ತಾ, ಬೆಂಗಳೂರು ನಗರದಲ್ಲಿ ಸೆಕೆಂಡ್ ಸರ್ವೆ ಫೇಸ್–2 ಸೂಪರವೈಸರ್ ಬಗ್ಗೆ ಆಗಿರುವ ಪ್ರಗತಿಯ ಬಗ್ಗೆ ಈ ಕೆಳಕಂಡಂತೆ ವಿವರಣೆ ನೀಡಿದರು.

ಒಟ್ಟು ಗ್ರಾಮಗಳ ಸಂಖ್ಯೆ – 594, ಒಟ್ಟು ಸೂಪರ್‌ವೈಸರ್ ಲಾಗಿನ್‌ನಲ್ಲಿ ಇರುವ ಓನರ್ಸ್ ಪ್ಲಾಟ್‌ಗಳ ಸಂಖ್ಯೆ:235453ಆಗಿದ್ದು, ಇದರಲ್ಲಿ ಪರಿಶೀಲನೆ ಮಾಡಿದ ನಂತರ ಸ್ವೀಕೃತವಾಗ ಓನರ್ಸ್‌ಪ್ಲಾಟ್‌ಗಳು 225181 ಆಗಿದ್ದು, 4052 ಪ್ಲಾಟ್‌ಗಳನ್ನು ಇನ್ನು ಪರಿಶೀಲನೆ ಮಾಡಬೇಕಾಗಿದೆ ಎಂದು ಸಭೆಯಲ್ಲಿ ತಿಳಿಸಿ, ಒಟ್ಟಾರೆ ಶೇಕಡಾ 98 ರಷ್ಟು ಪ್ರಗತಿ ಸಾಧಿಸಿರುವುದಾಗಿ ವಿವರಿಸಿದರು. ಅಧ್ಯಕ್ಷರು ಈ ಬಗ್ಗೆ ಇನ್ನು ಶೇಕಡಾ 100 ರಷ್ಟು ಪ್ರಗತಿ ಸಾಧಿಸುವ ಗುರಿಯನ್ನು ಹೊಂದಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು.

**(ಕ್ರಮ: ಭೂ ದಾಖಲೆಗಳ ಉಪ ನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ)**

**10. <u>ಪೋಡಿ ಮುಕ್ತ ಅದಾಲತ್ ಪ್ರಗತಿ:</u>**

ಬೆಂಗಳೂರು ನಗರ ಜಿಲ್ಲೆಯಲ್ಲಿ ಇನ್ನು ಪೋಡಿ ಮುಕ್ತ ಯೋಜನೆ ಪ್ರಾರಂಭವಾಗಿರುವುದಿಲ್ಲ ವೆಂದು, ಈ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ಆಯುಕ್ತರ ನಿರ್ದೇಶನ ಕೋರಿ ಪತ್ರ ಬರೆದಿರುವುದಾಗಿ ಅಧಿಕಾರಿಯವರು ಸಭೆಯಲ್ಲಿ ತಿಳಿಸಿದರು.

**11. <u>ಕೋರ್ಟ್ ಪ್ರಕರಣಗಳು ಬಗ್ಗೆ ಚರ್ಚೆ:</u>**

ಕಂದಾಯ ಇಲಾಖೆಯಲ್ಲಿ ತಹಶೀಲ್ದಾರ್‌ರವರು, ಉಪವಿಭಾಗಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ತೆಗೆದುಕೊಳ್ಳುವ ನ್ಯಾಯಾಲಯದ ಪ್ರಕರಣಗಳ ಬಗ್ಗೆ ಕಲಂ 136(1), 136(2) ಮತ್ತು 136(3) ಬಗ್ಗೆ ತೆಗೆದುಕೊಳ್ಳುವ ಪ್ರಕರಣಗಳನ್ನು ಆದಷ್ಟು ಬೇಗನೇ ಕ್ರಮ ವಹಿಸಿ ಮುಗಿಸಬೇಕೆಂದು, ಸಾಧ್ಯವಾದಲ್ಲಿ ಕೋರ್ಟ್ ದಿನ ಎಂದು ವಾರದಲ್ಲಿ ಒಂದು ಅಥವಾ ಎರಡು ದಿನಗಳನ್ನು ನಿಗಧಿಪಡಿಸಿಕೊಂಡು ಪ್ರಕರಣಗಳನ್ನು ಶೀಘ್ರವಾಗಿ ಮುಗಿಸಬೇಕೆಂದು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದಾಗ, ಉಪವಿಭಾಗಾಧಿಕಾರಿಗಳು, ಉತ್ತರ ಉಪವಿಭಾಗ ಇವರು ಮಾತನಾಡುತ್ತಾ, ಈ ಮಧ್ಯೆ ಪ್ರೋಟೋಕಾಲ್‌ಗಳು ಮತ್ತು ಮಾನ್ಯ ನ್ಯಾಯಾಲಯಗಳಿಂದ ತುರ್ತು ಕರೆ ಬಂದಾಗ ನ್ಯಾಯಾಲಯಕ್ಕೆ ಹಾಜರಾಗುವ ಬಗ್ಗೆ ಮತ್ತು ಈಗಾಗಲೇ ದೂಷಿತ ಕಂಪನಿಗಳ ಬಗ್ಗೆ ಸಕ್ಷಮ ಪ್ರಾಧಿಕಾರಿಯನ್ನಾಗಿ ನೇಮಿಸಿದ್ದು, ಈ ಬಗ್ಗೆ ಪದೇ ಪದೇ ನ್ಯಾಯಾಲಯಕ್ಕೆ ಹಾಜರಾಗುತ್ತಿರುವ ಕಾರಣ ಕಛೇರಿಯಲ್ಲಿನ ನ್ಯಾಯಾಲಯದ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ತಡವಾಗುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು. ಆದಷ್ಟು ಹೆಚ್ಚು ಸಮಯವನ್ನು ಕಂದಾಯ ಪ್ರಕರಣಗಳನ್ನು ಇತ್ಯರ್ಥಪಡಿಸುವತ್ತ ಗಮನ ಹರಿಸಲು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ತಹಶೀಲ್ದಾರ್)**

12. **Deemed Forest ಗಳಲ್ಲಿ ಮೂಲಭೂತ ಸೌಲಭ್ಯಗಳಿಗೆ ಜಮೀನಿನ ಬೇಡಿಕೆ ಮತ್ತು ವಿಲೇವಾರಿಯ ಪ್ರಗತಿ:**

1) ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯವರು ಎರಡು ಗ್ರಾಮಗಳಲ್ಲಿ ಎರಡು ಸರ್ವೆನಂಬರ್‌ಗಳಿಗೆ ಸಂಬಂಧಿಸಿದಂತೆ ಒಟ್ಟು 35 ಎಕರೆ 12 ಗುಂಟೆ ಪ್ರದೇಶವನ್ನು ಡೀಮ್ಡ್‌ಫಾರೆಸ್ಟ್‌ಗಾಗಿಕೋರಿದ್ದು, ಸ್ಥಳ ತನಿಖೆ ಮಾಡಿ ಸದರಿ ಪ್ರದೇಶವನ್ನು ಡೀಮ್ಡ್ ಫಾರೆಸ್ಟ್‌ಗಾಗಿ ನೀಡಲಾಗಿದೆ.

2) ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯವರು ಒಟ್ಟು 05 ಗ್ರಾಮಗಳ ಪೈಕಿ 09 ಸ.ನಂ.ಗಳಲ್ಲಿ ಡೀಮ್ಡ್ ಫಾರೆಸ್ಟ್‌ಗಾಗಿ 520 ಎಕರೆ 14 ಗುಂಟೆ ಪ್ರದೇಶವನ್ನು ಕೋರಿದ್ದು, ಸ್ಥಳ ಪರಿಶೀಲನೆ ನಂತರ ಸುಮಾರು 246 ಎಕರೆ 33 ಗುಂಟೆ ನೀಡಬಹುದಾಗಿದ್ದು, ಉಳಿದ 273 ಎಕರೆ 21 ಗುಂಟೆ ಜಮೀನುಗಳಲ್ಲಿ ಕೆ.ಎಲ್.ಆರ್. ಕಾಯ್ದೆ 136(3) ರಡಿ ಪ್ರಕರಣಗಳು ದಾಖಲಾಗಿ ವಿಚಾರಣಾ ಹಂತದಲ್ಲಿರುವುದಾಗಿ ಇನ್ನು ಕೆಲವು ಪ್ರಕರಣಗಳು ಸಾರ್ವಜನಿಕ ಉಪಯೋಗಕ್ಕಾಗಿ ವಿವಿಧ ಯೋಜನೆಗಳಿಗೆ ಭೂ ಕಂದಾಯ ಕಾಯ್ದೆ ಅಡಿ ಕಾಯ್ದಿರಿಸಲಾಗಿರುತ್ತದೆ.

3) ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ಒಟ್ಟು 05 ಗ್ರಾಮಗಳ ಪೈಕಿ 12 ಸ.ನಂ.ಗಳಲ್ಲಿ ಡೀಮ್ಡ್ ಫಾರೆಸ್ಟ್‌ಗಾಗಿ 771 ಎಕರೆ 26 ಗುಂಟೆ ಪ್ರದೇಶವನ್ನು ಕೋರಿದಕ್ಕು, ಸ್ಥಳ ಪರಿಶೀಲನೆ ನಂತರ ಅಂದಾಜು 673 ಎಕರೆ 19 ಗುಂಟೆ ಜಮೀನನ್ನು ಡೀಮ್ಡ್ ಫಾರೆಸ್ಟ್‌ಗಾಗಿ ನೀಡಿದ್ದು, ಉಳಿದ 98 ಎಕರೆ 07 ಗುಂಟೆ ಜಮೀನನ್ನು ಸಾರ್ವಜನಿಕ ಉಪಯೋಗಕ್ಕಾಗಿ ವಿವಿಧ ಯೋಜನೆಗಳಡಿ ಭೂ ಕಂದಾಯ ಅಧಿನಿಯಮದ ಕಾಯ್ದೆಯಡಿ ಕಾಯ್ದಿರಿಸಲಾಗಿದೆ.

4) ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯವರು ಒಟ್ಟು 09 ಗ್ರಾಮಗಳ ಪೈಕಿ 11 ಸ.ನಂ.ಗಳಲ್ಲಿ ಡೀಮ್ಡ್ ಫಾರೆಸ್ಟ್‌ಗಾಗಿ 1662 ಎಕರೆ 13ಗುಂಟೆ ಪ್ರದೇಶವನ್ನು ಕೋರಿದ್ದು ಸ್ಥಳ ಪರಿಶೀಲನೆ ನಂತರ ಅಂದಾಜು 48 ಎಕರೆ 13 ಗುಂಟೆ ಜಮೀನನ್ನು ಡೀಮ್ಡ್ ಫಾರೆಸ್ಟ್‌ಗಾಗಿ ನೀಡಬಹುದಾಗಿದ್ದು, ಉಳಿದ್ದಂತೆ 1614 ಎಕರೆ ಜಮೀನುಗಳು ಬಹುತೇಕ ಭಾಗ ಕ್ರಷರ್‌ಗಳನ್ನು ಹಾಕಿಕೊಂಡಿದ್ದು, ಕೆಲವು ಸಾರ್ವಜನಿಕರು ನಮೂನೆ 50–53ರ ಅರ್ಜಿಗಳನ್ನು ಸಲ್ಲಿಸಿದ್ದು, ಪ್ರಕರಣಗಳು ಇತ್ಯರ್ಥವಾಗದೆ ಬಾಕಿ ಇದ್ದು, ಇನ್ನು ಕೆಲವು ಜಾಗವು ವಿವಿಧ ಯೋಜನೆಗಳಿಗೆ ಭೂ ಕಂದಾಯ ಕಾಯ್ದೆಯಡಿ ಕಾಯ್ದಿರಿಸಲಾಗಿದೆ.

5) ಬೆಂಗಳೂರು ಆನೇಕಲ್ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯವರು 12 ಗ್ರಾಮಗಳ ಪೈಕಿ 18 ಸ.ನಂ.ಗಳಲ್ಲಿ 4577 ಎಕರೆ 02 ಗುಂಟೆ ಪ್ರದೇಶವನ್ನು ಡೀಮ್ಡ್ ಫಾರೆಸ್ಟ್‌ಗಾಗಿ ಕೋರಿದ್ದು, ಇದರಲ್ಲಿ 2013 ಎಕರೆ 02 ಗುಂಟೆ ಜಮೀನನ್ನು ಮಾತ್ರ ಡೀಮ್ಡ್ ಫಾರೆಸ್ಟ್‌ಗಾಗಿ ನೀಡಬಹುದಾಗಿದ್ದು, ಉಳಿದ ಜಮೀನನಲ್ಲಿ ಬಹುತೇಕ ಭಾಗ ಸಾರ್ವಜನಿಕರಿಂದ ನಮೂನೆ 50–53 ರ ಅರ್ಜಿಗಳನ್ನು ಸಲ್ಲಿಸಿ, ಪ್ರಕರಣಗಳು ಇತ್ಯರ್ಥವಾಗದೆ ಇದ್ದು, ಕೆಲವು ಜಾಗವನ್ನು ವಿವಿಧ ಯೋಜನೆಗಳಿಗೆ ಕಾಯ್ದಿರಿಸಲಾಗಿರುತ್ತದೆ.

**6) ಒಟ್ಟಾರೆ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 5 ತಾಲ್ಲೂಕುಗಳಿಂದ ಅರಣ್ಯ ಇಲಾಖೆಯವರು 7566–27 ಎಕರೆ ಜಮೀನನ್ನು ಕೋರಿದ್ದು, ಇದರಲ್ಲಿ 3016–39 ಎಕರೆ ಜಾಗವನ್ನು ಮಾತ್ರ ನೀಡಬಹುದೆಂದು ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳು ತಿಳಿಸುತ್ತಾ, ಈ ಬಗ್ಗೆ ಮಾನ್ಯ ಪ್ರಾದೇಶಿಕ ಆಯುಕ್ತರು ಪ್ರತಿ ವಾರವು ರಿವ್ಯೂ ಮಾಡುತ್ತಿದ್ದು, ಸಿಸಿಎಫ್ ಬರುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ಅಪರ ಜಿಲ್ಲಾಧಿಕಾರಿಗಳು ತಿಳಿಸಿದಾಗ, ಪ್ರಾದೇಶಿಕ ಆಯುಕ್ತರು ನಿರ್ದೇಶಿಸಿದಂತೆ ಕಾಲ ಕಾಲಕ್ಕೆ ಕ್ರಮ ವಹಿಸಲು ಸೂಚಿಸಿದರು.**

**(ಕ್ರಮ: ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ: ಮಾನ್ಯ ಪ್ರಾದೇಶಿಕ ಆಯುಕ್ತರ ನಿರ್ದೇಶನದಂತೆ)**

**13) ರೈಲ್ವೆ, ರಸ್ತೆ, ಏರ್‌ಪೋರ್ಟ್ ಮತ್ತು ಇತರೆ ಮೂಲಭೂತ ಸೌಕರ್ಯ ಯೋಜನೆಗಳಿಗೆ ಅವಶ್ಯವಿರುವ ಭೂಮಿಗಾಗಿ ಭೂ ಸ್ವಾಧೀನದ ಪ್ರಗತಿ:–**

ಬೆಂಗಳೂರು ನಗರ ಜಿಲ್ಲೆಗಾಗಿ ಪ್ರತ್ಯೇಕವಾಗಿ ಯಾವುದೇ ವಿಶೇಷ ಭೂ ಸ್ವಾಧೀನಾಧಿಕಾರಿಗಳು ಇರುವುದಿಲ್ಲವೆಂದು, ಈಗ ಕೆಶಿಪ್ ಯೋಜನೆಯಲ್ಲಿ ನೇರವಾಗಿ ಭೂಮಿಯನ್ನು ಖರೀದಿಸುವ ಕಾರ್ಯವನ್ನು ಬೆಂಗಳೂರು ನಗರ ಜಿಲ್ಲೆಯ ಉಪವಿಭಾಗಾಧಿಕಾರಿಗಳು ಈ ಕರ್ತವ್ಯವನ್ನು ನಿರ್ವಹಿಸುತ್ತಿದ್ದು, ರಾಷ್ಟ್ರೀಯ ಹೆದ್ದಾರಿಯ ವಿಶೇಷ ಭೂ ಸ್ವಾಧೀನಾಧಿಕಾರಿಗಳು ನೇರವಾಗಿ ಜಿಲ್ಲಾಧಿಕಾರಿಗಳ ಅಧೀನಕ್ಕೆ ಬರದೆ ಇದ್ದರೂ ಆಡಳಿತಾತ್ಮಕ ವಿಷಯದಲ್ಲಿ ಪರೋಕ್ಷವಾಗಿ ಕಂದಾಯ ಇಲಾಖೆಯ ಅಧೀನಕ್ಕೆ ಬರುವ ಬಗ್ಗೆ ಸಭೆಯ ಅಧ್ಯಕ್ಷರು ತಿಳಿಸುತ್ತಾ, ಪವರ್‌ಗ್ರೀಡ್ ಬಗ್ಗೆ ಅಪರ ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಪಾವಗಡದಿಂದ ಯಲಹಂಕದವರೆಗೆ ಲೈನ್ ಬಂದಿದ್ದು, ದೇವನಹಳ್ಳಿಯಿಂದ ಯಲಹಂಕಕ್ಕೆ ಬರುವ ದಾರಿಯಲ್ಲಿ ಇರುವ 9 ಗ್ರಾಮಗಳ ಗ್ರಾಮಸ್ಥರು ಅವರ ಜಮೀನುಗಳನ್ನು ನೀಡಲು ಅಧಿಕ ಪರಿಹಾರ ಹಣವನ್ನು ಕೋರುತ್ತಿದ್ದು, ಈ ಬಗ್ಗೆ ಅಲ್ಲಿಯ ಜಮೀನಿನ ಬಗ್ಗೆ ಮಾರುಕಟ್ಟೆ ಬೆಲೆಯನ್ನು ತಿಳಿಸುವಂತೆ ಸಂಬಂಧಪಟ್ಟ ನೋಂದಣಾಧಿಕಾರಿಗಳಿಗೆ ಪತ್ರ ಬರೆದಿದ್ದು, ಅವರೊಂದಿಗೆ ಚರ್ಚಿಸಿ, ಪರಿಹಾರ ಧನವನ್ನು ನಿಗಧಿಪಡಿಸಲಾಗುವುದೆಂದು ಅಪರ ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

ರೈಲ್ವೆಗಾಗಿ ರಾಜಾನುಕುಂಟೆ–ಪೆನ್ನುಗೊಂಡಹಳ್ಳಿ ಬಗ್ಗೆ ಆಗಿರುವ ಒತ್ತುವರಿಯನ್ನು ತೆರವುಗೊಳಿಸಿ ಕೊಟ್ಟಿರುವ ಬಗ್ಗೆ ತಿಳಿಸುತ್ತಾ, ಕಂಟೋನ್‌ಮೆಂಟ್–ವೈಟ್‌ಫೀಲ್ಡ್ ಬಗ್ಗೆ ಪರಿಹಾರವನ್ನು ನಿಗಧಿಪಡಿಸುವ ಬಗ್ಗೆ ಸಧ್ಯದಲ್ಲೇ ಸಭೆಯನ್ನು ಕರೆಯುವುದಾಗಿ ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು.
ಈ ಬಗ್ಗೆ ಅಧ್ಯಕ್ಷರು ಒಂದು ನಮೂನೆಯನ್ನು ಸಿದ್ಧಪಡಿಸಿಕೊಂಡು ರಸ್ತೆಗಾಗಿ, ರೈಲ್ವೆ, ಕೆಶಿಪ್ ಇಂತಹ ಯೋಜನೆಗಳ ಬಗ್ಗೆ ವಿವರವಾಗಿ ಮುಂದಿನ ಸಭೆಯಲ್ಲಿ ಸಮರ್ಪಕವಾಗಿ ಒಂದು ಟಿಪ್ಪಣಿಯ ವರದಿಯನ್ನು ತಯಾರಿಸಬೇಕೆಂದು ತಿಳಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಭೂ ಸ್ವಾಧೀನಾಧಿಕಾರಿಗಳು)**

**14) ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ:**

ಅನ್ನಭಾಗ್ಯ ಯೋಜನೆಯಡಿ ಒಟ್ಟು 525354 ಪಡಿತರ ಚೀಟಿಗಳಿದ್ದು, ಒಟ್ಟು 550 ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ಹೊಸ ಪಡಿತರ ಚೀಟಿ ಅರ್ಜಿಗಳ ಪೈಕಿ 2018–19 ನೇ

ಸಾಲಿಗೆ ಆನ್‌ಲೈನ್ ಮುಖಾಂತರ 14190 ಅರ್ಜಿಗಳು ಸ್ವೀಕೃತಿಯಾಗಿದ್ದು, ಇಲ್ಲಿಯವರೆವಿಗೆ 7864 ಅರ್ಜಿಗಳು ವಿಲೇವಾರಿಯಾಗಿ ಬಾಕಿ 6326 ಅರ್ಜಿಗಳು ಬಾಕಿ ಇರವುದನ್ನು ಸಭೆಯು ಪರಿಶೀಲಿಸಿ, ಬಾಕಿ ಇರುವ ಅರ್ಜಿಗಳಿಗೆ ಆದ್ಯತೆ ಮೇರೆಗೆ ಶೀಘ್ರವಾಗಿ ವಿಲೇವಾರಿ ಮಾಡಲು ಕಾರ್ಯನಿರ್ವಾಹಕ ಸಿಬ್ಬಂದಿಗಳಿಗೆ ಸೂಚಿಸಲಾಗಿದೆಯೆಂದು ಸಭೆಯಲ್ಲಿ ಇಲಾಖಾ ಅಧಿಕಾರಿಗಳು ತಿಳಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

(ತುಷಾರ್ ಗಿರಿನಾಥ್)
ಮಾನ್ಯ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು
ಮತ್ತು ಒಳಚರಂಡಿ ಮಂಡಳಿ ಹಾಗೂ
ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬೆಂಗಳೂರು ನಗರ ಜಿಲ್ಲೆ.

## ದಿನಾಂಕ 23/12/2019 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿಗೆ ಭೇಟಿ ನೀಡಿ ವಿವಿಧ ಕಾಮಗಾರಿಗಳ ಪರಿಶೀಲನೆ ಮಾಡಿದ ವಿವರ

ದಿನಾಂಕ 23/12/2019 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿಗೆ ಭೇಟಿ ನೀಡಿ ಕನ್ನಮಂಗಲ ಗ್ರಾಮದಲ್ಲಿ ಎನ್‌ಆರ್.ಡ್ಯ್ಲೂ ಯೋಜನೆಯಡಿ ರೂ. 8 ಲಕ್ಷಗಳ ವೆಚ್ಚದಲ್ಲಿ 90,000 ಲೀಟರ್ ಸಾಮರ್ಥ್ಯದ ನೆಲಮಟ್ಟದ ಕುಡಿಯುವ ನೀರು ಸಂಗ್ರಹಣಾ ತೊಟ್ಟಿ ನಿರ್ಮಾಣ ಕಾಮಗಾರಿಯನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯವರು ಅನುಷ್ಠಾನಗೊಳಿಸಿರುವುದನ್ನು ಪರಿಶೀಲನೆ ನಡೆಸಲಾಯಿತು. ಸ್ಥಳದಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ನೆಲಮಟ್ಟದ ನೀರು ಸಂಗ್ರಹಣಾ ತೊಟ್ಟಿ ನಿರ್ಮಾಣ ಮಾಡುವುದರಿಂದ ಕೊಳವೆ ಬಾವಿಗಳಲ್ಲಿ ನೀರಿನ ಸಾಮರ್ಥ್ಯ ಕಡಿಮೆಯಾದಾಗ ಮೇಲು ತೊಟ್ಟಿಗೆ (OHT) ನೀರು ಶೇಖರಣೆ ಮಾಡಲು ಕಷ್ಟಕರವಾಗುವುದರಿಂದ ನೆಲಮಟ್ಟದ ಸಂಗ್ರಹಣಾ ತೊಟ್ಟಿಯಲ್ಲಿ ನೀರನ್ನು ಸುಲಭವಾಗಿ ಶೇಖರಣೆ ಮಾಡಿ ನೀರು ಸರಬರಾಜು ಮಾಡಲು ಅನುಕೂಲವಾಗುತ್ತದೆ ಎಂದು ತಿಳಿಸಿದರು. ನೀರು ಸಂಗ್ರಹಣಾ ತೊಟ್ಟಿಯ ಸ್ಥಳದ ಸುತ್ತ ನೈರ್ಮಲ್ಯ ಕಾಪಾಡಲು ಸೂಚಿಸಲಾಯಿತು.

ಕನ್ನಮಂಗಲ ಗ್ರಾಮ ಪಂಚಾಯಿತಿ ಹತ್ತಿರರೂ 7.3 ಲಕ್ಷ ವೆಚ್ಚದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಶುದ್ಧ ಕುಡಿಯುವ ನೀರಿನ ಘಟಕವನ್ನು ನಿರ್ಮಿಸಿದ್ದು ಪ್ರತಿದಿನ ಸುಮಾರು 600 ಕುಟುಂಬಗಳು ಈ ನೀರನ್ನು ಉಪಯೋಗಿಸುತ್ತಿರುತ್ತಾರೆ ಮತ್ತು ಶುದ್ಧ ಕುಡಿಯುವ ನೀರಿನ ಘಟಕದಿಂದ ಉತ್ಪತ್ತಿಯಾಗುವ ಅನುಪಯುಕ್ತ ನೀರನ್ನು ಪಕ್ಕದಲ್ಲಿ ನಿರ್ಮಾಣ ಮಾಡಿರುವ ಸಂಗ್ರಹಣಾ ತೊಟ್ಟಿಯಲ್ಲಿ ಶೇಖರಣೆ ಮಾಡಲಾಗುತ್ತಿದ್ದು ಗ್ರಾಮಸ್ಥರು ಸದರಿ ನೀರನ್ನು ಬಟ್ಟೆ ತೊಳೆಯಲು, ವಾಹನ ಶುಚಿಗೊಳಿಸಲು ಮತ್ತು ಗಿಡಗಳಿಗೆ ನೀರುಣಿಸಲು ಬಳಕೆ ಮಾಡುತ್ತಿರುವುದರಿಂದ ವ್ಯರ್ಥವಾಗುವ ನೀರನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿರುವ 603 ಶುದ್ಧಕುಡಿಯುವ ನೀರಿನ ಘಟಕಗಳನ್ನು ಸುಸ್ಥಿತಿಯಲ್ಲಿಡಲು ಹಾಗೂ ಅವುಗಳಿಂದ ಉತ್ಪತ್ತಿಯಾಗುವ ಅನುಪಯುಕ್ತ ನೀರನ್ನು ವ್ಯರ್ಥಗೊಳಿಸದೇ ವೈಜ್ಞಾನಿಕ ಕ್ರಮದಿಂದ ಬಳಕೆಯೋಗ್ಯ ನೀರನ್ನಾಗಿ ಪರವರ್ತಿಸಿ ಉಪಯೋಗಿಸಲು ಕ್ರಮವಹಿಸುವಂತೆ ಸೂಚಿಸಲಾಯಿತು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 0.43 ಲಕ್ಷ ಮತ್ತು ಸ್ವಂತ ಬಂಡವಾಳವನ್ನು ಹಾಕಿ ರೂ 1.00 ಲಕ್ಷಗಳ ಅಂದಾಜು ಮೊತ್ತದ ಕನ್ನಮಂಗಲ ಪಾಳ್ಯದಲ್ಲಿ ಶ್ರೀ ಪಿಳ್ಳಣ್ಣ ಬಿನ್ ದೊಡ್ಡ ಪಿಳ್ಳಣ್ಣರವರ ದನದ ಕೊಟ್ಟಿಗೆ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಲಾಯಿತು. ಸ್ಥಳದಲ್ಲಿ ಹಾಜರಿದ್ದ ಫಲಾನುಭವಿಯಾದ ಪಿಳ್ಳಣ್ಣನವರು ಒಟ್ಟು 8

ಹಸುಗಳನ್ನು ಸಾಕಿರುವುದಾಗಿ ತಿಳಿಸಿದರು ಮತ್ತು ಈ ಕೊಟ್ಟಿಗೆಯನ್ನು ನಿರ್ಮಾಣ ಮಾಡಿದ ನಂತರ ಹಸುಗಳ ಆರೋಗ್ಯದಲ್ಲಿ ಸುಧಾರಣೆ ಕಂಡುಬಂದಿದ್ದು ಇದರಿಂದ ಹಾಲು ಇಳುವರಿ ಹೆಚ್ಚಾಗಿ ಆರ್ಥಿಕವಾಗಿ ಲಾಭವಾಗುತ್ತಿದೆ ಎಂದು ತಿಳಿಸಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೂ. 5.00 ಲಕ್ಷ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ರೂ.3.00 ಲಕ್ಷಗಳನ್ನು ಒಗ್ಗೂಡಿಸಿ ಒಟ್ಟು ರೂ.8.00 ಲಕ್ಷಗಳ ಮೊತ್ತದಲ್ಲಿ ಕನ್ನಮಂಗಲ ಗ್ರಾಮ ಪಂಚಾಯಿತಿ ಕನ್ನಮಂಗಲ ಪಾಳ್ಯದ ಗ್ರಾಮದಲ್ಲಿ ನಿರ್ಮಾಣ ಮಾಡಿರುವ ಅಂಗನವಾಡಿ ಕಟ್ಟಡ ಕಾಮಗಾರಿಯನ್ನು ಪರಿಶೀಲಿಸಲಾಗಿ ಉತ್ತಮ ಗುಣಮಟ್ಟದ ಕಟ್ಟಡವನ್ನು ನಿರ್ಮಿಸಲಾಗಿರುತ್ತದೆ ಮತ್ತು ಸದರಿ ಅಂಗನವಾಡಿಯಲ್ಲಿ 15 ಮಕ್ಕಳು ದಾಖಲಾಗಿದ್ದು ಭೇಟಿ ನೀಡಿದ ಸಂದರ್ಭದಲ್ಲಿ 9 ಮಕ್ಕಳು ಹಾಜರಿರುತ್ತಾರೆ. ಅಂಗನವಾಡಿ ಗೋದಾಮುನ್ನು ಪರಿಶೀಲಿಸಲಾಗಿ ಆಹಾರ ಸಾಮಾಗ್ರಿಗಳನ್ನು ಉತ್ತಮ ರೀತಿಯಲ್ಲಿ ಶೇಖರಣೆ ಮಾಡಿರುತ್ತಾರೆ. ಅಂಗನವಾಡಿ ಆವರಣ ಮತ್ತು ಶೌಚಾಲಯದಲ್ಲಿ ಸ್ವಚ್ಚತೆಯನ್ನು ಕಾಪಾಡಿರುವುದು ಕಂಡು ಬಂದಿರುತ್ತದೆ. ಸದರಿ ಅಂಗನವಾಡಿಗೆ ಒಟ್ಟು 4 ಬಾಣಂತಿಯರು ಮತ್ತು 5 ಗರ್ಭಿಣಿಯರು ದಾಖಲಾಗಿದ್ದು ಎಲ್ಲರಿಗೂ ನಿಗಧಿ ಪಡಿಸಿರುವ ಪೌಷ್ಟಿಕ ಆಹಾರ ವಿತರಿಸುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಲಾಯಿತು.

ಕನ್ನಮಂಗಲ ಪಾಳ್ಯದಲ್ಲಿ ರೂ. 22.00 ಲಕ್ಷಗಳ ಗ್ರಾಮ ಪಂಚಾಯಿತಿ ನಿಧಿಯಿಂದ ಒಳಚರಂಡಿ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದ್ದು ಈಗಾಗಲೆ 2 ಹಂತದ ಕಾಮಗಾರಿ ಮುಕ್ತಾಯಗೊಂಡಿದ್ದು 3ನೇ ಹಂತದಕಾಮಗಾರಿ ಪ್ರಗತಿಯಲ್ಲಿರುತ್ತದೆ. ಗ್ರಾಮ ಪಂಚಾಯಿತಿ ಕೈಗೊಂಡಿರುವ ಒಳಚರಂಡಿ ಕಾಮಗಾರಿಯಿಂದ ನೀರು ಸರಾಗವಾಗಿ ಹರಿದು ಹೋಗುವುದರಿಂದ ಗ್ರಾಮದಲ್ಲಿ ಸ್ವಚ್ಚತೆ ಕಾಪಾಡಲು ಸಹಕಾರಿಯಾಗುವುದರಿಂದ ಗ್ರಾಮ ಪಂಚಾಯಿತಿಯ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತ ಪಡಿಸಲಾಯಿತು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೂ. 0.88 ಲಕ್ಷಗಳ ಅಂದಾಜು ಮೊತ್ತದಲ್ಲಿ ತೋಟಗಾರಿಕೆ ಇಲಾಖೆಯು 2017-18 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿರುವ ಕೆಂಪಲಿಂಗನಮರ ಗ್ರಾಮದ ಕೆ.ಸಿ ಅನಿಲ್ ಕುಮಾರ್‌ರವರ 1.03 ಎಕರೆಜಮೀನಿನಲ್ಲಿ ಸೀಬೆ ಗಿಡ ಅಭಿವೃದ್ಧಿ ಕಾಮಗಾರಿಯನ್ನು ಪರಿವೀಕ್ಷಣೆ ಮಾಡಲಾಗಿ ಒಟ್ಟು 260 ಸೀಬೆ ಸಸಿಗಳನ್ನು ಬೆಳೆಸಲಾಗಿದ್ದು ತೋಟಗಾರಿಕೆ ಇಲಾಖೆಯ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಲಾಗಿರುತ್ತದೆ ಸಸಿಗಳು ಉತ್ತಮವಾಗಿ ಬೆಳೆದಿದ್ದು ಮುಂದಿನ ವರ್ಷದಿಂದ ಫಲ ನಿರೀಕ್ಷಸಬಹುದಾಗಿದೆ ಎಂದು ಫಲಾನಿಭವಿಯು ಹರ್ಷ ವ್ಯಕ್ತಪಡಿಸಿದರು.

ಕನ್ನಮಂಗಲ ಗ್ರಾಮ ಪಂಚಾಯಿತಿಯ ಕೆಂಪಲಿಂಗಪುರ ಗ್ರಾಮದ ಸಾರ್ವಜನಿಕ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಪರಿವೀಕ್ಷಣೆ ಮಾಡಲಾಯಿತು. ಸದರಿ ಕೆರೆಯು 98 ಎಕರೆ ವಿಸ್ತೀರ್ಣ ಹೊಂದಿದ್ದು ಶ್ರೀ ಆಂಜನೇಯಲು ಬಿಲ್ಡರ್ಸ್ ಮತ್ತು ಡೆವಲಪರ್ಸ್‌ರವರ ಸಿ.ಎಸ್.ಆರ್ ಅನುದಾನದಲ್ಲಿ ಕೆರೆ ಹೂಳು ತೆಗೆದು ಸಾರ್ವಜನಿಕರ ಸಹಕಾರದೊಂದಿಗೆ ಜೀರ್ಣೋದ್ಧಾರ ಮಾಡಲಾಗಿದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದರು. ಕೆರೆಯ ಜೀರ್ಣೋದ್ಧಾರವಾದ ನಂತರ ಕೆರೆಯಲ್ಲಿ ಹೆಚ್ಚು ನೀರು ಸಂಗ್ರಹಣೆಯಾಗಿದ್ದು ಸುತ್ತಮುತ್ತಲಿನ ಕುಡಿಯುವ ನೀರಿನ ಕೊಳವೆಬಾವಿಗಳು ಮತ್ತು ರೈತರ ಕೊಳವೆಬಾವಿಗಳ ಅಂತರ್ಜಲ ಮಟ್ಟ ಹೆಚ್ಚಾಗಿರುವ ಬಗ್ಗೆ ಸಾರ್ವಜನಿಕರು ಹರ್ಷ ವ್ಯಕ್ತಪಡಿಸಿದರು. ನಂತರ ಕೆರೆ ಏರಿ ಮೇಲೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವಿವಿಧ ಜಾತಿಯ ಸಸಿಗಳನ್ನು ಬೆಳೆಸಲಾಗಿದ್ದು ಬೇಸಿಗೆ ಕಾಲದಲ್ಲಿ ಸಂರಕ್ಷಣೆ ಮಾಡುವಂತೆ ಸೂಚಿಸಲಾಯಿತು.

ಜಾಲಿಗೆ ಗ್ರಾಮ ಪಂಚಾಯಿತಿಯ ತಿಂಡ್ಲು ಗ್ರಾಮದ ಸಾರ್ವಜನಿಕ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಪರಿವೀಕ್ಷಣೆ ಮಾಡಲಾಯಿತು. ಸದರಿ ಕೆರೆಯು 16.20ಎಕರೆ ವಿಸ್ತೀರ್ಣ ಹೊಂದಿದ್ದು ಶ್ರೀ ಆಂಜನೇಯಲು ಬಿಲ್ಡರ್ಸ್ ಮತ್ತು ಡೆವಲಪರ್ಸ್‌ರವರ ಸಿ.ಎಸ್.ಆರ್ ಅನುದಾನ ರೂ.75.00 ಲಕ್ಷ ಮತ್ತು ಗ್ರಾಮ ಪಂಚಾಯಿತಿಯ ರೂ.10.00 ಲಕ್ಷ ಹಾಗೂ ಸಾರ್ವಜನಿಕರ ಸಹಕಾರದೊಂದಿಗೆ ಕೆರೆ ಹೂಳು ತೆಗೆದು ಜೀರ್ಣೋದ್ಧಾರ ಮಾಡುವ ಕಾಮಗಾರಿಯು ಪ್ರಗತಿಯಲ್ಲಿದ್ದು ಜನವರಿ ಅಂತ್ಯದ ವೇಳೆಗೆ ಕಾಮಗಾರಿ ಪೂರ್ಣಗೊಳಿಸಲು ತಿಳಿಸಲಾಯಿತು.

ಕುಂದಾಣ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 2018-19 ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಕುಂದಾಣ ಗ್ರಾ,ಮದಲ್ಲಿ ನಿರ್ಮಾಣವಾಗಿರುವ ಮುರಾರ್ಜಿ ದೇಸಾಯಿ ವಸತಿ ಶಾಲೆಗೆ ಭೇಟಿ ನೀಡಿ ಪರಿಶೀಲಿಸಲಾಯಿತು. ಸದರಿ ಶಾಲೆಯ ಬಾಲಕಿಯರ ವಿದ್ಯಾರ್ಥಿ ನಿಲಯ ಮತ್ತು ಬಾಲಕರ ವಿದ್ಯಾರ್ಥಿ ನಿಲಯಗಳಿಗೆ ಬೇಟಿ ನೀಡಿದ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳು ಪೂರ್ವ ಸಿದ್ದತಾ ಪರೀಕ್ಷೆಗೆ ಅಭ್ಯಾಸ ಮಾಡುತ್ತಿರುವುದನ್ನು ಗಮನಿಸಿ ವಿದ್ಯಾರ್ಥಿಗಳ ಜೊತೆ ಊಟ ಮತ್ತು ವಸತಿ ಸೌಲಭ್ಯಗಳ ಹಾಗೂ ಪರಿಕ್ಷಾ ಪೂರ್ವತಯಾರಿಯ ಬಗ್ಗೆ ಚರ್ಚಿಸಲಾಯಿತು. ಕ್ಲಿಷ್ಟಕರವಾದ ವಿಷಯಗಳಿಗೆ ಮತ್ತು ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಯನ್ನು ತೆಗೆದುಕೊಂಡು ಎಲ್ಲಾ ಮಕ್ಕಳು ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಲು ಕ್ರಮವಹಿಸುವಂತೆ ಶಿಕ್ಷಕರಿಗೆ ಸೂಚಿಸಲಾಯಿತು. ಮತ್ತು ಕುಂದಾಣ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಶಾಲಾ ಆವರಣವು ವಿಶಾಲವಾಗಿದ್ದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಶಾಲಾ ಆವರಣ ಮತ್ತು ಆಟದ ಮೈದಾನವನ್ನು ಅಭಿವೃದ್ಧಿ ಪಡಿಸಲು ಸೂಚಿಸಲಾಯಿತು.

ಕುಂದಾಣ ಗ್ರಾಮ ಪಂಚಾಯಿತಿ ದೊಡ್ಡ ಚೀಮನಹಳ್ಳಿ ಗ್ರಾಮದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ರೂ. 8.00 ಲಕ್ಷಗಳ ಅಂದಾಜು ಮೊತ್ತದಲ್ಲಿ ನಿರ್ಮಾಣ ಮಾಡಿರುವ 50,000 ಲೀಟರ್ ಸಾಮರ್ಥ್ಯದ ಕುಡಿಯುವ ನೀರಿನ ಟ್ಯಾಂಕ್(OHT) ಕಾಮಗಾರಿಯನ್ನು ಪರಿಶೀಲಿಸಲಾಯಿತು. ನೀರನ್ನು ಸಮರ್ಪಕವಾಗಿ ಸರಬರಾಜು ಮಾಡಲು ಹಾಗೂ ನೀರು ವ್ಯರ್ಥವಾಗದಂತೆ ನಿರ್ವಹಣೆ ಮಾಡಲು ಮತ್ತು ಟ್ಯಾಂಕ್‌ನ ಸುತ್ತ ನೈರ್ಮಲ್ಯವನ್ನು ಕಾಪಾಡಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಲಾಯಿತು.

Hemalatha

(ಪಿ. ಹೇಮಲತ)

ಸರ್ಕಾರದ ಕಾರ್ಯದರ್ಶಿ, ಸಿಆಸುಇ ಹಾಗೂ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಉಸ್ತುವಾರಿ ಕಾರ್ಯದರ್ಶಿ

DPARAR/2/ESP/2019-DPARAR_US_WS_A-DPAR AR SEC

ನಮೂನೆ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರಮ ಸಂಖ್ಯೆ | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಪಿ. ಹೇಮಲತ |
| 3 | ಪ್ರವಾಸ ಕೈಗೊಂಡ ದಿನಾಂಕ | ದಿ: ೨೩.೧೨.೨೦೧೯ |
| | | |
| A | **ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ** | |
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿವಿಧ ತಾಲ್ಲೂಕುಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಅಂಶಗಳ ಬಗ್ಗೆ ವಿವರವಾದ ವರದಿಯನ್ನು ಲಗತ್ತಿಸಿದೆ. |
| b) | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | ವರದಿಯಲ್ಲಿ ವಿವರಿಸಲಾಗಿದೆ. |
| B) | **ಕ್ಷೇತ್ರ ವೀಕ್ಷಣೆ** | |

| ಕ್ರಮ ಸಂಖ್ಯೆ | ಭೇಟಿ ನೀಡಿದ ತಾಲ್ಲೂಕು/ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| ೧. | ದೇವನಹಳ್ಳಿ ತಾ. ಕನ್ನಮಂಗಲ ಗ್ರಾಮ | ವರದಿಯಲ್ಲಿ | ವಿವರಿಸಲಾಗಿದೆ. |
| ೨. | ಕೆಂಪಲಿಂಗಪುರ ಗ್ರಾಮ | | |
| ೩. | ತಿಂಡ್ಲು ಗ್ರಾಮ | | |
| ೪. | ಚೀಮನಹಳ್ಳಿ ಗ್ರಾಮ | | |

| C) | **ಇತರೆ ವಿಷಯಗಳು** | |
|---|---|---|

Hemalatha P
(ಪಿ. ಹೇಮಲತ)
ಸರ್ಕಾರದ ಕಾರ್ಯದರ್ಶಿ, ಸಿಆಸುಇ
ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ
ಉಸ್ತುವಾರಿ ಕಾರ್ಯದರ್ಶಿ

ಸರ್ಕಾರದ ಅಪರ ಕಾರ್ಯದರ್ಶಿ
ಸಿಆಸುಇ (ಆಸು)

E-Office
DPAR(AR)
REI
Gayathri devi HR
SO

## ದಿನಾಂಕ 23/12/2019 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿಗೆ ಭೇಟಿ ನೀಡಿ ವಿವಿಧ ಕಾಮಗಾರಿಗಳ ಪರಿಶೀಲನೆ ಮಾಡಿದ ವಿವರ

ದಿನಾಂಕ 23/12/2019 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿಗೆ ಭೇಟಿ ನೀಡಿ ಕನ್ನಮಂಗಲ ಗ್ರಾಮದಲ್ಲಿ ಎನ್‌ಆರ್.ಡ್ಬ್ಲ್ಯೂ ಪಿಯೋಜನೆಯಡಿ ರೂ. 8 ಲಕ್ಷಗಳ ವೆಚ್ಚದಲ್ಲಿ 90,000 ಲೀಟರ್ ಸಾಮರ್ಥ್ಯದ ನೆಲಮಟ್ಟದ ಕುಡಿಯುವ ನೀರು ಸಂಗ್ರಹಣಾ ತೊಟ್ಟಿ ನಿರ್ಮಾಣ ಕಾಮಗಾರಿಯನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯವರು ಅನುಷ್ಠಾನಗೊಳಿಸಿರುವುದನ್ನು ಪರಿಶೀಲನೆ ನಡೆಸಲಾಯಿತು, ಸ್ಥಳದಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ನೆಲಮಟ್ಟದ ನೀರು ಸಂಗ್ರಹಣಾ ತೊಟ್ಟಿ ನಿರ್ಮಾಣ ಮಾಡುವುದರಿಂದ ಕೊಳವೆ ಬಾವಿಗಳಲ್ಲಿ ನೀರಿನ ಸಾಮರ್ಥ್ಯ ಕಡಿಮೆಯಾದಾಗ ಮೇಲು ತೊಟ್ಟಿಗೆ (OHT) ನೀರು ಶೇಖರಣೆ ಮಾಡಲು ಕಷ್ಟಕರವಾಗುವುದರಿಂದ ನೆಲಮಟ್ಟದ ಸಂಗ್ರಹಣಾ ತೊಟ್ಟಿಯಲ್ಲಿ ನೀರನ್ನು ಸುಲಭವಾಗಿ ಶೇಖರಣೆ ಮಾಡಿ ನೀರು ಸರಬರಾಜು ಮಾಡಲು ಅನುಕೂಲವಾಗುತ್ತದೆ ಎಂದು ತಿಳಿಸಿದರು. ನೀರು ಸಂಗ್ರಹಣಾ ತೊಟ್ಟಿಯ ಸ್ಥಳದ ಸುತ್ತ ನೈರ್ಮಲ್ಯ ಕಾಪಾಡಲು ಸೂಚಿಸಲಾಯಿತು.

ಕನ್ನಮಂಗಲ ಗ್ರಾಮ ಪಂಚಾಯಿತಿ ಹತ್ತಿರರೂ 7.3 ಲಕ್ಷ ವೆಚ್ಚದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಶುದ್ದ ಕುಡಿಯುವ ನೀರಿನ ಘಟಕವನ್ನು ನಿರ್ಮಿಸಿದ್ದು ಪ್ರತಿದಿನ ಸುಮಾರು 600 ಕುಟುಂಬಗಳು ಈ ನೀರನ್ನು ಉಪಯೋಗಿಸುತ್ತಿರುತ್ತಾರೆ ಮತ್ತು ಶುದ್ದ ಕುಡಿಯುವ ನೀರಿನ ಘಟಕದಿಂದ ಉತ್ಪತ್ತಿಯಾಗುವ ಅನುಪಯುಕ್ತ ನೀರನ್ನು ಪಕ್ಕದಲ್ಲಿ ನಿರ್ಮಾಣ ಮಾಡಿರುವ ಸಂಗ್ರಹಣಾ ತೊಟ್ಟಿಯಲ್ಲಿ ಶೇಖರಣೆ ಮಾಡಲಾಗುತ್ತಿದ್ದು ಗ್ರಾಮಸ್ಥರು ಸದರಿ ನೀರನ್ನು ಬಟ್ಟೆ ತೊಳೆಯಲು, ವಾಹನ ಶುಚಿಗೊಳಿಸಲು ಮತ್ತು ಗಿಡಗಳಿಗೆ ನೀರುಣಿಸಲು ಬಳಕೆ ಮಾಡುತ್ತಿರುವುದರಿಂದ ವ್ಯರ್ಥವಾಗುವ ನೀರನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿರುವ 603 ಶುದ್ಧಕುಡಿಯುವ ನೀರಿನ ಘಟಕಗಳನ್ನು ಸುಸ್ಥಿತಿಯಲ್ಲಿಡಲು ಹಾಗೂ ಅವುಗಳಿಂದ ಉತ್ಪತ್ತಿಯಾಗುವ ಅನುಪಯುಕ್ತ ನೀರನ್ನು ವ್ಯರ್ಥಗೊಳಿಸದೇ ವೈಜ್ಞಾನಿಕ ಕ್ರಮದಿಂದ ಬಳಕೆಯೋಗ್ಯ ನೀರನ್ನಾಗಿ ಪರವರ್ತಿಸಿ ಉಪಯೋಗಿಸಲು ಕ್ರಮವಹಿಸುವಂತೆ ಸೂಚಿಸಲಾಯಿತು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 0.43 ಲಕ್ಷ ಮತ್ತು ಸ್ವಂತ ಬಂಡವಾಳವನ್ನು ಹಾಕಿ ರೂ 1.00 ಲಕ್ಷಗಳ ಅಂದಾಜು ಮೊತ್ತದ ಕನ್ನಮಂಗಲ ಪಾಳ್ಯದಲ್ಲಿ ಶ್ರೀ ಪಿಳ್ಳಣ್ಣ ಬಿನ್ ದೊಡ್ಡ ಪಿಳ್ಳಣ್ಣರವರ ದನದ ಕೊಟ್ಟಿಗೆ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಲಾಯಿತು. ಸ್ಥಳದಲ್ಲಿ ಹಾಜರಿದ್ದ ಫಲಾನುಭವಿಯಾದ ಪಿಳ್ಳಣ್ಣನವರು ಒಟ್ಟು 8

ಹಸುಗಳನ್ನು ಸಾಕಿರುವುದಾಗಿ ತಿಳಿಸಿದರು ಮತ್ತು ಈ ಕೊಟ್ಟಿಗೆಯನ್ನು ನಿರ್ಮಾಣ ಮಾಡಿದ ನಂತರ ಹಸುಗಳ ಆರೋಗ್ಯದಲ್ಲಿ ಸುಧಾರಣೆ ಕಂಡುಬಂದಿದ್ದು ಇದರಿಂದ ಹಾಲು ಇಳುವರಿ ಹೆಚ್ಚಾಗಿ ಆರ್ಥಿಕವಾಗಿ ಲಾಭವಾಗುತ್ತಿದೆ ಎಂದು ತಿಳಿಸಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೂ. 5.00 ಲಕ್ಷ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ರೂ.3.00 ಲಕ್ಷಗಳನ್ನು ಒಗ್ಗೂಡಿಸಿ ಒಟ್ಟು ರೂ.8.00 ಲಕ್ಷಗಳ ಮೊತ್ತದಲ್ಲಿ ಕನ್ನಮಂಗಲ ಗ್ರಾಮ ಪಂಚಾಯಿತಿ ಕನ್ನಮಂಗಲ ಪಾಳ್ಯದ ಗ್ರಾಮದಲ್ಲಿ ನಿರ್ಮಾಣ ಮಾಡಿರುವ ಅಂಗನವಾಡಿ ಕಟ್ಟಡ ಕಾಮಗಾರಿಯನ್ನು ಪರಿಶೀಲಿಸಲಾಗಿ ಉತ್ತಮ ಗುಣಮಟ್ಟದ ಕಟ್ಟಡವನ್ನು ನಿರ್ಮಿಸಲಾಗಿರುತ್ತದೆ ಮತ್ತು ಸದರಿ ಅಂಗನವಾಡಿಯಲ್ಲಿ 15 ಮಕ್ಕಳು ದಾಖಲಾಗಿದ್ದು ಭೇಟಿ ನೀಡಿದ ಸಂದರ್ಭದಲ್ಲಿ 9 ಮಕ್ಕಳು ಹಾಜರಿರುತ್ತಾರೆ. ಅಂಗನವಾಡಿ ಗೋದಾಮುನ್ನು ಪರಿಶೀಲಿಸಲಾಗಿ ಆಹಾರ ಸಾಮಾಗ್ರಿಗಳನ್ನು ಉತ್ತಮ ರೀತಿಯಲ್ಲಿ ಶೇಖರಣೆ ಮಾಡಿರುತ್ತಾರೆ. ಅಂಗನವಾಡಿ ಆವರಣ ಮತ್ತು ಶೌಚಾಲಯದಲ್ಲಿ ಸ್ವಚ್ಚತೆಯನ್ನು ಕಾಪಾಡಿರುವುದು ಕಂಡು ಬಂದಿರುತ್ತದೆ. ಸದರಿ ಅಂಗನವಾಡಿಗೆ ಒಟ್ಟು 4 ಬಾಣಂತಿಯರು ಮತ್ತು 5 ಗರ್ಭಿಣಿಯರು ದಾಖಲಾಗಿದ್ದು ಎಲ್ಲರಿಗೂ ನಿಗಧಿ ಪಡಿಸಿರುವ ಪೌಷ್ಟಿಕ ಆಹಾರ ವಿತರಿಸುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಲಾಯಿತು.

ಕನ್ನಮಂಗಲ ಪಾಳ್ಯದಲ್ಲಿ ರೂ. 22.00 ಲಕ್ಷಗಳ ಗ್ರಾಮ ಪಂಚಾಯಿತಿ ನಿಧಿಯಿಂದ ಒಳಚರಂಡಿ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದ್ದು ಈಗಾಗಲೆ 2 ಹಂತದ ಕಾಮಗಾರಿ ಮುಕ್ತಾಯಗೊಂಡಿದ್ದು 3ನೇ ಹಂತದಕಾಮಗಾರಿ ಪ್ರಗತಿಯಲ್ಲಿರುತ್ತದೆ. ಗ್ರಾಮ ಪಂಚಾಯಿತಿ ಕೈಗೊಂಡಿರುವ ಒಳಚರಂಡಿ ಕಾಮಗಾರಿಯಿಂದ ನೀರು ಸರಾಗವಾಗಿ ಹರಿದು ಹೋಗುವುದರಿಂದ ಗ್ರಾಮದಲ್ಲಿ ಸ್ವಚ್ಚತೆ ಕಾಪಾಡಲು ಸಹಕಾರಿಯಾಗುವುದರಿಂದ ಗ್ರಾಮ ಪಂಚಾಯಿತಿಯ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತ ಪಡಿಸಲಾಯಿತು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೂ. 0.88 ಲಕ್ಷಗಳ ಅಂದಾಜು ಮೊತ್ತದಲ್ಲಿ ತೋಟಗಾರಿಕೆ ಇಲಾಖೆಯು 2017-18 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿರುವ ಕೆಂಪಲಿಂಗನಪುರ ಗ್ರಾಮದ ಕೆ.ಸಿ ಅನಿಲ್ ಕುಮಾರ್‌ರವರ 1.03 ಎಕರೆಜಮೀನಿನಲ್ಲಿ ಸೀಬೆ ಗಿಡ ಅಭಿವೃದ್ಧಿ ಕಾಮಗಾರಿಯನ್ನು ಪರಿವೀಕ್ಷಣೆ ಮಾಡಲಾಗಿ ಒಟ್ಟು 260 ಸೀಬೆ ಸಸಿಗಳನ್ನು ಬೆಳೆಸಲಾಗಿದ್ದು ತೋಟಗಾರಿಕೆ ಇಲಾಖೆಯ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಲಾಗಿರುತ್ತದೆ ಸಸಿಗಳು ಉತ್ತಮವಾಗಿ ಬೆಳೆದಿದ್ದು ಮುಂದಿನ ವರ್ಷದಿಂದ ಫಲ ನಿರೀಕ್ಷಸಬಹುದಾಗಿದೆ ಎಂದು ಫಲಾನಿಭವಿಯು ಹರ್ಷ ವ್ಯಕ್ತಪಡಿಸಿದರು.

ಕನ್ನಮಂಗಲ ಗ್ರಾಮ ಪಂಚಾಯಿತಿಯ ಕೆಂಪಲಿಂಗಪುರ ಗ್ರಾಮದ ಸಾರ್ವಜನಿಕ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಪರಿವೀಕ್ಷಣೆ ಮಾಡಲಾಯಿತು. ಸದರಿ ಕೆರೆಯು 98 ಎಕರೆ ವಿಸ್ತೀರ್ಣ ಹೊಂದಿದ್ದು ಶ್ರೀ ಆಂಜನೇಯಲು ಬಿಲ್ಡರ್ಸ್ ಮತ್ತು ಡೆವಲಪರ್ಸ್‌ರವರ ಸಿ.ಎಸ್.ಆರ್ ಅನುದಾನದಲ್ಲಿ ಕೆರೆ ಹೂಳು ತೆಗೆದು ಸಾರ್ವಜನಿಕರ ಸಹಕಾರದೊಂದಿಗೆ ಜೀರ್ಣೋದ್ಧಾರ ಮಾಡಲಾಗಿದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದರು. ಕೆರೆಯು ಜೀರ್ಣೋದ್ಧಾರವಾದ ನಂತರ ಕೆರೆಯಲ್ಲಿ ಹೆಚ್ಚು ನೀರು ಸಂಗ್ರಹಣೆಯಾಗಿದ್ದು ಸುತ್ತಮುತ್ತಲಿನ ಕುಡಿಯುವ ನೀರಿನ ಕೊಳವೆಬಾವಿಗಳು ಮತು ್ರೈತರ ಕೊಳವೆಬಾವಿಗಳ ಅಂತರ್ಜಲ ಮಟ್ಟ ಹೆಚ್ಚಾಗಿರುವ ಬಗ್ಗೆ ಸಾರ್ವಜನಿಕರು ಹರ್ಷ ವ್ಯಕ್ತಪಡಿಸಿದರು. ನಂತರ ಕೆರೆ ಏರಿ ಮೇಲೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವಿವಿಧ ಜಾತಿಯ ಸಸಿಗಳನ್ನು ಬೆಳೆಸಲಾಗಿದ್ದು ಬೇಸಿಗೆ ಕಾಲದಲ್ಲಿ ಸಂರಕ್ಷಣೆ ಮಾಡುವಂತೆ ಸೂಚಿಸಲಾಯಿತು.

ಜಾಲಿಗೆ ಗ್ರಾಮ ಪಂಚಾಯಿತಿಯ ತಿಂಡ್ಲು ಗ್ರಾಮದ ಸಾರ್ವಜನಿಕ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಪರಿವೀಕ್ಷಣೆ ಮಾಡಲಾಯಿತು. ಸದರಿ ಕೆರೆಯು 16.20ಎಕರೆ ವಿಸ್ತೀರ್ಣ ಹೊಂದಿದ್ದು ಶ್ರೀ ಆಂಜನೇಯಲು ಬಿಲ್ಡರ್ಸ್ ಮತ್ತು ಡೆವಲಪರ್ಸ್‌ರವರ ಸಿ.ಎಸ್.ಆರ್ ಅನುದಾನ ರೂ.75.00 ಲಕ್ಷ ಮತ್ತು ಗ್ರಾಮ ಪಂಚಾಯಿತಿಯ ರೂ.10.00 ಲಕ್ಷ ಹಾಗೂ ಸಾರ್ವಜನಿಕರ ಸಹಕಾರದೊಂದಿಗೆ ಕೆರೆ ಹೂಳು ತೆಗೆದು ಜೀರ್ಣೋದ್ಧಾರ ಮಾಡುವ ಕಾಮಗಾರಿಯು ಪ್ರಗತಿಯಲ್ಲಿದ್ದು ಜನವರಿ ಅಂತ್ಯದ ವೇಳೆಗೆ ಕಾಮಗಾರಿ ಪೂರ್ಣಗೊಳಿಸಲು ತಿಳಿಸಲಾಯಿತು.

ಕುಂದಾಣ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 2018-19 ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಕುಂದಾಣ ಗ್ರಾ,ಮದಲ್ಲಿ ನಿರ್ಮಾಣವಾಗಿರುವ ಮುರಾರ್ಜಿ ದೇಸಾಯಿ ವಸತಿ ಶಾಲೆಗೆ ಭೇಟಿ ನೀಡಿ ಪರಿಶೀಲಿಸಲಾಯಿತು. ಸದರಿ ಶಾಲೆಯ ಬಾಲಕಿಯರ ವಿದ್ಯಾರ್ಥಿ ನಿಲಯ ಮತ್ತು ಬಾಲಕರ ವಿದ್ಯಾರ್ಥಿ ನಿಲಯಗಳಿಗೆ ಬೇಟಿ ನೀಡಿದ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳು ಪೂರ್ವ ಸಿದ್ದತಾ ಪರೀಕ್ಷೆಗೆ ಅಭ್ಯಾಸ ಮಾಡುತ್ತಿರುವುದನ್ನು ಗಮನಿಸಿ ವಿದ್ಯಾರ್ಥಿಗಳ ಜೊತೆ ಊಟ ಮತ್ತು ವಸತಿ ಸೌಲಭ್ಯಗಳ ಹಾಗೂ ಪರಿಕ್ಷಾ ಪೂರ್ವತಯಾರಿಯ ಬಗ್ಗೆ ಚರ್ಚಿಸಲಾಯಿತು, ಕ್ಲಿಷ್ಟಕರವಾದ ವಿಷಯಗಳಿಗೆ ಮತ್ತು ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಯನ್ನು ತೆಗೆದುಕೊಂಡು ಎಲ್ಲಾ ಮಕ್ಕಳು ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಲು ಕ್ರಮವಹಿಸುವಂತೆ ಶಿಕ್ಷಕರಿಗೆ ಸೂಚಿಸಲಾಯಿತು, ಮತ್ತು ಕುಂದಾಣ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಶಾಲಾ ಆವರಣವು ವಿಶಾಲವಾಗಿದ್ದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಶಾಲಾ ಆವರಣ ಮತ್ತು ಆಟದ ಮೈದಾನವನ್ನು ಅಭಿವೃದ್ಧಿ ಪಡಿಸಲು ಸೂಚಿಸಲಾಯಿತು.

ಕುಂದಾಣ ಗ್ರಾಮ ಪಂಚಾಯಿತಿ ದೊಡ್ಡ ಚೀಮನಹಳ್ಳಿ ಗ್ರಾಮದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ರೂ. 8.00 ಲಕ್ಷಗಳ ಅಂದಾಜು ಮೊತ್ತದಲ್ಲಿ ನಿರ್ಮಾಣ ಮಾಡಿರುವ 50,000 ಲೀಟರ್ ಸಾಮರ್ಥ್ಯದ ಕುಡಿಯುವ ನೀರಿನ ಟ್ಯಾಂಕ್(OHT) ಕಾಮಗಾರಿಯನ್ನು ಪರಿಶೀಲಿಸಲಾಯಿತು. ನೀರನ್ನು ಸಮರ್ಪಕವಾಗಿ ಸರಬರಾಜು ಮಾಡಲು ಹಾಗೂ ನೀರು ವ್ಯರ್ಥವಾಗದಂತೆ ನಿರ್ವಹಣೆ ಮಾಡಲು ಮತ್ತು ಟ್ಯಾಂಕ್‌ನ ಸುತ್ತ ನೈರ್ಮಲ್ಯವನ್ನು ಕಾಪಾಡಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಲಾಯಿತು.

(ಪಿ. ಹೇಮಲತ)

ಸರ್ಕಾರದ ಕಾರ್ಯದರ್ಶಿ, ಸಿಆಸುಇ ಹಾಗೂ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಉಸ್ತುವಾರಿ ಕಾರ್ಯದರ್ಶಿ

E.1000267
27/12/19

# ಕರ್ನಾಟಕ ಸರ್ಕಾರ

ಸಂಖ್ಯೆ: ಪಸಂಮೀ/ಆಶಾ/130/2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ: 24.12.2019

ಇವರಿಗೆ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆ.ಸು)
ಬಹುಮಹಡಿ ಕಟ್ಟಡ, ಬೆಂಗಳೂರು

ಮಾನ್ಯರೇ,

ವಿಷಯ : ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಪ್ರವಾಸ ವರದಿ ಸಲ್ಲಿಸುವ ಕುರಿತು.

ಉಲ್ಲೇಖ : ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆ.ಸು – ಕಾರ್ಯಾಧ್ಯಯನ) ಇವರ ಅ.ಟಿ.ಸಂಖ್ಯೆ:ಸಿಆಸುಇ 02 ಇಸಪ 2019 ದಿನಾಂಕ:13.12.2019

***

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ನಾನು ದಿನಾಂಕ:18.12.2019 ಮತ್ತು 19.12.2019 ರಂದು ರಾಮನಗರ ಜಿಲ್ಲೆಗೆ ಉಸ್ತುವಾರಿ ಕಾರ್ಯದರ್ಶಿಯಾಗಿ ಭೇಟಿ ನೀಡಿದ್ದು, ಕಾರ್ಯದರ್ಶಿ ಪ್ರವಾಸದ ವರದಿಯನ್ನು ಈ ಪತ್ರಕ್ಕೆ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ
Rashmi
**[ವಿ.ರಶ್ಮಿ ಮಹೇಶ್]**
ಸರ್ಕಾರದ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

ನಮೂನ

# ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರ. ಸಂ | ಅಂಶಗಳು | |
|---|---|---|
| 1. | ಉಸ್ತುವಾರಿ ಜಿಲ್ಲೆಯ ಹೆಸರು | ರಾಮನಗರ ಜಿಲ್ಲೆ |
| 2. | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ವಿ.ರಶ್ಮಿ ಮಹೇಶ್ |
| 3. | ಪ್ರವಾಸ ಕೈಗೊಂಡ ದಿನಾಂಕ | 18.12.2019 ಮತ್ತು 19.12.2019 |

| A | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | |
|---|---|---|
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | 1. ಬರ ಎಂದು ಘೋಷಿಸಿರುವ ಎರಡು ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗಾಗಿ ಮತ್ತು ಜಾನುವಾರು ಮೇವಿಗಾಗಿ ಯಾವುದೇ ರೀತಿಯ ಕೊರತೆ ಇಲ್ಲದಿರುವ ಬಗ್ಗೆ ಖಚಿತಪಡಿಸಿಕೊಳ್ಳಲಾಯಿತು.<br>2. ಪ್ರಸಕ್ತ ಸಾಲಿನಲ್ಲಿ ಹೆಚ್ಚು ಮಳೆಯಿಂದ ಉಂಟಾಗಿರುವ ಹಾನಿಯ ವಿವರಗಳನ್ನು ಪರಿಶೀಲಿಸಲಾಯಿತು. ಹಾಗೂ ಮಾನವ ಜೀವಹಾನಿ, ಜಾನುವಾರು ಹಾನಿ, ಮನೆ ಹಾನಿ ಮತ್ತು ಬೆಳೆ ಹಾನಿ ಬಗ್ಗೆ ಸಂಪೂರ್ಣ ಪರಿಹಾರ ಪಾವತಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳಲಾಯಿತು.<br>3. ಪರಿಹಾರ ಡೇಟಾ ಎಂಟ್ರಿ ಪ್ರಗತಿಯನ್ನು ಪರಿಶೀಲಿಸಲಾಯಿತು.<br>4. 2019-20ನೇ ಸಾಲಿನ ಬರ ಪರಿಹಾರ ಯೋಜನೆಯಡಿಯಲ್ಲಿ 225 ಕಾಮಗಾರಿಗಳನ್ನು ಕೈಗೊಂಡಿರುವ ಬಗ್ಗೆ ವರದಿಯನ್ನು ಗಮನಿಸಲಾಯಿತು. ಹಾಗೂ ಭೌತಿಕವಾಗಿ ಪೂರ್ಣಗೊಂಡಿರುವ ಬಗ್ಗೆ ವರದಿಸಿದ್ದು ಆದರೆ ಇನ್ನೂ 178 ಪ್ರಕರಣಗಳಲ್ಲಿ ಅಂತಿಮ ಕಂತಿನ ಅನುದಾನ ಬಿಡುಗಡೆಗಾಗಿ ಪ್ರಸ್ತಾವನೆಯು ಪಿ.ಆರ್.ಇ.ಡಿ. ವಿಭಾಗದಿಂದ ಸಲ್ಲಿಸದಿರುವುದನ್ನು ಗಮನಿಸಲಾಯಿತು.<br>5. ಎಲ್ಲಾ ವಸತಿ ಯೋಜನೆಗಳಲ್ಲಿ ಪ್ರಗತಿಯು ಕುಂಠಿತವಾಗಿರುವುದನ್ನು ಗಮನಿಸಲಾಯಿತು.<br>6. ಸಾರ್ವಜನಿಕ ಉಪಯೋಗಕ್ಕಾಗಿ ಸರ್ಕಾರಿ ಜಮೀನು ಕಾಯ್ದಿರಿಸುವಿಕೆಗೆ ಸಂಬಂಧಿಸಿದಂತೆ, ಕಂದಾಯ ಇಲಾಖೆಗೆ ಒಟ್ಟು 18 ಪ್ರಕರಣಗಳ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಇದರಲ್ಲಿ ಪ್ರಥಮ ದರ್ಜೆ ಕಾಲೇಜುಗಳು, ಕಸ ವಿಲೇವಾರಿ ಘಟಕಗಳು, ಕುಡಿಯುವ ನೀರು ಸರಬರಾಜು ಯೋಜನೆ, ಪಶುಚಿಕಿತ್ಸಾಲಯ ಕಟ್ಟಡ, ಸಾರ್ವಜನಿಕ ಸ್ಮಶಾನ, ಇತರೆಗಳಿಗೆ ಸಲ್ಲಿಸಲಾಗಿರುವುದನ್ನು ಗಮನಿಸಲಾಯಿತು. |

7. ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ನೀಡಲಾಗುತ್ತಿರುವ ಯೋಜನೆಗಳ ಅನುಷ್ಠಾನವನ್ನು ಪರಿಶೀಲಿಸಲಾಯಿತು. ಒಟ್ಟು 210297 ಅರ್ಹ ಫಲಾನುಭವಿಗಳು ಪಿಂಚಣಿ ಸೌಲಭ್ಯ ಪಡೆಯುತ್ತಿದ್ದು, ಕೆಲವರಿಗೆ ಬ್ಯಾಂಕ್ ಮುಖಾಂತರ ಕೆಲವರಿಗೆ ಅಂಚೆ ಇಲಾಖೆಯ ಎಸ್.ಬಿ. ಖಾತೆ ಮುಖಾಂತರ ಮತ್ತು ಉಳಿದವರಿಗೆ ಅಂಚೆ ಇಲಾಖೆಯ ಇ.ಎಂ.ಓ ಮುಖಾಂತರ ಪಿಂಚಣಿ ಮೊತ್ತ ಪಾವತಿಯಾಗಿರುತ್ತದೆ. ಖಜಾನೆ 1 ರಿಂದ ಖಜಾನೆ-2 ಮೂಲಕ ಪಾವತಿ ಮಾಡಲಾಗುತ್ತಿದೆ. ಆದರೆ, ಇದರಲ್ಲಿಯೂ ಆಧಾರ್ ಜೋಡಣೆಗಾಗಿ ಇನ್ನೂ ಸುಮಾರು 43347 ಪ್ರಕರಣಗಳು ಬಾಕಿ ಇದ್ದು, ಪಿಂಚಣಿದಾರರಿಗೆ ಪಾವತಿಯಲ್ಲಿ ತಡವಾಗುತ್ತಿದೆ. ಅಲ್ಲದೇ, ಪ್ರತೀ ತಿಂಗಳು ವಿವಿಧ ಸಾರ್ವಜನಿಕ ಸೇವೆಗಳ ಮೂಲಕ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ ಪ್ರತೀ ಮಾಹೆ ಎಷ್ಟು ಪಿಂಚಣಿ ಮೊತ್ತ ಪಾವತಿಸಲಾಗುತ್ತಿದೆ, ಎಷ್ಟು ಪಿಂಚಣಿದಾರರಿಗೆ ಪಿಂಚಣಿ ಮೊತ್ತ ಪಾವತಿಯಾಗದೇ ವಾಪಸ್ಸಾಗಿರುತ್ತದೆ. ಹಾಗೂ ಎಷ್ಟು ಪಿಂಚಣಿದಾರರಿಗೆ ಪಿಂಚಣಿ ಸ್ಥಗಿತಗೊಂಡಿರುತ್ತದೆ ಎಂಬ ಬಗ್ಗೆ ಕ್ರೋಢೀಕೃತ ಮಾಹಿತಿಯು ಕೆ2 ತಂತ್ರಾಂಶದಿದ ಜಿಲ್ಲೆಯ ಅಧಿಕಾರಿಗಳಿಗೆ ಲಭ್ಯವಾಗಿರುವುದಿಲ್ಲ. ಪಿಂಚಣಿ ಸ್ಥಗಿತಗೊಂಡಿರುವ ಬಗ್ಗೆ ಹಲವಾರು ದೂರುಗಳು ಸ್ವೀಕೃತವಾಗುತ್ತಿದ್ದು, ಜಿಲ್ಲಾಧಿಕಾರಿಗಳ ಹಂತದಲ್ಲಿ ಅನೇಕ ಸಭೆಗಳನ್ನು ಸಹ ನಡೆಸಲಾಗಿದೆ. ಇದಲ್ಲದೇ, ಅಂಚೆ ಇಲಾಖೆ ಮೂಲಕ ವಿತರಿಸುವ ಇಎಂಓ ಮೊತ್ತವು ವಿತರಣೆಯಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆಯೂ ಸಹ ಅಂಚೆ ಇಲಾಖೆಯಿಂದ ಯಾವ ಮಾಹಿತಿಯು ದೊರಕುತ್ತಿಲ್ಲ.
8. ವಿವಿಧ ಭೂಸ್ವಾಧೀನ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನೆಯನ್ನು ನಡೆಸಲಾಯಿತು. K-SHIP ಮೂರು ನೋಂದಣಿ ಪ್ರಗತಿ ಮತ್ತು ಒಪ್ಪಿಗೆ ಪತ್ರ ಪಡೆಯುವ ಪ್ರಗತಿಯನ್ನು ಪರಿಶೀಲಿಸಲಾಯಿತು.
9. ಇ-ಆಫೀಸ್ ಅನುಷ್ಠಾನದಲ್ಲಿ ರಾಮನಗರ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಯೋಜನಾ ನಿರ್ದೇಶಕರು, ಪೌರಾಡಳಿತ ಮತ್ತು ಆಹಾರ ಮತ್ತು ನಾಗರೀಕ ಸರಬರಾಜು ವಿಭಾಗಗಳನ್ನು ಹೊರತುಪಡಿಸಿ ಇನ್ನುಳಿದ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂಬ ಬಗ್ಗೆ ಗಮನಿಸಲಾಯಿತು. ಇನ್ನೂ ಉಪವಿಭಾಗಾಧಿಕಾರಿ, ರಾಮನಗರ ಕಛೇರಿಯಲ್ಲಿ ಇನ್ನೂ ಇ-ಆಫೀಸ್ ಪ್ರಾರಂಭವಾಗಿದುರುವುದನ್ನು ಸಹ ಗಮನಿಸಲಾಯಿತು.

10. ತಾಲ್ಲೂಕು ಕಛೇರಿಗಳಲ್ಲಿ ಕಾಗದ ಮತ್ತು ಕಡತಗಳ ವಿಲೇವಾರಿ ಕುಂಠಿತವಾಗಿರುವುದನ್ನು ಗಮನಿಸಲಾಯಿತು. ಅಲ್ಲದೇ, ಉಪವಿಭಾಗಾಧಿಕಾರಿ ಕಛೇರಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿಯೂ ಸಹ ಶೀಘ್ರ ಕಡತ ವಿಲೇವಾರಿ ನಡೆಸಲು ಅನುಸರಿಸುತ್ತಿರುವ ಕ್ರಮಗಳ ಬಗ್ಗೆ ಪರಿಶೀಲನೆ ಮಾಡಲಾಯಿತು.

11. ವಿವಿಧ ಹಂತದ ನ್ಯಾಯಾಲಯ ಪ್ರಕರಣಗಳ ಬಗ್ಗೆ ಪರಿಶೀಲನೆ ಮಾಡಲಾಯಿತು. ತಹಶೀಲ್ದಾರ್, ಉಪವಿಭಾಗಾಧಿಕಾರಿ, ಜಿಲ್ಲಾಧಿಕಾರಿಗಳ ನ್ಯಾಯಾಲಯಗಳಲ್ಲಿ ಹಲವಾರು ವರ್ಷಗಳಿಂದ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಬಾಕಿ ಇರುವುದನ್ನು ಗಮನಿಸಲಾಯಿತು.

12. ಅ) ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2019-20ನೇ ಸಾಲಿನ ಮಾನವ ದಿನಗಳ ಸೃಜನೆ ಪ್ರಗತಿಯನ್ನು ಪರಿಶೀಲಿಸಲಾಯಿತು. ರಾಮನಗರ ತಾಲ್ಲೂಕಿನಲ್ಲಿ ವಾರ್ಷಿಕ ಗುರಿ ಸಾಧನೆ ಶೇ.56.47ರಷ್ಟಿದ್ದು, ಉಳಿದ ತಾಲ್ಲೂಕುಗಳಿಗಿಂತ ಕಡಿಮೆ ಇರುವುದನ್ನು ಗಮನಿಸಲಾಯಿತು.

ಆ) ಸಕಾಲದಲ್ಲಿ ಕೂಲಿ ಪಾವತಿ ಕುರಿತಂತೆ ಕನಕಪುರ ತಾಲ್ಲೂಕಿನಲ್ಲಿ 15 ದಿನಗಳ ನಂತರ ಸಂದಾಯವಾದ ಕೂಲಿ ಶೇ.0.11 ರಷ್ಟಿದ್ದು, ಜಿಲ್ಲೆಯ ಇತರೆ ತಾಲ್ಲೂಕುಗಳಿಗಿಂತ ಹೆಚ್ಚಿನ ಅವಧಿಯಲ್ಲಿ ಕೂಲಿ ಸಂದಾಯ ಮಾಡಿರುವುದನ್ನು ಗಮನಿಸಲಾಯಿತು.

ಇ) 2019-20ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯಾದ್ಯಂತ ಒಟ್ಟಾರೆ 7737 ಕಾಮಗಾರಿಗಳು ಆರಂಭವಾಗಿದ್ದು, ಇದರಲ್ಲಿ 1474 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಮತ್ತು 6263 ಕಾಮಗಾರಿಗಳು ಬಾಕಿ ಇರುತ್ತವೆ.

13. ಅ) ಜಲಾಮೃತ ಯೋಜನೆಯಡಿ ಮೊದಲನೇ ಹಂತದಲ್ಲಿ ರಾಮನಗರ ಜಿಲ್ಲೆಯ ವ್ಯಾಪ್ತಿಗೆ ಬರುವ 10 ಕೆರೆಗಳಲ್ಲಿ ಹೂಳೆತ್ತುವ ಮೂಲಕ ಕೆರೆಗಳ ಪುನ:ಶ್ಚೇತನಗೊಳಿಸಲು ತೀರ್ಮಾನಿಸಲಾಗಿರುತ್ತದೆ. ರಾಮನಗರ, ಚನ್ನಪಟ್ಟಣ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ತಲಾ 2 ಕೆರೆಗಳು, ಹಾಗೂ ಕನಕಪುರ ತಾಲ್ಲೂಕಿನಲ್ಲಿ 4 ಕೆರೆಗಳಲ್ಲಿ 32080 Cu.M ಹೂಳೆತ್ತಲಾಗಿರುತ್ತದೆ ಎಂಬ ವರದಿಯನ್ನು ಗಮನಿಸಲಾಯಿತು.

ಆ) ಜಿಲ್ಲೆಯಲ್ಲಿ ಹೂಳೆತ್ತುವಿಕೆಗೆ 810 ಸಣ್ಣ ಪ್ರಮಾಣದ ನೀರು ಸಂಗ್ರಹಗಾರಗಳಾದ ಕೆರೆ, ಕುಂಟೆ ಮತ್ತು ಗೋಕಟ್ಟೆಗಳನ್ನು ಗುರುತಿಸಿದ್ದು, ಇದರಲ್ಲಿ 314 ಹೂಳೆತ್ತುವ ಕಾರ್ಯ

ಪೂರ್ಣಗೂಂಡಿದ್ದು, 238 ಪ್ರಗತಿಯಲ್ಲಿರುತ್ತದ ಎಂಬ ವರದಿಯನ್ನು ಗಮನಿಸಲಾಯಿತು.

14. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಯೋಜನೆಯಡಿಯಲ್ಲಿ ಒಟ್ಟು 662 ಕಾಮಗಾರಿಗಳಲ್ಲಿ 375 ಪೂರ್ಣಗೊಂಡಿದ್ದು, 174 (9- under progress, 165- tender called) ಪ್ರಗತಿಯಲ್ಲಿರುತ್ತದೆ. ಶುದ್ಧ ಕುಡಿಯುವ ನೀರಿನ ಘಟಕಗಳ ಕಾರ್ಯಾಚರಣೆ ವರದಿಯಲ್ಲಿ ಏಜೆನ್ಸಿಗಳ ತೊಂದರೆಯಿಂದ 14 ಘಟಕಗಳು ಮತ್ತು ನಿರ್ವಹಣೆಯ ತೊಂದರೆಯಿಂದ 22 ನೀರಿನ ಘಟಕಗಳು ಸ್ಥಗಿತಗೊಂಡಿರುವುದನ್ನು ಗಮನಿಸಲಾಯಿತು. ಬಹುಗ್ರಾಮ ಕುಡಿಯುವ ನೀರಿಯ ಯೋಜನೆಗಳ ಅನುಷ್ಠಾನದಲ್ಲಿ ಪ್ರಗತಿ ಕುಂಠಿತವಾಗಿರುವ ಬಗ್ಗೆ ಗಮನಿಸಲಾಯಿತು. ಅಲ್ಲದೇ, ಒಂದು ಪ್ರಕರಣದಲ್ಲಿ ದಿ:15.11.2016 ರಲ್ಲಿ ಕಾರ್ಯಾದೇಶದಂತೆ ಇನ್ನೂ ಕಾಮಗಾರಿಯ ಅನುಷ್ಠಾನ ಕುಂಠಿತವಾಗಿರುವುದನ್ನು ಗಮನಿಸಲಾಯಿತು.

15. ಸ್ವಚ್ಛ ಭಾರತ್ ಮಿಷನ್ ಗ್ರಾಮಾಂತರ ಯೋಜನೆಯಡಿಯಲ್ಲಿ ನಿಗದಿಪಡಿಸಿರುವ (ಎಲ್. ಓ.ಬಿ. ಫಲಾನುಭವಿಗಳಿಗೆ) ಇನ್ನೂ 138 ಪ್ರಕರಣಗಳಲ್ಲಿ ಕಾರ್ಯಾದೇಶ ವಿತರಣೆ ಬಾಕಿ ಇರುವುದು ಹಾಗೂ ಸುಮಾರು 1648 ಪ್ರಕರಣಗಲ್ಲಿ ಹಣ ಪಾವತಿ ಮಾಡಲು ಪ್ರಕರಣಗಳು ಬಾಕಿ ಇರುವುದನ್ನು ಗಮನಿಸಲಾಯಿತು.

16. ಘನತ್ಯಾಜ್ಯ ವಿಲೇವಾರಿಗಾಗಿ 127 ಗ್ರಾಮ ಪಂಚಾಯಿಒತಿಗಳಲ್ಲಿ ಕೇವಲ 8 ಗ್ರಾಮ ಪಂಚಾಯಿತಿಗಳಲ್ಲಿ ಮಾತ್ರ ಸ್ಥಳ ಗುರುತಿಸಲಾಗಿದ್ದು, ಇನ್ನೂ ಬಾಕಿ ಗ್ರಾಮ ಪಂಚಾಯಿತಿಗಳಲ್ಲಿ ಸ್ಥಳ ಗುರುತಿಸುವ ಕಾರ್ಯ ಪೂರ್ಣಗೊಂಡಿರದ ಬಗ್ಗೆ ಗಮನಿಸಲಾಯಿತು.

17. ವಸತಿ ಯೋಜನೆಯಡಿಯಲ್ಲಿ ಶೇ.34.41 ರಷ್ಟು ಪ್ರಗತಿ ಸಾಧಿಸಿರುವುದನ್ನು ಗಮನಿಸಲಾಗಿರುತ್ತದೆ. ವಿವಿಧ ಹಂತಗಳಲ್ಲಿ ಕಾಮಗಾರಿಯು ಬಾಕಿ ಇರುವುದನ್ನು ಮತ್ತು ಇನ್ನೂ ಕಾಮಗಾರಿಯು ಪ್ರಾರಂಭ ವಾಗದಿರುವುದನ್ನು ಗಮನಿಸಲಾಯಿತು. ಮತ್ತು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ನಿವೇಶನ ರಹಿತವಾಗಿ ಒಟ್ಟು 18046 ಕುಟುಂಬಗಳಿರುತ್ತವೆ ಮತ್ತು ಪಿ.ಎಂ.ಎ.ವೈ ನಿವೇಶನ ರಹಿತವಾಗಿ ಒಟ್ಟು 294 ಕುಟುಂಬಗಳಿರುವುದನ್ನು ಗಮನಿಸಲಾಯಿತು.

18. ಎಲ್ಲಾ ವಿದ್ಯಾರ್ಥಿ ವೇತನಗಳ ತ್ವರಿತ ಪಾವತಿಗಾಗಿ ಅಗತ್ಯ ಕ್ರಮ ತೆಗೆದುಕೊಂಡಿರುವ ಬಗ್ಗೆ ಪರಿಶೀಲಿಸಲಾಯಿತು.

| | | |
|---|---|---|
| | | 19. ಪಿಎಂ ಕಿಸಾನ್ ಯೋಜನೆಯಡಿಯಲ್ಲಿ ಈಗ ಗುರುತಿಸಲಾಗಿರುವ ಫಲಾನುಭವಿಗಳ ವಿವರಗಳನ್ನು ಗಮನಿಸಲಾಯಿತು ಹಾಗೂ ಇದುವರೆವಿಗೂ ಬಿಡುಗಡೆಯಾಗಿರುವ ಕಂತುಗಳ ಬಗ್ಗೆ ಪರಿಶೀಲನೆ ನಡೆಸಲಾಯಿತು.<br>20. ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ ಹಾಗೂ ಮುಖ್ಯಮಂತ್ರಿ ಮಾತೃಶ್ರೀ ಯೋಜನೆಯಡಿಯಲ್ಲಿ ಸಾಧಿಸಲಾಗಿರುವ ಪ್ರಗತಿಯನ್ನು ಪರಿಶೀಲಿಸಲಾಯಿತು.<br>21. ಇ-ಆಫೀಸ್ ತಂತ್ರಾಂಶವನ್ನು ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಇನ್ನೂ ಅನುಷ್ಠಾನಗೊಳಿಸದೇ ಇರುವುದನ್ನು ಗಮನಿಸಲಾಯಿತು.<br>22. ಸಕಾಲ ಯೋಜನೆಯಡಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ, ಕನಕಪುರ ತಾಲ್ಲೂಕಿನಲ್ಲಿ 3 ಅರ್ಜಿಗಳು ಅಂತಿಮ ದಿನಾಂಕದ ನಂತರ ಬಾಕಿ ಇರುವುದನ್ನು ಗಮನಿಸಲಾಯಿತು. |
| b) | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | 1. ಪ್ರತೀ ವಾರ ಕುಡಿಯುವ ನೀರು ಮತ್ತು ಮೇವಿನ ಲಭ್ಯತೆಯ ಬಗ್ಗೆ ಮಾಹಿತಿಯ ಆಧಾರದ ಮೇಲೆ ನಿಯಮಾನುಸಾರ ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು.<br>2. ಮನೆ ಹಾನಿ ಬಗ್ಗೆ ಪರಿಹಾರ ಪಾವತಿಸಿರುವ 120 ಮನೆಗಳ ದುರಸ್ತಿಯ ಪ್ರಸ್ತುತ ವಸ್ತುಸ್ಥಿತಿ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರರು ಕೂಡಲೇ ಸ್ಥಳ ತನಿಖೆ ನಡೆಸಿ,, ಕೆಲಸದ ಪ್ರಗತಿಯನ್ನು ಅವಲೋಕಿಸಲು ಸೂಚಿಸಲಾಯಿತು.<br>3. ಪರಿಹಾರ ಯೋಜನೆಯ ಡೇಟಾ ಎಂಟ್ರಿ ಕೆಲಸವನ್ನು ಸಂಪೂರ್ಣವಾಗಿ ಪೂರ್ಣಗೊಳಿಸಲು ಸೂಚಿಸಲಾಯಿತು.<br>4. 178 ಬರ ಪರಿಹಾರ ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಭೌತಿಕ ಸ್ಥಿತಿಯನ್ನು ಕೂಡಲೇ ಸ್ಥಳ ತಪಾಸಣೆ ಮಾಡಿಸಿ, ನಿಯಮಾನುಸಾರ ಅಂತಿಮ ಕಂತಿನ ಅನುದಾನ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ಕೂಡಲೇ ಪಡೆಯುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು.<br>5. ಎಲ್ಲಾ ವಸತಿ ಯೋಜನೆಗಳ ಪ್ರಗತಿಯನ್ನು ತ್ವರಿತಗತಿಯಲ್ಲಿ ತೆಗೆದುಕೊಳ್ಳಲು ಸೂಚನೆಗಳನ್ನು ನೀಡಲಾಯಿತು ಹಾಗೂ ನಿರ್ದಿಷ್ಟ ಕಾಲಾವಧಿಯೊಳಗೆ ಮುಗಿಸಲು ಸತತವಾಗಿ ಪ್ರಗತಿ ಪರಿಶೀಲನೆಯನ್ನು ಮಾಡಲು ಸಹ ಸೂಚಿಸಲಾಯಿತು. ವಿಶೇಷವಾಗಿ ಪಿ.ಎಂ. ಆವಾಸ್ ಯೋಜನೆ ಮತ್ತು ವಸತಿ ಯೋಜನೆಗಳಿಗಾಗಿ ಅಭಿವೃದ್ಧಿಪಡಿಸಬೇಕಾಗಿರುವ ಜಮೀನುಗಳ ಪ್ರಸ್ತಾವನೆಗಳನ್ನು ನಿಯಮಾನುಸಾರ ತ್ವರಿತಗತಿಯಲ್ಲಿ |

ತಗದುಕೂಳ್ಳಲು ಸೂಚಿಸಲಾಯಿತು. ನಗರ ವಸತಿ ಯೋಜನೆಗಳಿಗೆ ಕಾಯ್ದಿರಿಸಲಾಗಿರುವ ಸರ್ಕಾರಿ ಜಮೀನುಗಳ ಕೆಲವು ಪ್ರಕರಣಗಳು ಅರಣ್ಯ ಇಲಾಖೆಯಲ್ಲಿ ಬಾಕಿ ಇರುವುದು ಕಂಡುಬಂದಿದ್ದು, ಅರಣ್ಯ ಇಲಾಖೆಯ ಅಭಿಪ್ರಾಯವನ್ನು ತ್ವರಿತಗತಿಯಲ್ಲಿ ಸಲ್ಲಿಸಲು ಸೂಚಿಸಲಾಯಿತು.

6. ಸಾರ್ವಜನಿಕ ಉಪಯೋಗಕ್ಕಾಗಿ ಸರ್ಕಾರಿ ಜಮೀನು ಕಾಯ್ದಿರಿಸುವಿಕೆಗೆ ಸಂಬಂಧಿಸಿದಂತೆ, ಕಂದಾಯ ಇಲಾಖೆಗೆ ಒಟ್ಟು 18 ಪ್ರಕರಣಗಳು ಸಲ್ಲಿಸಲಾಗಿದ್ದು, ಕಂದಾಯ ಇಲಾಖೆಯ ಹಂತದಲ್ಲಿ ಹಿಂಬಾಲಿಸಲು ಸೂಚಿಸಲಾಯಿತು.
7. ಜಿಲ್ಲೆಯಲ್ಲಿ ಆಧಾರ್ ಸೀಡಿಂಗ್ ಗಾಗಿ ಬಾಕಿ ಇರುವ ವಿವಿಧ ಸಾಮಾಜಿಕ ಭದ್ರತೆ ಯೋಜನೆಗಳ ಫಲಾನುಭವಿಗಳ ಒಟ್ಟು 43347 ಪ್ರಕರಣಗಳನ್ನು ಮುಂದಿನ ಮೂರು ವಾರಗಳಲ್ಲಿ ಪೂರ್ಣಗೊಳಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಯಿತು. ಅಲ್ಲದೇ, ಖಜಾನೆ2 ತಂತ್ರಾಂಶದಲ್ಲಿ ಪಿಂಚಣಿ ಸ್ಥಗಿತಗೊಂಡಿರುವ ಒಟ್ಟು 7839 ಫಲಾನುಭವಿಗಳಲ್ಲಿ ಈಗ ಕೇವಲ 1613 ಫಲಾನುಭವಿಗಳನ್ನು ಪುನ: ಸ್ಥಗಿತಗೊಳಿಸಿದ್ದು, ಉಳಿದಂತೆ ಬಾಕಿ ಇರುವ 6226 ಫಲಾನುಭವಿಗಳ ವಿವರಗಳನ್ನು ಕೂಡಲೇ ಪುನ:ಸ್ಥಿತಿಗೊಳಿಸಲು ಕ್ಷೇತ್ರ ತಪಾಸಣೆ ಮತ್ತು ಆಧಾರ್ ವ್ಯಾಲಿಡೇಷನ್ ಮೂಲಕ ಮೂರು ವಾರಗಳೊಳಗೆ ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು. ಅಲ್ಲದೇ, ಒಟ್ಟು 12566 ಪ್ರಕರಣಗಳಲ್ಲಿ ಭೌತಿಕ ಪರಿಶೀಲನೆ ವರದಿ ಬಾಕಿ ಇದ್ದು, ಇದನ್ನು ಸಹ ಒಂದು ತಿಂಗಳೊಳಗೆ ಪೂರ್ಣಗೊಳಿಸಲು ಸೂಚಿಸಲಾಯಿತು. ಅಂಚೆ ಇಲಾಖೆಯ ಇ.ಎಂ.ಓ ಮೂಲಕ ಪಾವತಿಯಾಗುತ್ತಿರುವ ಪಿಂಚಣಿದಾರರ ವಿವರಗಳನ್ನು ಅಂಚೆ ಇಲಾಖೆಯಿಂದ ಪಡೆದು, ಪಿಂಚಣಿ ತಲುಪಿರುವ ಬಗ್ಗೆ ಕ್ಷೇತ್ರ ತಪಾಸಣೆ ಮೂಲಕ ಖಾತರಿಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು.
8. ವಿವಿಧ ಭೂಸ್ವಾಧೀನ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನೆಯನ್ನು ನಡೆಸಲಾಯಿತು. K-SHIP ಮೂರು ನೋಂದಣಿ ಪ್ರಗತಿ ಮತ್ತು ಒಪ್ಪಿಗೆ ಪತ್ರ ಪಡೆಯುವ ಪ್ರಗತಿಯನ್ನು ಹೆಚ್ಚಿಸಲು ಕ್ರಮ ವಹಿಸುವಂತೆ ಸೂಚಿಸಲಾಯಿತು.
9. ಇ-ಆಫೀಸ್ ಅನುಷ್ಠಾನ ರಾಮನಗರ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿಯೇ ಇರುವ ಯೋಜನಾ ನಿರ್ದೇಶಕರು, ಪೌರಾಡಳಿತ ಮತ್ತು ಆಹಾರ ಮತ್ತು ನಾಗರೀಕ ಸರಬರಾಜು ವಿಭಾಗಗಳನ್ನು ಸಹ ಸೇರಿಸಿ ಅನುಷ್ಠಾನಗೊಳಿಸಲು ಸೂಚಿಸಲಾಯಿತು. ಕಾರಣ,

ಕಾಗದಗಳು ಮತ್ತು ಕಡತಗಳ ತ್ವರಿತ ವಿಲೇವಾರಿಗಾಗಿ ಜಿಲ್ಲಾಧಿಕಾರಿಗಳ ಸಂಪೂರ್ಣ ಕಛೇರಿಯು ಇ-ಆಫೀಸ್ ತಂತ್ರಾಂಶವನ್ನು ಅಳವಡಿಸಬೇಕಾಗಿರುತ್ತದೆ. ಉಪವಿಭಾಗಾಧಿಕಾರಿ, ರಾಮನಗರ ಕಛೇರಿಯಲ್ಲಿಯೂ ಸಹ ನಿಯಮಾನುಸಾರ ಇ-ಆಫೀಸ್ ಅನುಷ್ಠಾನಕ್ಕಾಗಿ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು.

10. ತಾಲ್ಲೂಕು ಕಛೇರಿಗಳಲ್ಲಿ ಕಾಗದ ಮತ್ತು ಕಡತಗಳ ವಿಲೇವಾರಿ ಮಾಡಿರುವ ಬಗ್ಗೆ ಪ್ರತೀ ವಾರದ ಪ್ರಗತಿಯನ್ನು ಜಿಲ್ಲಾಧಿಕಾರಿಗೆ ಪರಿಶೀಲಿಸಲು ಸೂಚಿಸಲಾಯಿತು. ಅಲ್ಲದೇ, ಪ್ರತೀ ವಾರ ಪೂರ್ವ ನಿಗದಿತ ದಿನದಂದು ಕಡ್ಡಾಯವಾಗಿ ತಾಲ್ಲೂಕು ಕಛೇರಿಯಲ್ಲಿದ್ದು, ಜನರ ಕುಂದು-ಕೊರತೆಗಳ ಬಗ್ಗೆ ಪರಿಶೀಲನೆ ನಡೆಸಲು ಉಪವಿಭಾಗಾಧಿಕಾರಿಗೆ ಸೂಚನೆ ನೀಡಲಾಯಿತು. ಪ್ರತೀ ತಿಂಗಳಿಗೆ ಕನಿಷ್ಟ ಒಂದು ದಿನದಂದು ಸಂಪೂರ್ಣವಾಗಿ ತಾಲ್ಲೂಕು ಕಛೇರಿಯಲ್ಲಿ ಕುಳಿತು ಕೆಲಸದ ಪ್ರಗತಿ ಮತ್ತು ಜನರ ಕುಂದು-ಕೊರತೆಗಳ ಬಗ್ಗೆ ಜಿಲ್ಲಾಧಿಕಾರಿಗೆ ಸೂಚನೆ ನೀಡಲಾಯಿತು.

11. ಬಾಕಿ ಇರುವ ನ್ಯಾಯಾಲಯ ಪ್ರಕರಣಗಳ ತ್ವರಿತ ವಿಲೇವಾರಿಗಾಗಿ ಕಂದಾಯ ಇಲಾಖೆಯಿಂದ ಈಗಾಗಲೇ ಗೊತ್ತುಪಡಿಸಿರುವ ಗುರಿಯಂತೆ ನ್ಯಾಯಾಲಯದ ಪ್ರಕರಣಗಳ ವಿಲೇವಾರಿ ಮತ್ತು ಆದೇಶಗಳನ್ನು ಹೊರಡಿಸಲು ಕ್ರಮ ತೆಗೆದುಕೊಳ್ಳಲು ಎಲ್ಲಾ ಹಂತದ ಕಂದಾಯಾಧಿಕಾರಿಗಳಿಗೆ ಸೂಚನೆ ನೀಡಲಾಯಿತು. ಅಲ್ಲದೇ ಇದರ ಬಗ್ಗೆ ಪ್ರತೀ 15 ದಿನಗಳಿಗೊಮ್ಮೆ ಕಡ್ಡಾಯವಾಗಿ ಪರಿಶೀಲಿಸಲು ಜಿಲ್ಲಾಧಿಕಾರಿಗೆ ಸೂಚನೆ ನೀಡಲಾಯಿತು.

12. ಅ) ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಮಾನವ ದಿನಗಳ ಸೃಜನೆ ಪ್ರಗತಿಯನ್ನು ಪರಿಶೀಲಿಸಲಾಯಿತು. ಇದರಲ್ಲಿ ರಾಮನಗರ ತಾಲ್ಲೂಕಿನಲ್ಲಿ ವಾರ್ಷಿಕ ಗುರಿ ಸಾಧನೆ ಇತರೆ ತಾಲ್ಲೂಕುಗಳಿಗಿಂತ ಕಡಿಮೆ ಇರುವುದನ್ನು ಗಮನಿಸಿ, ತ್ವರಿತಗತಿಯಲ್ಲಿ ಗುರಿ ಸಾಧಿಸಲು ಕ್ರಮ ವಹಿಸುವಂತೆ ಸೂಚಿಸಲಾಯಿತು.

ಆ) ಸಕಾಲದಲ್ಲಿ ಕೂಲಿ ಪಾವತಿ ಕುರಿತಂತೆ ಕನಕಪುರ ತಾಲ್ಲೂಕಿನಲ್ಲಿ 15 ದಿನಗಳ ನಂತರ ಸಂದಾಯವಾದ ಕೂಲಿಯ ಪ್ರಮಾಣ ಶೇ.011ರಷ್ಟಿದ್ದು, ತ್ವರಿತವಾಗಿ ಪಾವತಿಸುವಂತೆ ಸೂಚಿಸಲಾಯಿತು. 8861122846

ಇ) 2019-20ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯಾದ್ಯಂತರ ಬಾಕಿ ಇರುವ 6263 ಕಾಮಗಾರಿಗಳನ್ನು ಆದಷ್ಟು ತ್ವರಿತವಾಗಿ

ಪೂರ್ಣಗೊಳಿಸಲು ಸೂಚಿಸಲಾಯಿತು.

13. ಅ) ಜಲಾಮೃತ ಯೋಜನೆಯಡಿ ರಾಮನಗರ ಜಿಲ್ಲೆಯ ವ್ಯಾಪ್ತಿಗೆ ಬರುವ 10 ಕೆರೆಗಳಲ್ಲಿ ಹೂಳೆತ್ತುವ ಮೂಲಕ ಕೆರೆಗಳ ಪುನಃಶ್ಚೇತನಗೊಳಿಸಲು ತೀರ್ಮಾನಿಸಲಾಗಿರುತ್ತದೆ. ಮಾಗಡಿ ತಾಲ್ಲೂಕಿನ 2 ಕೆರೆಗಳು ಮತ್ತು ಕನಕಪುರ ತಾಲ್ಲೂಕಿನ 1 ಕೆರೆಯಲ್ಲಿ ಇನ್ನೂ ಹೂಳೆತ್ತುವ ಕಾರ್ಯ ಪ್ರಾರಂಭವಾಗದೇ ಇದ್ದು, ಇದರ ಬಗ್ಗೆ ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು.

ಆ) ಜಿಲ್ಲೆಯಲ್ಲಿ ಹೂಳೆತ್ತುವ ಕಾರ್ಯ ಪ್ರಗತಿಯಲ್ಲಿರುವ 238 ಕೆರೆ, ಕುಂಟೆ ಮತ್ತು ಗೋಕಟ್ಟೆಗಳಲ್ಲಿ ಆದಷ್ಟು ತ್ವರಿತಗತಿಯಲ್ಲಿ ಕಾರ್ಯ ನಿರ್ವಹಿಸಲು ಸೂಚಿಸಲಾಯಿತು.

14. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಯೋಜನೆಯಡಿಯಲ್ಲಿ ಒಟ್ಟು 662 ಕಾಮಗಾರಿಗಳಲ್ಲಿ 375 ಪೂರ್ಣಗೊಂಡಿದ್ದು, 174 (9- under progress, 165- tender called) ಪ್ರಗತಿಯಲ್ಲಿರುತ್ತದೆ. ಟೆಂಡರ್ ಕಾರ್ಯವನ್ನು ತ್ವರಿತವಾಗಿ ನಿರ್ವಹಿಸಲು ಸೂಚಿಸಲಾಯಿತು. ಶುದ್ಧ ಕುಡಿಯುವ ನೀರಿನ ಘಟಕಗಳ ಕಾರ್ಯಾಚರಣೆ ವರದಿಯಲ್ಲಿ ಏಜೆನ್ಸಿಗಳ ತೊಂದರೆಯಿಂದ ಮತ್ತು ನಿರ್ವಹಣೆಯ ತೊಂದರೆಯಿಂದ ಸ್ಥಗಿತಗೊಂಡಿರುವ ಘಟಕಗಳ ಪುನರ್ ಆರಂಭಕ್ಕೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಬಹುಗ್ರಾಮ ಕುಡಿಯುವ ನೀರಿಯ ಯೋಜನೆಗಳ ಸ್ಥಳ ತಪಾಸಣೆ ಮಾಡಿ, ಕಾಮಗಾರಿಗಳು ಕುಂಠಿತವಾಗಿರುವುದಕ್ಕೆ ಕಾರಣಗಳನ್ನು ಪರಿಶೀಲಿಸಿ, ತ್ವರಿತ ಅನುಷ್ಠಾನಕ್ಕಾಗಿ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗೆ ಸೂಚನೆ ನೀಡಲಾಯಿತು.

15. ಸ್ವಚ್ಛ ಭಾರತ್ ಮಿಷನ್ ಗ್ರಾಮಾಂತರ ಯೋಜನೆಯಡಿಯಲ್ಲಿ ನಿಗದಿಪಡಿಸಿರುವ (ಎಲ್. ಒ.ಬಿ. ಫಲಾನುಭವಿಗಳಿಗೆ) ಬಾಕಿ ಇರುವ ಪ್ರಕರಣಗಳಲ್ಲಿ ಕಾರ್ಯಾದೇಶ ನಿಯಮಾನುಸಾರ ನೀಡಲು ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು ಹಾಗೂ ಹಣ ಪಾವತಿ ಮಾಡಲು ಪ್ರಕರಣಗಳು ಬಾಕಿ ಇರುವುದನ್ನು ಕಾಮಗಾರಿ ಪೂರ್ಣಗೊಂಡಿರುವುದರಿಂದ, ನಿಯಮಾನುಸಾರ ಪರಿಶೀಲಿಸಿ ಬಿಡುಗಡೆ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು. ಸಮುದಾಯ ಶೌಚಾಲಯಗಳ ಕಾಮಗಾರಿ, ಶಾಲಾ ಶೌಚಾಲಯಗಳ ಕಾಮಗಾರಿ ಹಾಗೂ ಅಂಗನವಾಡಿ ಶೌಚಾಲಯಗಳ ಕಾಮಗಾರಿ ಮತ್ತು ದುರಸ್ತಿ ಪ್ರಗತಿ ಕುಂಠಿತವಾಗಿದ್ದು, ಶೀಘ್ರ ಪ್ರಗತಿಗಾಗಿ ಎಲ್ಲಾ ಅಗತ್ಯ ಕ್ರಮಗಳನ್ನು

ತಗದುಕೊಳ್ಳಲು ಸೂಚಿಸಲಾಯಿತು.

16. ಘನತ್ಯಾಜ್ಯ ವಿಲೇವಾರಿಗಾಗಿ ಉಳಿದ 119 ಗ್ರಾಮ ಪಂಚಾಯಿತಿಗಳಲ್ಲಿ ಕೂಡಲೇ ಸ್ಥಳ ಗುರುತಿಸಿ, ಕಂದಾಯ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಲು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು. ಅಲ್ಲದೇ, ಜಿಲ್ಲಾಧಿಕಾರಿಗಳ ಹಂತದಲ್ಲಿ ಸಮನ್ವಯ ಸಭೆಯನ್ನು ನಡೆಸಲು ಸಹ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಸೂಚನೆ ನೀಡಲಾಯಿತು.
17. ವಸತಿ ಯೋಜನೆಯಡಿಯಲ್ಲಿ ರಾಮನಗರ ಜಿಲ್ಲೆಯಾದ್ಯಂತ ವಿವಿಧ ಹಂತಗಳಲ್ಲಿ ಬಾಕಿ ಇರುವ ಮತ್ತು ಇನ್ನೂ ನಿರ್ಮಾಣ ಕಾಮಗಾರಿ ಪ್ರಾರಂಭವಾಗದಿರುವ ಬಗ್ಗೆ ಕ್ರಮ ಕೈಗೊಳ್ಳುವುದು ಮತ್ತು ನಿವೇಶನ ರಹಿತ ಕುಟುಂಬಗಳಿಗೆ ನಿಯಮಾನುಸಾರ ಕ್ರಮ ಕೈಗೊಳ್ಳುವುದು.
18. ವಿವಿಧ ಇಲಾಖೆಗಳ ವಿದ್ಯಾರ್ಥಿ ವೇತನ ತ್ವರಿತ ಪಾವತಿ ಬಗ್ಗೆ ಪ್ರತೀ ವಾರ ಪ್ರಗತಿ ಪರಿಶೀಲನೆ ಮಾಡಲು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗೆ ಸೂಚನೆ ನೀಡಲಾಯಿತು.
19. ಪಿಎಂ ಕಿಸಾನ್ ಯೋಜನೆಯಡಿಯಲ್ಲಿ ಎಲ್ಲಾ ಅರ್ಹ ಫಲಾನುಭವಿಗಳನ್ನು ಗುರುತಿಸಲು ರೈತ ಸಂಪರ್ಕ ಕೇಂದ್ರ ಹಾಗೂ ಗ್ರಾಮ ಪಂಚಾಯತ್ ಗಳ ಹಂತದಲ್ಲಿ ಕ್ರಮ ತೆಗೆದುಕೊಳ್ಳಲು ಜಂಟಿ ನಿರ್ದೇಶಕರು, ಕೃಷಿ ಇಲಾಖೆ ರವರಿಗೆ ಸೂಚನೆ ನೀಡಲಾಯಿತು.
20. ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ ಹಾಗೂ ಮುಖ್ಯಮಂತ್ರಿ ಮಾತೃಶ್ರೀ ಯೋಜನೆಯಡಿಯಲ್ಲಿ ಸಾಧಿಸಿರುವ ಪ್ರಗತಿಯು ಸಂಪೂರ್ಣವಾಗಿ ಎಲ್ಲಾ ಅರ್ಹ ಫಲಾನುಭವಿಗಳನ್ನು ತಲುಪಿರುವುದಿಲ್ಲ. ಅಲ್ಲದೇ ಇದರ ಬಗ್ಗೆ ಆರೋಗ್ಯ ಇಲಾಖೆಯಿಂದಲೂ ಸಹ ಮಾಹಿತಿಯನ್ನು ಪಡೆದು ಫಲಾನುಭವಿಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು.
21. ಇ-ಆಫೀಸ್ ತಂತ್ರಾಂಶವನ್ನು ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಅನುಷ್ಠಾನಗೊಳಿಸಲು ಇನ್ನು ಒಂದು ವಾರದೊಳಗೆ ಸಂಪೂರ್ಣ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು.
22. ಸಕಾಲ ಯೋಜನೆಯಡಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ, ಕನಕಪುರ ತಾಲ್ಲೂಕಿನಲ್ಲಿ 3 ಅರ್ಜಿಗಳು ಅಂತಿಮ ದಿನಾಂಕದ ನಂತರ ಬಾಕಿ ಇದ್ದು, ತ್ವರಿತ ವಿಲೇವಾರಿಗೆ ಕ್ರಮ ವಹಿಸಲು ಸೂಚಿಸಲಾಯಿತು.

| B | ಕ್ಷೇತ್ರ ವೀಕ್ಷಣೆ | | |
|---|---|---|---|
| ಕ್ರಮ ಸಂಖ್ಯೆ | ಭೇಟಿ ನೀಡಿದ ತಾಲ್ಲೂಕು / ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
| | ಮಾಗಡಿ ತಾಲ್ಲೂಕಿನ ಮಾಡಬಾಳ್ ಹೋಬಳಿ, ಮತ್ತಿಕೆರೆ, ಮಾಡಬಾಳ್, ಅಗಲಕೋಟೆ ಮತ್ತು ಪುರ ಗ್ರಾಮಗಳು | ವಿವಿಧ ಸರ್ಕಾರಿ ಕಛೇರಿಗಳು ಮತ್ತು ಸರ್ಕಾರಿ ಸಂಸ್ಥೆಗಳು ಹಾಗೂ ಫಲಾನುಭವಿಗಳ ವಾಸಸ್ಥಳ. | 1. ಸರ್ಕಾರದ ವಿವಿಧ ಕಾರ್ಯಕ್ರಮಗಳಲ್ಲಿ ಫಲಾನುಭವಿಗಳ ಆಯ್ಕೆಯನ್ನು ಪಾರದರ್ಶಕ ಮಾರ್ಗಸೂಚಿಗಳ ಅನುಸಾರ ತೆಗೆದುಕೊಳ್ಳುವುದು ಅತ್ಯಗತ್ಯವಾಗಿರುತ್ತದೆ.<br>2. ಸರ್ಕಾರದ ವಿವಿಧ ಯೋಜನೆಗಳಲ್ಲಿ ನೇರ ಹಣ ವರ್ಗಾವಣೆ ಮೂಲಕ ಫಲಾನುಭವಿಯ ಬ್ಯಾಂಕ್ ಖಾತೆಗೆ ಹಣ ಜಮಾ ಆಗುತ್ತಿದೆ. ಆದರೆ, ಅನೇಕ ಬಾರಿ ಫಲಾನುಭವಿಗೆ ಯಾವ ಯೋಜನೆಯ ಮೂಲಕ, ಯಾವ ಕಂತಿನ, ಯಾವ ತಿಂಗಳಿನ ಹಣ ವರ್ಗಾವಣೆ ಎಂಬುದರ ಬಗ್ಗೆ ಮಾಹಿತಿ ಬ್ಯಾಂಕ್ ನ ಪಾಸ್ ಪುಸ್ತಕದಲ್ಲಿ ದೊರಕುವುದಿಲ್ಲ. ಇದರಿಂದ, ಫಲಾನುಭವಿಗೆ ಅನೇಕ ಬಾರಿ ಗೊಂದಲ ಉಂಟಾಗುತ್ತದೆ ಆದಕಾರಣ, (ಪ್ರತೀ ಯೋಜನೆಯ ಕಂತಿನ ಹಾಗೂ ತಿಂಗಳಿನ ಅನುದಾನದ ಬಗ್ಗೆ unique id code ಮಾಡುವುದು ಸೂಕ್ತವಾಗಿರುತ್ತದೆ. ಇದರಿಂದ, ಫಲಾನುಭವಿಗೆ ಮಾಹಿತಿ ಹಾಗೂ ಹಣ ವರ್ಗಾವಣೆ ಬಗ್ಗೆ ಅನುಷ್ಠಾನ ಇಲಾಖೆಗಳಿಗೆ ಖಚಿತಪಡಿಸಿಕೊಳ್ಳಲು ಸಹ ಅನುಕೂಲವಾಗುತ್ತದೆ. |

| C | ಇತರೆ ವಿಷಯಗಳು | |
|---|---|---|
| | | |

ಸ್ಥಳ: ಬೆಂಗಳೂರು
ದಿನಾಂಕ: 24.12.2019

Rashmi N.
**(ವಿ.ರಶ್ಮಿ ಮಹೇಶ್)**
ಸರ್ಕಾರದ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
ಹಾಗೂ ರಾಮನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

DPARAR/2/ESP/2019-DPARAR US WS A-DPAR AR SEC

ನಮೂನೆ

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರ.ಸಂ | ಅಂಶಗಳು | | |
|---|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಚಿತ್ರದುರ್ಗ | |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಪಂಕಜ್ ಕುಮಾರ್ ಪಾಂಡೆ | |
| 3 | ಪ್ರವಾಸ ಕೈಗೊಂಡ ದಿವಸ | ದಿನಾಂಕ.20.12.2019 ಶುಕ್ರವಾರ | |
| | | | |
| A | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | ಹಿರಿಯೂರು | ಅಂಗನವಾಡಿ ಜೆ.ಜಿ ಹಳ್ಳಿ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ, ನರೇಗಾ ಕಾರ್ಯಕ್ರಮದಡಿ ಕೋಲಾಟದಹಟ್ಟಿ ಗ್ರಾಮದಲ್ಲಿ ಅಂಗನವಾಡಿ ಕಟ್ಟಡದ ನಿರ್ಮಾಣದ ಬಗ್ಗೆ ಪರಿಶೀಲನೆ ಮಾಡಲಾಯಿತು. |
| | | ಹೊಳಲ್ಕೆರೆ | ಶಿವಗಂಗಾ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಲಾಯಿತು. ರಾಮಗಿರಿ ಗ್ರಾಮದ ಹತ್ತಿರ ಸುಡುಗಾಡು ಸಿದ್ಧರ ಕಾಲೋನಿ ನೆರೆ ಪೀಡಿತ ಪ್ರದೇಶಕ್ಕೆ ಭೇಟಿ. |
| | | ಹೊಸದುರ್ಗ | ಯಾಲಕ್ಕಪ್ಪನಹಟ್ಟಿಯ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಗೆ ಭೇಟಿ ನೀಡಲಾಯಿತು. ಕೆಲ್ಲೋಡು ಗ್ರಾಮದ ವೇದಾವತಿ ನದಿ ಸೇತುವೆ ಕುಸಿತದಿಂದ ಹಾನಿಯಾಗಿರುವ ಪ್ರದೇಶದ ವೀಕ್ಷಣೆ ಮಾಡಿರುತ್ತದೆ. |
| ಎ) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | ಹಿರಿಯೂರು | ಕಿರಿಯ ಪ್ರಾಥಮಿಕ ಶಾಲೆ ಜೆ.ಜಿ ಹಳ್ಳಿಗೆ ಭೇಟಿ ನೀಡಿ ಮಕ್ಕಳ ವಿದ್ಯಾಭ್ಯಾಸ ಬಗ್ಗೆ ಗಮನಿಸಲಾಯಿತು. ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಮಕ್ಕಳ ಬಗ್ಗೆ ವಿಚಾರಣೆ ಮಾಡಲಾಯಿತು. ಗರ್ಭಿಣಿ ಹೆಣ್ಣುಮಕ್ಕಳ ಬಗ್ಗೆ ವೈದ್ಯಾಧಿಕಾರಿಗಳ ಜೊತೆ ಚರ್ಚಿಸಲಾಯಿತು. |
| | | ಹೊಳಲ್ಕೆರೆ | ಶಿವಗಂಗಾ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ Mother & Child Protection Register (MCB), ಚುಚ್ಚು ಮದ್ದಿನ ವಹಿ ಹಾಗೂ ಚುಚ್ಚು ಮದ್ದಿನ ಕಾರ್ಡ್ ಮತ್ತು ಗರ್ಭಿಣಿ ಹೆಣ್ಣುಮಕ್ಕಳ ಪೌಷ್ಠಿಕ ಪುಷ್ಠಿ ರಾಗಿ ಮಾಲ್ಟ್ ಗಳನ್ನು ಪರಿಶೀಲಿಸಿ ಉತ್ತಮವಾಗಿ ನಿರ್ವಹಿಸುವುದಾಗಿ ಅಭಿಪ್ರಾಯ ವ್ಯಕ್ತಪಡಿಸಲಾಯಿತು. |
| | | ಹೊಸದುರ್ಗ | ಯಾಲಕ್ಕಪ್ಪನಹಟ್ಟಿಯ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಗೆ ಭೇಟಿ ನೀಡಿ ಮಕ್ಕಳ ಓದುವ ಕೌಶಲ್ಯದ ಬಗ್ಗೆ ಪರೀಕ್ಷಿಸಲಾಯಿತು. |
| ಬಿ) | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | ಹಿರಿಯೂರು | ವೈದ್ಯಾಧಿಕಾರಿಗಳಿಗೆ ಹಾಗೂ ತಾಲ್ಲೂಕು ವೈದ್ಯಾಧಿಕಾರಿಗಳಿಗೆ ಗರ್ಭಿಣಿ ಹೆಣ್ಣುಮಕ್ಕಳು ಹಾಗೂ ಶಾಲೆಯ ಮಕ್ಕಳ ಬಗ್ಗೆ ತಪಾಸಣೆ ಮಾಡಿ ಸೂಕ್ತ ವೈದ್ಯಕೀಯ ಚಿಕಿತ್ಸೆ ನೀಡುವಂತೆ ನಿರ್ದೇಶನ ನೀಡಲಾಯಿತು. |
| | | ಹೊಳಲ್ಕೆರೆ | ರಾಮಗಿರಿ ಗ್ರಾಮದ ಹತ್ತಿರ ಸುಡುಗಾಡು ಸಿದ್ಧರ ಕಾಲೋನಿ ನೆರೆ ಪೀಡಿತ ಪ್ರದೇಶಕ್ಕೆ ಭೇಟಿ ತಹಶೀಲ್ದಾರ್ ರವರಿಗೆ ಸಮೀಪದ ಸೂಕ್ತ ಜಾಗದಲ್ಲಿ ಹಕ್ಕು ಪತ್ರ ನೋಂದಣಿ ಮಾಡಿಸಿಕೊಡಲು ನಿರ್ದೇಶಿಸಿರುತ್ತದೆ. |
| | | ಹೊಸದುರ್ಗ | ಯಾಲಕ್ಕಪ್ಪನಹಟ್ಟಿಯ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಗೆ ಭೇಟಿ ನೀಡಿ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಸೂಚಿಸಲಾಯಿತು. |
| | | | |
| B | ಕ್ಷೇತ್ರ ವೀಕ್ಷಣೆ | ಹಿರಿಯೂರು | – |
| | | ಹೊಳಲ್ಕೆರೆ | – |
| | | ಹೊಸದುರ್ಗ | – |

| ಕ್ರಮಸಂಖ್ಯೆ | ಭೇಟಿ ನೀಡಿದ ತಾಲ್ಲೂಕು/ಹಳ್ಳಿ | ಭೇಟಿ ನೀಡಿದ ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|---|
| 1 | ಹಿರಿಯೂರು ತಾಲ್ಲೂಕು | ಜವನಗೊಂಡನಹಳ್ಳಿ | ಅಂಗನವಾಡಿ ಜೆ.ಜಿ ಹಳ್ಳಿ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಕೆ.ಹೆಚ್.ಆರ್.ಬಡಾವಣೆ, ಕೋಲಾಟದಹಟ್ಟಿ | ಕಿರಿಯ ಪ್ರಾಥಮಿಕ ಶಾಲೆ ಜೆ.ಜಿ ಹಳ್ಳಿಗೆ ಭೇಟಿ ನೀಡಿ ಮಕ್ಕಳ ವಿದ್ಯಾಭ್ಯಾಸ ಬಗ್ಗೆ ಗಮನಿಸಲಾಯಿತು. ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಮಕ್ಕಳ ಬಗ್ಗೆ ವಿಚಾರಣೆ ಮಾಡಲಾಯಿತು. ಗರ್ಭಿಣಿ ಹೆಣ್ಣುಮಕ್ಕಳ ಬಗ್ಗೆ ವೈದ್ಯಾಧಿಕಾರಿಗಳ ಜೊತೆ ಚರ್ಚಿಸಲಾಯಿತು. |
| 2 | ಹೊಳಲ್ಕೆರೆ ತಾಲ್ಲೂಕು | ಶಿವಗಂಗಾ ಹಾಗೂ ರಾಮಗಿರಿ | ಸುಡುಗಾಡು ಸಿದ್ಧರ ಕಾಲೋನಿ | ರಾಮಗಿರಿ ಗ್ರಾಮದ ಹತ್ತಿರ ಸುಡುಗಾಡು ಸಿದ್ಧರ ಕಾಲೋನಿ ನೆರೆ ಪೀಡಿತ ಪ್ರದೇಶ |
| 3 | ಹೊಸದುರ್ಗ ತಾಲ್ಲೂಕು | ಕೆಲ್ಲೋಡು | ಯಾಲಕ್ಕಪ್ಪನಹಟ್ಟಿ | ಯಾಲಕ್ಕಪ್ಪನಹಟ್ಟಿಯ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಹಾಗೂ ಕೆಲ್ಲೋಡು ಗ್ರಾಮದ ವೇದಾವತಿ ನದಿ ಸೇತುವೆ ವೀಕ್ಷಣೆ. |
| ಸಿ) | ಇತರೆ ವಿಷಯಗಳು | – | – | – |

COMMISSIONER,
Health and F. W. Services
BANGALORE-9.

# ನಮೂನೆ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರಮ ಸಂಖ್ಯೆ | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಕೋಲಾರ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಉಮಾ ಮಹಾದೇವನ್ |
| 3 | ಪ್ರವಾಸ ಕೈಗೊಂಡ ದಿನಾಂಕ | 20.12.2019 |
| A | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | ಲಗತ್ತಿಸಿದೆ |
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | ಟಿಪ್ಪಣಿ ಲಗತ್ತಿಸಿದೆ |
| b) | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | ಟಿಪ್ಪಣಿ ಲಗತ್ತಿಸಿದೆ |
| B | ಕ್ಷೇತ್ರ ವೀಕ್ಷಣೆ | ಕೋಲಾರಮ್ಮ ಕೆರೆ ವೀಕ್ಷಣೆ – ಟಿಪ್ಪಣಿ ಲಗತ್ತಿಸಿದೆ |

| ಕ್ರಮ ಸಂಖ್ಯೆ | ಭೇಟಿ ನೀಡಿದ ತಾಲ್ಲೂಕು / ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| 01 | ಕೋಲಾರ | ಕೋಲಾರ ತಾ: ಕೆರೆ ವೀಕ್ಷಣೆ. | — |

| | | |
|---|---|---|
| C) | ಇತರೆ ವಿಷಯಗಳು | — |
| | | — |

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ,

## ಟಿಪ್ಪಣಿ

### ಕೋಲಾರಮ್ಮ ಕೆರೆ ವೀಕ್ಷಣೆ:

ಇದು ಸುಮಾರು 800 ಎಕರೆಯಷ್ಟು ವಿಸ್ತೀರ್ಣವುಳ್ಳ ಕೆರೆ ಹಾಗೂ ತುಂಬಾ ಹಳೆಯ ಕೆರೆ. ಸಿಎಸ್ಆರ್‌ನ ಧನಸಹಾಯ, ಎಂಪಿ ಅನುದಾನ, ಸ್ಥಳೀಯ ನಾಯಕರುಗಳ ಸಹಾಯ ಹಾಗೂ ದಾನಿಗಳ ಸಹಾಯದೊಂದಿಗೆ ಈ ಕೆರೆಯ ಪುನರುಜ್ಜೀವನ ಕಾರ್ಯ ನಡೆಯುತ್ತಿದೆ. ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಈ ಕೆರೆಯ ಸ್ಥಳ ಪರಿಶೀಲನೆ ನಡೆಸಿರುತ್ತೇನೆ. ಈ ಕೆರೆಯೂ ಕೂಡ ಕೆಸಿ ವ್ಯಾಲಿ ಫೇಸ್ – 1 ರಲ್ಲಿ ಒಳಗೊಂಡಿರುತ್ತದೆ.

ಇಡೀ ಕೆರೆಯಲ್ಲಿನ ಕುರುಚಲು ಗಿಡಗಳನ್ನು ತೆಗೆಸಲು ತಿಳಿಸಲಾಯಿತು ಹಾಗೂ 45 ಜೆಸಿಬಿಗಳನ್ನು ಬಳಸಿಕೊಂಡು ಕೆರೆಯನ್ನು ಆಳಗೊಳಿಸುವಂತೆ ಸೂಚಿಸಲಾಯಿತು. ಹಳೆಯ ಬತ್ತಿಹೋದ ಬೋರ್‌ವೆಲ್‌ಗಳನ್ನು ಮುಚ್ಚಿಸಲು ಹಾಗೂ ಹಳೆಯ ಪಂಪುಗಳನ್ನು ತೆಗೆಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಎಲ್ಲಾ ಜಿಲ್ಲಾ ಅಧಿಕಾರಿಗಳೊಂದಿಗೆ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಜಿಲ್ಲಾ ಪ್ರಗತಿ ಪರಿಶೀಲನೆ ಕುರಿತು ಚರ್ಚೆ ನಡೆಸಲಾಯಿತು.

1) **ಋತುಮಾನ ಪರಿಸ್ಥಿತಿ:**

**ಮಳೆ:**

ಜಿಲ್ಲೆಯಲ್ಲಿ 6 ತಾಲ್ಲೂಕುಗಳಿಗೆ ಒಳಪಟ್ಟಂತೆ ವಾರ್ಷಿಕ ಸರಾಸರಿ ಮಳೆ 746 ಎಂ.ಎಂ. ಆಗಿದ್ದು, 2016ರಲ್ಲಿ 603 ಎಂ.ಎಂ., 2017ರಲ್ಲಿ 1056.2 ಎಂ.ಎಂ. ಹಾಗೂ 2018ರಲ್ಲಿ 546.00ಎಂ.ಎಂ. ಮಳೆಯಾಗಿರುತ್ತದೆ.

2019ನೇ ವರ್ಷದಲ್ಲಿ ದಿನಾಂಕ: 01.01.2019 ರಿಂದ 30.11.2019ರವರೆಗೆ ವಾಡಿಕೆಯಂತೆ 723.00 ಎಂಎಂ. ಮಳೆಯಾಗಬೇಕಾಗಿದ್ದು ವಾಸ್ತವವಾಗಿ 685.00 ಎಂ.ಎಂ. ಶೇ. 5.25 ರಷ್ಟು ಮಳೆಯ ಕೊರತೆ ಉಂಟಾಗಿರುತ್ತದೆ. ಡಿಸೆಂಬರ್ – 19ರ ಮಾಹೆಯಲ್ಲಿ ವಾಡಿಕೆಯಂತೆ 23.00 ಎಂ.ಎಂ ಮಳೆಯಾಗಬೇಕಾಗಿದ್ದು, ದಿನಾಂಕ: 19.12.2019ರವರೆಗೆ 7.00 ಎಂ.ಎಂ. ಮಳೆಯಾಗಿರುತ್ತದೆ. ಏಪ್ರಿಲ್ –19 ಮಾಹೆಯಲ್ಲಿ ವಾಡಿಕೆಯಂತೆ 29.00 ಎಂ.ಎಂ. ಮಳೆಯಾಗಬೇಕಾಗಿದ್ದು 50.00 ಎಂ.ಎಂ. ಶೇ. 71ರಷ್ಟು ಹೆಚ್ಚಿನ ಮಳೆಯಾಗಿರುತ್ತದೆ.

**ಕೃಷಿ ಚಟುವಟಿಕೆಗಳು:**

ಕೃಷಿ ಇಲಾಖೆಯ ಸಮೀಕ್ಷೆಯಂತೆ ಕೋಲಾರ ಜಿಲ್ಲೆಯಲ್ಲಿ ಸಾಗುವಳಿಗೆ ಯೋಗ್ಯವಾದ ಭೂಮಿ 1,33,626 ಹೆಕ್ಟೇರ್ ಇದ್ದು, ಮುಂಗಾರು ಹಂಗಾಮಿನಲ್ಲಿ 1,02,000 ಹೆಕ್ಟೇರ್ ಗುರಿಯಿದ್ದು, ಈವರೆಗೆ 78,266 ಹೆಕ್ಟೇರ್‌ಗಳಲಿ ಶೇಕಡ 76.7 ರಷ್ಟು ಬಿತ್ತನೆ ಕಾರ್ಯವು ಪೂರ್ಣಗೊಂಡಿರುತ್ತದೆ; ಹಿಂಗಾರು ಹಂಗಾಮಿನಲ್ಲಿ 9,000 ಹೆಕ್ಟೇರ್ ಗುರಿಯಿದ್ದು, ಈವರೆಗೆ 1,8533 ಹೆಕ್ಟೇರ್‌ಗಳಲಿ ಶೇಕಡ 21ರಷ್ಟು ಬಿತ್ತನೆ ಕಾರ್ಯವು ಪೂರ್ಣಗೊಂಡಿರುತ್ತದೆ.

ಬಿತ್ತನೆ ಬೀಜ ಪೂರೈಕೆ / ವಿತರಣೆ: ಜಿಲ್ಲೆಯಲ್ಲಿ 5 ತಾಲ್ಲೂಕುಗಳು ಸೇರಿದಂತೆ ವಿವಿದ ಬೆಳೆಗಳಿಗೆ 4065 ಕ್ವಿಂಟಾಲ್ ಬಿತ್ತನೆ ಬೀಜ ಬೇಡಿಕೆ ಇದ್ದು, ಈವರೆಗೆ ಇಲಾಖೆಗೆ 3131.50

ಕ್ವಿಂಟಾಲ್ ಬಿತ್ತನೆ ಬೀಜ ಸರಬರಾಜು ಆಗಿರುತ್ತದೆ, ಈ ಪೈಕಿ 2791.70 ಕ್ವಿಂಟಾಲ್ ಬಿತ್ತನೆ ಬೀಜ ವಿತರಣೆಯಾಗಿದ್ದು, 339.80 ಕ್ವಿಂಟಾಲ್ ದಾಸ್ತಾನು ಇರುತ್ತದೆ. ಬಿತ್ತನೆ ಬೀಜಗಳ ಯಾವುದೇ ಕೊರತೆಯಿರುವುದಿಲ್ಲ.

**ರಸಗೊಬ್ಬರ:**

ಜಿಲ್ಲೆಯಲ್ಲಿ 5 ತಾಲ್ಲೂಕುಗಳಿಗೆ ಸೇರಿದಂತೆ ಒಟ್ಟು 27816 ಮೆ. ಟನ್ ರಸಗೊಬ್ಬರ ಬೇಡಿಕೆ ಇದ್ದು, 25313 ಮೆ. ಟನ್ ಸರಬರಾಜು ಆಗಿರುತ್ತದೆ. ಈ ಪೈಕಿ 18806 ಮೆ. ಟನ್ ವಿತರಣೆಯಾಗಿದ್ದು, 6507 ಮೆ.ಟನ್ ದಾಸ್ತಾನು ಇರುತ್ತದೆ. ಕೆ.ಎಸ್.ಸಿ.ಎಂ.ಎಫ್ ನಲ್ಲಿ 1241 ಮೆ. ಟನ್ ಒಳಗೊಂಡಂತೆ ಒಟ್ಟು 7748 ಮೆ. ಟನ್ ನಷ್ಟು ದಾಸ್ತಾನು ಇರುತ್ತದೆ.

**ಜಾನುವಾರು ಮೇವು:** ಜಿಲ್ಲೆಯಲ್ಲಿ ರೈತರಲ್ಲಿ 169770 ಮೆ. ಟನ್ ನಷ್ಟು ದಾಸ್ತಾನಿದ್ದು, ಇದು ಸುಮಾರು 23 ವಾರಗಳಿಗೆ ಸಾಕಾಗುತ್ತದೆ. ಸದ್ಯಕ್ಕೆ ಕೊರತೆಯಿರುವುದಿಲ್ಲ.

2) **ಕುಡಿಯುವ ನೀರಿನ ಪರಿಸ್ಥಿತಿ:**

ಕುಡಿಯುವ ನೀರು: ಪ್ರಸ್ತುತ ಜಿಲ್ಲೆಯಲ್ಲಿ 12 ಗ್ರಾಮಗಳಲ್ಲಿ ಖಾಸಗಿ ಟ್ಯಾಂಕರ್ ಮೂಲಕ 33 ಟ್ರಿಪ್ಪುಗಳಲ್ಲಿ ಮತ್ತು 65 ಗ್ರಾಮಗಳಲ್ಲಿ ಖಾಸಗಿ ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಅದೇ ರೀತಿ ನಗರ / ಪಟ್ಟಣ ಪ್ರದೇಶಗಳ 28 ವಾರ್ಡುಗಳಲ್ಲಿ ಖಾಸಗಿ ಟ್ಯಾಂಕರ್‌ಗಳ ಮೂಲಕ ಪ್ರತಿ ದಿನ 124 ಟ್ರಿಪ್ಪುಗಳಲ್ಲಿ ಕುಡಿಯುವ ನೀರನ್ನು ಸಾಗಾಣಿಕೆ ಮಾಡಲಾಗುತ್ತಿದೆ.

2019-20ನೇ ಸಾಲಿನಲ್ಲಿ ಸಿಆರ್‌ಎಫ್‌ನಿಂದ ರೂ. 293.361 ಲಕ್ಷಗಳನ್ನು ಖಾಸಗಿ ಟ್ಯಾಂಕರ್ ಹಾಗೂ ಕೊಳವೆ ಬಾವಿಗಳ ಮೂಲಕ ನೀರು ಸರಬರಾಜು ಮಾಡಿರುವ ಬಾಕಿ ವೆಚ್ಚಗಳನ್ನು ಪಾವತಿಸಲು ಹಾಗೂ ರೂ. 1487.16 ಲಕ್ಷಗಳಲ್ಲಿ 110 ಕುಡಿಯುವ ನೀರಿನ

ಕಾಮಗಾರಿಗಳನ್ನು ಕೈಗೊಳ್ಳಲು ಸಿ.ಆರ್. ಎಫ್ ನಿಂದ ಅನುಮೋದನೆ ನೀಡಿ ಸಂಬಂಧಿಸಿದ ಅನುಷ್ಠಾನಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.

ಸಿ.ಆರ್.ಎಫ್ – 2019-20ನೇ ಸಾಲಿನಲ್ಲಿ ರೂ. 1367.19 ಲಕ್ಷಗಳು ಲಭ್ಯವಿದ್ದು ಕುಡಿಯುವ ನೀರಿನ ವ್ಯವಸ್ಥೆಗಾಗಿ ರೂ. 441.526 ಲಕ್ಷಗಳನ್ನು ಹಾಗೂ ಜಾನುವಾರು ಮೇವು ಮತ್ತು ಸಂರಕ್ಷಣೆಗಾಗಿ ರೂ. 56.27 ಲಕ್ಷಗಳನ್ನು ಮತ್ತು ಮಳೆ ಹಾನಿ ಪರಿಹಾರಕ್ಕೆ ರೂ. 317.48 ಲಕ್ಷ ವೆಚ್ಚ ಮಾಡಲಾಗಿದ್ದು, ರೂ. 551.91 ಲಕ್ಷಗಳ ಅನುದಾನವು ಬಾಕಿ ಲಭ್ಯವಿರುತ್ತದೆ.

ಕೋಲಾರದ ಪಟ್ಟಣ ಪ್ರದೇಶಗಳಿಗೆ ಇನ್ನು ಕೆಲವೇ ದಿನಗಳಲ್ಲಿ ಅಂದರೆ ಮೂರು ತಿಂಗಳೊಳಗಾಗಿ ಹೊಸ ಬೋರ್‌ವೆಲ್‌ಗಳ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡಲಾಗುವುದೆಂದು ತಿಳಿಸಲಾಯಿತು.

**3. ಮಹಾತ್ಮಾಗಾಂಧಿ ನರೇಗಾ ಯೋಜನೆಯ ಪ್ರಗತಿ** :

ಪ್ರಸ್ತುತ ನರೇಗಾ ಯೋಜನೆಯಡಿ 206092 ಕೂಲಿ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು, 2019-20ನೇ ಸಾಲಿನಲ್ಲಿ 50 ಲಕ್ಷಗಳ ಮಾನವ ದಿನಗಳ ಸೃಜನೆಯ ವಾರ್ಷಿಕ ಗುರಿಯನ್ನು ಹೊಂದಿದ್ದಾರೆ. 201-20ನೇ ಸಾಲಿನಲ್ಲಿ ಕೂಲಿ - 8839.52 ಲಕ್ಷ, ಸಾಮಗ್ರಿ – 7337 ಲಕ್ಷಗಳು ಒಟ್ಟು – 16188.90 ಲಕ್ಷಗಳು ಕೂಲಿ ಮತ್ತು ಸಾಮಗ್ರಿಗಾಗಿ ವೆಚ್ಚಮಾಡಲಾಗಿರುತ್ತದೆ. 2019-20ರ ಸಾಲಿನ ಕೂಲಿ ಮತ್ತು ಸಾಮಗ್ರಿಗಾಗಿ ಒಟ್ಟು 3347.53 ಲಕ್ಷಗಳ ಪಾವತಿಗೆ ಬಾಕಿ ಉಳಿಸಿರುತ್ತಾರೆ.

**4. ಸ್ವಚ್ಛ ಭಾರತ ಮಿಷನ್**:

ಶಾಲಾ ಶೌಚಾಲಯಗಳಿಗೆ ಸಂಬಂಧಿಸಿದಂತೆ ಒಟ್ಟು 112 ಗುರಿ ಇದ್ದು, ಇದುವರೆಗೂ ಒಟ್ಟು 42 ಶೌಚಾಲಯಗಳು ಪೂರ್ಣಗೊಂಡಿದ್ದು, 68 ಶೌಚಾಲಯಗಳು ಪ್ರಗತಿಯಲ್ಲಿದ್ದು ಇನ್ನು 2 ಶೌಚಾಲಯಗಳು ಪ್ರಾರಂಭಿಸಬೇಕಾಗಿದೆ.

ಅಂಗನವಾಡಿ ಶೌಚಾಲಯಗಳಿಗೆ ಸಂಬಂಧಿಸಿದಂತೆ, ಒಟ್ಟು 248 ಹೊಸ ಶೌಚಾಲಯಗಳ ನಿರ್ಮಾಣದ ಗುರಿ ಇದ್ದು, ಒಟ್ಟು 99 ಶೌಚಾಲಯಗಳು ಪೂರ್ಣಗೊಂಡಿದ್ದು, 92 ಪ್ರಗತಿಯಲ್ಲಿದ್ದು, 57 ಶೌಚಾಲಯಗಳು ಪ್ರಾರಂಭಿಸಬೇಕಾಗಿದೆ.

ಅಂಗನವಾಡಿ ಶೌಚಾಲಯಗಳ ದುರಸ್ಥಿಗೆ ಸಂಬಂಧಿಸಿದಂತೆ, ಒಟ್ಟು 134 ಶೌಚಾಲಯಗಳ ದುರಸ್ಥಿ ಗುರಿ ಹೊಂದಿದ್ದು, 83 ದುರಸ್ತಿಕಾರ್ಯ ಪೂರ್ಣಗೊಂಡಿದ್ದು, 31 ಪ್ರಗತಿಯಲ್ಲಿದ್ದು, 20 ದುರಸ್ತಿ ಕಾಮಗಾರಿ ಕೈಗೊಳ್ಳಬೇಕಾಗಿದೆ.

ಮುಂದಿನ ತಿಂಗಳೊಳಗಾಗಿ ಪ್ರಾರಂಭಿಸದೇ ಇರುವ ಎಲ್ಲಾ ಶೌಚಾಲಯಗಳನ್ನು ಕೂಡಲೇ ಪ್ರಾರಂಭಿಸಬೇಕು. ಈ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ತಹಶೀಲ್ದಾರುಗಳು ಶೌಚಾಲಯ ಕಟ್ಟಿಸಲು ಬೇಕಿರುವ ಜಾಗದ ಸಮಸ್ಯೆಯನ್ನು ಬಗೆಹರಿಸುವಂತೆ ಸೂಚಿಸಲಾಯಿತು.

**5. ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ:**

ಇದರಲ್ಲಿ ಇನ್ನೂ ಹೆಚ್ಚಿನ ಒಕ್ಕೂಟಗಳ ರಚನೆ ಆಗಬೇಕು ಹಾಗೂ ತರಬೇತಿಗಳನ್ನು ಇನ್ನೂ ಹೆಚ್ಚಾಗಿ ಕೈಗೊಳ್ಳುವಂತೆ ಸೂಚಿಸಲಾಯಿತು.

**6. ವಸತಿ:**

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಗ್ರಾಮ ಲೆಕ್ಕಿಗರು ಆಪ್ ಮೂಲಕ ಜಂಟಿಯಾಗಿ ನಮೂದು ಮಾಡುವುದನ್ನು ಆದಷ್ಟು ಬೇಕ ಪೂರ್ಣಗೊಳಿಸಬೇಕೆಂದು ತಿಳಿಸಲಾಯಿತು.

**7. ಕೆಎಲ್‌ಎಲ್‌ಎಡಿಎಸ್ ಕಾರ್ಯದ ಪರಿಶೀಲನೆ:**

ಶೇಕಡಾವಾರು ಪ್ರಗತಿಯಲ್ಲಿ ಕೋಲಾರ ಜಿಲ್ಲೆಯು ರಾಜ್ಯದಲ್ಲಿ ಮೂರನೇ ಸ್ಥಾನದಲ್ಲಿದೆ.

**8. ಆಹಾರ ಮತ್ತು ನಾಗರಿಕ ಸರಬರಾಜು**

ಕೋಲಾರ ಜಿಲ್ಲೆಯು ಜಿಲ್ಲಾವಾರು ಪಡಿತರ ವಿತರಣೆಯಲ್ಲಿ ಮೊದಲನೇ ಸ್ಥಾನದಲ್ಲಿದೆ.

ಆಧ್ಯತೆಯ ಮನೆಯ ಪಡಿತರ ಕಾರ್ಡ್ ಪ್ರಗತಿಯಲ್ಲಿ ಕೋಲಾರವು ಜಿಲ್ಲೆಯು ಮೂರನೇ ಸ್ಥಾನದಲ್ಲಿದೆ. ಆಧ್ಯತೆಯಲ್ಲದ ಮನೆಯ ಪಡಿತರ ಕಾರ್ಡ್ ಪ್ರಗತಿಯಲ್ಲಿ ಕೋಲಾರವು ಜಿಲ್ಲೆಯು ಎರಡನೇ ಸ್ಥಾನದಲ್ಲಿದೆ.

**೦. ಸಕಾಲ**

ಬಾಕಿ ಇರುವ ಸಕಾಲ ಅರ್ಜಿಗಳನ್ನು ಡಿಸೆಂಬರ್ 31ರ ಒಳಗಾಗಿ ಪೂರ್ಣಗೊಳಿಸಲು ಆದೇಶಿಸಲಾಗಿದೆ

**10 ಎಸ್‌ಸಿಪಿ / ಟಿಎಸ್‌ಪಿ:**

ಇದು ಕೂಡ ಆದಷ್ಟು ಬೇಗ ಯಾವುದೇ ವಿಳಂಬವಾಗದಂತೆ ಪೂರ್ಣಗೊಳಿಸಲು ತಿಳಿಸಲಾಯಿತು.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ.

ನಮೂನೆ

| ಕ್ರ.ಸಂ | ಅಂಶಗಳು | ವಿವರಗಳು |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಬೆಳಗಾವಿ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ ಬೆಂಗಳೂರು |
| 3 | ಪ್ರವಾಸ ಕೈಗೊಂಡ ದಿನಾಂಕ | 18.12.2019 |
| A) | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | ವಸತಿ ಯೋಜನೆ, ನರೇಗಾ ಯೋಜನೆ, ಕುಡಿಯುವ ನೀರು ಸರಬರಾಜು ಯೋಜನೆ, ನೈರ್ಮಲ್ಯ ಯೋಜನೆ, ಸ್ಮಾರ್ಟ್ ಸಿಟಿ, ಅಮೃತ್, ಐಸಿಡಿಎಸ್, ಭಾಗ್ಯಲಕ್ಷ್ಮಿ ಮುಂತಾದ ಯೋಜನೆಗಳ ಪ್ರಗತಿ ಪರಿಶೀಲಿಸಲಾಯಿತು. ಅದರಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ. |
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | 1. "ಬಿ" ವರ್ಗದ ಹಾನಿಗೊಳಗಾದ ಮನೆಗಳಿಗೆ ನಾಲ್ಕು ಹಂತಗಳಲ್ಲಿ ಜಿ.ಪಿ.ಎಸ್ ಛಾಯಾಚಿತ್ರಗಳನ್ನು ಅಪ್‌ಲೋಡ್ ಮಾಡುವ ಪ್ರಕ್ರಿಯೆಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡುವುದು ಅವಶ್ಯವಿರುತ್ತದೆ.<br>2. ಭೂಸ್ವಾಧೀನಕ್ಕೆ ಒಳಪಟ್ಟು ಎಲ್ಲ ಪರಿಹಾರ ಪಡೆದುಕೊಂಡು ಅದೇ ಸ್ಥಳದಲ್ಲಿ ಜನರು ವಾಸಿಸುತ್ತಿರುವ ಹಾನಿಗೊಳಗಾದ ಮನೆಗಳಿಗೆ ಪರಿಹಾರ ನೀಡುವ ಕುರಿತು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಸೂಕ್ತ ಆದೇಶ ಹೊರಡಿಸಬಹುದಾಗಿದೆ. |
| b) | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | ಈಗಾಗಲೇ ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 43174 ಮನೆಗಳಿಗೆ ರೂ. 298.85 ಕೋಟಿ ಪರಿಹಾರ ಧನವು ಬಿಡುಗಡೆಯಾಗಿರುತ್ತದೆ. ಆದರೆ ಇನ್ನೂ ಕೆಲವು ಪ್ರಕರಣಗಳಲ್ಲಿ , ತಹಶೀಲ್ದಾರರು ಆಡಿಟ್ ಮಾಡಲು ಒಟ್ಟು 167 ಪ್ರಕರಣಗಳು, ಜಿ.ಪಿ.ಎಸ್ 195 ಪ್ರಕರಣಗಳು, A & B Certification 93 ಪ್ರಕರಣಗಳಲ್ಲಿ ಒಟ್ಟು ಬಾಕಿಯಿದ್ದು ಅವುಗಳನ್ನು ಬೇಗನೆ ನಿಯಮಾನುಸುರ ಕ್ರಮಕೈಗೊಂಡು ಅರ್ಹ ಫಲಾನುಭವಿಗಳಿಗೆ ಪರಿಹಾರಧನ ವಿತರಣೆ-ಯಾಗುವಂತೆ ಕ್ರಮಕೈಗೊಳ್ಳಲು ನಿರ್ದೇಶನ ನೀಡಿದರು. |
| B) | ಕ್ಷೇತ್ರ ವೀಕ್ಷಣೆ | ಕ್ಷೇತ್ರ ವೀಕ್ಷಣೆ ಮಾಡಿದ ಬಗ್ಗೆ ವಿವರವನ್ನು ಅನುಬಂಧ-1 ರಲ್ಲಿ ತಯರಿಸಿ ಲಗತ್ತಿಸಿದೆ. |
ಮುಂದುವರೆದು 2017 ನೇ ಸಾಲಿನಲ್ಲಿ ರಾಮಾಪುರ ಗ್ರಾಮದಲ್ಲಿ ರೈತ ಸಂಪರ್ಕ ಕೇಂದ್ರ ಕಟ್ಟಡ ಕಾಮಗಾರಿಯ ಅನುಷ್ಠಾನಗೊಳಿಸಿದ್ದು, ಸದರಿ ಕಟ್ಟಡ ನಿರ್ಮಾಣವನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆ ರವರಿಂದ ರೂ 50 ಲಕ್ಷ ಅಂದಾಜು ವೆಚ್ಚಕ್ಕೆ ಅನುಮೋದನೆಯಾಗಿ ಕೇಂದ್ರ ಕಛೇರಿಯಿಂದ ಅನುದಾನವನ್ನು ನೇರವಾಗಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಬಿಡುಗಡೆಯಾಗಿರುತ್ತದೆ ಹಾಗೂ ನಿವೇಶನವನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆ, ಚಾಮರಾಜನಗರ ರವರಿಗೆ ಹಸ್ತಾಂತರಿಸಲಾಗಿದ್ದು, ಈ ಕಾಮಗಾರಿಯನ್ನು ಮಾರ್ಚ್ 2020 ಕ್ಕೆ ಪೂರ್ಣಗೊಳಿಸಲಾಗುವುದು ಎಂದು ಕಾರ್ಯಪಾಲಕ ಅಭಿಯಂತರರು ಗ್ರಾಮೀಣ ಪಂಚಾಯತ್ ರಾಜ್ ಮತ್ತು ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ ರವರು ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಹನೂರು ತಾಲ್ಲೂಕಿನ ರಾಮಾಪುರ ಗ್ರಾಮದಲ್ಲಿ ರೈತ ಸಂಪರ್ಕ ಕೇಂದ್ರ ಕಟ್ಟಡ ಕಾಮಗಾರಿಯ ಕುರಿತು ಹಂತ ಹಂತದ ಮಾಹಿತಿಯನ್ನು ಫೋಟೋ ತೆಗೆದು

ನೀಡುವಂತೆ ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಚಾಮರಾಜನಗರ ರವರು ಸೂಚಿಸಿ, ಸದರಿ ಕಾಮಗಾರಿಯನ್ನು ಆದ್ಯತೆಯ ಮೇರೆಗೆ ಶೀಘ್ರವಾಗಿ ಪೂರ್ಣಗೊಳಿಸುವಂತೆ ಸೂಚಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಚಾಮರಾಜನಗರ ಹಾಗೂ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಪಂಚಾಯತ್ ರಾಜ್ ಮತ್ತು ಇಂಜನಿಯರಿಂಗ್ ವಿಭಾಗ, ಚಾಮರಾಜನಗರ)**

➢ **<u>ಬೆಳೆ ಸಮೀಕ್ಷೆ :</u>**

ಬೆಳೆ ಸರ್ವೆಯಲ್ಲಿ ಕಂದಾಯ ಇಲಾಖೆಯ ಪ್ರಗತಿ ಕಡಿಮೆಯಿದ್ದು, ಬೆಳೆ ಸಮೀಕ್ಷೆಯ ಪ್ರಗತಿ ಪರಿಶೀಲನೆ ಕುರಿತು ಹಲವಾರು ಬಾರಿ ವಿಡಿಯೋ ಕಾನ್ಫರೆನ್ಸ್ ನಡೆಸಿದ್ದರೂ ಸಹ ಬೆಳೆ ಸರ್ವೆಕಾರ್ಯ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಬೆಳೆ ಸರ್ವೆ ಕಾರ್ಯದ ಕುರಿತು ಸುಮಾರು 23 ಗ್ರಾಮ ಲೆಕ್ಕಾಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಚರ್ಚಿಸಲಾಗಿದ್ದು, ಗ್ರಾಮ ಲೆಕ್ಕಾಧಿಕರಿಗಳಿಗೆ ಬೆಳೆ ಸಮೀಕ್ಷೆಯಲ್ಲಿನ ಕುರಿತು ಸರಿಯಾದ ಮಾಹಿತಿ ಇಲ್ಲದಿರುವುದನ್ನು ಕೇಳಿ ವಿಷಾದ ವ್ಯಕ್ತಪಡಿಸಿದರು. ಆದ್ದರಿಂದ ಬೆಳೆ ಸಮೀಕ್ಷೆಯ ಕಾರ್ಯ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬೆಳೆ ಸರ್ವೆ ಕಾರ್ಯ ತ್ವರಿತ ಗತಿಯಲ್ಲಿ ಪ್ರಗತಿಯನ್ನು ಸಾಧಿಸಲು ಕ್ರಮವಹಿಸಬೇಕು. ಉಪವಿಭಾಗಾಧಿಕಾರಿಗಳು, ಕೊಳ್ಳೇಗಾಲ ಉಪವಿಭಾಗ, ಎಲ್ಲಾ ತಹಶೀಲ್ದಾರ್, ಗ್ರಾಮ ಲೆಕ್ಕಾಧಿಕಾರಿಗಳಿಗೆ ಹಾಗೂ ಬೆಳೆ ಸರ್ವೆ ಪ್ರಗತಿ ಕುಂಟಿತಗೊಂಡಿರುವ ಗ್ರಾಮಗಳ ಸರ್ವೈಯರ್ (PR'S) ರವರಿಗೆ ಬೆಳೆ ಸರ್ವೆ ಕಾರ್ಯದ ಕುರಿತು ಒಂದು ಕಾರ್ಯಾಗಾರವನ್ನು ಏರ್ಪಡಿಸಿ ತರಬೇತಿಯನ್ನು ನೀಡಲು ಸೂಕ್ತ ಕ್ರಮವಹಿಸಬೇಕೆಂದು ಜಂಟಿ ನಿರ್ದೇಶಕರು, ಕೃಷಿ ಇಲಾಖೆ ಚಾಮರಾಜನಗರ ರವರಿಗೆ ಸೂಚಿಸುತ್ತಾ, ಬೆಳೆ ಸಮೀಕ್ಷೆ ಮೇಲ್ವಿಚಾರಕರಿಗೆ ಆಯಾ ದಿನದಂದೇ ಸಮೀಕ್ಷೆ ಮಾಡಿದ ತಾಕುಗಳನ್ನು ಪರಿಶೀಲನೆ ಮಾಡಬೇಕೆಂದು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

ಮುಂದುವರೆದು, ಪಿಎಂ. ಕಿಸಾನ್ ಯೋಜನೆಯಡಿ ಪ್ರಸ್ತುತ ಅರಣ್ಯ ಪ್ರದೇಶದಲ್ಲಿ ವಾಸವಿರುವ ಕೃಷಿ ಜಮೀನು ಹೊಂದಿದ (ಖಾತೆದಾರ) ರೈತರು ಈ ಯೋಜನೆಯ ಸೌಲಭ್ಯವನ್ನು ಪಡೆಯಲು ಅವಕಾಶ ಕಲ್ಪಿಸ ಬೇಕಾಗಿದ್ದು, ಅರಣ್ಯ ಇಲಾಖೆಯ ಅಧಿಕಾರಿಗಳು ಇಂತಹ ಗ್ರಾಮಗಳಲ್ಲಿ ವಾಸಿಸುವ ರೈತರಿಂದ ನಿಗಧಿತ ನಮೂನೆಯಲ್ಲಿ ರೈತರ ಸ್ವಯಂ ಘೋಷಣಾ ಪತ್ರಗಳನ್ನು ಸ್ವೀಕರಿಸಿ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ನೀಡುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

**(ಕ್ರಮ: ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ನಿರ್ದೇಶಕರು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ, ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ನಿರ್ದೇಶಕರು ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಅಪರ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ, ಉಪವಿಭಾಗಾಧಿಕಾರಿ, ಕೊಳ್ಳೇಗಾಲ ಉಪವಿಭಾಗ, ಕೊಳ್ಳೇಗಾಲ, ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಚಾಮರಾಜನಗರ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಲೈಮಹದೇಶ್ವರ ವನ್ಯ ಜೀವಿ ವಿಭಾಗ, ಹನೂರು, ಉಪ ಅರಣ್ಯ ಸಮರಕ್ಷನಾಧಿಕಾರಿಗಳು, ಕಾವೇರಿ ವನ್ಯ ಜೀವಿ ವಿಭಾಗ ಹನೂರು, ತಹಶೀಲ್ದಾರ್, ಚಾಮರಾಜನಗರ/ ಗುಂಡ್ಲುಪೇಟೆ/ ಯಳಂದೂರು/ ಕೊಳ್ಳೇಗಾಲ/ ಹನೂರುತಾಲ್ಲೂಕು, ಸಹಾಯಕ ಕೃಷಿ ನಿರ್ದೇಶಕರು ಚಾಮರಾಜನಗರ/ಗುಂಡ್ಲುಪೇಟೆ/ಯಳಂದೂರು/ಕೊಳ್ಳೇಗಾಲ/ಹನೂರು ತಾಲ್ಲೂಕು)**

➢ **<u>ಲೀಡ್ ಬ್ಯಾಂಕ್ :</u>**

ಚಾಮರಾಜನಗರ ಜಿಲ್ಲೆಯಲ್ಲಿ 1,11,048 ರೈತರು ಪಿ.ಎಂ ಕಿಸಾನ್ ಯೋಜನೆಯಡಿ ಘೋಷಣೆ ಮಾಡಿಕೊಂಡಿದ್ದು, ಅದರಲ್ಲಿ 97,886 ರೈತ ಫಲಾನುಭವಿಗಳಿಗೆ ಈಗಾಗಲೇ ಪಿ.ಎಂ ಕಿಸಾನ್ ಯೋಜನೆಯಡಿ ಆರ್ಥಿಕ ಸೌಲಭ್ಯ ನೀಡಲಾಗಿದ್ದು, ಉಳಿದಂತೆ 13162 ರೈತ ಫಲಾನುಭವಿಗಳು ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಹಾಗೂ ಎನ್.ಪಿ.ಸಿ.ಐ (ಭಾರತೀಯ ರಾಷ್ಟ್ರೀಯ ಪಾವತಿಗಳ ನಿಗಮ) ಖಾತೆಗೆ ಜೋಡಣೆ

ಮಾಡಿಸದೇ ಇರುವುದರಿಂದ ಪಿ.ಎಂ ಕಿಸಾನ್ ಹಣ ರೈತ ಫಲಾನುಭವುಗಳಿಗೆ ತಲುಪಿರುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಗ್ರಾಮವಾರು, ಬ್ಯಾಂಕ್‌ವಾರು ರೈತರ ಡಾಟಾವನ್ನು ಕೇಂದ್ರ ಕೃಷಿ ಕಛೇರಿಯಿಂದ ಪಡೆದು ಆರ್ಥಿಕ ಸೌಲಭ್ಯಗಳನ್ನು ಪಡೆಯದ ಫಲಾನುಭವಿಗಳನ್ನು ಗುರುತಿಸಿ, ಅವರ ಖಾತೆಗೆ ಹಣವನ್ನು ಜಮಾ ಮಾಡುವ ಕುರಿತು ಸೂಕ್ತ ಕ್ರಮವಹಿಸಿ, ಅರಣ್ಯ ಪ್ರದೇಶದಲ್ಲಿನ ಪಟ್ಟಾ ಭೂಮಿ ಮತ್ತು ಅರಣ್ಯ ಹಕ್ಕು ಪತ್ರ ಹೊಂದಿರುವ ಗಿರಿಜನ ರೈತರುಗಳು ಪಿ.ಎಂ ಕಿಸಾನ್ ಯೋಜನೆಯ ಸವಲತ್ತುಗಳನ್ನು ಪಡೆಯಲು ಸದರಿ ಪ್ರದೇಶದಲ್ಲಿ ಬರುವ ಬ್ಯಾಂಕ್‌ನಲ್ಲಿ ಆಧಾರ್ ಕಾರ್ಡ್ ಅನ್ನು ಜೋಡಣೆಗೊಳಿಸುವ ಸಂಬಂಧ special drive ನಡೆಸಲು ಪ್ರಥಮ ಆದ್ಯತೆಯ ಮೇರೆಗೆ ಅಗತ್ಯ ಕ್ರಮವಹಿಸುವಂತೆ ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಚಾಮರಾಜನಗರ ಹಾಗೂ ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಚಾಮರಾಜನಗರ ರವರಿಗೆ ಸೂಚಿಸಿದರು.

ಮುಂದುವರೆದು ಪಿ.ಎಂ. ಕಿಸಾನ್ ಯೋಜನೆಯಡಿ ಈಗಾಗಲೇ ಘೋಷಣೆ ಮಾಡಿಕೊಂಡಿರುವ ರೈತ ಫಲಾನುಭವಿಗಳ ಪಟ್ಟಿಯನ್ನು ಹಾಗೂ ಘೋಷಣೆ ಮಾಡಿಕೊಂಡಿರದ ರೈತರ ಪಟ್ಟಿಯನ್ನು ರೈತ ಸಂಪರ್ಕ ಕೇಂದ್ರ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಪ್ರದರ್ಶಿಸಬೇಕೆಂದು ಈ ಮೂಲಕ ಇನ್ನೂ ಹೆಚ್ಚಿನ ರೈತರಿಗೆ ಈ ಯೋಜನೆಯ ಸೌಲಭ್ಯವನ್ನು ಪಡೆಯಲು ಪ್ರಚಾರ ಕೈಗೊಳ್ಳಬೇಕೆಂದು ಸೂಚಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಚಾಮರಾಜನಗರ, ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಚಾಮರಾಜನಗರ, ತಹಶೀಲ್ದಾರ್ ಚಾಮರಾಜನಗರ/ ಯಳಂದೂರು/ ಗುಂಡ್ಲುಪೇಟೆ/ ಕೊಳ್ಳೇಗಾಲ/ ಹನೂರು ತಾಲ್ಲೂಕು, ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಚಾಮರಾಜನಗರ/ ಯಳಂದುರು/ ಗುಂಡ್ಲುಪಟೆ/ಕೊಳ್ಳೇಗಾಲ ತಾಲ್ಲೂಕು)**

- **<u>ಬಹುಗ್ರಾಮಗಳ ಕುಡಿಯುವ ನೀರಿನ ಯೋಜನೆ</u>**

ಚಾಮರಾಜನಗರ ಜಿಲ್ಲೆಯಲ್ಲಿ ಈ ಬಾರಿ ಉತ್ತಮ ಮಳೆಯಾಗಿರುವ ಕಾರಣ ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆ ಇರುವುದಿಲ್ಲ. ಆದ್ದರಿಂದ ಯಾವುದೇ ಹಳ್ಳಿಗಳಲ್ಲಿ ಟ್ಯಾಂಕರ್ ನಿಂದ ನೀರು ಸರಬರಾಜು ಮಾಡುತ್ತಿರುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಚಾಮರಾಜನಗರ ಜಿಲ್ಲೆಯಲ್ಲಿ ಬಹುಗ್ರಾಮಗಳ ಕುಡಿಯುವ ನೀರಿನ ಯೋಜನೆಯು ಪ್ರಮುಖವಾಗಿದ್ದು, ಈ ಕುರಿತು ಮಾಹಿತಿ ನೀಡುವಂತೆ ಸೂಚಿಸಿದರು.

ಮುಂದುವರೆದು, ಚಾಮರಾಜನಗರ ತಾಲ್ಲೂಕಿನಲ್ಲಿ ಒಟ್ಟು 262 ಜನ ವಸತಿ ಗ್ರಾಮಗಳಿದ್ದು, 225 ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಂಡಿರುತ್ತದೆ. ಇದರಲ್ಲಿ ಮಣಜನೂರು ಗ್ರಾಮವನ್ನು ಸಹ ಸೇರಿಸಿ ಕೊಳ್ಳಲಾಗಿರುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 131 ಗ್ರಾಮಗಳಿದ್ದು 02ನೇ ಹಂತದ ಕಾಮಗಾರಿ ಮಾಡಲಾಗುತ್ತಿದೆ. ಯಳಂದೂರು ತಾಲ್ಲೂಕಿನಲ್ಲಿ 42 ಗ್ರಾಮಗಳಿದ್ದು, ಅದರಲ್ಲಿ 91 ಶುದ್ಧ ನೀರಿನ ಘಟಕವನ್ನು ನಿರ್ಮಿಸಲಾಗಿದ್ದು ಅದರಲ್ಲಿ 24 ಶುದ್ಧ ನೀರಿನ ಘಟಕಗಳು ದುರಸ್ಥಿಯ ಸ್ಥಿತಿಯಲ್ಲಿರುತ್ತದೆ ಎಂದು ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರಿನ ಮತ್ತು ನೈರ್ಮಲ್ಯ ವಿಭಾಗ ಚಾಮರಾಜನಗರ ರವರು ಸಭೆಯಲ್ಲಿ ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಬಹು ಗ್ರಾಮಗಳ ಕುಡಿಯುವ ನೀರಿನ ಯೋಜನೆಯ ಬಗ್ಗೆ ಸಮಗ್ರ ವರದಿ ನೀಡುವಂತೆ ಸೂಚಿಸಿ, ಗುತ್ತಿಗೆದಾರರ ಗುತ್ತಿಗೆಯು 05 ವರ್ಷ ಮುಗಿದ ನಂತರ ಯೋಜನೆಗಳು ವಿಫಲವಾಗಿರುವ ಕುರಿತು ಈಗಾಗಲೇ ದೂರುಗಳು ಗಮನಕ್ಕೆ ಬರುತ್ತಿದ್ದು, ಈ ಕುರಿತು ಪರಿಶೀಲಿಸಿ ವರದಿ ನೀಡುವಂತೆ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರಿನ ಮತ್ತು ನೈರ್ಮಲ್ಯ ವಿಭಾಗ ಚಾಮರಾಜನಗರ ರವರಿಗೆ ಸೂಚಿಸಿದರು.

**(ಕ್ರಮ: ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರಿನ ಮತ್ತು ನೈರ್ಮಲ್ಯ ಇಲಾಖೆ ಚಾಮರಾಜನಗರ)**

➢ **ಸಮಾಜ ಕಲ್ಯಾಣ ಇಲಾಖೆ :**

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಇಲಾಖಾವಾರು ಸೌಲಭ್ಯವನ್ನು ಅರ್ಹ ಫಲಾನುಭವಿಗಳಿಗೆ ನೀಡುವಲ್ಲಿ ಕೆಳಗಿನಿಂದ 10 ಇಲಾಖೆಗಳು (bottom 10) ನಿರ್ದಿಷ್ಟ ಗುರಿಯನ್ನು ಸಾಧಿಸಿರುವುದಿಲ್ಲ ಎಂಬುದರ ಬಗ್ಗೆ ಮುಂದಿನ ಸಭೆಯಲ್ಲಿ ಮಾಹಿತಿ ನೀಡುವಂತೆ ಹಾಗೂ ಸದರಿ ಯೋಜನೆಯಡಿ ಇಲಾಖಾವಾರು ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ಆದ್ಯತೆಯ ಮೇರೆಗೆ ನೀಡಲು ಸೂಕ್ತ ಕ್ರಮವಹಿಸಬೇಕೆಂದು ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಚಾಮರಾಜನಗರ ರವರಿಗೆ ಸೂಚಿಸಿದರು

**( ಕ್ರಮ: ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಚಾಮರಾಜನಗರ)**

➢ **ಅಂತರ್ಜಲದ ದುರ್ಬಳಕೆ :**

ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 24 ಅಧ್ಯಯನ ಬಾವಿ/ಕೊಳವೆ ಬಾವಿಗಳಲ್ಲಿ ಅಂತರ್ಜಲ ಮಟ್ಟಗಳನ್ನು ದಾಖಲಿಸಲಾಗುತ್ತಿದ್ದು, ನವೆಂಬರ್–2018 ಮತ್ತು ನವೆಂಬರ್–2019 ರ ಮಾಹೆಯ ಜಿಲ್ಲೆಯ ಒಟ್ಟಾರೆ ಸರಾಸರಿ ಅಂತರ್ಜಲ ಮಟ್ಟವನ್ನು ಹೋಲಿಸಿದಾಗ ಒಟ್ಟು 2.68ಮೀ ಏರಿಕೆ ಕಂಡುಬಂದಿರುತ್ತದೆ.

ಮಾರ್ಚ್–2013ರ ಅಂತ್ಯಕ್ಕೆ ರಾಜ್ಯದ ಅಂತರ್ಜಲ ಸಂಪನ್ಮೂಲ ಮೌಲೀಕರಣದನ್ವಯ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಅಂತರ್ಜಲ ಬಳಕೆಯ ಪ್ರಮಾಣವು 140% ಆಗಿದ್ದು 'ಅತಿಬಳಕೆ' ತಾಲ್ಲೂಕು ಎಂದು ಅಧಿಸೂಚಿಸಲಾಗಿರುತ್ತದೆ.

ಕರ್ನಾಟಕ ಅಂತರ್ಜಲ ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ ಅಧಿನಿಯಮ 2011 ಮತ್ತು 2012 ರ ನಿಯಮಾವಳಿಗಳಂತೆ ಜಿಲ್ಲೆಯ ಅಧಿಸೂಚಿತ ಪ್ರದೇಶವಾದ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ವೈಯಕ್ತಿಕ ಅಥವಾ ಸಮುದಾಯದ (ಸರಕಾರಿ/ನಿಗಮ/ಖಾಸಗಿ) ಬಳಕೆಯ ಯಾವುದೇ ಉದ್ದೇಶಕ್ಕಾಗಿ ಕೊಳವೆಬಾವಿ ಕೊರೆಸಲು/ತೋಡಲು ಇಚ್ಛಿಸಿದಲ್ಲಿ, ಆ ಉದ್ದೇಶಕ್ಕೆ ಕೋರಿ ಜಿಲ್ಲಾ ಅಂತರ್ಜಲ ಸಮಿತಿಗೆ/ಕರ್ನಾಟಕ ಅಂತರ್ಜಲ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ಅನುಮತಿ ಪಡೆದು ಕೊಳವೆಬಾವಿ ಕೊರೆಸತಕ್ಕದ್ದು. ಜಿಲ್ಲೆಯ ಅಧಿಸೂಚಿತ ಮತ್ತು ಅಧಿಸೂಚಿತವಲ್ಲದ ಪ್ರದೇಶಗಳಲ್ಲಿ ಕೈಗಾರಿಕಾ, ವಾಣಿಜ್ಯ, ಮನರಂಜನೆ, Infrastructure, Mining ಉದ್ದೇಶಕ್ಕಾಗಿ ಅಂತರ್ಜಲ ಬಳಸಲು ಅಂತರ್ಜಲ ಪ್ರಾಧಿಕಾರದಿಂದ ಅನುಮತಿ/ನಿರಾಕ್ಷೇಪಣಾ ಪತ್ರವನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಅಂತರ್ಜಲ ಬಳಸಬಹುದಾದ ಪ್ರಮಾಣವು 25000 ltr/day ವರೆಗೆ ಇದ್ದಲ್ಲಿ ಜಿಲ್ಲಾ ಅಂತರ್ಜಲ ಸಮಿತಿಯಿಂದ ಅನುಮತಿ ಪಡೆಯಬಹುದಾಗಿರುತ್ತದೆ. ಒಂದು ವೇಳೆ ಅಂತರ್ಜಲ ಬಳಕೆ ಪ್ರಮಾಣವು 25000 ltr/day ಮೇಲ್ಪಟ್ಟಿದ್ದರೆ ಕರ್ನಾಟಕ ಅಂತರ್ಜಲ ಪ್ರಾಧಿಕಾರ ಬೆಂಗಳೂರಿನಲ್ಲಿ ಅನುಮತಿ ಪಡೆಯಬೇಕಾಗಿರುತ್ತದೆ.

ತತ್ಸಬಂಧ ಜಿಲ್ಲೆಯಲ್ಲಿನ ಅಂತರ್ಜಲ ಆಧಾರಿತ ಕೈಗಾರಿಕಾ ಘಟಕಗಳಿಗೆ ಈಗಾಗಲೇ ನೋಟೀಸ್ ಜಾರಿಗೊಳಿಸಲಾಗಿರುತ್ತದೆ ಹಾಗೂ ಈ ಕುರಿತು ಪತ್ರಿಕಾ ಪ್ರಕಟಣೆಯನ್ನು ಸಹ ಹೊರಡಿಸಲಾಗಿರುತ್ತದೆ.

ಪ್ರಸ್ತುತ ಸಾಲಿನಲ್ಲಿ ಪ್ರಾಧಿಕಾರದಲ್ಲಿ ನೊಂದಣಿಯಾಗದೇ ಜಿಲ್ಲೆಯಲ್ಲಿ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ರಿಗ್ ಯಂತ್ರಗಳಿಗೆ ನಿಯಮಾನುಸಾರ ರೂ.47,000/–ಗಳ ದಂಡ

ವಿಧಿಸಲಾಗಿರುತ್ತದೆ ಹಾಗೂ ಪ್ರಾಧಿಕಾರದಲ್ಲಿ ನೋಂದಣಿಯಾಗದೆ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ರಿಗ್ ಯಂತ್ರಗಳ ವಿರುದ್ಧ ಕಾನೂನು ಕ್ರಮ ಕೈಗೊಂಡು ಜಿಲ್ಲಾ ಅಂತರ್ಜಲ ಪ್ರಾಧಿಕಾರಕ್ಕೆ ಮಾಹಿತಿ ನೀಡಲು ಪೊಲೀಸ್ ಹಾಗೂ ಆರ್.ಟಿ.ಒ ಇಲಾಖೆಗಳಿಗೆ ಈಗಾಗಲೇ ಪತ್ರ ಬರೆಯಲಾಗಿರುತ್ತದೆ.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಚಾಮರಾಜನಗರ ಜಿಲ್ಲೆಯಲ್ಲಿನ ಗುಂಡ್ಲುಪೇಟೆ ತಾಲ್ಲೂಕನ್ನು ಅಕ್ರಮವಾಗಿ ಹೆಚ್ಚಾಗಿ ಕೊಳವೆ ಬಾವಿಗಳನ್ನು ಕೊರೆಯಿಸಲಾಗುತ್ತಿರುವುದರಿಂದ ಈ ತಾಲ್ಲೂಕನ್ನು ಅತಿಯಾಗಿ ಅಂತರ್ಜಲ ವನ್ನು ದುರ್ಬಳಕೆ ಮಾಡಲಾಗುವ ತಾಲ್ಲೂಕೆಂದು (Over exploited) ಎಂದು ಗುರುತಿಸಲಾಗಿರುತ್ತದೆ. ಆದ್ದರಿಂದ ಅಕ್ರಮವಾಗಿ ಕೊಳವೆಬಾವಿಯನ್ನು ಕೊರೆಯಿಸುವವರ ವಿರುದ್ಧ ಹಾಗೂ ಅನಧಿಕೃತ ರಿಗ್‌ಗಳ ವಿರುದ್ಧ ದೂರುಗಳನ್ನು ದಾಖಲಿಸಿ, ಅಕ್ರಮ ಕೊಳವೆ ಬಾವಿಯನ್ನು ಕೊರೆಯಿಸುವುದನ್ನು ತಡೆಗಟ್ಟಲು ಸೂಕ್ತ ಕ್ರಮವಹಿಸಬೇಕೆಂದು ಸೂಚಿಸಿದರು.

**(ಕ್ರಮ: ಪೊಲೀಸ್ ವರಿಷ್ಠಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ, ಪ್ರದೇಶಿಕ ಸಾರಿಗೆ ಅಧಿಕಾರಿಗಳು, ಸಾರಿಗೆ ಇಲಾಖೆ, ಚಾಮರಾಜನಗರ ಜಿಲ್ಲೆ, ಹಾಗೂ ಹಿರಿಯ ಭೂವಿಜ್ಞಾನಿ, ಜಿಲ್ಲಾ ಅಂತರ್ಜಲ ಕಛೇರಿ, ಚಾಮರಾಜನಗರ)**

- **ನೀರಾವರಿ ಇಲಾಖೆ :**

ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ ಕೊಳ್ಳೇಗಾಲ ರವರು ಆಲಂಬೂರು ಏತ ಯೋಜನೆಯು ನಂಜನಗೂಡು, ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕಿನ 20 ಕೆರೆಗಳಿಗೆ ಕುಡಿಯುವ ನೀರಿಗಾಗಿ ಕಬಿನಿ ನದಿಯಿಂದ ಕೆರೆ ತುಂಬಿಸುವ ಯೋಜನೆಯನ್ನು (ಆಲಂಬೂರು ಏತ ಯೋಜನೆಯ 03 ಹಂತಗಳನ್ನು) 2011-12 ನೇ ಸಾಲಿನಲ್ಲಿ ಪ್ರಾರಂಭಿಸಿ 2014-15ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗಿದ್ದು, 2014-15ನೇ ಸಾಲಿನಿಂದ 03 ಹಂತದಲ್ಲಿ ಬರುವ ಕೆರೆಗಳನ್ನು ತುಂಬಿಸಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ಮೊದಲನೇ ಹಂತ ಮತ್ತು ಎರಡನೇ ಹಂತಗಳಲ್ಲಿ ಬರುವ 10 ಕೆರೆಗಳನ್ನು ತುಂಬಿಸಲಾಗಿದ್ದು, ಮೂರನೇ ಹಂತದಲ್ಲಿ ಬರುವ 10 ಕೆರೆಗಳಿಗೆ ನೀರನ್ನು ತುಂಬಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಮುಂದುವರೆದು, ಉತ್ತೂರು ಏತ ಯೋಜನೆಯಲ್ಲಿ (ಆಲಂಬೂರು ಏತ ಯೋಜನೆ 04ನೇ ಹಂತ) ಕುಡಿಯುವ ನೀರಿಗಾಗಿ ಉತ್ತೂರು ಕೆರೆಯಿಂದ ನೀರನ್ನು ಎತ್ತಿ ಗುಂಡ್ಲುಪೇಟೆ ಮತ್ತು ಚಾಮರಾಜನಗರ ತಾಲ್ಲೂಕಿನ 11 ಕೆರೆಗಳಿಗೆ ನೀರನ್ನು ತುಂಬಿಸಲು ಉದ್ದೇಶಿಸಲಾಗಿದ್ದು, ಸದರಿ ಕಾಮಗಾರಿಗೆ 2017-18ನೇ ಸಾಲಿನಲ್ಲಿ ಪ್ರಾರಂಭಿಸಿ ಪಂಪ್ ಹೌಸ್ ಕಾಮಗಾರಿ, ವಿದ್ಯುತ್ ಕಾಮಗಾರಿ ಮತ್ತು ರೈಸಿಂಗ್ ಮೇನ್ ಹಾಗೂ ವಡ್ಡಗೆರೆ ಕೆರಯವರೆಗೆ ಗ್ರ್ಯಾವಿಟಿ ಮೇನ್ ಪಿ.ಎಸ್.ಸಿ ಪೈಪ್‌ಲೈನ್ ಕಾಮಗಾರಿಯು ಪ್ರಗತಿಯಲ್ಲಿದ್ದು, ಸುಮಾರು 1.00 ಕಿ.ಮೀ ಉದ್ದದ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿದ 16.30 ಕಿ.ಮೀ ಮಣ್ಣು ಅಗೆತ (Excavation) ಕಾಮಗಾರಿಯು ಪ್ರಗತಿಯಲ್ಲಿದ್ದು, ಈ ಪ್ರದೇಶದಲ್ಲಿ ಹೆಚ್ಚಿನ ಕಲ್ಲು ಪದರಗಳು (Soft &Hard Rock) ಇರುವುದರಿಂದ ಪ್ರಗತಿಯು ವಿಳಂಬವಾಗಿದ್ದು, ಪೈಪ್‌ಲೈನ್ ಕಾಮಗಾರಿಯನ್ನು ಮಾರ್ಚ್-2020ರ ಮಾಹೆಯ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು. ಈಗಾಗಲೇ ಉತ್ತೂರು ಕೆರೆಯಿಂದ ವಡ್ಡಗೆರೆ ಕೆರೆಗೆ ನೀರು ತುಂಬಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು, ಪ್ರಸ್ತುತ ವಡ್ಡಗೆರೆ ಕೆರೆಯು ಶೇಕಡಾ40 ರಷ್ಟು ತುಂಬಿದ್ದು, ವಡ್ಡಗೆರೆ ಕೆರೆಯು ತುಂಬಿದ ನಂತರ ಉಳಿದ ಕೆರೆಗಳಿಗೂ ಸಹ ನೀರನ್ನು ತುಂಬಿಸಲಾಗುವುದು ಹಾಗೂ ಸದರಿ ಪೈಪ್‌ಲೈನ್ ಕಾಮಗಾರಿಯು ಪ್ರಗತಿಯಲ್ಲಿರುವ ಉಳಿದ 03 ಕೆರೆಗಳಿಗೆ 17 ಕಿ..ಮೀ ಪೈಪ್ ಲೈನ್ ಕಾಮಗಾರಿಯನ್ನು ಪೂರ್ಣಗೊಳಿಸಿ ನೀರನ್ನು ಹರಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ ಕೊಳ್ಳೇಗಾಲ ರವರು ಗಾಂಧಿಗ್ರಾಮ ಏತ ಯೋಜನೆಯಡಿ ನಂಜನಗೂಡು ತಾಲ್ಲೂಕಿನ 12 ಕೆರೆಗಳಿಗೆ ಕುಡಿಯುವ ನೀರಿಗಾಗಿ ಕಬಿನಿ ನದಿಯಿಂದ ಕೆರೆ ತುಂಬಿಸುವ ಯೋಜನೆಯನ್ನು ಚಾಲನೆಗೊಳಿಸಲಾಗಿರುತ್ತದೆ. ಪ್ರಸ್ತುತ ಮೊದಲನೇ ಹಂತದಲ್ಲಿ ಬರುವ 07 ಕೆರೆಗಳಿಗೆ ನೀರನ್ನು ತುಂಬಿಸಲಾಗಿದ್ದು, ಎರಡನೇ ಹಂತದ ಪಂಪ್ ಹೌಸ್, ವಿದ್ಯುತ್ ಲೈನ್ ಮತ್ತು

ಪೈಪ್ ಲೈನ್ ಕಾಮಗಾರಿಯು ಪೂರ್ಣಗೊಂಡಿದ್ದು, ಬ್ರೇಕರ್ ಅಳವಡಿಸುವ ಕಾಮಗಾರಿ ಮಾತ್ರ ಬಾಕಿ ಇರುತ್ತದೆ. ಈಗಾಗಲೇ ಬೇಗೂರು ಸ್ಟೇಷನ್ ಓವರ್ ಲೋಡ್ ಆಗಿರುವುದರಿಂದ ಹೊಸದಾಗಿ ಸ್ಟೇಷನ್ ಮಾಡಿದ ನಂತರ ಬ್ರೇಕರ್ ಅಳವಡಿಸಲು ಅನುಮತಿಸಲಾಗುವುದೆಂದು ತಿಳಿಸಿದ್ದು, ಈಗಾಗಲೇ ಕಾರ್ಯಪಾಲಕ ಅಭಿಯಂತರರು, ಚೆಸ್ಕಾಂ ವಿಭಾಗ ರವರು ಹಾಲಿ ಇರುವ ಬೇಗೂರು ಸ್ಟೇಷನ್‌ನಲ್ಲಿ ಬ್ರೇಕರ್ ಅಳವಡಿಸಲು ಅನುಮತಿಸಲಾಗುವುದೆಂದೂ ಹಾಗೂ ಚೆಸ್ಕಾಂ, ಕಾರ್ಯಪಾಲಕ ಅಭಿಯಂತರರ ಜೊತೆಗೂಡಿ ಆದಷ್ಟು ಬೇಗ ಬ್ರೇಕರ್ ಅಳವಡಿಸಿ ವಿದ್ಯುತ್ ಸಂಪರ್ಕ ಪಡೆದುಕೊಂಡು ಎರಡನೇ ಹಂತದ ಯೋಜನೆಯನ್ನು ಚಾಲನೆಗೊಳಿಸಿ, ಉಳಿದ ಕೆರೆಗಳನ್ನು ತುಂಬಿಸಲು ಕ್ರಮವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಮುಂದುವರೆದು, ಸುತ್ತೂರು ಏತ ಯೋಜನೆಯಡಿ ನಂಜನಗೂಡು, ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕಿನ 24 ಕೆರೆಗಳಿಗೆ ಕುಡಿಯುವ ನೀರಿಗಾಗಿ ಕಬಿನಿ ನದಿಯಿಂದ ಕೆರೆ ತುಂಬಿಸುವ ಯೋಜನೆಯು ಪ್ರಗತಿಯಲ್ಲಿದ್ದು, ಮೊದಲನೇ ಹಂತದ ಮತ್ತು ಎರಡನೇ ಹಂತದ ಪಂಪ್ ಹೌಸ್ ಮತ್ತು ಪೈಪ್‌ಲೈನ್ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಕ್ರಮಕೈಗೊಳ್ಳಲಾಗುತ್ತಿದ್ದು, ಮಾರ್ಚ್ 2020ರ ಮಾಹೆಯ ಅಂತ್ಯಕ್ಕೆ ಕಾಮಗಾರಿಯನ್ನು ಪೂರ್ಣಗೊಳಿಸಿ ಕೆರೆಗಳಿಗೆ ನೀರನ್ನು ಹರಿಸಲು ಚಾಲನೆಗೊಳಿಸಲಾಗುವುದು ಎಂದು ಕಾರ್ಯಪಾಲಕ ಅಭಿಯಂತರರು ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, 03 ಹಂತದಲ್ಲಿ ಪೈಪ್ ಲೈನ್ ಕಾಮಗಾರಿಯನ್ನು ನಿರ್ವಹಿಸುವಂತೆ ಪ್ರತೀ ದಿನ 100 ಮೀ ರಂತೆ 17 ಕಿ.ಮೀ ಕಾಮಗಾರಿಯನ್ನು 15 ದಿನಗಳಲ್ಲಿ ಮುಕ್ತಾಯಗೊಳಿಸುವಂತೆ ಹಾಗೂ ಗಾಂಧಿ ಗ್ರಾಮ ಏತ ಯೋಜನೆಯಡಿಯಲ್ಲಿ ಕೂಡಲೇ ವಿದ್ಯುತ್ ಸಮಸ್ಯೆ ಬಗೆಹರಿಸಲು ಕಾರ್ಯಪಾಲಕ ಅಭಿಯಂತರರು, ಚೆಸ್ಕಾಂ ವಿಭಾಗ, ಚಾಮರಾಜನಗರ ರವರಿಗೆ ಸೂಚಿಸಿದರು.

**(ಕ್ರಮ: ಕಾರ್ಯಪಾಲಕ ಅಭಿಯಂತರರು, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ, ಕಾರ್ಯಪಾಲಕ ಅಭಿಯಂತರರು, ಚೆಸ್ಕಾಂ ವಿಭಾಗ, ಚಾಮರಾಜನಗರ)**

➢ **<u>ಇ–ಆಫೀಸ್</u>** :

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಎಲ್ಲಾ ಜಿಲ್ಲಾ ಮಟ್ಟದ ಕಛೇರಿಯ ಅಧಿಕಾರಿಗಳಿಗೆ ಚಾಮರಾಜನಗರ ಜಿಲ್ಲೆಯಲ್ಲಿ ಜನವರಿ 01–01–2020 ರಿಂದ ಕಡ್ಡಾಯವಾಗಿ ಇ–ಆಫೀಸ್ ಮೂಲಕ ಕಛೇರಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸೂಚಿಸಿದರು.

ಮಾನ್ಯ ಕಾರ್ಯದರ್ಶಿಗಳ ಸೂಚನೆಯ ಮೇರೆಗೆ ಇ–ಆಫೀಸ್ ಅನುಷ್ಠಾನದ ಬಗ್ಗೆ ಜಿಲ್ಲಾ ಸೂಚನಾ ವಿಜ್ಞಾನ ಅಧಿಕಾರಿಗಳು ಸಂಕ್ಷಿಪ್ತವಾಗಿ ವಿವರಣೆಯನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ನೀಡಿದರು.

ಪೊಲೀಸ್ ಇಲಾಖೆ ಮತ್ತು ಅರಣ್ಯ ಇಲಾಖೆಯಲ್ಲಿ ಈಗಾಗಲೇ ಇ–ಆಫೀಸ್ ಅನ್ನು ಅನುಷ್ಠಾನಗೊಳಿಸಲು ಕಛೇರಿ ಸಿಬ್ಬಂದಿ ವರ್ಗದವರಿಗೆ ಲಾಗಿನ್ ಐಡಿಯನ್ನು ತೆರೆಯಲಾಗಿರುತ್ತದೆ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು.

ಈ ಸಂಬಂಧ ಕಛೇರಿ ಸಿಬ್ಬಂದಿ ವರ್ಗದವರಿಗೆ ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ ಡಿಸೆಂಬರ್ 15ನೇ ತಾರೀಖಿನಿಂದ 31–12–2019 ರವರೆಗೆ ಇ–ಆಫೀಸ್ ತಂತ್ರಾಂಶದ ಬಳಕೆಯ ಕುರಿತು ತರಬೇತಿ

ಕಾರ್ಯಗಾರವನ್ನು ಹಮ್ಮಿಕ್ಕೊಳ್ಳಲಾಗಿರುತ್ತದೆ ಎಂದು ಜಿಲ್ಲಾ ಸಕಾಲ ಸಂಯೋಜಕರು ಮಾನ್ಯ ಕಾರ್ಯದರ್ಶಿಗಳ ಗಮನಕ್ಕೆ ತಂದರು.

ಮುಂದುವರೆದು, ಈಗಾಗಲೇ ಜಿಲ್ಲಾಧಿಕಾರಿಗಳ ಕಛೇರಿ, ಉಪವಿಭಾಗಾಧಿಕಾರಿಗಳ ಕಛೇರಿ ಮತ್ತು ಎಲ್ಲಾ ತಾಲ್ಲೂಕು ತಹಶೀಲ್ದಾರ್ ರವರ ಕಛೇರಿಗಳಲ್ಲಿ ಇ-ಆಫೀಸ್ ಮೂಲಕ ಕಛೇರಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳು ಮಾನ್ಯ ಕಾರ್ಯದರ್ಶಿಗಳ ಗಮನಕ್ಕೆ ತಂದರು.

ಮಾನ್ಯ ಕಾರ್ಯದರ್ಶಿಗಳು, ಇ-ಆಫೀಸ್ ಅನುಷ್ಠಾನದ ಕುರಿತು ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಒಂದು ದಿನದ ಕಾರ್ಯಗಾರವನ್ನು ನಡೆಸಿ ತರಬೇತಿ ನೀಡುವಂತೆ ಸೂಚಿಸಿ, ಇದು ಸರ್ಕಾರದ ಪ್ರಮುಖ ವಿಷಯವಾಗಿರುವುದರಿಂದ ಮುಂದಿನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಎಲ್ಲಾ ಜಿಲ್ಲಾ ಮಟ್ಟದ ಕಛೇರಿಗಳಲ್ಲಿ ಇ-ಆಫೀಸ್ ಅನುಷ್ಠಾನಗೊಳಿಸಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಪ್ರಥಮ ವಿಷಯವಾಗಿ ಚರ್ಚಿಸಲಾಗುವುದು. ಈ ಹಿನ್ನೆಲೆಯಲ್ಲಿ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಕಛೇರಿಗಳಲ್ಲಿ ಲಭ್ಯವಿರುವ ಕಂಪ್ಯೂಟರ್/ಸ್ಕ್ಯಾನರ್ ಗಳನ್ನು ಬಳಸಿಕೊಂಡು, ಇ-ಆಫೀಸ್ ಅನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕಡ್ಡಾಯವಾಗಿ ಅಗತ್ಯ ಕ್ರಮವಹಿಸುವಂತೆ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಮುಂದುವರೆದು, ಎಲ್ಲಾ ಜಿಲ್ಲಾ ಮಟ್ಟದ ಕಛೇರಿಗಳಲ್ಲಿ ಇ-ಆಫೀಸ್ ಅನ್ನು ಅನುಷ್ಠಾನಗೊಳಿಸಲು ಲಭ್ಯವಿರುವ ಕಂಪ್ಯೂಟರ್/ಸ್ಕ್ಯಾನರ್‌ಗಳ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಗಳಿಂದ ಮಾಹಿತಿಯನ್ನು ಪಡೆದು, ಕ್ರೋಢೀಕರಿಸಲು ಸಕಾಲ ಸಮಾಲೋಚಕರಿಗೆ ಸೂಚಿಸಿ, ಚಾಮರಾಜನಗರ ಜಿಲ್ಲೆಯ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಇ- ಆಫೀಸ್ ನೋಡಲ್ ಅಧಿಕಾರಿಗಳನ್ನಾಗಿ ಉಪವಿಭಾಗಾಧಿಕಾರಿಗಳು, ಕೊಳ್ಳೇಗಾಲ ಉಪವಿಭಾಗ ರವರನ್ನು ಹಾಗೂ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಸಂಬಂಧಿಸಿದಂತೆ ಉಪ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ್ ರವರನ್ನು ನೋಡಲ್ ಅಧಿಕಾರಿಯರನ್ನಾಗಿ ಹಾಗೂ ಅಪರ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರನ್ನು ಸಂಚಾಲಕರನ್ನಾಗಿ ನೇಮಿಸಲಾಗಿರುವುದರಿಂದ ಇ-ಆಫೀಸ್ ಅನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದರು.

**(ಕ್ರಮ: ಅಪರ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ , ಉಪವಿಭಾಗಾಧಿಕಾರಿಗಳು, ಕೊಳ್ಳೇಗಾಲ ಉಪವಿಭಾಗ, ಕೊಳ್ಳೇಗಾಲ, ಉಪ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ್, ಚಾಮರಾಜನಗರ, ಹಾಗೂ ಜಿಲ್ಲಾ ಸೂಚನಾ ವಿಜ್ಞಾನ ಅಧಿಕಾರಿಗಳು, ಚಾಮರಾಜನಗರ)**

➢ <u>ಸಕಾಲ :</u>

ಚಾಮರಾಜನಗರ ಜಿಲ್ಲೆಯ ಸಕಾಲದಡಿ ನೀಡಲಾಗಿರುವ ಅರ್ಜಿಗಳನ್ನು ನಿರ್ದಿಷ್ಟವಾದ ಸಮಯದಲ್ಲಿ ನಿಯಮಾನುಸಾರ ವಿಲೇವಾರಿಗೊಳಿಸಲು ಸೂಕ್ತ ಕ್ರಮಕೈಗೊಂಡು, ನಾನ್ ಸಕಾಲದಡಿ ಬರುವ ಸಿ.ಎಂ ಜನತಾದರ್ಶನ, ಸಿಪಿಗ್ರಾಮ್ಸ್, ಇ.ಜೆ.ಎಸ್ ಪೋರ್ಟಲ್ ರಲ್ಲಿ ದಾಖಲಾಗಿರುವ ಅರ್ಜಿಗಳ ಪೈಕಿ ಬಾಕಿ ಉಳಿದಿರುವ ಅರ್ಜಿಗಳ ಬಗ್ಗೆ ಮುಂದಿನ ಸಭೆಗಳಲ್ಲಿ ಮಾಹಿತಿ ನೀಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

**(ಕ್ರಮ: ಅಪರ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ , ಚಾಮರಾಜನಗರ, ಜಿಲ್ಲಾ ಸಕಾಲ ಸಮಾಲೋಚಕರು, ಚಾಮರಾಜನಗರ)**

**(ರಾಜೇಂದರ್ ಕುಮಾರ್ ಕಟಾರಿಯಾ)**

ಸರ್ಕಾರದ ಕಾರ್ಯದರ್ಶಿಗಳು,

ಕೃಷಿ ಇಲಾಖೆ ಹಾಗೂ ಚಾಮರಾಜನಗರ ಜಿಲ್ಲಾ

ಉಸ್ತುವಾರಿ ಕಾರ್ಯದರ್ಶಿಗಳು, ಚಾಮರಾಜ ನಗರ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಿನರಲ್ ಕಾರ್ಪೋರೇಷನ್ ಲಿಮಿಟೆಡ್ ಬೆಂಗಳೂರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರವರ ಅಧ್ಯಕ್ಷತೆಯಲ್ಲಿ ದಿನಾಂಕ 17-12-2019 ರಂದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಅತಿವೃಷ್ಟಿ ಹಾಗೂ ಬರ ಪರಿಸ್ಥಿತಿ ಮತ್ತು ಜಿಲ್ಲಾ ಮಟ್ಟದ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.

ಹಾಜರಾತಿ: ಹಾಜರಾತಿ ವಹಿಯಲ್ಲಿ ಇರುವಂತೆ:

ಮಾನ್ಯ ಜಿಲ್ಲಾಧಿಕಾರಿಗಳು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಹಾಸನ ಹಾಜರಿದ್ದ ಎಲ್ಲಾ ಅಧಿಕಾರಿಗಳು / ಸಿಬ್ಬಂದಿಗಳನ್ನು ಸಭೆಗೆ ಸ್ವಾಗತಿಸಿ ಜಿಲ್ಲೆಯಲ್ಲಿ ಅತಿವೃಷ್ಠ ಹಾಗೂ ಬರ ಪರಿಸ್ಥಿತಿ ಹಾಗೂ ಜಿಲ್ಲಾಡಳಿತ ವತಿಯಿಂದ ಕೈಗೊಂಡಿರುವ ಪರಿಹಾರ ಮತ್ತು ಇತರೆ ಕ್ರಮಗಳ ಬಗ್ಗೆ ಮಾಹಿತಿ ನೀಡಿ ಮಾನ್ಯರಲ್ಲಿ ಸಭೆಯನ್ನು ನಡೆಸಿಕೊಡುವಂತೆ ಮನವಿ ಮಾಡಿದರು.

**1. ಕೃಷಿ ಇಲಾಖೆ:**

- ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಹಾಸನ ರವರ ವರದಿಯಂತೆ ಜಿಲ್ಲೆಯಲ್ಲಿ ಜನವರಿ-2019 ರಿಂದ ಡಿಸೆಂಬರ್ 16ನೇ ತಾರೀಖಿನವರೆಗೂ, ಶೇ.37 ರಷ್ಟು ಹೆಚ್ಚು ಮಳೆಯಾಗಿದ್ದು, ಡಿಸೆಂಬರ್-2019ರ ಮಾಹೆಯ ಕಳೆದ 24 ಗಂಟೆಗಳಲ್ಲಿ ಜಿಲ್ಲೆಯಲ್ಲಿ ಶೇ.93 ರಷ್ಟು ಕಡಿಮೆ ಮಳೆಯಾಗಿರುತ್ತದೆ.
- ಕೃಷಿ ಬೆಳೆಗಳ ಬಿತ್ತನೆ ಕುರಿತಂತೆ 2019-20ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಒಟ್ಟು ಎಲ್ಲಾ ಕೃಷಿ ಬೆಳೆಗಳಿಗೆ ಸಂಬಂಧಿಸಿದಂತೆ ಒಟ್ಟು 24,900 ಹೆಕ್ಟೇರ್‌ಗಳಷ್ಟು ಬಿತ್ತನೆ ಗುರಿ ಇದ್ದು, ಈ ಪೈಕಿ ಕೇವಲ 8,518 ಹೆಕ್ಟೇರ್‌ಗಳಷ್ಟು ಪ್ರದೇಶಗಳಲ್ಲಿ ಬಿತ್ತನೆಯಾಗಿರುತ್ತದೆ. ಈ ಪೈಕಿ 2,303 ಹೆಕ್ಟೇರ್ ನೀರಾವರಿ ಪ್ರದೇಶವಾಗಿದ್ದು, 6,215 ಹೆಕ್ಟೇರ್ ಮಳೆಯಾಶ್ರಿತ ಪ್ರದೇಶವಾಗಿರುತ್ತದೆ.
- ರಾಗಿ ಬೆಳೆಯ ಖರೀದಿಗಾಗಿ ಎಲ್ಲಾ ಖರೀದಿ ಕೇಂದ್ರಗಳನ್ನು ಕಾಯ್ದಿರಿಸಲಾಗಿದ್ದು, ಸರ್ಕಾರದಿಂದ ಆದೇಶ ಸ್ವೀಕೃತವಾದ ತಕ್ಷಣ ಖರೀದಿ ಬಗ್ಗೆ ಕ್ರಮವಹಿಸಲಾಗುವುದು ಎಂದು ಉಪನಿರ್ದೇಶಕರು, ಆಹಾರ ಇಲಾಖೆ, ಹಾಸನ ರವರು ಸಭೆಯ ಗಮನಕ್ಕೆ ತಂದರು.
- 2019ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಒಟ್ಟು 1,300 ಕ್ವಿಂಟಾಲ್ ಬಿತ್ತನೆ ಬೀಜಗಳ ಬೇಡಿಕೆ ಇದ್ದು, ರಿಯಾಯಿತಿ ಯೋಜನೆಗಳಡಿ ಈವರೆಗೆ ಒಟ್ಟು 978.21 ಕ್ವಿಂಟಾಲ್ ಬಿತ್ತನೆ ಬೀಜಗಳ ಸರಬರಾಜು ಆಗಿರುತ್ತದೆ. ಈ ಪೈಕಿ 797.085 ಕ್ವಿಂಟಾಲ್ ಬಿತ್ತನೆ ಬೀಜಗಳ ವಿತರಣೆಯನ್ನು ಕೈಗೊಳ್ಳಲಾಗಿರುತ್ತದೆ.
- ಮುಂದುವರೆದು ಜಿಲ್ಲೆಯಲ್ಲಿ ಒಟ್ಟು 44,897 ಕ್ವಿಂಟಾಲ್ ರಸಗೊಬ್ಬರದ ಬೇಡಿಕೆ ಇದ್ದು, ಈವರೆಗೆ 48,747 ಕ್ವಿಂಟಾಲ್‌ನಷ್ಟು ರಸಗೊಬ್ಬರ ಸರಬರಾಜಾಗಿರುತ್ತದೆ. ಯಾವುದೇ ರಸಗೊಬ್ಬರಗಳ, ಕೀಟನಾಶಕ ಹಾಗೂ ಬಿತ್ತನೆ ಬೀಜಗಳ ಕೊರತೆ ಇರುವುದಿಲ್ಲವೆಂದು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಹಾಸನ ರವರು ತಿಳಿಸಿದರು. ಯಾವುದೇ ಕೊರತೆ ಉಂಟಾದಲ್ಲಿ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮವಹಿಸಲು ಸೂಚಿಸಲಾಯಿತು.
- 2018-19ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ವಿಮೆ ಕುರಿತಂತೆ ಸರ್ಕಾರದಿಂದ ನೇಮಿಸಿರುವ ಗಟಿಣಜಜ ಖಟಿಚುಚಿಟಿ ೦ಣಡಿಚಿಟಿಛಿಜ ೦ರಜಟಿಛಿ ರವರಿಂದ ಜಿಲ್ಲೆಗೆ ಒಟ್ಟು

ಬಿಡುಗಡೆ ಮಾಡಬೇಕಾದ ರೂ.46.00 ಕೋಟಿ ಪೈಕಿ ರೂ.40.00 ಕೋಟಿ ಬೆಳೆ ವಿಮೆ ಅನುದಾನ ಬಿಡುಗಡೆಯಾಗಿದ್ದು, ಉಳಿಕೆ ರೂ.6.00 ಕೋಟಿಗಳು ಬಿಡುಗಡೆಗೆ ಬಾಕಿ ಇರುತ್ತವೆ.

- ರೈತರ ಆತ್ಮಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದಂತೆ 2019-20ನೇ ಸಾಲಿಗೆ ಜಿಲ್ಲೆಯಲ್ಲಿ ಒಟ್ಟು 16 ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 14 ಪ್ರಕರಣಗಳು ಅಂಗೀಕೃತವಾಗಿ 02 ಪ್ರಕರಣಗಳನ್ನು ತಿರಸ್ಕರಿಸಲಾಗಿರುತ್ತದೆ. ಅಂಗೀಕೃತವಾಗಿರುವ ಎಲ್ಲಾ 14 ಪ್ರಕರಣಗಳ ಕುಟುಂಬಗಳಿಗೆ ಪರಿಹಾರವನ್ನು ಪಾವತಿಸಲಾಗಿರುತ್ತದೆ. ರೈತರ ಆತ್ಮಹತ್ಯೆ ಪ್ರಕರಣ ದಾಖಲಾದ ಒಂದು ವಾರದೊಳಗೆ ಸಭೆ ನಡೆಸಿ ಅನುಮೋದಿತ ಪ್ರಕರಣಗಳಿಗೆ ವಿಳಂಬಕ್ಕೆ ಅವಕಾಶ ನೀಡದೇ ಸೂಕ್ತ ಪರಿಹಾರವನ್ನು ಪಾವತಿಸುವ ಬಗ್ಗೆ ಅಗತ್ಯ ಕ್ರಮವಹಿಸಲು ಸೂಚಿಸಲಾಯಿತು.

## 2. ಪ್ರವಾಹ/ಅತಿವೃಷ್ಟಿ ಪರಿಹಾರ ಕಾರ್ಯಗಳು:

- 2019-20ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಅತಿಯಾದ ಮಳೆಯಿಂದ ಉಂಟಾದ ಬೆಳೆಹಾನಿ ಮಾಹಿತಿಯನ್ನು ಪರಿಹಾರ ತಂತ್ರಾಂಶದಲ್ಲಿ ಅಳವಡಿಸಲಾಗುತ್ತಿದ್ದು, ಒಟ್ಟು 19487.00 ಹೆಕ್ಟೇರ್‌ಗಳ ಪೈಕಿ 19,657 ಹೆಕ್ಟೇರ್‌ಗಳಷ್ಟು ಪ್ರದೇಶದ ವಿವರವನ್ನು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಶೇ.100 ರಷ್ಟು ಪ್ರಗತಿ ಇರುತ್ತದೆ. ಅರ್ಹ ಫಲಾನುಭವಿಗಳಿಗೆ ಸರ್ಕಾರದಿಂದ ನೇರವಾಗಿ ಹಂತ-ಹಂತವಾಗಿ ಪರಿಹಾರವನ್ನು ವರ್ಗಾಯಿಸಲಾಗುತ್ತಿರುತ್ತದೆ.
- ಪ್ರವಾಹ/ಅತಿವೃಷ್ಟಿಯಿಂದ ಜಿಲ್ಲೆಯಲ್ಲಿ ಆಗಸ್ಟ್-2019 ರ ಮಾಹೆಯಲ್ಲಿ ಪ್ರವಾಹ ಪೀಡಿತ ತಾಲ್ಲೂಕುಗಳು ಎಂದು ಘೋಷಣೆಯಾದ 06 ತಾಲ್ಲೂಕುಗಳಲ್ಲಿ (ಅರಸೀಕೆರೆ - ಚನ್ನರಾಯಪಟ್ಟಣ ಹೊರತುಪಡಿಸಿ) ಒಟ್ಟು 182 ಮನೆಗಳು (ಶೇ.75 ಕ್ಕಿಂತ ಹೆಚ್ಚು) ಸಂಪೂರ್ಣವಾಗಿ, ಒಟ್ಟು 955 ಮನೆಗಳು (ಶೇ.25 ರಿಂದ 75 ವರೆಗೆ) ಹಾಗೂ ಒಟ್ಟು 998 ಮನೆಗಳು (ಶೇ.15 ರಿಂದ 25 ವರೆಗೆ) ಒಟ್ಟು 2135 ಮನೆಗಳು ಹಾಗೂ ಸೆಪ್ಟಂಬರ್-2019ರ ಮಾಹೆಯಲ್ಲಿ ಪ್ರವಾಹ ಪೀಡಿತ ತಾಲ್ಲೂಕುಗಳು ಎಂದು ಘೋಷಣೆಯಾದ ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಒಟ್ಟು 02 ಮನೆಗಳು (ಶೇ.75 ಕ್ಕಿಂತ ಹೆಚ್ಚು) ಸಂಪೂರ್ಣವಾಗಿ, ಒಟ್ಟು 24 ಮನೆಗಳು (ಶೇ.25 ರಿಂದ 75 ವರೆಗೆ) ಹಾಗೂ ಒಟ್ಟು 63 ಮನೆಗಳು (ಶೇ.15 ರಿಂದ 25 ವರೆಗೆ) ಒಟ್ಟು 89 ಮನೆಗಳು ಹಾನಿಯಾಗಿರುತ್ತದೆ. ಸಂಬಂದಪಟ್ಟ ಫಲಾನುಭವಿಗಳ ಮಾಹಿತಿಯನ್ನು ಆರ್.ಜಿ.ಹೆಚ್.ಸಿ.ಎಲ್. ನಲ್ಲಿ ದಾಖಲಿಸಿ, ನಿಯಮಾನುಸಾರ ಸರ್ಕಾರದ ಸುತ್ತೋಲೆ/ ಆದೇಶಗಳನ್ವಯ ಅರ್ಹ ಫಲಾನುಭವಿಗಳಿಗೆ ಪರಿಹಾರವನ್ನು ಪಾವತಿಸಲಾಗಿರುತ್ತದೆ. ಯಾವುದೇ ಅರ್ಹ ಫಲಾನುಭವಿಗಳಿಗೆ ಪರಿಹಾರ ಪಾವತಿಯಾಗದಿದಲ್ಲಿ, ಕೂಡಲೇ ಪರಿಹಾರ ಪಾವತಿಸುವ ಸಂಬಂಧ ಅಗತ್ಯ ತುರ್ತು ಕ್ರಮವಹಿಸಲು ತಿಳಿಸಲಾಯಿತು.
- ಪ್ರವಾಹ/ಅತಿವೃಷ್ಟಿಯಿಂದ ಹಾನಿಯಾಗಿರುವ ಮನೆಗಳಿಗೆ ಈಗಾಗಲೇ ಮೊದಲನೇ ಕಂತಿನಲ್ಲಿ ಅನುದಾನ ಬಿಡುಗಡೆಯಾಗಿದ್ದು, ಮುಂದಿನ ಕಂತುಗಳಲ್ಲಿ ಪರಿಹಾರವನ್ನು ಸರ್ಕಾರದಿಂದ ಒದಗಿಸುವ ನಿಟ್ಟಿನಲ್ಲಿ ಎಲ್ಲಾ ಫಲಾನುಭವಿಗಳು ಹಾನಿಯಾಗಿರುವ ಮನೆಗಳ ಪುನರ್ ನಿರ್ಮಾಣವನ್ನು ಕೈಗೊಂಡಿರುವ ಬಗ್ಗೆ ಕಾಲಕಾಲಕ್ಕೆ ಪರಿಶೀಲನೆ ನಡೆಸಲು ಸಂಬಂಧಪಟ್ಟ ತಾಲ್ಲೂಕು ತಹಸೀಲ್ದಾರ್, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಆಯುಕ್ತರು/ಮುಖ್ಯಾಧಿಕಾರಿಗಳಿಗೆ ಸೂಚಿಸಲಾಯಿತು.

**3. ಪ್ರವಾಹ ಪರಿಹಾರ ಕಾಮಗಾರಿಗಳು:**

➢ ಆಗಸ್ಟ್-2019 ರ ಮಾಹೆಯಲ್ಲಿ ಉಂಟಾದ ಪ್ರವಾಹದ ಹಿನ್ನೆಲೆಯಲ್ಲಿ ಹಾನಿಯಾದ ಮೂಲಭೂತ ಸೌಕರ್ಯಗಳ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಜಿಲ್ಲೆಗೆ ಒಟ್ಟು ರೂ.15.00 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಈ ಪೈಕಿ ಸರ್ಕಾರದ ಆದೇಶದಂತೆ ಸರ್ಕಾರಿ ಶಾಲೆಗಳ ದುರಸ್ಥಿ ಕಾರ್ಯಗಳಿಗೆ ರೂ.862.25 ಲಕ್ಷಗಳಲ್ಲಿ ಒಟ್ಟು 435 ಸರ್ಕಾರಿ ಶಾಲಾ ದುರಸ್ಥಿ ಕಾಮಗಾರಿಗಳನ್ನು ಕೈಗೊಂಡಿದ್ದು, ಉಳಿದ ರೂ.637.75 ಲಕ್ಷಗಳ ಅನುದಾನವನ್ನು ಪ್ರವಾಹ ಪೀಡಿತ ತಾಲ್ಲೂಕುವಾರು ಹಂಚಿಕೆ ಮಾಡಿ ಇತರೆ ಮೂಲಭೂತ ಸೌಕರ್ಯಗಳ ತುರ್ತು ದುರಸ್ಥಿ ಕಾಮಗಾರಿಗಳನ್ನು ವಿಳಂಬಕ್ಕೆ ಅವಕಾಶ ನೀಡದೇ ಡಿಸೆಂಬರ್-2019 ರ ಮಾಹೆಯ ಅಂತ್ಯದೊಳಗೆ ಪೂರ್ಣಗೊಳಿಸಲು ನಿರ್ದೇಶಿಸಲಾಯಿತು.

➢ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ರವರು ಮಾತನಾಡಿ, ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿರವರು ವಾರಕ್ಕೊಮ್ಮೆ ನಡೆಸುವ ವಿಡಿಯೋ ಸಂವಾದಗಳಲ್ಲಿ ಪ್ರವಾಹದಿಂದ ಹಾನಿಯಾಗಿರುವ ಮೂಲಭೂತ ಸೌಕರ್ಯಗಳ ದುರಸ್ಥಿ ಕಾಮಗಾರಿಗಳನ್ನು ತುರ್ತಾಗಿ ತೆಗೆದುಕೊಂಡು ಮುಕ್ತಾಯಗೊಳಿಸಲು ನಿರ್ದೇಶಿಸುತ್ತಿದ್ದು, ಜಿಲ್ಲೆಯಲ್ಲಿ ಪ್ರವಾಹ/ಅತಿವೃಷ್ಟಿಯಿಂದ ಹಾನಿಯಾಗಿರುವ ಎಲ್ಲಾ ಮೂಲಭೂತ ಸೌಕರ್ಯಗಳ ದುರಸ್ಥಿ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ತುರ್ತಾಗಿ ಕೈಗೊಳ್ಳಬೇಕಾಗಿದೆ ಎಂದು ಸಭೆಗೆ ಸೂಚಿಸಿದರು.

➢ ಪ್ರವಾಹ/ಅತಿವೃಷ್ಟಿಯಿಂದ ಹಾನಿಯಾಗಿರುವ ಸರ್ಕಾರಿ ಶಾಲೆಗಳ ದುರಸ್ಥಿ ಕಾಮಗಾರಿಗಳು ಪ್ರಗತಿಯಲ್ಲಿರುವ ಬಗ್ಗೆ ಹಾಗೂ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪರಿಶೀಲನೆ ನಡೆಸುವ ಸಂಬಂಧ ಕಾಲ ಕಾಲಕ್ಕೆ ಸ್ಥಳ ಪರಿಶೀಲನೆ ನಡೆಸಲು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ರವರಿಗೆ ಸೂಚಿಸಲಾಯಿತು.

➢ ಸಮಯದ ವಿಳಂಬವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಅಥವಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಆಡಳಿತಾತ್ಮಕ ಅನುಮೋದನೆ ಪಡೆದ ಕ್ರಿಯಾಯೋಜನೆಗೆ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ಪುನಃ ಆಡಳಿತಾತ್ಮಕ ಅನುಮೋದನೆ ಪಡೆಯುವ ಅವಶ್ಯಕತೆ ಇರುವುದಿಲ್ಲ ಹಾಗೂ ಕಾಮಗಾರಿಗಳ ತಾಂತ್ರಿಕತೆಯ ಬಗ್ಗೆ ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್‌ರವರು ಪರಿಶೀಲಿಸಿಕೊಂಡು ಇಲಾಖಾ ಹಂತದಲ್ಲಿಯೇ ನಿಯಮಾನುಸಾರ ಕಾಮಗಾರಿಗಳನ್ನು ಕೈಗೊಳ್ಳಲು ನಿರ್ದೇಶಿಸಲಾಯಿತು.

➢ ಆಗಸ್ಟ್-2019 ರ ಮಾಹೆಯಲ್ಲಿ ಉಂಟಾದ ಪ್ರವಾಹದಲ್ಲಿ ಜಿಲ್ಲೆಯ 214 ಕೆರೆಗಳು ಹಾನಿಯಾಗಿದ್ದು, ಈ ಪೈಕಿ 39 ಕೆರೆಗಳು ಭಾರಿ ಪ್ರಮಾಣದಲ್ಲಿ ಹಾನಿಯಾಗಿರುತ್ತವೆ. ಈ ಎಲ್ಲಾ 214 ಕೆರೆಗಳನ್ನು ದುರಸ್ಥಿಗೊಳಿಸಲು ರೂ.12.00 ಕೋಟಿಗಳ ಅನುದಾನದ ಅವಶ್ಯಕತೆ ಇರುತ್ತದೆ ಎಂದು ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಹಾಸನ ವಿಭಾಗ ರವರು ಸಭೆಗೆ ಗಮನಕ್ಕೆ ತರಲಾಗಿ, ಅನುದಾನದ ಅವಶ್ಯಕತೆ ಬಗ್ಗೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.

**4. ಲೋಕೋಪಯೋಗಿ ಇಲಾಖೆ:**

➢ ಆಗಸ್ಟ್-2019 ರ ಮಾಹೆಯಲ್ಲಿ ಉಂಟಾದ ಪ್ರವಾಹದ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ ಹಾನಿಯಾದ ಮೂಲಭೂತ ಸೌಕರ್ಯಗಳ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದಿಂದ ನೇರವಾಗಿ ಜಿಲ್ಲೆಗೆ ಒಟ್ಟು ರೂ.542.92 ಲಕ್ಷ ಅನುದಾನ ಬಿಡುಗಡೆಯಾಗಿದ್ದು,

ಅನುಮೋದನೆಗೊಂಡಿರುವ ಒಟ್ಟು 53 ಕಾಮಗಾರಿಗಳ ಪೈಕಿ 17 ಕಾಮಗಾರಿಗಳ ಪೂರ್ಣಗೊಂಡಿದ್ದು 36 ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ. ಅನುಮೋದನೆಗೊಂಡಿರುವ ಎಲ್ಲಾ ದುರಸ್ಥಿ ಕಾಮಗಾರಿಗಳನ್ನು ಡಿಸೆಂಬರ್-2019 ರ ಮಾಹೆಯ ಅಂತ್ಯದೊಳಗೆ ಪೂರ್ಣಗೊಳಿಸಲು ನಿರ್ದೇಶಿಸಲಾಯಿತು.

## 5. ಸಣ್ಣ ನೀರಾವರಿ ಇಲಾಖೆ:

- ಆಗಸ್ಟ್-2019 ರ ಮಾಹೆಯಲ್ಲಿ ಉಂಟಾದ ಪ್ರವಾಹದ ಹಿನ್ನೆಲೆಯಲ್ಲಿ ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಯಲ್ಲಿ ಹಾನಿಯಾದ ಮೂಲಭೂತ ಸೌಕರ್ಯಗಳ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದಿಂದ ನೇರವಾಗಿ ಜಿಲ್ಲೆಗೆ ಒಟ್ಟು ರೂ.890.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಅನುಮೋದನೆಗೊಂಡಿರುವ ಒಟ್ಟು 08 ಕಾಮಗಾರಿಗಳ ಪೈಕಿ 04 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಉಳಿದ 04 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿ ಬಾಕಿ ಇರುತ್ತವೆ. ಅನುಮೋದನೆಗೊಂಡಿರುವ ಎಲ್ಲಾ ದುರಸ್ಥಿ ಕಾಮಗಾರಿಗಳನ್ನು ಡಿಸೆಂಬರ್-2019 ರ ಮಾಹೆಯ ಅಂತ್ಯದೊಳಗೆ ಪೂರ್ಣಗೊಳಿಸಲು ನಿರ್ದೇಶಿಸಲಾಯಿತು.

## 6. ಕುಡಿಯುವ ನೀರು :

- ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಲ್ಲಿ ಕುಡಿಯುವ ನೀರು ಕೊರತೆಯನ್ನು ಸಂಪೂರ್ಣವಾಗಿ ಪರಿಹರಿಸಲು 530 ಗ್ರಾಮಗಳಿಗೆ ಹೇಮಾವತಿ ನದಿಯಿಂದ ನೀರು ಸರಬರಾಜು ಮಾಡುವ ಒಣಟಣು ಗಿುಟಟಬಿರಜ ಖಬುಜಟಜ ಕಾರ್ಯ ಪ್ರಗತಿಯಲ್ಲಿದ್ದು, ಸದರಿ ಯೋಜನೆಯಿಂದ ತಾಲ್ಲೂಕಿನ ಎಲ್ಲಾ 530 ಗ್ರಾಮಗಳಿಗೆ ಸಮರ್ಪಕವಾಗಿ ಕುಡಿಯುವ ನೀರನ್ನು ಸರಬರಾಜು ಮಾಡಬಹುದೆಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಸದರಿ ಯೋಜನೆಯನ್ನು ಪೂರ್ಣಗೊಳಿಸಿ, ಅರಸೀಕೆರೆ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರು ಸೌಲಭ್ಯವನ್ನು ಒದಗಿಸುವ ಬಗ್ಗೆ ತುರ್ತಾಗಿ ಕ್ರಮವಹಿಸಲು ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು - ನೈರ್ಮಲ್ಯ ಇಲಾಖೆ ಹಾಸನ ವಿಭಾಗ ರವರಿಗೆ ನಿರ್ದೇಶನ ನೀಡಲಾಯಿತು.
- ಜಿಲ್ಲೆಯಲ್ಲಿ ಆಗಸ್ಟ್-2019 ರ ಮಾಹೆವರೆಗೆ ಮಾತ್ರ ಟ್ಯಾಂಕರ್ ಹಾಗೂ ಖಾಸಗಿ ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲು ಸರ್ಕಾರದಿಂದ ಅನುಮತಿ ಇದ್ದು, ಸೆಪ್ಟಂಬರ್-2019 ರ ಮಾಹೆಯಿಂದ ಲ್ಲೆಯ ಯಾವುದೇ ಗ್ರಾಮಗಳಲ್ಲಿ ಟ್ಯಾಂಕರ್/ಖಾಸಗಿ ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರು ಸರಬರಾಜು ಆಗುತ್ತಿರುವುದಿಲ್ಲ.

## 7. ಮೇವು ಪೂರೈಕೆ:

- ಜಿಲ್ಲೆಯಲ್ಲಿ ಪ್ರಸ್ತುತ ಮುಂದಿನ 20 ವಾರಗಳನ್ನು ನಿಭಾಯಿಸುವಷ್ಟು ಒಟ್ಟು 5,12,361 ಟನ್‌ಗಳಷ್ಟು ಮೇವು ಲಭ್ಯವಿರುತ್ತದೆ.
- ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಪಿಟಿಷನ್ ಸಂಖ್ಯೆ: 18628/2019 ಮತ್ತು 19054/2019 ರ ಆದೇಶದ ಅನುಸಾರ ಜಿಲ್ಲೆಯಲ್ಲಿ ಒಟ್ಟು 08 ಗೋಶಾಲೆಗಳು ಹಾಗೂ 14 ಮೇವು ಬ್ಯಾಂಕ್‌ಗಳನ್ನು ತೆರೆಯಲಾಗಿರುತ್ತದೆ ಎಂದು ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಹಾಸನ ರವರು ಸಭೆಯ ಗಮನಕ್ಕೆ ಸಲ್ಲಿಸಿದರು.

## 8. ಸ್ಮಶಾನ ಭೂಮಿ ಇರುವ / ಇಲ್ಲದಿರುವ ಗ್ರಾಮಗಳ ಮಾಹಿತಿ:

ಹಾಸನ ಜಿಲ್ಲೆಯಲ್ಲಿ ಒಟ್ಟು 2415 ಗ್ರಾಮಗಳ ಪೈಕಿ ಒಟ್ಟು 1697 ಗ್ರಾಮಗಳಲ್ಲಿ ಸ್ಮಶಾನ ಭೂಮಿ ಇರುವುದಾಗಿ ಮಾಹಿತಿ ನೀಡಿದರು. ಒಟು 718 ಸ್ಮಶಾನ ಭೂಮಿ ಇಲ್ಲದಿರುವ ಗ್ರಾಮಗಳ ಪೈಕಿ 46 ಗ್ರಾಮಗಳಲ್ಲಿ ಖಾಸಗಿ ಜಮೀನನ್ನು ಖರೀದಿಸಲಾಗಿದೆ, 18 ಗ್ರಾಮಗಳಲ್ಲಿ ಖಾಸಗಿ ಜಮೀನನ್ನು ಖರೀದಿಸಲು ಉದ್ದೇಶಿಸಲಾಗಿದೆ ಎಂದು ಮಾಹಿತಿ ನೀಡಿದರು. ಅರಸೀಕೆರೆ ತಾಲ್ಲೂಕಿನ ತಹಸೀಲ್ದಾರರು ಒಟ್ಟು 14 ಗ್ರಾಮಗಳ ಸ್ಮಶಾನಕ್ಕಾಗಿ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸಿರುವುದಾಗಿ ಮಾಹಿತಿ ನೀಡಿದರು. ಅಲ್ಲದೆ ತಹಸೀಲ್ದಾರ್ ಹಾಸನ ರವರು ಬಾಕಿ ಉಳಿದಿರುವ ಗ್ರಾಮಗಳಲ್ಲಿ ಸ್ಮಶಾನದ ಜಮೀನಿಗಾಗಿ ಸರ್ವೇಕಾರ್ಯ ನಡೆಯುತ್ತಿದೆ ನಂತರ ಜಿಲ್ಲಾಧಿಕಾರಿಗಳವರಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದಾಗಿ ಮಾಹಿತಿ ನೀಡಿದರು.

ಮಾತನಾಡಿದ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸ್ಮಶಾನ ಇಲ್ಲದಿರುವ ಗ್ರಾಮಗಳಲ್ಲಿ ಸ್ಮಶಾನಕ್ಕಾಗಿ ಸರ್ಕಾರಿ ಜಮೀನು ಇಲ್ಲದಿರುವ ಗ್ರಾಮಗಳಲ್ಲಿ ಖಾಸಗಿ ಜಮೀನನ್ನು ಖರೀದಿಸುವ ಬಗ್ಗೆ ಕೂಡಲೇ ಕ್ರಮ ಕೈಗೊಳುವಂತೆ ಸೂಚನೆ ನೀಡಿದರು.

## 9. ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಪ್ರಗತಿ:

ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರು ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಯಲ್ಲಿನ ಅನುಧಾನ ಬಳಕೆಯಲ್ಲಿ ಎಲ್ಲಾ ಇಲಾಖೆಗಳು ಪ್ರಗತಿ ಸಾಧಿಸಿದ್ದು, ಚೆಸ್ಕಾಂ, ಹಾಸನ ರವರು ಹಿಂದುಳಿದಿದ್ದಾರೆ ಎಂಬುದಾಗಿ ಮಾಹಿತಿ ನೀಡಿದರು.

ಈ ಬಗ್ಗೆ ಮಾತನಾಡಿದ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಪ್ರತ್ಯೇಕವಾದ ಸಭೆ ನಡೆಸಿ ಅನುಧಾನವನ್ನು ಬಳಕೆ ಮಾಡುವಲ್ಲಿ ಕ್ರಮ ವಹಿಸಲು ಸೂಚನೆ ನೀಡುವಂತೆ ತಿಳಿಸಿದರು.

## 10. ಎಸ್.ಎಫ್. ಸಿ. ಮುಕ್ತ ನಿಧಿ:

ಜಿಲ್ಲೆಯ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತ್‌ಗಳ ಎಸ್.ಎಫ್.ಸಿ. ಮುಕ್ತನಿಧಿಯಡಿ2018-19ನೇ ಸಾಲಿನಲ್ಲಿ ರೂಪಿಸಿರುವ ಕ್ರಿಯಾ ಯೋಜನೆ ಬಗ್ಗೆ ಯೋಜನಾ ನಿರ್ದೇಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ರವರು ಮಾಹಿತಿ ನೀಡಿದರು.

ಈ ಬಗ್ಗೆ ಮಾತನಾಡಿದ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಪುರಸಭೆ ಬೇಲೂರು ರವರು 2018-19 ನೇ ಸಾಲಿನ ಅನುಧಾನ ರೂ., 26.65 ಲಕ್ಷ ಗಳ ಪೈಕಿ ರೂ. 21.60 ಲಕ್ಷ ಗಳನ್ನು ಪೌರಕಾರ್ಮಿಕರ ವೇತನಕ್ಕಾಗಿ ಮೀಸಲಿಟ್ಟಿರುವುದು ಶೇಕಡಾವಾರು 80 ಕಿಂತ ಹೆಚ್ಚಿದ್ದು ಸರ್ಕಾರದ ಸುತ್ತೋಲೆಯ ಮಾರ್ಗಸೂಚಿಯಂತೆ ನಿರ್ವಹಣೆ ಮಾಡದಿರುವುದು ಕಂಡುಬಂದಿರುತ್ತದೆ ಈ ಬಗ್ಗೆ ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳ ಸಭೆ ನಡೆಸಿ ಸರಿಯಾದ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಮಂಡಿಸುವಂತೆ ಸೂಚನೆ ನೀಡಿದರು.

## 11. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಇಲಾಖೆಯಲ್ಲಿ ಫಾರ್ಮಾಸಿಸ್ಟ್‌ಗಳ ಒಟ್ಟು 162 ಹುದ್ದೆಗಳು ಖಾಲಿಯಿರುತ್ತದೆ. ಗ್ರೂಪ್ ಡಿ ನೌಕರರ 807 ಹುದ್ದೆಗಳು ಖಾಲಿಯಿದ್ದು ಅವುಗಳ ಪೈಕಿ 265 ಹುದ್ದೆಗಳನ್ನು ಭರ್ತಿಮಾಡಲಾಗಿದೆ. ಉಳಿದ 542 ಹುದ್ದೆಗಳು ಖಾಲಿಯಿದ್ದು ಸರ್ಕಾರದ ಆದೇಶದ ಮೇರೆಗೆ ಶೇಕಡಾ 25 ರಷ್ಟನ್ನು ಹೊರತುಪಡಿಸಿ ಉಳಿದ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಫಾರ್ಮಾಸಿಸ್ಟ್ ಹುದ್ದೆಗಳಿಗೆ ವೇತನ ಕಡಿಮೆಯಿದ್ದು ನೇಮಕಾತಿಗೆ ಯಾರೂ ಮುಂದೆ ಬರುತ್ತಿಲ್ಲ. ನೇಮಕಾತಿ ಹೊಂದಿದ ನೌಕರರು ಖಾಯಂ ಆಗಿ ಇರುವುದಿಲ್ಲ. ಅಲ್ಲದೆ ಜಿಲ್ಲಾ ಅಸ್ಪತ್ರೆಯಲ್ಲಿ / ತಾಲ್ಲೂಕು ಆಸ್ಪತ್ರೆಗಳಲ್ಲಿ ಕ್ಷಕಿರಣ, ಸ್ಕ್ಯಾನಿಂಗ್ ಯಂತ್ರಗಳು ಕಾರ್ಯನಿರ್ವಹಿಸುತ್ತಿದ್ದು, ಆಸ್ಪತ್ರೆಯ ಪ್ರಸೂತಿ ತಜ್ಞರಿಗೆ ತರಬೇತಿ ನೀಡಿ ಗರ್ಭಿಣಿ ಸ್ತ್ರೀಯನ್ನು ಸ್ಕ್ಯಾನಿಂಗ್‌ಗಾಗಿ ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸದೆ ಇಲ್ಲೇ ಸ್ಕ್ಯಾನಿಂಗ್ ಮಾಡಲಾಗುತ್ತಿದೆ ಎಂಬ ಮಾಹಿತಿಯನ್ನು ನೀಡಿದರು.

ಈ ಬಗ್ಗೆ ಮಾತನಾಡಿದ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಫಾರ್ಮಾಸಿಸ್ಟ್ ಹುದ್ದೆಗಳು ಅಗತ್ಯ ಹುದ್ದೆಗಳಾಗಿದ್ದು ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಅಭ್ಯರ್ಥಿಗಳಿಗೆ ಕನಿಷ್ಠ 20,000 ಮಾಸಿಕ ವೇತನ ನೀಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚಿಸುವುದಾಗಿ ತಿಳಿಸಿದೆ.

ಮುಂದುವರೆದು ವೈದ್ಯಕೀಯ ಕಾಲೇಜಿನ ಬಗ್ಗೆ ಮಾತನಾಡುತ್ತಾ ಜಿಲ್ಲಾಧಿಕಾರಿಗಳು ಕಾಲೇಜಿಗೆ / ಆಸ್ಪತ್ರೆಗೆ ಧಡೀರ್ ಭೇಟಿ ನೀಡಿದ ಸಂದರ್ಭದಲ್ಲಿ ರೋಗಿಗಳನ್ನು ಸ್ಕ್ಯಾನಿಂಗ್‌ಗಾಗಿ ಖಾಸಗಿ ಸಂಸ್ಥೆಗಳಿಗೆ ಕಳುಹಿಸುತ್ತಿರುವುದು ಕಂಡುಬಂದಿರುವ ಬಗ್ಗೆ ಮಾಹಿತಿ ಕೇಳಿದರು.

ವೈದ್ಯಕೀಯ ಕಾಲೇಜಿನ ಕಾರ್ಯನಿರ್ವಹಣಾಧಿಕಾರಿಗಳು ಮಾತನಾಡಿ, ಕೆಲವೊಮ್ಮೆ ಯಂತ್ರವು ಸ್ಥಗಿತಗೊಂಡಾಗ ತುರ್ತು ಪರಿಸ್ಥಿತಿಯಲ್ಲಿ ಖಾಸಗಿ ಸಂಸ್ಥೆಗಳಿಗೆ ಸ್ಕ್ಯಾನಿಂಗ್‌ಗಾಗಿ ಕಳುಹಿಸಲಾಗುವುದು. ಮಾನ್ಯ ಜಿಲ್ಲಾಧಿಕಾರಿಗಳು ಭೇಟಿ ನೀಡಿದ ದಿನಾಂಕದಲ್ಲಿ ಕಾರ್ಯ ನಿರ್ವಹಿತ್ತಿದ್ದ ಹಾಗೂ ಖಾಸಗಿ ಸಂಸ್ಥೆಗೆ ರೋಗಿಗಳನ್ನು ಕಳುಹಿಸಿದ ವೈದ್ಯರ / ನೌಕರರಿಗೆ ನೋಟೀಸ್ ನೀಡಲಾಗಿದೆ. ಅಲ್ಲದೆ ಅನಿವಾರ್ಯ ಸಂದರ್ಭದಲ್ಲಿ ಖಾಸಗಿ ಸಂಸ್ಥೆಗಳಿಗೆ ಕಳುಹಿಸುವಾಗಿ ಕರ್ತವ್ಯನಿರತ ವೈದ್ಯಾಧಿಕಾರಿಗಳು ಕಡ್ಡಾಯವಾಗಿ ಸಂಪೂರ್ಣ ಸಹಿ ಮತ್ತು ಮೊಹರನ್ನು ಹಾಕುವಂತೆ ಹಾಗೂ ಮೇಲಾಧಿಕಾರಿಗಳ ಅನುಮತಿ ಪಡೆಯುವಂತೆ ಎಲ್ಲಾ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಸುತ್ತೋಲೆಯನ್ನು ನೀಡಲಾಗಿದೆ ಎಂಬುದಾಗಿ ಮಾಹಿತಿ ನೀಡಿದರು.

ಈ ಬಗ್ಗೆ ಮಾತನಾಡಿದ ಉಸ್ತುವಾರಿ ಕಾರ್ಯದರ್ಶಿಗಳು ಎಲ್ಲ ವೈದ್ಯರ ಸಭೆಯನ್ನು ನಡೆಸಿ ಕಟ್ಟುನಿಟ್ಟಾದ ಸೂಚನೆಯನ್ನು ನೀಡುವಂತೆ ಜಿಲ್ಲಾಧಿಕಾರಿಗಳಿ ಸೂಚನೆ ನೀಡಿದರು.

12. ಇತರೆ ವಿಷಯಗಳು:

ಜೆಸ್ಕಾಂ, ಹಾಸನ ರವರು ಫೋನ್ ಮತ್ತು ಟೆಲಿಕಾಂ ಇಲಾಖೆಯಿಂದ 1.0 ಕೋಟಿ ಹಾಗೂ ನೀರಾವರಿ ಇಲಾಖೆಯ (ಏತ ನೀರಾವರಿ) 13 ಕೋಟಿ ಹಣ ಪಾವತಿಗಾಗಿ ಬಾಕಿ ಉಳಿದಿರುವುದಾಗಿ ಮಾಹಿತಿ ನೀಡಿದರು.

ಲೋಕೋಪಯೋಗಿ ಇಲಾಖೆಯಿರವರು ಕಳೆದ ವರ್ಷದ ನೆರೆ ಹಾವಳಿ ಹಣ ತಪ್ಪಾಗಿ ಮುನಿಸಿಪಲ್ ಕಮೀಷನರ್ ರವರ ಖಾತೆಗೆ ಸಂದಾಯವಾಗಿದ್ದು ಈ ಹಣ ಬಾಕಿ ಉಳಿದಿರುವುದಾಗಿ ಮಾಹಿತಿ ನೀಡಿದರು.

ಈ ಬಗೆ ಮಾತನಾಡಿದ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಸಿದರು.

ವಂದನಗಳೊಂದಿಗೆ ಸಭೆಯಿನ್ನು ಮುಕ್ತಾಯಗಳಿಸಲಾಯಿತು.

(ನವೀನ್‌ರಾಜ್ ಸಿಂಗ್, ಐ.ಎ.ಎಸ್.)
ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಮಿನರಲ್
ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು
ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

DPAAR/2/ESP/2019-D-ARAR US WS A-DPAR AR SEC

# ನಮೂನೆ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರಮ ಸಂಖ್ಯೆ | ಅಂಶಗಳು | |
|---|---|---|
| 01 | **ಉಸ್ತುವಾರಿ ಜಿಲ್ಲೆಯ ಹೆಸರು** | **ಹಾಸನ ಜಿಲ್ಲೆ** |
| 02 | **ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು** | **ನವೀನ್‌ರಾಜ್ ಸಿಂಗ್ ಐ.ಎ.ಎಸ್.** |
| 03 | **ಪ್ರವಾಸ ಕೈಗೊಂಡ ದಿನಾಂಕ** | **17–12–2019** |
| | | |
| A | **ವಿವಿಧ ಯೋಜನೆಗಳ ಪ್ರಗತಿ ಪರಿಶೀಲಾ ವರದಿ** | |
| ಎ | **ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು** | 1. ರಾಗಿ ಮತ್ತು ಭತ್ತವನ್ನು ಬೆಂಬಲ ಬೆಲೆಯಲ್ಲಿ ಖರೀದಿಸುವ ಬಗ್ಗೆ<br>2. ನೆರೆಹಾವಳಿಯಿಂದ ಹಾನಿಗೊಳಗಾದ ಮನೆಗಳಿಗೆ ಪರಿಹಾರ ನೀಡುವ ಬಗ್ಗೆ<br>3. ಅಂಗನವಾಡಿ ಕಟ್ಟಡ, ರಸ್ತೆಗಳು ಹಾಗೂ ಕೆರೆಗಳ ದುರಸ್ತಿ ಬಗ್ಗೆ<br>4. ಸಕಾಲ, ಇ–ಅಫೀಸ್, ಕೆ.ಷಿಪ್ ಪ್ರಗತಿ ಸಾಧಿಸುವ ಬಗ್ಗೆ<br>5. ಹಾಸ್ಟಲ್ ಗಳಿಗೆ ನಿವೇಶನ ಒದಗಿಸುವ ಬಗ್ಗೆ<br>6. ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪಿಸುವ ಬಗ್ಗೆ<br>7. ತಾಲ್ಲೂಕು ಆಸ್ಪತ್ರೆಗಳ ಪರಿಶೀಲನೆ ಮಾಡುವ ಬಗ್ಗೆ |
| ಬಿ | **ನಿರ್ದೇಶನ ನೀಡಿದ ಬಗ್ಗೆ ಸಾರಾಂಶ** | 1. ರಾಗಿ ಮತ್ತು ಭತ್ತವನ್ನು ಬೆಂಬಲ ಬೆಲೆಯಲ್ಲಿ ಖರೀದಿಸುವ ಬಗ್ಗೆ ಸರ್ಕಾರಿ ಆದೇಶ ಹೊರಡಿಸಬೇಕಿದೆ. ರಭಿ ಬಿತ್ತನೆ ತೃಪ್ತಿಕರವಾಗಿದೆ. ಬೀಜ, ಗೊಬ್ಬರ, ಕೀಟ ನಾಶಕಗಳು ಅಗತ್ಯ ಪ್ರಮಾಣದಲ್ಲಿ ಲಭ್ಯವಿದೆ. ನೆರೆ ಹಾವಳಿಗೆ ಸಂಬಂಧಿಸಿದಂತೆ ಪರಿಹಾರ ತಂತ್ರಾಂಶದಲ್ಲಿ 23,891 ಫಲಾನುಭವಿಗಳ ಡಾಟಾ ಎಂಟ್ರಿ ಮುಗಿದಿದ್ದು, ಇದುವರೆವಿಗೂ 36.52 ಕೋಟಿ ಅನುದಾನ ಬಿಡುಗಡೆ ಆಗಿರುತ್ತದೆ. 2018–19ನೇ ಸಾಲಿನ ಖರೀಫ್ ಬೆಳೆಗಳ ವಿಮೆಗೆ ಸಂಬಂಧಿಸಿದಂತೆ 46 ಕೋಟಿ ಕ್ಲೇಮ್‌ನ ಪೈಕಿ 40 ಕೋಟಿ ಬಂದಿದ್ದು, ಇನ್ನೂ 6 ಕೋಟಿ ಅನುದಾನ ಬರಬೇಕಿದೆ. |

| | | |
|---|---|---|
| | | 2. ನೆರೆ ಹಾವಳಿಯಿಂದ ಹಾನಿಗೊಳಗಾದ ಮನೆಗಳಿಗೆ ಸಂಬಂಧಿಸಿದಂತೆ ಗ್ರಾಮೀಣ ಪ್ರದೇಶದಲ್ಲಿ 1915 ಮನೆಗಳು ಹಾನಿಗೀಡಾಗಿದ್ದು, ಎಲ್ಲಾ 1915 ಮನೆಗಳಿಗೆ ಮೊದಲನೇ ಹಂತದ ಹಣ ಬಿಡುಗಡೆ ಮಾಡಲಾಗಿರುತ್ತದೆ. ಇದೇ ರೀತಿ ನಗರ ಪ್ರದೇಶದ ಅರ್ಹ 184 ಮನೆಗಳ ಪೈಕಿ ಎಲ್ಲಾರಿಗೂ ಮೊದಲನೇ ಕಂತು ಬಿಡುಗಡೆಯಾಗಿದೆ. ಸೆಪ್ಟೆಂಬರ್ ತಿಂಗಳಲ್ಲಿ ಮಳೆಯಿಂದ ಹಾನಿಗೀಡಾದ 89 ಮನೆಗಳಲ್ಲಿ ಸಿ ವರ್ಗದ 63 ಮನೆಗಳಿಗೆ ಹಣ ಬಿಡುಗಡೆಯಾಗಬೇಕಿದ್ದು, ಇದಕ್ಕಾಗಿ 10.50 ಲಕ್ಷಗಳ ಬೇಡಿಕೆ ಸಲ್ಲಿಸಿದೆ. ಮಳೆ ಹಾನಿಯಿಂದ ಸಂಭವಿಸಿದ ಶಾಲೆಗಳ ರಿಪೇರಿಗೆ 8.62 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಕೆಲವಾರು ಕಾಮಗಾರಿ ಪೂರ್ಣಗೊಂಡಿದ್ದು, ಜನವರಿ ಅಂತ್ಯದೊಳಗೆ ಎಲ್ಲಾ ಕಾರ್ಯಗಳನ್ನು ಪೂರೈಸಲಾಗುವುದು. ಮಳೆ ಹಾನಿಗೆ ಸಂಬಂಧಿಸಿದ ಪರಿಹಾರವನ್ನು ತಾಲ್ಲೂಕುವಾರು ನೀಡಲಾಗುತ್ತಿದ್ದು, ಒಂದು ತಾಲ್ಲೂಕಿನಲ್ಲಿ ಒಂದಕ್ಕಿಂತ ಹೆಚ್ಚಿನ ವಿಧಾನಸಭಾ ಕ್ಷೇತ್ರಗಳಿದ್ದಲ್ಲಿ ಹಂಚಿಕೆ ಕಷ್ಟವಾಗುತ್ತಿದೆ. ಇದರ ಬದಲಾಗಿ ವಿಧಾನಸಭಾ ಕ್ಷೇತ್ರವಾರು ಹಣ ಹಂಚಿಕೆ ಮಾಡುವುದು ಸೂಕ್ತವಾಗಿರುತ್ತದೆ.<br><br>3. ಅಂಗನವಾಡಿ ಹಾಗೂ ಇತರೆ ರಸ್ತೆ ಕೆಲಸಗಳು ಇನ್ನೂ ಪ್ರಾರಂಭವಾಗಬೇಕಿರುತ್ತದೆ. ಹಾಸನ ಜಿಲ್ಲೆಯ ಗ್ರಾಮಾಂತರ ರಸ್ತೆಗಳು ಹಾಗೂ ಅಂಗನವಾಡಿ ಕೇಂದ್ರಗಳ ಹಾನಿಗೆ ಸಂಬಂಧಿಸಿದಂತೆ ಒಟ್ಟು 30.00 ಕೋಟಿಗಳ ಅನುದಾನದ ಅಗತ್ಯವಿದ್ದು, ಇದರ ಪೈಕಿ ಕೇವಲ 15.00 ಕೋಟಿ ಬಿಡುಗಡೆಯಾಗಿರುತ್ತದೆ. ಕೆರೆಗಳ ದುರಸ್ತಿ ಹೊರತುಪಡಿಸಿ 11.47 ಕೋಟಿ ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಅನುಮತಿ ಬೇಕಿರುತ್ತದೆ. ಕೆರೆಗಳ ದುರಸ್ತಿಗೆ ಪ್ರತಿ ಕೆರೆಗೆ 1.5 ಲಕ್ಷ ಎನ್.ಡಿ.ಆರ್.ಎಫ್. ನಿಯಮಾವಳಿಗಳ ಪ್ರಕಾರ ಅರ್ಹವಿದ್ದು, ಈ ಮೊತ್ತದಲ್ಲಿ ಪರಿಹಾರ ಕಾರ್ಯ ಕೈಗೊಳ್ಳವುದು ಸಾಧ್ಯವಿರುವುದಿಲ್ಲ. ಪ್ರತಿ ಕೆರೆಗೆ ಕನಿಷ್ಠ 15 ರಿಂದ 20 ಲಕ್ಷ ಅವಶ್ಯಕವಿರುತ್ತದೆ. ಹಾಸನ ಜಿಲ್ಲೆಯ ಒಟ್ಟು 214 ಕೆರೆಗಳಿಗೆ 12 ಕೋಟಿ ಅನುದಾನದ ಅವಶ್ಯಕತೆ ಇರುತ್ತದೆ.<br><br>4. ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ರೂ. 13.32 ಕೋಟಿ ಲಭ್ಯವಿದೆ.<br><br>5. ಸಕಾಲ ಯೋಜನೆಯಲ್ಲಿ ಜಿಲ್ಲೆಯು ಒಟ್ಟಾರೆಯಾಗಿ 10 ನೇ ಸ್ಥಾನದಲ್ಲಿದ್ದು, ಕಂದಾಯ ಇಲಾಖೆಯು ಸಕಾಲ ಅನುಷ್ಠಾನದಲ್ಲಿ 2ನೇ ಸ್ಥಾನದಲ್ಲಿದೆ. ಇ-ಆಫೀಸ್ |

| | | |
|---|---|---|
| | | ಅನುಷ್ಠಾನಕ್ಕೆ ತರಬೇತಿ ಪೂರ್ಣಗೊಳಿಸಿದ್ದು, ಶೀಘ್ರದಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ಕೇಂದ್ರ ಸರ್ಕಾರದ ಯೋಜನೆಗಳಿಗೆ ಸಂಬಂದಿಸಿದಂತೆ ಎನ್.ಹೆಚ್-206 ರಲ್ಲಿ ಶೇ. 80 ಕ್ಕಿಂತ ಹೆಚ್ಚಿನ ಭೂಮಿಯನ್ನು ಈಗಾಗಲೇ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ವರ್ಗಾಯಿಸಲಾಗಿದೆ. ಕೆ-ಶಿಪ್ ಯೋಜನೆಯಡಿ ಇನ್ನು ಹೆಚ್ಚಿನ ಪ್ರಗತಿ ಸಾಧಿಸಬೇಕಿದೆ.<br><br>6. ಜಿಲ್ಲೆಯಲ್ಲಿ ಹಿಂದುಳಿದ ವರ್ಗದ ಇಲಾಖೆಗೆ 1 ನಿವೇಶನ, ಅಲ್ಪಸಂಖ್ಯಾತರ ಇಲಾಖೆಗೆ 1 ನಿವೇಶನ ಹಾಸ್ಟೆಲ್‌ಗೆ ಬೇಕಾಗಿದ್ದು, ನಿವೇಶನಗಳನ್ನು ಬೇಗನೆ ಒದಗಿಸಬೇಕಿದೆ.<br><br>7. 454 ಶುದ್ಧ ಕುಡಿಯುವ ನೀರಿನ ಘಟಕಗಳ ಪೈಕಿ 385 (ಶೇ. 84%) ಕಾರ್ಯ ನಿರ್ವಹಿಸುತ್ತಿದೆ. 124 ಘಟಕಗಳಿಗೆ ನಿರ್ವಹಣೆಗಾಗಿ ಟೆಂಡರ್ ಕರೆಯಲಾಗಿದೆ.<br><br>8. ಅಂಗನವಾಡಿ ಕಾರ್ಯಕರ್ತೆಯರಿಗೆ ನಿಯಮಿತವಾಗಿ ವೇತನ ನೀಡಲಾಗುತ್ತಿದೆ. ಆಗಸ್ಟ್ ತಿಂಗಳಲ್ಲಿ ಹೆಚ್ಚಿಸಲಾದ ವೇತನ ಇನ್ನೂ ಪಾವತಿಸಬೇಕಿದೆ.<br><br>9. ಮರಳಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಹೆಚ್ಚಾಗಿ ಎಂ ಸ್ಯಾಂಡ್ ಉಪಯೋಗಿಸುತ್ತಿದ್ದು, ನೈಸರ್ಗಿಕ ಮರಳಿಗೆ ಹೆಚ್ಚಿನ ಬೇಡಿಕೆ ಇರುವುದಿಲ್ಲ. ಹಾಲಿ ನದಿಗಳಲ್ಲಿ ನೀರು ಇರುವುದರಿಂದ ನೈಸರ್ಗಿಕ ಮರಳು ಗಣಿಗಾರಿಕೆ ಪ್ರಾರಂಭವಾಗಿರುವುದಿಲ್ಲ.<br>10. ತಾಲ್ಲೂಕು ಆಸ್ಪತ್ರೆಗಳಲ್ಲಿ Ultra Sound Scanning ವ್ಯವಸ್ಥೆ ಲಭ್ಯವಿದ್ದು, Radiologist ಗಳು ಲಭ್ಯವಿರುವುದಿಲ್ಲ. ಪ್ರಸೂತಿ ತಜ್ಞರಿಗೆ ತರಬೇತಿ ನೀಡಿದ್ದರೂ ಸಹ ಗರ್ಭಿಣಿ ಸ್ತ್ರೀಯರಿಗೆ ಸ್ಕ್ಯಾನಿಂಗ್ ಮಾಡಲಾಗುತ್ತಿಲ್ಲ. ಗ್ರೂಪ್ ಡಿ ಹುದ್ದೆಗಳನ್ನು ಶೇ. 25 ರಷ್ಟು ಕಡಿತಗೊಳಿಸಲಾಗಿದ್ದು, ಇದರಿಂದಾಗಿ ಆಸ್ಪತ್ರೆ ಸ್ವಚ್ಛತೆಗೆ ತೊಂದರೆಯಾಗಿರುತ್ತದೆ.<br><br>11. ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಎಸ್.ಎಫ್.ಸಿ. ಅನುದಾನದ ಹೆಚ್ಚುವರಿ ಭಾಗ ಪೌರಕಾರ್ಮಿಕರ ವೇತನಕ್ಕೆ ಸಂದಾಯವಾಗುತ್ತಿದ್ದು, ಜಿಲ್ಲಾಧಿಕಾರಿಗಳು ಇದನ್ನು ಪರಿಶೀಲಿಸಬೇಕಿದೆ. |

| 04 | ಕ್ಷೇತ್ರ ವೀಕ್ಷಣೆ | | |
|---|---|---|---|
| ಕ್ರಮ ಸಂಖ್ಯೆ: | ಭೇಟಿ ನೀಡಿದ ತಾಲ್ಲೂಕು / ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
| 01 | ಹಾಸನ /ಹಾಸನ ನಗರ | ಪೆನಷನ್ ಮೊಹಲ್ಲಾ | ಅತಿಯಾದ ಮಳೆಯಿಂದ ಪೂರ್ಣ ಪ್ರಮಾಣದಲ್ಲಿ ಹಾನಿಯಾಗಿರುವ 03 ಮನೆಗಳನ್ನು ವೀಕ್ಷಿಸಲಾಯಿತು. |
| 02 | ಆಲೂರು / ಭೈರಾಪುರ | ಸ.ಹಿ.ಪ್ರಾ. ಶಾಲೆ | ಮಳೆಯಿಂದ ಹಾನಿಯಾದ ಶಾಲಾ ಕಟ್ಟಡವನ್ನು ವೀಕ್ಷಿಸಲಾಯಿತು. |
| 03 | ಸಕಲೇಶಪುರ/ಬಾಳ್ಳುಪೇಟೆ | ಆರ್.ಓ. ಪ್ಲಾಂಟ್ | ಕುಡಿಯುವ ನೀರಿನ ಆರ್.ಓ. ಪ್ಲಾಂಟ್ ಘಟಕವನ್ನು ಪರಿಶೀಲಿಸಲಾಯಿತು. |
| 04 | ಸಕಲೇಶಪುರ / ಬಾಗೆ | ಆರ್.ಓ. ಪ್ಲಾಂಟ್ | ಕುಡಿಯುವ ನೀರಿನ ಆರ್.ಓ. ಪ್ಲಾಂಟ್ ಘಟಕವನ್ನು ಪರಿಶೀಲಿಸಲಾಯಿತು. |
| 05 | ಸಕಲೇಶಪುರ / ಕಲ್ಲಹಳ್ಳಿ | ಸ.ಹಿ.ಪ್ರಾ ಶಾಲೆ | ಮಳೆಯಿಂದ ಹಾನಿಯಾದ ಶಾಲಾ ಕಟ್ಟಡದ ದುರಸ್ತಿ ಕಾರ್ಯವನ್ನು ಪರಿಶೀಲಿಸಲಾಯಿತು. |

| C | ಇತರೆ ವಿಷಯಗಳು | |
|---|---|---|

(ನವೀನ್‌ರಾಜ್ ಸಿಂಗ್, ಐ.ಎ.ಎಸ್.)
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಿನರಲ್
ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು
ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

## ಶ್ರೀ ವಿ.ಅನ್ಬುಕುಮಾರ್ ಭಾ.ಆ.ಸೇ., ವಿಶೇಷ ಆಯುಕ್ತರು (ಆಡಳಿತ), ಬಿಬಿಎಂಪಿ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ

## ಪ್ರವಾಸ ವರದಿ

| ಕ್ರಮ ಸಂಖ್ಯೆ | ಅಂಶಗಳು | ವರದಿ |
|---|---|---|
| 1. | ಉಸ್ತುವಾರಿ ಜಿಲ್ಲೆಯ ಹೆಸರು | ಕೊಡಗು |
| 2. | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ವಿ.ಅನ್ಬುಕುಮಾರ್ |
| 3. | ಪ್ರವಾಸ ಕೈಗೊಂಡ ದಿನಾಂಕ | ದಿನಾಂಕ:18-12-2019 ರಿಂದ 20-12-2019ರವರೆಗೆ |
| | | |
| A | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | ಮದೇನಾಡಿನಲ್ಲಿ ಚಾಲ್ತಿಯಲ್ಲಿರುವ ಪುನರ್ ವಸತಿ ಯೋಜನೆಯನ್ನು ಪರಿಶೀಲಿಸಲಾಯಿತು. ಜನವರಿ-2020ರ ಕೊನೆಯೊಳಗೆ ಮನೆ ಹಾಗೂ ಬಡಾವಣೆ ಈ ಎರಡು ಸಂಪೂರ್ಣ ವ್ಯವಸ್ಥೆಯಾಗುತ್ತಿರುವುದನ್ನು ಪರಿಶೀಲಿಸಲಾಯಿತು. |
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | ಈಗಾಗಲೇ ಕಳೆದ ತಿಂಗಳು ನೆರೆ ಸಂತ್ರಸ್ಥರಿಗೆ ವಿತರಿಸಿದ ಮನೆಗಳ ಕುರಿತು ಪರಿಶೀಲಿಸಲಾಯಿತು. 35 ಮನೆಗಳ ಪೈಕಿ 34 ಮನೆಗಳಲ್ಲಿ ಸಂತ್ರಸ್ಥರು ವಾಸವಾಗಿರುವುದು ಕಂಡುಬಂದಿರುತ್ತದೆ. |
| b) | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | ಎಲ್ಲಾ ಇಲಾಖೆಯ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಭಾರಿ ಮಳೆ ಮತ್ತು ಪ್ರವಾಹಕ್ಕೆ ಒಳಗಾಗಿ ಮನೆ, ಆಸ್ತಿಪಾಸ್ತಿ, ಬೆಳೆ ಕಳೆದುಕೊಂಡಿರುವವರಿಗೆ ಪರಿಹಾರ ನೀಡಿರುವುದರ ಕುರಿತು ಪರಿಶೀಲಿಸಲಾಯಿತು. ಎಲ್ಲಾ ಇಲಾಖೆಯ ಪರಿಶೀಲನಾ ಸಭೆ ನಡೆಸಿ ಸಂಬಂಧಿಸಿದ ಅಧಿಕಾರಿಗಳೊಂದಿಗೆ ವಿವರವಾಗಿ ಚರ್ಚಿಸಿ ಈ ಸಂಬಂಧ ಕಾಲಕಾಲಕ್ಕೆ ವರದಿ ಮಾಡಲು ಸೂಚಿಸಲಾಯಿತು. |
| B | ಕ್ಷೇತ್ರ ವೀಕ್ಷಣೆ | ಬಿಳಿಗೇರಿ, ಮಾದಾಪುರಗಳಲ್ಲಿ ನಿರ್ವಹಿಸುತ್ತಿರುವ ಮನೆಗಳನ್ನು ವೀಕ್ಷಿಸಲಾಯಿತು. ಈ ಸಂಬಂಧ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಸಹಾಯಕ ಆಯುಕ್ತರುಗಳೊಂದಿಗೆ ಚರ್ಚಿಸಲಾಯಿತು. |

(ವಿ.ಅನ್ಬುಕುಮಾರ್)

ವಿಶೇಷ ಆಯುಕ್ತರು (ಆಡಳಿತ) ಹಾಗೂ

ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

Scanned by CamScanner

ನಮೂನೆ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರ.ಸಂ. | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | **ಚಿಕ್ಕಮಗಳೂರು** |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | **ಶ್ರೀ ರಾಜೀವ್ ಚಾವ್ಲಾ, ಭಾ.ಆ.ಸೇ.,**<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,<br>ಸಿ.ಆ.ಸು.ಇ. (ಇ-ಆಡಳಿತ) ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು |
| 3 | ಪ್ರವಾಸ ಕೈಗೊಂಡ ದಿನಾಂಕ | **18-12-2019** |
| A | <u>ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ</u><br>• ಇನ್ ಪುಟ್ ಸಬ್ಸಿಡಿ ಪ್ರಗತಿ<br>• ಪ್ರವಾಹಪೀಡಿತ ಪ್ರದೇಶಗಳಲ್ಲಿ ಮನೆಗಳ ನಿರ್ಮಾಣ ಪ್ರಗತಿ<br>• ಪ್ರವಾಹಪೀಡಿತ ಪ್ರದೇಶಗಳಲ್ಲಿ ಮೂಲ ಸೌಲಭ್ಯದ ಬಗ್ಗೆ ಜಿಲ್ಲಾಧಿಕಾರಿ ಅನುದಾನ ಪ್ರಗತಿ<br>• ಪ್ರವಾಹಪೀಡಿತ ಪ್ರದೇಶಗಳಲ್ಲಿ ಮೂಲ ಸೌಲಭ್ಯದ ಬಗ್ಗೆ ಲೋಕೋಪಯೋಗಿ ಇಲಾಖೆ ಅನುದಾನ ಪ್ರಗತಿ<br>• R O Plant ಪ್ರಗತಿ<br>• ಪ್ರವಾಹದಿಂದ ಭೂಮಿ ಕಳೆದುಕೊಂಡವರಿಗೆ ಭೂಮಿ ನೀಡುವ ಬಗ್ಗೆ<br>• ಕೃಷಿ ಪರಿಸ್ಥಿತಿ | |
| a) | <u>ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಗಮನಿಸಿದ ಅಂಶಗಳು</u><br>ದಿನಾಂಕ: 18-12-2019ರಂದು ಪ್ರವಾಹಪೀಡಿತ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿ ಕಛೇರಿಯಲ್ಲಿ ಸಭೆ ನಡೆಸಿರುತ್ತೇನೆ.<br>• ದಿನಾಂಕ: 1-1-2019 ರಿಂದ ದಿನಾಂಕ: 17-12-2019 ರವರೆಗೆ ಜಿಲ್ಲೆಯಾದ್ಯಂತ ಬಂದ ಮಳೆಯ ಮಾಹಿತಿಯನ್ನು ವಿಮರ್ಶಿಸಿರುತ್ತೇನೆ.<br>• ಅತಿವೃಷ್ಟಿ ಹಿನ್ನೆಲೆಯಲ್ಲಿ ಜಿಲ್ಲೆಯ ತಾಲ್ಲೂಕುಗಳನ್ನು ಪ್ರವಾಹಪೀಡಿತವೆಂದು ಸರ್ಕಾರವು ಘೋಷಿಸಲಾಗಿರುವ ಮಾಹಿತಿಯನ್ನು ವಿಮರ್ಶಿಸಿರುತ್ತೇನೆ.<br>• ಇನ್ ಪುಟ್ ಸಬ್ಸಿಡಿ (ಪರಿಹಾರ) Flood Kharif 2019-20 ರ ಡಾಟಾ ಎಂಟ್ರಿ ಮತ್ತು ಪರಿಹಾರ ಪಾವತಿ ಮಾಹಿತಿಯನ್ನು ವಿಮರ್ಶಿಸಿರುತ್ತೇನೆ.<br>• 2019 ಆಗಸ್ಟ್ ಮತ್ತು ಸೆಪ್ಟಂಬರ್, ಅಕ್ಟೋಬರ್ ತಿಂಗಳಲ್ಲಿ ಮಳೆಯಿಂದ ಹಾನಿಗೊಂಡ ಮನೆಗಳ ವಿವರ ಮತ್ತು ಪರಿಹಾರ ಪಾವತಿ ವಿವರವನ್ನು ವರ್ಗವಾರು ವಿಮರ್ಶಿಸಿರುತ್ತೇನೆ.<br>• ಪ್ರವಾಹಪೀಡಿತ ತಾಲ್ಲೂಕುಗಳಲ್ಲಿ ಮೂಲ ಸೌಲಭ್ಯ ಕಾಮಗಾರಿಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ನೀಡಲಾಗಿರುವ ರೂ.20.00 ಕೋಟಿ ಅನುದಾನದ ಕ್ರಿಯಾ ಯೋಜನೆ ಬಗ್ಗೆ ಮತ್ತು ಅಂದಾಜು ಸಲ್ಲಿಕೆ ಬಗ್ಗೆ ವಿಮರ್ಶಿಸಿರುತ್ತೇನೆ.<br>• ಪ್ರವಾಹ ಪೀಡಿತ ತಾಲ್ಲೂಕುಗಳಲ್ಲಿ ಲೋಕೋಪಯೋಗಿ ಇಲಾಖೆಗೆ ನೀಡಿರುವ ರೂ31.12 ಕೋಟಿ ಅನುದಾನದ ಕಾಮಗಾರಿಗಳ ಪ್ರಗತಿ ವಿಮರ್ಶಿಸಿರುತ್ತೇನೆ.<br>• ಪ್ರವಾಹಪೀಡಿತ ತಾಲ್ಲೂಕುಗಳಲ್ಲಿ ಸಣ್ಣ ನೀರಾವರಿ ಇಲಾಖೆಗೆ ನೀಡಲಾಗಿರುವ ರೂ.8.63 | |

| | |
|---|---|
| | ಕೋಟಿ ಅನುದಾನದ ಕಾಮಗಾರಿಗಳ ಪ್ರಗತಿ ವಿಮರ್ಶಿಸಿರುತ್ತೇನೆ.<br>• RO Plant ಗಳ ಬಗ್ಗೆ RWS ಹಾಗೂ KRIDL ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳ ಪ್ರಗತಿ ವಿಮರ್ಶಿಸಿರುತ್ತೇನೆ.<br>• ಪ್ರವಾಹದಿಂದ ಮನೆ ಕಳೆದುಕೊಂಡವರಿಗ ಪುನರ್ವಸತಿ ಕಲ್ಪಿಸುವ ವಿಷಯದ ಪ್ರಗತಿ ವಿಮರ್ಶಿಸಿರುತ್ತೇನೆ.<br>• ಜಿಲ್ಲೆಯ ಹವಾಮಾನ ಹಾಗೂ ಕೃಷಿ ಪರಿಸ್ಥಿತಿಯ ಮಾಹಿತಿ ಬಗ್ಗೆ ವಿಮರ್ಶಿಸಿರುತ್ತೇನೆ. |

| | |
|---|---|
| b) | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ<br>• ಪೂರ್ಣ ಹಾನಿಗೊಂಡ ಮನೆಗಳಿಗೆ ಈಗಾಗಲೇ RGRHCL ನಿಂದ ಪರಿಹಾರದ ಹಣವನ್ನು ಮನೆ ನಿರ್ಮಾಣಕ್ಕಾಗಿ ನೀಡಿರುವುದರಿಂದ ಸದರಿ ಮನೆಗಳನ್ನು ಕೂಡಲೇ ಪ್ರಾರಂಭಿಸುವಂತೆ ಸೂಚಿಸಿರುತ್ತೇನೆ.<br>• ಮನೆಗಳನ್ನು ಕೂಡಲೇ ಪ್ರಾರಂಭಿಸುಂತೆ ಮಾನ್ಯ ಮುಖ್ಯಮಂತ್ರಿಗಳು ಫಲಾನುಭವಿಗಳಿಗೆ ನೀಡಿರುವ ಮನವಿ ಪತ್ರಗಳನ್ನು ಆಯಾ ಸಂತ್ರಸ್ಥರಿಗೆ ತಲುಪಿಸಿ ಮನೆಗಳನ್ನು ಪ್ರಾರಂಭಿಸಲು ಸೂಚಿಸುವಂತೆ ತಿಳಿಸಿರುತ್ತೇನೆ.<br>• ಮೂಲ ಸೌಲಭ್ಯ ಕಾಮಗಾರಿಗಳ ದುರಸ್ಥಿ/ಪುನಶ್ಚೇತನಕ್ಕಾಗಿ ಜಿಲ್ಲಾಧಿಕಾರಿಗಳಿಗೆ ನೀಡಲಾಗಿರುವ ರೂ.20.00 ಕೋಟಿ ಕಾಮಗಾರಿಗಳ ಕ್ರಿಯಾ ಯೋಜನೆ ಅನುಮೋದನೆಯಾಗಿದ್ದು, ಅದರಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯವರು ಅಂದಾಜು ಸಲ್ಲಿಸಲು ಬಾಕಿ ಇರುವ 143 ಕಾಮಗಾರಿಗಳಿಗೆ ಕೂಡಲೇ ಅಂದಾಜುಗಳನ್ನು ಸಲ್ಲಿಸುವಂತೆ ಮತ್ತು ಅದೇ ರೀತಿ ಎಲ್ಲಾ ಕಾಮಗಾರಿಗಳನ್ನು ಪ್ರಾರಂಭಿಸಲು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಸೂಚಿಸಿರುತ್ತೇನೆ.<br>• ಮೂಲ ಸೌಲಭ್ಯ ಕಾಮಗಾರಿಗಳ ದುರಸ್ಥಿ/ಪುನಶ್ಚೇತನಕ್ಕಾಗಿ ಲೋಕೋಪಯೋಗಿ ಇಲಾಖೆಗೆ ನೀಡಿರುವ ಅನುದಾನದಲ್ಲಿ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಸೂಚಿಸಿರುತ್ತೇನೆ.<br>• ಸಣ್ಣ ನೀರಾವರಿ ಇಲಾಖೆಗೆ ನೀಡಲಾಗಿರುವ ಅನುದಾನಕ್ಕೆ ಕೂಡಲೇ ಕಾಮಗಾರಿಗಳನ್ನು ಕೈಗೊಳ್ಳುವಂತೆ ಇಲಾಖಾಧಿಕಾರಿಗಳಿಗೆ ಸೂಚಿಸಿರುತ್ತೇನೆ.<br>• ಅತಿವೃಷ್ಟಿಯಿಂದ ಮನೆ ಹಾಗೂ ಜಮೀನು ಕಳೆದುಕೊಂಡವರಿಗೆ ಪುನರ್ವಸತಿ ಕಲ್ಪಿಸುವ ವಿಚಾರದಲ್ಲಿ ಮನೆ ನಿವೇಶನಕ್ಕೆ ಈಗಾಗಲೇ ಜಾಗ ಗುರುತಿಸಿದ್ದು, ಸದರಿ ಜಾಗದಲ್ಲಿ ಫಲಾನುಭವಿಗಳಿಗೆ ನಿವೇಶನಗಳ ಲೇಔಟ್ ಅನುಮೋದನೆ ಪಡೆದು ಹಂಚಿಕೆ ಕ್ರಮವಹಿಸಲು, ಅದೇ ರೀತಿ ಜಮೀನು ಕಳೆದುಕೊಂಡವರಿಗೆ ಬದಲಿ ಜಮೀನು ಗುರುತಿಸುವ ಕ್ರಮ ವಹಿಸಲು ಸೂಚಿಸಿರುತ್ತೇನೆ. |
| B | ಕ್ಷೇತ್ರ ವೀಕ್ಷಣೆ:<br><br>ದಿನಾಂಕ:18-12-2019 ರಂದು ಬೆಳಿಗ್ಗೆ ಅಧಿಕಾರಿಗಳ ಸಭೆ ಮುಗಿಸಿದ ನಂತರ ಮೂಡಿಗೆರೆ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ಮನೆಗಳನ್ನು ಕಳೆದುಕೊಂಡವರಿಗೆ ಪುನರ್ ನಿರ್ಮಾಣಕ್ಕೆ ನೀಡಲಾಗಿರುವ ಪರಿಹಾರದಲ್ಲಿ ಮನೆ ನಿರ್ಮಿಸುತ್ತಿರುವ ಸ್ಥಳಗಳ ವೀಕ್ಷಣೆ ನಡೆಸಿರುತ್ತೇನೆ. ವಿವರ ಕೆಳಗಿನಂತಿರುತ್ತದೆ. |

ರಾಜೀವ್ ಚಾವ್ಲಾ, ಭಾ.ಆ.ಸೇ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಸಿಆಸುಇ (ಇ-ಆಡಳಿತ)

| ಕ್ರ.ಸಂ. | ಭೇಟಿ ನೀಡಿದ ತಾಲ್ಲೂಕು/ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| 1 | ಮೂಡಿಗೆರೆ | 1) ಉಗ್ಗೇಹಳ್ಳಿ | ಮನೆ ನಿರ್ಮಾಣ ಸ್ಥಳ ಭೇಟಿ |
| | | 2) ಬಿಳಗುಳ | RO ಪ್ಲಾಂಟ್ ಪರಿಶೀಲನೆ |
| | | 3) ಹೆಸಗಲ್ | RO ಪ್ಲಾಂಟ್ ಪರಿಶೀಲನೆ |
| | | 4) ಈಶ್ವರಹಳ್ಳಿ (ಕೃಷ್ಣಾಪುರ) | ಮನೆ ನಿರ್ಮಾಣ ಸ್ಥಳ ಭೇಟಿ |

ರಾಜೀವ್ ಚಾವ್ಲಾ, ಭಾ.ಆ.ಸೇ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಸಿಆಸುಇ (ಇ-ಆಡಳಿತ)

ನಮೂನೆ

# ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರ.ಸಂ. | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | **ಚಿಕ್ಕಮಗಳೂರು** |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | **ಶ್ರೀ ರಾಜೀವ್ ಚಾವ್ಲಾ**, ಭಾ.ಆ.ಸೇ.,<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,<br>ಸಿ.ಆ.ಸು.ಇ. (ಇ-ಆಡಳಿತ) ಹಾಗೂ ಚಿಕ್ಕಮಗಳೂರು<br>ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು |
| 3 | ಪ್ರವಾಸ ಕೈಗೊಂಡ ದಿನಾಂಕ | **23-10-2019** |
| A | <u>ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ</u><br>ಮಾನ್ಯ ಮುಖ್ಯಮಂತ್ರಿಗಳು ವಿಧಾನಸೌಧದಿಂದ ಆಯಾ ಜಿಲ್ಲಾ ಕೇಂದ್ರದಲ್ಲಿ ಎಲ್ಲಾ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಜಿಲ್ಲಾಧಿಕಾರಿಗಳೊಂದಿಗೆ ನಡೆಸಿದ ವಿಡಿಯೋ ಸಂವಾದ ಸಭೆಯಲ್ಲಿ ಭಾಗವಹಿಸಲಾಗಿದೆ. | |
| a) | <u>ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಗಮನಿಸಿದ ಅಂಶಗಳು</u><br>ಅತಿವೃಷ್ಟಿ ಪ್ರದೇಶಗಳಲ್ಲಿನ ಸಂತ್ರಸ್ಥರುಗಳಿಗೆ ಪರಿಹಾರಾತ್ಮಕವಾಗಿ ಕ್ರಮ ವಹಿಸಲು ಅಧಿಕಾರಿಗಳು ಸ್ಪಂದಿಸುವಂತೆ ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿರುತ್ತಾರೆ. | |
| b) | <u>ನಿರ್ದೇಶನ ನೀಡಿದ ಬಗ್ಗೆ ಸಾರಾಂಶ</u><br>ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿರುವಂತೆ ಎಲ್ಲಾ ಅಧಿಕಾರಿಗಳು ತಮ್ಮ ಇಲಾಖಾ ವತಿಯಿಂದ ಕೈಗೊಳ್ಳಬೇಕಾಗಿರುವ ಪರಿಹಾರ ಕ್ರಮಗಳನ್ನು ವಿಳಂಬವಿಲ್ಲದೆ ಕೈಗೊಳ್ಳುವಂತೆ ಸೂಚಿಸಿರುತ್ತೇನೆ. | |
| B | <u>ಕ್ಷೇತ್ರ ವೀಕ್ಷಣೆ:</u><br><br>ಇರುವುದಿಲ್ಲ | |

ರಾಜೀವ್ ಚಾವ್ಲಾ, ಭಾ.ಆ.ಸೇ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಸಿಆಸುಇ (ಇ-ಆಡಳಿತ)

# ನಮೂನೆ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರಮ ಸಂಖ್ಯೆ | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಉಡುಪಿ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಎಂ.ಮಹೇಶ್ವರ್ ರಾವ್ |
| 3 | ಪ್ರವಾಸ ಕೈಗೊಂಡ ದಿನಾಂಕ | ಡಿಸೆಂಬರ್ 26, 2019 |
| **A** | **ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ** | ಸಭಾ ನಡವಳಿಯನ್ನು ಲಗತ್ತಿಸಿದೆ |
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | ಸಭಾ ನಡವಳಿಯನ್ನು ಲಗತ್ತಿಸಿದೆ |
| b) | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | ಸಭಾ ನಡವಳಿಯನ್ನು ಲಗತ್ತಿಸಿದೆ |
| **B** | **ಕ್ಷೇತ್ರ ವೀಕ್ಷಣೆ** | ಸಭಾ ನಡವಳಿಯನ್ನು ಲಗತ್ತಿಸಿದೆ |

| ಕ್ರಮ ಸಂಖ್ಯೆ | ಭೇಟಿ ನೀಡಿದ ತಾಲ್ಲೂಕು/ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| 01 | ಉಡುಪಿ | ಉಡುಪಿ | ಲಗತ್ತಿಸಿದೆ |

| | | |
|---|---|---|
| **C** | **ಇತರೆ ವಿಷಯಗಳು** | ಸಭಾ ನಡವಳಿಯನ್ನು ಲಗತ್ತಿಸಿದೆ |

**ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಮಾನ್ಯ ಸರ್ಕಾರದ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:26.12.2019 ರಂದು ಜರುಗಿದ ಉಡುಪಿ ಜಿಲ್ಲಾ ಮಟ್ಟದ ಅಧಿಕಾರಿಗಳೊಡನೆ ಜಿಲ್ಲಾಭಿವೃದ್ಧಿ, ಮರಳು ಸಮಸ್ಯೆ ಹಾಗೂ ನೆರೆ ಪರಿಹಾರ ಬಗ್ಗೆ ಪರಿಶೀಲನಾ ಸಭೆಯ ನಡವಳಿ:**

**ಸಮಯ: ಅಪರಾಹ್ನ 4.30 ಗಂಟೆ** **ಸ್ಥಳ: ಜಿಲ್ಲಾಧಿಕಾರಿ ಕಛೇರಿ ಸಭಾಂಗಣ**

**ಉಪಸ್ಥಿತರು:**

1) ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು
2) ಶ್ರೀ ಜಿ.ಜಗದೀಶ, ಭಾ.ಆ.ಸೇ. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
3) ಶ್ರೀ ಬಿ.ಸದಾಶಿವ ಪ್ರಭು, ಕ.ಆ.ಸೇ. ಅಪರ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
4) ಶ್ರೀ ಕೆ.ರಾಜು, ಕ.ಆ.ಸೇ, ಸಹಾಯಕ ಕಮೀಷನರು, ಕುಂದಾಪುರ

ಹಾಗೂ ಹಾಜರಿಯಲ್ಲಿ ಸಹಿ ಮಾಡಿದವರು

**********

ಸಭೆಯ ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿಯವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ಜಿಲ್ಲಾಧಿಕಾರಿಯವರನ್ನು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಯವರನ್ನು ಸ್ವಾಗತಿಸಿ ಪರಿಶೀಲನಾ ಸಭೆಯನ್ನು ನಡೆಸಿಕೊಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು.

ಮೊದಲಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ದಿನಾಂಕ 29.11.2019 ರಂದು ಮಾನ್ಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸೂಚಿಸಿದ ಅಂಶಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಬಗ್ಗೆ ಪರಿಶೀಲನೆಯನ್ನು ನಡೆಸಿದರು.

**<u>ಸಭೆಯಲ್ಲಿ ಚರ್ಚಿಸಲಾದ ಪ್ರಮುಖ ವಿಷಯಗಳು:</u>**

- ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಸಂಭವಿಸಿದ ನೆರೆಯಿಂದಾಗಿ A Category 51, B Category 136 ಒಟ್ಟು 187 ಸಂತ್ರಸ್ಥರಿಗೆ ಮನೆಗಳ ಪುನರ್ ನಿರ್ಮಾಣಕ್ಕೆ ಅವಕಾಶವಿರುವ ಬಗ್ಗೆ IEC ಅಡಿ ಅರಿವು ಮೂಡಿಸಿರುವುದಾಗಿ ಹಾಗೂ ಈ ಪೈಕಿ ಎಲ್ಲಾ ತಾಲುಕುಗಳ 86 ಸಂತ್ರಸ್ತರು ಮನೆ ಪುನರ್ ನಿರ್ಮಾಣ ಮಾಡಿಕೊಳ್ಳಲು ಆಸಕ್ತಿ ತೋರಿಸಿದ್ದು, 16 ಮನೆಗಳ ಪುನರ್ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿದೆ. ಬಾಕಿ ಇರುವ 70 ಮನೆಗಳ ಪುನರ್ ನಿರ್ಮಾಣ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲು ಎಲ್ಲಾ ತಹಶೀಲ್ದಾರರಿಗೆ ಸೂಚಿಸಿದರು. ಎಲ್ಲಾ ಸಂತ್ರಸ್ತರಿಗೆ ಸರಕಾರದಿಂದ ಬಿಡುಗಡೆಯಾಗಿರುವ ರೂ.1.00 ಲಕ್ಷ ಪರಿಹಾರವನ್ನು ಈಗಾಗಲೇ ಪಾವತಿಸಲಾಗಿದೆ. ಒಂದು ವೇಳೆ ಅವರು ತಮ್ಮ ಸಂಪನ್ಮೂಲದಿಂದ ಮನೆಗಳನ್ನು ದುರಸ್ತಿ

ಮಾಡಿಕೊಂಡಿದ್ದಲ್ಲಿ ಅಂತಹವರಿಗೆ ದುರಸ್ತಿ ಮೊತ್ತವನ್ನು ಪಾವತಿಸುವುದು ಸೂಕ್ತವೆಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಸದ್ರಿ ವಿಷಯದ ಬಗ್ಗೆ ಅನುಮತಿ ಕೋರಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.

**(ಕ್ರಮ : ತಹಶೀಲ್ದಾರರು ಉಡುಪಿ, ಕುಂದಾಪುರ, ಕಾರ್ಕಳ, ಬ್ರಹ್ಮಾವರ, ಬೈಂದೂರು, ಕಾಪು ಹೆಬ್ರಿ/ ಅಧೀಕ್ಷಕರು ಸಿ ಶಾಖೆ )**

- ಗ್ರಾಮೀಣ ಕುಡಿಯುವ ನೀರು ಯೋಜನೆಯ ಪ್ರಗತಿ ತುಂಬಾ ಕುಂಠಿತವಾಗಿದ್ದು, ಸಂಬಂಧಪಟ್ಟ ಇಲಾಖೆ ಯಾವುದೇ ಆಸಕ್ತಿ ವಹಿಸದೇ ಇರುವುದರ ಕುರಿತು ಅಸಮಧಾನ ವ್ಯಕ್ತಪಡಿಸಿದರು. ಮತ್ತು ಸಂಬಂಧಪಟ್ಟವರ ಮೇಲೆ ಶಿಸ್ತು ಕ್ರಮವಹಿಸುವುದಾಗಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.

**(ಕ್ರಮ : ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ/ ಕಾರ್ಯನಿರ್ವಾಹಕ ಇಂಜಿನಿಯರ್ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ )**

- ಪ್ರಾಕೃತಿಕ ವಿಕೋಪದಡಿ ವಿವಿಧ ಕಾಮಗಾರಿಗಳಿಗೆ ನೀಡಲಾಗಿರುವ ಅನುದಾನಗಳ ಸಮರ್ಪಕವಾದ ಬಳಕೆಯ ಬಗ್ಗೆ ಚರ್ಚಿಸಲಾಯಿತು. ಅದರಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, ಪ್ರಾಕೃತಿಕ ವಿಕೋಪದಡಿ ಸದ್ರಿ ಇಲಾಖೆಗೆ ಒಟ್ಟು 2018-19 ನೇ ಸಾಲಿಗೆ ಅಂದಾಜು ಮೊತ್ತ ರೂ. 606.47 ಲಕ್ಷದ 259 ಕಾಮಗಾರಿಗಳು ಮಂಜೂರಾಗಿದ್ದು, ಅವುಗಳಲ್ಲಿ 91 ಕಾಮಗಾರಿಗಳು ಪ್ರಗತಿಯಲ್ಲಿದ್ದು, 38 ಕಾಮಗಾರಿಗಳು ಪೂರ್ಣಗೊಂಡಿರುವುದಾಗಿ ಹಾಗೂ 2019-20 ರಲ್ಲಿ 496 ಕಾಮಗಾರಿಗಳು ಮಂಜೂರಾಗಿದ್ದು, 60 ಕಾಮಗಾರಿಗಳು ಪೂರ್ಣಗೊಂಡಿದ್ದು, 26 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಬಾಕಿ ಉಳಿದಿರುವ ಎಲ್ಲಾ ಕಾಮಗಾರಿಗಳನ್ನು ತ್ವರಿತವಾಗಿ ಪ್ರಾರಂಭಿಸಿ ಜನವರಿ 10 ರೊಳಗೆ ಮುಕ್ತಾಯಗೊಳಿಸುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ ಇವರು ತಿಳಿಸಿದ್ದು, ಸದ್ರಿ ಎಲ್ಲಾ ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ )**

- ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, ಪ್ರಾಕೃತಿಕ ವಿಕೋಪದಡಿ ಲೋಕೋಪಯೋಗಿ ಇಲಾಖೆಗೆ ಒಟ್ಟು ರೂ.13.81 ಕೋಟಿಯ 30 ಕಾಮಗಾರಿಗಳು ಮಂಜೂರಾಗಿದ್ದು, ಅದರಲ್ಲಿ 7 ಕಾಮಗಾರಿಗಳು ಮುಗಿದಿದ್ದು, 20 ಕಾಮಗಾರಿಗಳು ಪ್ರಗತಿಯಲ್ಲಿದೆ. 3 ಕಾಮಗಾರಿಗಳು ಟೆಂಡರ್ ಹಂತದಲ್ಲಿರುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ ಇವರು ತಿಳಿಸಿದ್ದು, ಈ ಬಗ್ಗೆ ಎಲ್ಲಾ ಕಾಮಗಾರಿಗಳನ್ನು ಜನವರಿ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ )**

- ಮೆಸ್ಕಾಂಗೆ ಸಂಬಂಧಿಸಿದಂತೆ ಪ್ರಾಕೃತಿಕ ವಿಕೋಪದ ಸಂದರ್ಭದಲ್ಲಿ ಹಾನಿಯ ಪುನರ್ ನಿರ್ಮಾಣಕ್ಕೆ ಸುಮಾರು ರೂ. 573.00 ಲಕ್ಷ ಬಿಡುಗಡೆಗೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು. ಸರಕಾರದಿಂದ ಅನುದಾನ ಬಿಡುಗಡೆಯಾದ ಕೂಡಲೇ ಮೆಸ್ಕಾಂ ಗೆ ಬಿಡುಗಡೆ ಮಾಡಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  ಜೋತು ಬಿದ್ದ ವಿದ್ಯುತ್ ತಂತಿಗಳ ಬಗ್ಗೆ ನಿಗಾವಹಿಸಲು ಹಾಗೂ ಯಾವುದೇ ಅವಘಡ ಆಗದಂತೆ ಶಾಲೆ ಹಾಸ್ಟೆಲ್, ಅಂಗನವಾಡಿ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ವಿದ್ಯುತ್ ಅವಘಡದಿಂದ ಪ್ರಾಣ ಹಾನಿಗಳಾಗದಂತೆ ಎಲ್ಲಾ ಕ್ಷೇತ್ರಾಧಿಕಾರಿಗಳಿಂದ ಪರಿಶೀಲನೆ ನಡೆಸಿ ಲೋಪಗಳಿದ್ದಲ್ಲಿ ಸರಿಪಡಿಸುವಂತೆ ಅಧೀಕ್ಷಕ ಇಂಜಿನಿಯರ್, ಮೆಸ್ಕಾಂ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ : ಅಧೀಕ್ಷಕ ಇಂಜಿನಿಯರ್, ಮೆಸ್ಕಾಂ, ಉಡುಪಿ )**

- ನಿರ್ಮಿತಿ ಕೇಂದ್ರ ಉಡುಪಿ ಇಲ್ಲಿನ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, ಪ್ರಾಕೃತಿಕ ವಿಕೋಪ ಯೋಜನೆಯಡಿಯಲ್ಲಿ 2019-20 ನೇ ಸಾಲಿನ ಮೊದಲ ಹಂತದಲ್ಲಿ ಮಂಜೂರಾದ ಒಟ್ಟು 304 ಕಾಮಗಾರಿಗಳಲ್ಲಿ 38 ಕಾಮಗಾರಿಗಳು ಮುಕ್ತಾಯವಾಗಿದ್ದು, ಬಾಕಿ ಉಳಿದಿರುವ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸಲಾಗುವುದಾಗಿ ಯೋಜನಾ ಅಭಿಯಂತರರು ನಿರ್ಮಿತಿ ಕೇಂದ್ರ ಇವರು ತಿಳಿಸಿದರು. ಈ ಬಗ್ಗೆ ಎಲ್ಲಾ ಕಾಮಗಾರಿಗಳನ್ನು ಜನವರಿ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ : ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ ಉಡುಪಿ)**

- ಡೆಂಗ್ಯೂ ಮಲೇರಿಯಾ ಮುಂತಾದ ಸಾಂಕ್ರಾಮಿಕ ರೋಗಗಳ ತೀವ್ರ ನಿಗಾವಹಿಸಲು ಹಾಗೂ ಯಾವುದೇ ಪ್ರಕರಣಗಳು ಬಾರದಂತೆ ಕ್ರಮವಹಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಉಡುಪಿ)**

- ಕಳೆದ ಹತ್ತು ವರ್ಷಗಳಿಂದ ಜಿಲ್ಲಾ ಆಸ್ಪತ್ರೆಗೆ ಖರೀದಿಸಿದ ವೈದ್ಯಕೀಯ ಉಪಕರಣಗಳ ಸಂಖ್ಯೆ, ಅವುಗಳಲ್ಲಿ ಉಪಯೋಗದಲ್ಲಿರುವ, ಉಪಯೋಗಿಸದೇ ಇರುವ ವೈದ್ಯಕೀಯ ಉಪಕರಣಗಳ ಹಾಗೂ ಉಪಯೋಗದಲ್ಲಿರುವ ವೈದ್ಯಕೀಯ ಉಪಕರಣಗಳ ಪೈಕಿ ಎಷ್ಟು ಸರಿಯಾಗಿ ಕಾರ್ಯನಿರ್ವಹಿಸುತ್ತಿದೆ ಹಾಗೂ ಎಷ್ಟು ಉಪಯೋಗಿಸದೇ ಅನುಪಯುಕ್ತವಾಗಿದೆ ಎಂಬ ಬಗ್ಗೆ ಮುಂದಿನ ಸಭೆಯಲ್ಲಿ ಮಾಹಿತಿಯನ್ನು ನೀಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಜಿಲ್ಲಾ ಶಸ್ತ್ರ ಚಿಕಿತ್ಸಕರು ಉಡುಪಿ ಇವರಿಗೆ ಸೂಚಿಸಿದರು.

  **(ಕ್ರಮ: ಜಿಲ್ಲಾ ಶಸ್ತ್ರ ಚಿಕಿತ್ಸಕರು, ಉಡುಪಿ/ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಉಡುಪಿ ಜಿಲ್ಲೆ)**

- ರಾಷ್ಟ್ರೀಯ ಹೆದ್ದಾರಿ ಸಮಸ್ಯೆಯ ಕುರಿತಂತೆ ಚರ್ಚಿಸಲಾಗಿ ಪ್ರಸ್ತುತ ಕುಂದಾಪುರದ ಶಾಸ್ತ್ರೀ ಸರ್ಕಲ್ ಬಳಿಯ ಫ್ಲೈ ಓವರ್ ಕಾಮಗಾರಿಯು ಕಳೆದ ಹತ್ತು ವರ್ಷದಿಂದ ಪ್ರಗತಿಯಲ್ಲಿದ್ದು ಈವರೆಗೂ ಪೂರ್ಣಗೊಂಡಿರುವುದಿಲ್ಲ. ಕುಂದಾಪುರ ತಾಲೂಕು ಬಸ್ರೂರು ಮೂರುಕೈ ಜಂಕ್ಷನ್ ನ Under pass ಕಾಮಗಾರಿಯು ತೀರಾ ವಿಳಂಬವಾಗಿ ನಡೆಯುತ್ತಿದ್ದು, ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿದಂತೆ ಬಾಕಿ ಇರುವ ಎಲ್ಲಾ ಕಾಮಗಾರಿಗಳ ಬಗ್ಗೆ ಚರ್ಚಿಸಲು NHAI ಇವರ ಸಭೆಯನ್ನು ಕರೆದು ಚರ್ಚಿಸಲು ಸೂಚಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮಂಗಳೂರು/ ಅಧೀಕ್ಷಕರು ಸಿ ಶಾಖೆ)**

- 2019 ನೇ ಸಾಲಿನಲ್ಲಿ ಮಳೆಯಿಂದಾಗಿ ಅಡಿಕೆ ಕೊಳೆ ರೋಗಕ್ಕೆ ಪರಿಹಾರ ಪಾವತಿಸಲು ಕಂದಾಯ ಇಲಾಖೆಗೆ ಜಿಲ್ಲಾಧಿಕಾರಿಗಳ ಮೂಲಕ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಆದರೆ ವಲಯ ಕೃಷಿ ಸಂಶೋಧನಾ ಕೇಂದ್ರ ಬ್ರಹ್ಮಾವರದವರು ನೀಡಿರುವ ವರದಿಯಲ್ಲಿ ಕೊಳೆ ರೋಗದಿಂದ ಆದ ಹಾನಿಯ ಪ್ರಮಾಣವು ಶೇಕಡಾ 10 ರಿಂದ 15 ಇದ್ದು, ಪರಿಹಾರ ಪಾವತಿಸಲು ಮಾರ್ಗಸೂಚಿ ಪ್ರಕಾರ ಅವಕಾಶವಿರುವುದಿಲ್ಲವೆಂದು ಸಭೆಯಲ್ಲಿ ಹಾಜರಿದ್ದ ತೋಟಗಾರಿಕಾ ಇಲಾಖಾ ಅಧಿಕಾರಿಗಳು ತಿಳಿಸಿದ್ದು, ಈ ವಿಷಯದಲ್ಲಿ ಮುಂದಿನ ಕ್ರಮವಿರುವುದಿಲ್ಲವೆಂದು ಹಾಗೂ ಕಾರ್ಯಸೂಚಿಯನ್ನು ಕೈಬಿಡಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಒಗ್ಗೂಡಿಸುವಿಕೆ ಮೂಲಕ ಪ್ರದೇಶ ವಿಸ್ತರಣೆಯನ್ನು ಕೈಗೊಳ್ಳಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿರುವಂತೆ ನಿರ್ದೇಶನಾಲಯದ ಮಾರ್ಗಸೂಚಿ ಪ್ರಕಾರ RKVY – RAFTHAR ಯೋಜನೆಯಡಿ ಉಡುಪಿ ಜಿಲ್ಲೆಗೆ 100 ಹೆಕ್ಟೇರ್ ಭೌತಿಕ ಗುರಿ ನಿಗಧಿಯಾಗಿದ್ದು, ಪ್ರಸಕ್ತ ಸಾಲಿನಲ್ಲಿ ಬೆಳೆನಾಟಿ ಕಾಲ ಮುಗಿದಿದ್ದು, 2020-21 ನೇ ಸಾಲಿನಲ್ಲಿ ಒಗ್ಗೂಡಿಸುವಿಕೆಯಡಿ ಗ್ರಾಮ ಪಂಚಾಯತ್ ವಾರು ಪ್ರದೇಶ ವಿಸ್ತರಣೆಗೆ ಕ್ರಿಯಾಯೋಜನೆ ತಯಾರಿಸುವಂತೆ ತಾಲೂಕು ಮಟ್ಟದ ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಒಗ್ಗೂಡಿಸುವಿಕೆ model cost ನ್ನು ಅನುಮೋದನೆಗಾಗಿ ನಿರ್ದೇಶನಾಲಯಕ್ಕೆ ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರೊಂದಿಗೆ ಚರ್ಚಿಸಿ ಸಲ್ಲಿಸಲಾಗಿದೆಯೆಂದು ಸಭೆಯಲ್ಲಿ ಹಾಜರಿದ್ದ ಅಧಿಕಾರಿಯವರು ಸಭೆಗೆ ತಿಳಿಸಿದರು. ಈ ಬಗ್ಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಪ್ರತಿಕ್ರಿಯಿಸಿ 2 ಕೇಂದ್ರ ವಲಯ ಯೋಜನೆಗಳನ್ನು ಒಗ್ಗೂಡಿಸಿ ಸಹಾಯಧನ ನೀಡಲು ಅವಕಾಶವಿರುವುದಿಲ್ಲವೆಂದು ಅಸಮಧಾನ ವ್ಯಕ್ತಪಡಿಸಿ, ಈ ವಿಷಯದಲ್ಲಿ ಯಾವುದೇ ಅಸಡ್ಡೆಯನ್ನು ಸಹಿಸಲು ಅವಕಾಶವಿಲ್ಲವೆಂದು ತಿಳಿಸಿದರು. ರಾಜ್ಯ ವಲಯ ಸಮಗ್ರ ತೋಟಗಾರಿಕಾ ಅಭಿವೃದ್ಧಿ ಯೋಜನೆ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಒಗ್ಗೂಡಿಸಿ 2020-21 ನೇ ಸಾಲಿನಲ್ಲಿ ಪ್ರದೇಶ ವಿಸ್ತರಣೆ ಕಾರ್ಯಕ್ರಮವನ್ನು ಕೈಗೊಳ್ಳಲು ಸೂಚಿಸಿದರು. ಈ ಬಗ್ಗೆ ಶೀಘ್ರ ಕ್ರಿಯಾ ಯೋಜನೆಯನ್ನು ತಯಾರಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ ಉಡುಪಿ)**

- ಪಡುಕೆರೆ ಬೀಚ್‌ನಲ್ಲಿ ಮರೀನಾ ಮಾಡಲು ಕಾರ್ಯಸಾಧ್ಯತಾ ವರದಿ ಮತ್ತು DPR (Detailed Project Report) ತಯಾರಿಸಲು ಸಮಾಲೋಚಕರನ್ನು ನೇಮಿಸಿಕೊಳ್ಳಲು ಅಂದಾಜು ಸುಮಾರು ರೂ.80.00 ಲಕ್ಷ ಅನುದಾನ ತಗಲಬಹುದಾಗಿದ್ದು, ಅನುದಾನ ಕೋರಿ ಪ್ರಸ್ತಾವನೆ ಸರಕಾರಕ್ಕೆ ಸಲ್ಲಿಸಲಾಗುತ್ತಿರುವುದಾಗಿ ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ಇವರು ವಿವರಿಸಿದರು. ಈ ಬಗ್ಗೆ ಶೀಘ್ರವಾಗಿ ಪ್ರಸ್ತಾವನೆಯನ್ನು ತಯಾರಿಸಿ ಸಲ್ಲಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ : ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಉಡುಪಿ )**

- NREGA (ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ) ಕ್ರಿಯಾ ಯೋಜನೆಯನ್ನು ತಯಾರಿಸಿ ಕೂಡಲೇ ಜಿಲ್ಲಾ ಪಂಚಾಯತ್‌ಗೆ ಸಲ್ಲಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ : ಜಂಟಿ ಕೃಷಿ ನಿರ್ದೇಶಕರು, ಉಡುಪಿ )**

- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮೀನುಗಾರಿಕಾ ಇಲಾಖೆಯಿಂದ ಮೂಲಭೂತ ಸೌಕರ್ಯಾಭಿವೃದ್ಧಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ಈ ಬಗ್ಗೆ ಕೃಷಿ ಇಲಾಖೆಯವರು ಸಂಬಂಧಿಸಿದ ಅಧಿಕಾರಿಯವರೊಂದಿಗೆ ಸಭೆ ನಡೆಸಿ ಯೋಜನಾ ಪ್ರಸ್ತಾವನೆಯನ್ನು ತಯಾರಿಸಿ ದಿನಾಂಕ:15.01.2020 ರ ಒಳಗಾಗಿ ಸಲ್ಲಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ : ಜಂಟಿ ಕೃಷಿ ನಿರ್ದೇಶಕರು, ಉಡುಪಿ )**

- ಉಡುಪಿ ಜಿಲ್ಲೆಗೆ ಸರಕಾರಿ ವೈದ್ಯಕೀಯ ಕಾಲೇಜು ಮಂಜೂರಾಗಿದ್ದು, ಸದರಿ ವೈದ್ಯಕೀಯ ಕಾಲೇಜು ಪ್ರಾರಂಭಿಸಲು 20 ಎಕ್ರೆ ಸ್ಥಳದ ಅವಶ್ಯಕತೆಯಿರುವುದರಿಂದ ಉಡುಪಿಯಿಂದ 10 ಕಿ.ಮೀ ಒಳಗೆ ಜಮೀನನ್ನು ಗುರುತಿಸಿ ಕಾದಿರಿಸಲು ತಹಶೀಲ್ದಾರರು ಉಡುಪಿ ತಾಲೂಕು ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ : ತಹಶೀಲ್ದಾರರು , ಉಡುಪಿ ತಾಲೂಕು)**

- ಮೀನುಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ ಮೀನುಗಾರರ ಸಾಲ ಮನ್ನಾದ ಬಗ್ಗೆ ಇಲಾಖೆಯಲ್ಲಿ ಸರಿಯಾದ ಮಾರ್ಗಸೂಚಿ ಇಲ್ಲದೇ ಇರುವ ಬಗ್ಗೆ ಉಪನಿರ್ದೇಶಕರು ಮೀನುಗಾರಿಕಾ ಇಲಾಖೆ ಇವರು ತಿಳಿಸಿದರು. ಅದರಂತೆ ಚರ್ಚಿಸಲಾಗಿ ಈ ಬಗ್ಗೆ ಸರಿಯಾದ ಮೀನುಗಾರರ ಸಾಲ ಮನ್ನಾದ ಬಗ್ಗೆ ಸರಿಯಾದ ಮಾಹಿತಿ ಕೋರಿ ಸರಕಾರಕ್ಕೆ ಪತ್ರ ಬರೆಯುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ : ಉಪ ನಿರ್ದೇಶಕರು, ಮೀನುಗಾರಿಕಾ ಇಲಾಖೆ)**

- ಶಾಲೆಗಳಲ್ಲಿ ಅಟಲ್ ಇನ್ನೋವೇಶನ್ ಲ್ಯಾಬ್ ಗಳ ಅನುಷ್ಠಾನದ ಬಗ್ಗೆ ಚರ್ಚಿಸಲಾಗಿ, ಜಿಲ್ಲಾಧಿಕಾರಿಯವರು ಈ ಬಗ್ಗೆ ತಪಾಸಣೆಯನ್ನು ನಡೆಸಿರುವುದಾಗಿ ಹಾಗೂ ಇದರ ಉಪಯೋಗದ ಕುರಿತು ವ್ಯಾಪಕ ಪ್ರಚಾರ ನೀಡಿರುವುದಾಗಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.
- ಶಿಕ್ಷಣಾ ಇಲಾಖೆಗೆ ಸಂಬಂಧಿಸಿದಂತೆ ಉಡುಪಿ ಜಿಲ್ಲೆಯಲ್ಲಿ 8 [KPS ]ಕರ್ನಾಟಕ ಪಬ್ಲಿಕ್ ಸ್ಕೂಲ್ ಇದ್ದು, ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು ಕರ್ನಾಟಕ ಪಬ್ಲಿಕ್ ಸ್ಕೂಲ್ ನ ಹೈಸ್ಕೂಲ್ ವಿಭಾಗದ ವಿದ್ಯಾರ್ಥಿಗಳಿಗೆ ಬೋಧನೆ ಮಾಡ ಬೇಕಾಗಿದ್ದು, ಸದ್ರಿಯವರು ತರಗತಿಗಳನ್ನು ತೆಗೆದುಕೊಳ್ಳದೇ ಇರುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅನಾನುಕೂಲವಾಗುತ್ತಿರುವುದಾಗಿ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣಾ ಇಲಾಖೆ ಇವರು ತಿಳಿಸಿದ್ದು, ಈ ಗೊಂದಲವನ್ನು ಕೂಡಲೇ ಸರಿಪಡಿಸುವಂತೆ ಹಾಗೂ ಶೈಕ್ಷಣಿಕವಾಗಿ ಮಕ್ಕಳಿಗೆ ಹಿನ್ನಡೆಯಾಗದಂತೆ ಕ್ರಮವಹಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ : ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ /ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಉಡುಪಿ )**

- ಹಿಂದಿನ ಸಭೆಯಲ್ಲಿ ಜಿಲ್ಲೆಯ ಎಲ್ಲಾ ಅಂಗನವಾಡಿಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳು ಇರುವ ಬಗ್ಗೆ ಹಾಗೂ ಅವುಗಳ ಸಮರ್ಪಕ ಕಾರ್ಯನಿರ್ವಹಣೆ ಮತ್ತು ಸರಕಾರದ ಎಲ್ಲಾ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪುತ್ತಿರುವ ಬಗ್ಗೆ ಹಾಗೂ ಅಲ್ಲಿನ ಸ್ವಚ್ಛತೆ, ಮಕ್ಕಳ ಆರೋಗ್ಯ, ಹಾಗೂ ಪೌಷ್ಟಿಕ ಆಹಾರಗಳು ಮಕ್ಕಳಿಗೆ ಸಮರ್ಪಕವಾಗಿ ಪೂರೈಕೆಯಾಗುತ್ತಿರುವ ಬಗ್ಗೆ ಮತ್ತು ಮಕ್ಕಳಿಗೆ ನೀಡುತ್ತಿರುವ ಆಹಾರದ ಗುಣಮಟ್ಟದ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಪ್ರತೀ ವಾರ ತಪಾಸಣೆಯನ್ನು ನಡೆಸಲು ನಿರ್ದೇಶಿಸಿರುವ ಬಗ್ಗೆ ಚರ್ಚಿಸಲಾಗಿ, ಪ್ರತಿವಾರ ತಪ್ಪದೇ ನಿಯೋಜಿಸಿದ ಅಧಿಕಾರಿಗಳು ಅಂಗನವಾಡಿಗಳನ್ನು ತಪಾಸಣೆ ನಡೆಸಬೇಕಾಗಿ, ಈ ಬಗ್ಗೆ ತಪಾಸಣೆ ನಡೆಸಿದ ಬಗ್ಗೆ ವರದಿಯನ್ನು ನೀಡಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ)**

- ಪ್ರಾಕೃತಿಕ ವಿಕೋಪದಡಿ ಪರಿಕಂಡಿಕೆ ಜಿಲ್ಲಾ ಮುಖ್ಯ ರಸ್ತೆಯಲ್ಲಿ ಕೊಚ್ಚಿಕೊಂಡು ಹೋಗಿರುವ ಸೇತುವೆ ಕಾಮಗಾರಿಯನ್ನು ಅಲ್ಪಾವಧಿ ಟೆಂಡರ್ ಕರೆದು ಕೂಡಲೇ ಕೈಗೆತ್ತಿಕೊಳ್ಳುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ: ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಡುಪಿ)**

- ಸಹಕಾರಿ ಸಂಘಗಳ liquidation ಬಗ್ಗೆ ಚರ್ಚಿಸಲಾಗಿ, ಉಡುಪಿ ಜಿಲ್ಲೆಯಲ್ಲಿ ಪ್ರಸ್ತುತ 13 ಸಹಕಾರ ಸಂಘಗಳು ಸಮಾಪನೆಯಲ್ಲಿದ್ದು, ಈ ಪೈಕಿ 2 ಸಹಕಾರ ಸಂಘಗಳಲ್ಲಿ ಸ್ವತ್ತು ಇರುವುದಾಗಿ ಹಾಗೂ 5 ಸಹಕಾರ ಸಂಘಗಳಲ್ಲಿ ಸರ್ಕಾರಿ ಷೇರು/ ಸರ್ಕಾರಿ ಸಾಲ ಇದ್ದು, ಸರ್ಕಾರಿ ಷೇರು/ ಸಾಲ ಮನ್ನಾಕ್ಕೆ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಿರುವುದಾಗಿ ಸಹಕಾರಿ ಸಂಘಗಳ ಉಪನಿಬಂಧಕರು ತಿಳಿಸಿದ್ದು, ಎಲ್ಲಾ ಸಮಾಪನಾ ಸಹಕಾರ ಸಂಘಗಳ ಆಸ್ತಿ-ಜವಾಬ್ದಾರಿಯನ್ನು ಶೂನ್ಯಗೊಳಿಸಿ ನೊಂದಣಿ ರದ್ದತಿಗಾಗಿ ಶೀಘ್ರ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮಕೈಗೊಳ್ಳುವಂತೆ ಹಾಗೂ ಈ ಬಗ್ಗೆ ಸಮಗ್ರ ಮಾಹಿತಿಯನ್ನು ಕೂಡಲೇ ಇ-ಮೇಲ್ ಮೂಲಕ ಸಲ್ಲಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ: ಸಹಕಾರಿ ಸಂಘಗಳ ಉಪನಿಂಬಂಧಕರು, ಉಡುಪಿ )**

- ಮೂಕಾಂಬಿಕಾ ದೇವಸ್ಥಾನದ ವಿವಿಧ ಕಾಮಗಾರಿಗಳು ಸಮರ್ಪಕವಾಗಿ ಆಗದಿರುವುದು, ಹೊಸ ಭೋಜನ ಶಾಲೆಯ ಅಡುಗೆ ಮನೆಯ boiler ಗಳ ಸಮಸ್ಯೆ, ಮೆಟ್ಟಿಲುಗಳು ಜಾರುವ ಸಮಸ್ಯೆ , ಭಕ್ತಾದಿಗಳಿಗೆ ಸರಿಯಾದ ಸಮಯಕ್ಕೆ ಅನ್ನಪ್ರಸಾದ ದೊರೆಯುವುದು ವಿಳಂಬವಾಗುತ್ತಿರುವ ಬಗ್ಗೆ ದೂರುಗಳು ಬರುತ್ತಿರುವ ವಿಷಯಗಳ ಬಗ್ಗೆ ಚರ್ಚಿಸಲಾಗಿ, ಭೋಜನಾ ಶಾಲೆಯ ಇನ್ನೂ ಬಾಕಿ ಉಳಿದಿರುವ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿಯವರಿಗೆ ಸೂಚಿಸಿದರು.

  **(ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಉಡುಪಿ )**

- ಕೊಲ್ಲೂರು ಮೂಕಾಂಬಿಕಾ ದೇವಳದಲ್ಲಿ ಕ್ಲಪ್ತ ಸಮಯದಲ್ಲಿ ಅನ್ನಪ್ರಸಾದ ಸಿಗುವಲ್ಲಿ ಹಾಗೂ ಈ ಬಗ್ಗೆ ಯಾವುದೇ ದೂರುಗಳು ಬರದಂತೆ ಕ್ರಮ ವಹಿಸಲು ಕಾರ್ಯನಿರ್ವಹಣಾಧಿಕಾರಿ, ಮೂಕಾಂಬಿಕಾ ದೇವಸ್ಥಾನ, ಕೊಲ್ಲೂರು ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ : ಕಾರ್ಯನಿರ್ವಹಣಾಧಿಕಾರಿ, ಮೂಕಾಂಬಿಕಾ ದೇವಸ್ಥಾನ, ಕೊಲ್ಲೂರು)**

- ಕೊಲ್ಲೂರು ಗ್ರಾಮದ ಕುಡಿಯುವ ನೀರು ಮತ್ತು ಒಳಚರಂಡಿ ಯೋಜನೆಯನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಉಡುಪಿ )**

ಎಲ್ಲಾ ಇಲಾಖೆಗಳ ಪ್ರಗತಿ ಪರಿಶೀಲನೆಯನ್ನು ನಡೆಸಿದ ನಂತರ, ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಎಲ್ಲಾ ಇಲಾಖೆಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಪ್ರಗತಿಯಾಗುತ್ತಿಲ್ಲವೆಂದು ತಿಳಿಸಿ, ಆರ್ಥಿಕ ವರ್ಷದ ಅಂತ್ಯ ಸಮೀಪಿಸುತ್ತಿರುವುದರಿಂದ ಎಲ್ಲಾ ಇಲಾಖೆಗಳು ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಸಾಧಿಸಲು ಶೀಘ್ರ ಕ್ರಮವಹಿಸುವಂತೆ ಸೂಚನೆಯನ್ನು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ನೀಡಿದರು.

(ಎಂ.ಮಹೇಶ್ವರ್ ರಾವ್)
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್‌ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ದಿನಾಂಕ:17-12-2019ರಂದು ಪೂರ್ವಾಹ್ನ 10-30 ಗಂಟೆಗೆ ಸರ್ಕಾರದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಸಿ.ಎಲ್. ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿ ಪರಿಶೀಲನಾ ಸಭೆಯ ನಡವಳಿ.

*******

**ಅಧ್ಯಕ್ಷತೆ:**

ಮಾನ್ಯ ಶ್ರೀ ವಿ.ಪೊನ್ನುರಾಜ್, ಭಾ.ಆ.ಸೇ.,
ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಸಿ.ಎಲ್., ಹಾಗೂ
ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಬೆಂಗಳೂರು.

**ಉಪಸ್ಥಿತರು:**

1. ಶ್ರೀಮತಿ ಸಿಂಧು ಬಿ.ರೂಪೇಶ್, ಭಾ.ಆ.ಸೇ.,
   ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು
2. ಶ್ರೀಮತಿ ರೂಪ ಎಂ.ಜೆ.,ಕೆ.ಎ.ಎಸ್.,
   ಅಪರ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು
3. ಉಪ ಅರಣ್ಯ ಸಂರಕ್ಷಣಾಧಿಕಾರಿ,
   ಮಂಗಳೂರು ವಿಭಾಗ, ಮಂಗಳೂರು
4. ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ, ಮಂಗಳೂರು
5. ಶ್ರೀ ರಾಹುಲ್ ಶಿಂಧೆ, ಭಾ.ಆ.ಸೇ., ಪ್ರೊಬೇಷನರ್

ಹಾಗೂ ಸಭೆಯಲ್ಲಿ ಹಾಜರಿದ್ದ ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಗಳ ಅಧಿಕಾರಿಗಳು.

*******

ಸಭೆಯ ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿಯವರು ಇಂದಿನ ಸಭೆಗೆ ಆಗಮಿಸಿದ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ಜಿಲ್ಲಾಧಿಕಾರಿಯವರನ್ನು ಹಾಗೂ ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಜಿಲ್ಲಾಡಳಿತದ ಪರವಾಗಿ ಸ್ವಾಗತಿಸುತ್ತಾ, ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಸಭಾಧ್ಯಕ್ಷರನ್ನು ಕೋರಿದರು.

ಪ್ರಥಮವಾಗಿ ಮಾನ್ಯ ಸಭಾಧ್ಯಕ್ಷರು ಇಂದಿನ ಸಭೆಗೆ ಆಗಮಿಸಿದ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳ ಪರಿಚಯವನ್ನು ಮಾಡಿಕೊಂಡರು.

1. **ಕೃಷಿ ಇಲಾಖೆ:** ಜಿಲ್ಲೆಯಲ್ಲಿ 2019ರ ಡಿಸೆಂಬರ್ 16ರವರೆಗೆ ವಾಡಿಕೆ ಮಳೆ 4,035 ಮಿ.ಮೀ. ಇದ್ದು, 4,045 ಮಿ.ಮೀ. ಮಳೆ ಬಿದ್ದಿದೆ. ಒಟ್ಟಾರೆ ಜಿಲ್ಲೆಯಲ್ಲಿ 12 ಮಿ.ಮೀ. ಹೆಚ್ಚಿನ ಮಳೆ ಬಂದಿದೆ. ಆಗಸ್ಟ್ ಮಾಹೆಯಲ್ಲಿ ಅತೀ ಹೆಚ್ಚು ಅತಿವೃಷ್ಟಿಯಿಂದ ಬೆಳೆ ನಷ್ಟವಾಗಿದೆ. ಆಗಸ್ಟ್ ಮಾಹೆಯಲ್ಲಿ 3-4 ದಿವಸ ಮಳೆಯಿಂದಾಗಿ ಸಾಕಷ್ಟು ಬೆಳೆ ನಷ್ಟವಾಗಿರುವ ಬಗ್ಗೆ ವರದಿ ಮಾಡಲಾಗಿದೆ. 348.64 ಹೆಕ್ಟೇರ್‌ನಷ್ಟು ಕೃಷಿ ಬೆಳೆಗಳು ಹಾನಿಯಾಗಿವೆ. ಬೆಳೆ ಹಾನಿ ಬಗ್ಗೆ ಪರಿಹಾರ ತಂತ್ರಾಂಶದಲ್ಲಿ ದಾಖಲಿಸಲಾಗಿದೆಯೆಂದು ಜಂಟಿ ನಿರ್ದೇಶಕರು, ಕೃಷಿ ಇಲಾಖೆ ಇವರು ಸಭೆಯಲ್ಲಿ ತಿಳಿಸಿದರು.
   (ಕ್ರಮ: ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ದ.ಕ.ಮಂಗಳೂರು )

2. **ತೋಟಗಾರಿಕಾ ಇಲಾಖೆ:** ಜಿಲ್ಲೆಯಲ್ಲಿ 2018–19ನೇ ಸಾಲಿನ ಅತಿವೃಷ್ಟಿಯಿಂದಾಗಿ ತೋಟಗಾರಿಕಾ ಬೆಳೆಗಳಾದ, ಅಡಿಕೆ, ಬಾಳೆ ಮತ್ತು ತೆಂಗು ಬೆಳೆಗಳಿಗೆ ಹಾನಿಯಾಗಿದ್ದು, ಕೃಷಿ ಮತ್ತು ತೋಟಗಾರಿಕೆ ಬೆಳೆಗಳು ಸೇರಿ ಒಟ್ಟು ವಿಸ್ತೀರ್ಣ 634.098 ಆಗಿರುತ್ತದೆ. ಪರಿಹಾರ ತಂತ್ರಾಂಶದಲ್ಲಿ 5725 ಮಂದಿಗೆ ಪರಿಹಾರ ಪಾವತಿಗೆ ಬಾಕಿ ಇರುವುದಾಗಿ, ಆನ್ ಲೈನ್ ಮೂಲಕ ವರದಿ ಕಳುಹಿಸಲಾಗಿದೆಯೆಂದು ಉಪನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.
**(ಕ್ರಮ:** ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ದ.ಕ.ಮಂಗಳೂರು )

3. **ವಿಪತ್ತು ನಿರ್ವಹಣೆ** : ನೆರೆ ಪರಿಹಾರ ಕಾಮಗಾರಿಗಳ ಪ್ರಗತಿ: ಮಳೆಯಿಂದಾಗಿ ಹಾನಿಗೊಂಡಿರುವ ಮನೆಗಳ ಬಗ್ಗೆ ತಾಲೂಕುವಾರು ವಿವರವನ್ನು ಜಿಲ್ಲಾಧಿಕಾರಿಯವರು ಸಭೆಗೆ ವಿವರ ನೀಡಿದರು.

ಅ) ಸುಳ್ಯ ತಾಲ್ಲೂಕಿನಲ್ಲಿ 23 ಮನೆಗಳು ಹಾನಿಯಾಗಿದ್ದು, ಈ ಪೈಕಿ 11 ಮನೆಗಳ ನಿರ್ಮಾಣ ಕಾರ್ಯ ಪ್ರಾರಂಭಗೊಂಡಿದ್ದು, ಉಳಿಕೆ ಮನೆಗಳ ನಿರ್ಮಾಣವನ್ನು ಈ ವಾರದಲ್ಲಿ ಪ್ರಾರಂಭಿಸಲಾಗುವುದು. ಎಲ್ಲಾ ಫಲಾನುಭವಿಗಳ ಖಾತೆ ಹಣ ಜಮೆಯಾಗಿರುತ್ತದೆ. ಭೂಕುಸಿತದಿಂದ ಸುಳ್ಯ–ಮಡಿಕೇರಿ ಗಡಿಯಲ್ಲಿ 10 ಮನೆಗಳು ಹಾನಿಯಾಗಿರುವುದಾಗಿ ತಹಶೀಲ್ದಾರರು ತಿಳಿಸಿದರು.

ಈ ವಿಚಾರದಲ್ಲಿ ಮಾನ್ಯ ಸಭಾಧ್ಯಕ್ಷರು ಮಾತನಾಡಿ, ಭೂಕುಸಿತದಿಂದ ಹಾನಿಗೊಂಡಿರುವ 10 ಮನೆಗಳ ನಿರ್ಮಾಣದ ಬಗ್ಗೆ ಮುಂದಿನ ವಾರದಲ್ಲಿ ಬೇರೆ ಜಾಗವನ್ನು ಗುರುತಿಸಿ ಕೂಡಲೇ ಪ್ರಸ್ತಾವನೆಯನ್ನು ತಯಾರಿಸಿ, ಸಹಾಯಕ ಆಯುಕ್ತರು, ಪುತ್ತೂರು ಇವರಿಗೆ ಸಲ್ಲಿಸಲು ಸಂಬಂಧಪಟ್ಟ ತಹಶೀಲ್ದಾರರಿಗೆ ಸೂಚಿಸಿದರು.

ಅತಿವೃಷ್ಟಿಯಿಂದ ಮನೆ ಕಳೆದುಕೊಂಡಿರುವ ಸಂತ್ರಸ್ಥರಿಗೆ ತಲಾ ರೂ.1.00 ಲಕ್ಷ ಸಂತ್ರಸ್ಥರ ಖಾತೆಗೆ ಜಮೆಯಾಗಿರುವ ಬಗ್ಗೆ ಬ್ಯಾಂಕ್ ಖಾತೆಯ ಜೆರಾಕ್ಸ್ ಪ್ರತಿಯನ್ನು ಪಡೆದು, ಖುದ್ದಾಗಿ ಪರಿಶೀಲನೆ ನಡೆಸುವಂತೆ ಎಲ್ಲಾ ತಾಲ್ಲೂಕು ತಹಶೀಲ್ದಾರರುಗಳಿಗೆ ಸೂಚನೆ ನೀಡಿದರು.

ಆ) ಬಂಟ್ವಾಳ ತಾಲ್ಲೂಕಿನಲ್ಲಿ ಒಟ್ಟು 22 ಮನೆಗಳು ಸಂಪೂರ್ಣ ಹಾನಿಗೊಳಗಾಗಿದ್ದು (ಶೇಕಡ 75ಕ್ಕಿಂತ ಹೆಚ್ಚು) ಪ್ರಗತಿ ಹಂತದಲ್ಲಿರುತ್ತವೆಯೆಂದು ತಿಳಿಸಿದರು.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಒಟ್ಟು 203 ಮನೆಗಳು ಸಂಪೂರ್ಣ ಹಾನಿಗೊಂಡಿದ್ದು, 200 ಮನೆಗಳು ಪ್ರಗತಿಯ ಹಂತದಲ್ಲಿದೆ.

ಇ) ಮಂಗಳೂರು ತಾಲ್ಲೂಕಿನಲ್ಲಿ 15 ಮನೆಗಳು ಸಂಪೂರ್ಣ ಹಾನಿಯಾಗಿದ್ದು, ಕೆಲಸ ಪ್ರಾರಂಭಗೊಂಡಿರುತ್ತದೆ.

ಈ) ಪುತ್ತೂರು ತಾಲ್ಲೂಕಿನಲ್ಲಿ 8 ಮನಗಳು ಸಂಪೂರ್ಣ ಹಾನಿಗೊಂಡಿದ್ದು, ಎಲ್ಲಾ ಮನೆಗಳು ಪ್ರಗತಿ ಹಂತದಲ್ಲಿರುತ್ತವೆ.

ಉ) ಪುತ್ತೂರು ನಗರಸಭೆ ವ್ಯಾಪ್ತಿಯಲ್ಲಿ ಮಳೆಯಿಂದಾಗಿ 14 ಮನೆಗಳು ಭೂಕುಸಿತದಿಂದ ಹಾನಿಗೊಂಡಿದ್ದು, ಬೇರೆ ಕಡೆ ಜಾಗ ಗುರುತಿಸಿ ಸಮತಟ್ಟುಗೊಳಿಸಿ ಕೊಟ್ಟಿದ್ದರೂ ಸಹ, ಯಾವುದೇ ಫಲಾನುಭವಿಗಳು ಮನೆ ಕಟ್ಟಲು ಮುಂದೆ ಹೋಗುತ್ತಿಲ್ಲವೆಂದು ಪೌರಾಯುಕ್ತರು ಸಭೆಯಲ್ಲಿ ತಿಳಿಸಿದಾಗ, ಈ ಬಗ್ಗೆ ಸಹಾಯಕ ಆಯುಕ್ತರು, ಪುತ್ತೂರು ಉಪವಿಭಾಗ ಇವರಿಗೆ ಪರಿಶೀಲನೆ ನಡೆಸಿ ಕೂಡಲೇ ಕ್ರಮ ವಹಿಸಲು ಮಾನ್ಯ ಸಭಾಧ್ಯಕ್ಷರು ಸೂಚಿಸಿದರು.

ಊ) ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 17 ಮನೆಗಳು ಹಾನಿಗೊಂಡಿದ್ದು, ಈ ಮನೆಗಳ ಕೆಲಸ ಪ್ರಾರಂಭವಾಗಿದೆಯೇ, ಇಲ್ಲವೇ ಮತ್ತು ಯಾವ ಹಂತದಲ್ಲಿದೆ ಎಂಬ ಬಗ್ಗೆ ಕೇಳಲಾಗಿ, ಸಂಬಂಧಪಟ್ಟ ಅಧಿಕಾರಿಯವರು ಸರಿಯಾದ ಮಾಹಿತಿಯನ್ನು ಸಭೆಗೆ ನೀಡದಿರುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಲಾಗಿ, ಈ ವಿಚಾರದಲ್ಲಿ ಒರ್ವ ಜವಾಬ್ದಾರಿಯುತ ಅಧಿಕಾರಿಯನ್ನು ಸ್ಥಳಕ್ಕೆ ನಿಯೋಜಿಸಿ, ಪರಿಶೀಲನೆ ನಡೆಸಿ ಅವರಿಂದ ವರದಿ ಪಡೆದುಕೊಳ್ಳಲು ಜಿಲ್ಲಾಧಿಕಾರಿಯವರಿಗೆ ಮಾನ್ಯ ಸಭಾಧ್ಯಕ್ಷರು ಸೂಚಿಸಿದರು.

(ಕ್ರಮ: 1) ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ, ಮಂಗಳೂರು;

2) ಸಹಾಯಕ ಆಯುಕ್ತರು, ಮಂಗಳೂರು/ಪುತ್ತೂರು;

3) ಎಲ್ಲಾ ತಹಶೀಲ್ದಾರರುಗಳಿಗೆ )

4. ಪ್ರಕೃತಿ ವಿಕೋಪ ಯೋಜನೆಯಡಿ ಮಾನವ ಹಾನಿ : ನೆರೆಯಿಂದಾಗಿ ಜಿಲ್ಲೆಯಲ್ಲಿ ಒಟ್ಟು 13 ಮಂದಿ ಮೃತಪಟ್ಟಿದ್ದು, 7 ಮಂದಿ ಗಾಯಗೊಂಡಿರುತ್ತಾರೆ. ಜಿಲ್ಲೆಯಲ್ಲಿ ಒಟ್ಟು 13 ಜಾನುವಾರು ಹಾನಿ ಸಂಭವಿಸಿದ್ದು, ಪರಿಹಾರವನ್ನು ಪಾವತಿಸಲಾಗಿದೆಯೆಂದು ಜಿಲ್ಲಾಧಿಕಾರಿಯವರು ಸಭೆಗೆ ಮಾಹಿತಿ ನೀಡಿದರು.

5. ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಪ್ರಗತಿ :

2019-20ನೇ ಸಾಲಿನಲ್ಲಿ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸಲಾಗಿ, ಒಟ್ಟು ವಾರ್ಷಿಕ ಗುರಿ ಆರ್ಥಿಕ 7038.40 ಲಕ್ಷಗಳಲ್ಲಿ ಮತ್ತು ಭೌತಿಕ 16,00,000 ಇದ್ದು, ಡಿಸೆಂಬರ್ ಮಾಹೆಯವರೆಗೆ ಆರ್ಥಿಕ ಗುರಿ ಶೇ.106 ಮತ್ತು ಭೌತಿಕ ಗುರಿ ಶೇ.83 ರಷ್ಟು ಸಾಧಿಸಲಾಗಿದೆಯೆಂದು ಸಂಬಂಧಿಸಿದ ಅಧಿಕಾರಿಯವರು ಸಭೆಗೆ ವಿವರಿಸಿದರು.

6. **ಜಲಶಕ್ತಿ ಅಭಿಯಾನ ಮತ್ತು ಜಲಾಮೃತ ಯೋಜನೆಗಳ ಅನುಷ್ಠಾನ:**

ಜಲಾಮೃತ ಯೋಜನೆ ಪ್ರಗತಿ – (ಗ್ರಾಮೀಣ) ಮತ್ತು (ನಗರ) – ಜಲಾಮೃತ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆಯನ್ನು ತಯಾರಿಸಿ ಸರಕಾರಕ್ಕೆ ಸಲ್ಲಿಸಲಾಗಿರುತ್ತದೆ. ಆದರೆ ಈ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾದರೆ ನಿಗದಿಪಡಿಸಿರುವ ಗೈಡ್ ಲೈನ್ಸ್ ಪ್ರಕಾರ ಈ ಜಿಲ್ಲೆಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿಲ್ಲ. ಕಾರಣ ಈ ಯೋಜನೆಯಡಿಯಲ್ಲಿ ಕೆರೆ ಹೂಳನ್ನು ಮಾತ್ರ ತೆಗೆಯಲು ಅವಕಾಶವಿದ್ದು, ಆ ಹೂಳನ್ನು ರೈತರೇ ಅವರ ಸ್ವಂತ ಖರ್ಚಿನಲ್ಲಿ ವಾಹನಗಳಲ್ಲಿ ತೆಗೆದುಕೊಂಡು ಅವರ ಜಮೀನುಗಳಿಗೆ ಹಾಕಿಕೊಳ್ಳಬೇಕಾಗುತ್ತದೆ. ಈ ಕಾರಣಕ್ಕಾಗಿ ಯಾವುದೇ ರೈತರುಗಳು ಮುಂದೆ ಬರುತ್ತಿಲ್ಲ ಮತ್ತು ಕೆರೆಗಳಲ್ಲಿ ಹಾಲಿ ನೀರು ಇರುವುದರಿಂದ ಹೂಳು ತೆಗೆಯಲು ಸಾಧ್ಯವಾಗುತ್ತಿಲ್ಲ ಹಾಗೂ ಈ ಕಾಮಗಾರಿಯನ್ನು ಕೈಗೊಳ್ಳುವ ಮುಂಚಿತವಾಗಿ ಫಲಾನುಭವಿಗಳು ಅಥವಾ ಸಾರ್ವಜನಿಕರಿಂದ ಅವರು ಖರ್ಚು ಮಾಡುವ ಹಣದಲ್ಲಿ ಶೇಕಡಾ 10 ಹಣವನ್ನು ಭರಿಸಿ, ಗ್ರಾಮಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ನೀರು ನೈರ್ಮಲ್ಯ

ಸಮಿತಿಯ ಅಧ್ಯಕ್ಷರ ಜಂಟಿ ಖಾತೆಯಲ್ಲಿ ಇಡಬೇಕಾಗುತ್ತದೆ. ಈ ಎಲ್ಲಾ ಷರತ್ತುಗಳನ್ನು ಪಾಲಿಸಿ, ಈ ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿಲ್ಲವೆಂದು ಜಿಲ್ಲಾ ಪಂಚಾಯತಿನ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರರು ಸಭೆಯ ಗಮನಕ್ಕೆ ತಂದರು. ಈ ವಿಚಾರವನ್ನು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರಲಾಯಿತು.

(ಕ್ರಮ: ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್ ಪಂ.ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು )

7. ಕುಡಿಯುವ ನೀರಿನ ಕಾಮಗಾರಿಗಳು (ಗ್ರಾಮೀಣ):

ಅ) **ಶುದ್ಧ ನೀರಿನ ಘಟಕಗಳ ವಸ್ತುಸ್ಥಿತಿ (RO Units)** : ಶುದ್ಧ ಕುಡಿಯುವ ನೀರಿನ ಘಟಕಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಳವಡಿಸಿರುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, 23 ಘಟಕಗಳನ್ನು ಜಿಲ್ಲಾ ಪಂಚಾಯತ್ ವ್ಯಾಪ್ತಿಯ ನೀರು ಸರಬರಾಜು ವಿಭಾಗದ ಮುಖಾಂತರ ಅನುಷ್ಠಾನಗೊಳಿಸಿದ್ದು, ಸುಮಾರು 102 ಘಟಕಗಳನ್ನು ಕೆ.ಆರ್.ಡಿ.ಸಿ.ಎಲ್. ರವರ ಮೂಲಕ ಅನುಷ್ಠಾನಗೊಳಿಸುತ್ತಿರುವುದಾಗಿಯೂ ಹಾಗೂ ಸದರಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸುವ ಕಾಮಗಾರಿಯನ್ನು ಪೂರ್ಣಗೊಳಿಸದೇ ನೀರು ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲವೆಂದು ಸಭೆಯಲ್ಲಿ ಚರ್ಚಿಸಲಾಗಿ, ಸಭೆಯಲ್ಲಿ ಹಾಜರಿದ್ದ ನೀರು ನೈರ್ಮಲ್ಯ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಜಿಲ್ಲಾ ಪಂಚಾಯತ್ ವ್ಯಾಪ್ತಿಯ 23 ಘಟಕಗಳನ್ನು ಪೂರ್ಣಗೊಳಿಸಿದ್ದು, ನೀರು ಸರಬರಾಜು ಮಾಡಲಾಗುತ್ತಿದೆಯೆಂದು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರಲಾಯಿತು.

102 ಶುದ್ಧ ಕುಡಿಯುವ ನೀರಿನ ಘಟಕಗಳ ಬಗ್ಗೆ Land Army ಅಧಿಕಾರಿಯವರು ಸಭೆಗೆ ಸಮರ್ಪಕವಾದ ಮಾಹಿತಿಯನ್ನು ನೀಡಿರುವುದಿಲ್ಲ.

ಈ ವಿಚಾರದಲ್ಲಿ ಮಾಹಿತಿಯನ್ನು ನೀಡುವಂತೆ ಮಾನ್ಯ ಸಭಾಧ್ಯಕ್ಷರು ಸಂಬಂಧಿಸಿದ ಅಧಿಕಾರಿಯವರಿಗೆ ಸೂಚಿಸಿದರು.

ಆ) **ಬಹುಗ್ರಾಮ ಯೋಜನೆಗಳ ಪ್ರಗತಿ:** ಬಹುಗ್ರಾಮ ಯೋಜನೆಯಡಿಯಲ್ಲಿ 5 ಕಾಮಗಾರಿಗಳು ಮಂಜೂರಾಗಿದ್ದು, 3 ಕಾಮಗಾರಿಗಳು ಪೂರ್ಣಗೊಂಡಿದ್ದು ನೀರು ಸರಬರಾಜು ಮಾಡಲಾಗುತ್ತಿದೆ. ಇನ್ನೂ 2 ಕಾಮಗಾರಿಗಳು ಪ್ರಗತಿ ಹಂತದಲ್ಲಿದ್ದು, ಒಂದು ತಿಂಗಳ ಒಳಗಡೆ ಪೂರ್ಣಗೊಳಿಸಲಾಗುವುದೆಂದು ಬಂಟ್ವಾಳ ನೀರು ನೈರ್ಮಲ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.

(ಕ್ರಮ: 1) ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್ ಪಂ.ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು;

2) ಸಹಾಯಕ ಕಾರ್ಯಪಾಲಕ ಅಭಿಯಂತರರು, ನೀರು ನೈರ್ಮಲ್ಯ ಉಪವಿಭಾಗ, ಮಂಗಳೂರು )

8. **ಕುಡಿಯುವ ನೀರಿನ ಕಾಮಗಾರಿ ಪ್ರಗತಿ (ನಗರ):** ನಗರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಕಾಮಗಾರಿಗಳ ಬಗ್ಗೆ ಪ್ರಗತಿ ಪರಿಶೀಲಿಸಲಾಗಿ, ಮಹಾನಗರಪಾಲಿಕೆ ವ್ಯಾಪ್ತಿಯ ಕೆಲವು ಕಡೆಗಳಲ್ಲಿ, ಉಳ್ಳಾಲ ಮತ್ತು ಮುಲ್ಕಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದ್ದು,

ಟ್ಯಾಂಕರುಗಳ ಮೂಲಕ ನೀರು ಸರಬರಾಜು ಮಾಡಲಾಗಿದೆಯೆಂದು ಸಂಬಂಧಪಟ್ಟ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು.

(ಕ್ರಮ: 1) ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ, ಮಂಗಳೂರು;

2) ಯೋಜನಾ ನಿರ್ದೇಶಕರು,ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಗಳೂರು)

**9. ಯು.ಜಿ.ಡಿ.:** ನಗರ ವ್ಯಾಪ್ತಿಯಲ್ಲಿ ಒಳಚರಂಡಿ ಕಾಮಗಾರಿಗಳ ಬಗ್ಗೆ ಸಭೆಯಲ್ಲಿ ಮಾಹಿತಿಯನ್ನು ಕೇಳಲಾಗಿ, ಸರಿಯಾದ ಮಾಹಿತಿಯನ್ನು ನೀಡದಿರುವ ಬಗ್ಗೆ ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಲಾಯಿತು. ನಗರದಲ್ಲಿ ಸ್ಮಾರ್ಟ್ ಸಿಟಿ, ಅಮೃತ್ ಯೋಜನೆ, ಎಡಿಬಿ 2ನೇ ಹಂತ ಸೇರಿದಂತೆ ವಿವಿಧ ಯೋಜನೆಗಳಡಿ ಒಳಚರಂಡಿ ಕಾಮಗಾರಿಗಳು ನಡೆಯುತ್ತಿರುವುದಾಗಿ ಮಹಾನಗರಪಾಲಿಕೆ ಅಧಿಕಾರಿಗಳು ಹಾಗೂ ಕೆ.ಯು.ಐ.ಡಿ.ಎಫ್.ಸಿ. ಅಧಿಕಾರಿಗಳು ಸಭೆಗೆ ವಿವರಿಸಿದರು. ಒಳಚರಂಡಿ ಕಾಮಗಾರಿಗಳನ್ನು ಅಸಮರ್ಪಕವಾಗಿ ನಿರ್ವಹಿಸಲಾಗುತ್ತಿದ್ದು, ಯಾವುದೇ ಯೋಚನೆ ಇಲ್ಲದೇ ಕಾಮಗಾರಿಗಳನ್ನು ನಡೆಸಲಾಗುತ್ತಿದ್ದು, ಇದನ್ನು ಕೂಡಲೇ ಸರಿಪಡಿಸಲು ಕ್ರಮ ವಹಿಸುವಂತೆ ಮಾನ್ಯ ಸಭಾಧ್ಯಕ್ಷರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: 1) ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ, ಮಂಗಳೂರು;**

**2) ಯೋಜನಾ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ., ಮಂಗಳೂರು )**

**10.** ತುಂಬೆ ಅಣೆಕಟ್ಟಿನಲ್ಲಿ 7 ಮೀಟರ್ ನೀರು ಸಂಗ್ರಹಣೆ ಮಾಡುವ ಸಂಬಂಧ ಸರ್ವೆನಂಬ್ರವಾರು ಮಾಹಿತಿಯನ್ನು ಪಡೆದುಕೊಂಡು, ರೈತರುಗಳ ಪಟ್ಟಿ ಮಾಡಿ, ಸಭೆ ಕರೆಯುವಂತೆ ಸೂಚಿಸಿದರು ಹಾಗೂ ಈ ಬಗ್ಗೆ ಮಹಾನಗರಪಾಲಿಕೆ ಅಧಿಕಾರಿಗಳು ಮತ್ತು ಕಂದಾಯ ಇಲಾಖೆಯವರು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿ, ಕೂಡಲೇ ವರದಿ ನೀಡುವಂತೆ ಮಾನ್ಯ ಸಭಾಧ್ಯಕ್ಷರು ಸೂಚಿಸಿದರು.

(ಕ್ರಮ: 1) ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ, ಮಂಗಳೂರು;

2) ತಹಶೀಲ್ದಾರರು, ಬಂಟ್ವಾಳ ತಾಲ್ಲೂಕು )

**11.** ಶೌಚಾಲಯ ನಿರ್ಮಾಣ: ಜಿಲ್ಲೆಯ ನಗರ/ಪಟ್ಟಣಗಳಲ್ಲಿ ಬಸ್ಸು ನಿಲ್ದಾಣ, ಮಾರುಕಟ್ಟೆ, ಜಂಕ್ಷನ್‌ಗಳಲ್ಲಿ ಸಾರ್ವಜನಿಕರು ಹೆಚ್ಚಾಗಿ ಓಡಾಡುತ್ತಿರುವ ಸ್ಥಳಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಬೇಕೆಂದು ಮತ್ತು ಇವುಗಳ ನಿರ್ವಹಣೆಯನ್ನು ಸಮರ್ಪಕಗೊಳಿಸಲು ಕ್ರಮ ಕೈಗೊಳ್ಳುವಂತೆ ಮಹಾನಗರಪಾಲಿಕೆಯ ಅಧಿಕಾರಿಗಳು ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

(ಕ್ರಮ: 1) ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ, ಮಂಗಳೂರು;

2) ಯೋಜನಾ ನಿರ್ದೇಶಕರು,ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಗಳೂರು)

**12. ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ & ನಗರ)**

**ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ** 2019-20ನೇ ಸಾಲಿನ ಭೌತಿಕ ಪ್ರಗತಿಯನ್ನು ಪರಿಶೀಲಿಸಲಾಗಿ, ಒಟ್ಟು 458 ಭೌತಿಕ ಗುರಿ ನಿಗದಿಪಡಿಸಿದ್ದು, 301 ಗೃಹ ಶೌಚಾಲಯಗಳು ಪೂರ್ಣಗೊಂಡಿರುತ್ತವೆ. 2 ಪ್ರಗತಿಯಲ್ಲಿರುತ್ತದೆ. ದಾಖಲೆಗಳನ್ನು

ಹೊಂದಿಲ್ಲದೆ ಇರುವ 155 ಫಲಾನುಭವಿಗಳಿಗೆ ಸಿ.ಎಸ್.ಆರ್.ನಿಧಿಯಿಂದ ಶೌಚಾಲಯ ನಿರ್ಮಿಸಲಾಗಿದ್ದು, ಕೂಡಲೇ ಪೂರ್ಣಗೊಳಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ 2018-19ನೇ ಸಾಲಿನಲ್ಲಿ ನೈರ್ಮಲ್ಯ ಸಮುಚ್ಚಯ (ಸ್ಯಾನಿಟರಿ ಕಾಂಪ್ಲೆಕ್ಸ್)ದಡಿ ವಾರ್ಷಿಕ 50 ಗುರಿ ನಿಗದಿಪಡಿಸಿದ್ದು, ಎಲ್ಲವೂ ಕಾರ್ಯ ನಿರ್ವಹಿಸುತ್ತಿರುವುದಾಗಿ ಸಭೆಗೆ ತಿಳಿಸಿದರು.

(ಕ್ರಮ: ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ, ಮಂಗಳೂರು )

13. **ಘನತ್ಯಾಜ್ಯ ನಿರ್ವಹಣೆ**ಯಲ್ಲಿ (SLWM) ವಾರ್ಷಿಕ 40 ಗುರಿ ನಿಗದಿಪಡಿಸಿದ್ದು, 26 ಪ್ರಸ್ತಾವನೆಗಳನ್ನು ರಾಜ್ಯ ಕಛೇರಿಗೆ ಸಲ್ಲಿಸಲಾಗಿದೆ. ಘನ ತ್ಯಾಜ್ಯ ನಿರ್ವಹಣೆಗೆ ಮಂಜೂರಾತಿಯಾದ 23 ಗ್ರಾಮ ಪಂಚಾಯತಿಗಳ ಕಾಮಗಾರಿಗಳು ಘನತ್ಯಾಜ್ಯ ಸಂಸ್ಕರಣಾ ಘಟಕಗಳ ಅನುಷ್ಠಾನಕ್ಕಾಗಿ ಟೆಂಡರು ಪ್ರಕ್ರಿಯೆಯಲ್ಲಿದ್ದು, ಕೆಲವೊಂದು ಕಡೆಗಳಲ್ಲಿ ಜಾಗದ ಸಮಸ್ಯೆಯಿರುವುದಾಗಿ ಸಂಬಂಧಿಸಿದ ಅಧಿಕಾರಿಗಳು ಸಭೆಗೆ ತಿಳಿಸಿದಾಗ, ಉಳಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸುವಂತೆ ಸೂಚಿಸಿದರು.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ಘಟಕಕ್ಕೆ ಸಂಬಂಧಿಸಿದಂತೆ ಜಾಗದ ಸಮಸ್ಯೆಯಿರುವುದಾಗಿ ಸಭೆಯಲ್ಲಿ ತಿಳಿಸಲಾಗಿ, ಬೇರೆ ಜಾಗ ಗುರುತಿಸಲು ಕೂಡಲೇ ಕ್ರಮ ವಹಿಸುವಂತೆ ಸೂಚಿಸಿದರು ಹಾಗೂ ಘನ ತ್ಯಾಜ್ಯ ನಿರ್ವಹಣೆ ಸಂಬಂಧ ಮುಂದಿನ ಸಭೆಗೆ ಸಂಬಂಧಪಟ್ಟ ಭಾವಚಿತ್ರ/ವೀಡಿಯೋ ದಾಖಲೆಗಳನ್ನು ತರುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

(ಕ್ರಮ: 1) ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ, ಮಂಗಳೂರು;
2) ಯೋಜನಾ ನಿರ್ದೇಶಕರು,ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಗಳೂರು )

14. **ನಗರಾಭಿವೃದ್ಧಿ ಯೋಜನೆಗಳು:**

ಅ) ಮಹಾನಗರಪಾಲಿಕೆಗಳ ನಗರೋತ್ಥಾನ ರೂ. 100 ಕೋಟಿ ಯೋಜನೆಯಡಿಯಲ್ಲಿ ಹಂತ-3 ರ ಪ್ರಗತಿ ಪರಿಶೀಲಿಸಲಾಗಿ, ಒಟ್ಟುಮಂಜೂರಾದ 113 ಕಾಮಗಾರಿಗಳ ಪೈಕಿ, 104 ಕಾಮಗಾರಿಗಳು ಪೂರ್ಣಗೊಂಡಿದ್ದು 9 ಪ್ರಗತಿಯಲ್ಲಿರುತ್ತವೆ. ಈ ಎಲ್ಲಾ ಕಾಮಗಾರಿಗಳು ರಸ್ತೆ ಕಾಮಗಾರಿಗಳಾಗಿರುತ್ತವೆ.

ಆ) ನಗರೋತ್ಥಾನ (ಮುನ್ಸಿಪಾಲಿಟಿ)-3 ನೇ ಹಂತದ ಪ್ರಗತಿ ಬಗ್ಗೆ ಪರಿಶೀಲಿಸಲಾಗಿ ಮಂಜೂರಾದ ಒಟ್ಟು 112 ಕಾಮಗಾರಿಗಳ ಪೈಕಿ 53 ಕಾಮಗಾರಿಗಳು ಪೂರ್ಣಗೊಂಡಿದ್ದು,31 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 28 ಕಾಮಗಾರಿಗಳು ಬಾಕಿ ಇರುವುದಾಗಿ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರು ಸಭೆಗೆ ಮಾಹಿತಿ ನೀಡಲಾಗಿ, ಈ ಎಲ್ಲಾ ಕಾಮಗಾರಿಗಳನ್ನು 2020ನೇ ಜನವರಿ ಮಾಹೆಯ 15ನೇ ತಾರೀಕಿನೊಳಗಡೆ ಪೂರ್ಣಗೊಳಿಸುವಂತೆ ಮಾನ್ಯ ಸಭಾಧ್ಯಕ್ಷರು ಸೂಚಿಸಿದರು.

2018-19 ನೇ ಸಾಲಿನ ಎಸ್.ಎಫ್.ಸಿ ಪ್ರಗತಿ ಪರಿಶೀಲಿಸಲಾಗಿ, 153 ಕಾಮಗಾರಿಗಳ ಪೈಕಿ 143 ಕಾಮಗಾರಿಗಳು ಪೂರ್ಣಗೊಂಡಿದ್ದು, 10 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

2019-20 ನೇ ಸಾಲಿನ ಎಸ್.ಎಫ್.ಸಿ. ಪ್ರಗತಿ ಪರಿಶೀಲಿಸಲಾಗಿ, 219 ಕಾಮಗಾರಿಗಳ ಪೈಕಿ 45 ಕಾಮಗಾರಿಗಳು ಪೂರ್ಣಗೊಂಡಿದ್ದು, 111 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 63 ಕಾಮಗಾರಿಗಳು ಪ್ರಾರಂಭಿಸಲು ಬಾಕಿ ಉಳಿದಿರುವುದಾಗಿ ಸಭೆಗೆ ಮಾಹಿತಿ ನೀಡಿದರು.

ಇ) 14 ನೇ ಹಣಕಾಸು ಆಯೋಗದ ಅನುದಾನದ ಪ್ರಗತಿ: 2015-16 ರಿಂದ 2018-19 ರವರೆಗಿನ ಪ್ರಗತಿ ಪರಿಶೀಲಿಸಲಾಗಿ, ಮಂಜೂರಾದ 1656 ಕಾಮಗಾರಿಗಳ ಪೈಕಿ 1576 ಕಾಮಗಾರಿಗಳು ಪೂರ್ಣಗೊಂಡಿದ್ದು, 67 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 13 ಬಾಕಿ ಇರುತ್ತದೆ.

2019-20ನೇ ಸಾಲಿನಲ್ಲಿ ಮಂಜೂರಾದ 410 ಕಾಮಗಾರಿಗಳ ಪೈಕಿ, 100 ಕಾಮಗಾರಿಗಳು ಪೂರ್ಣಗೊಂಡಿದ್ದು, 100 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 210 ಕಾಮಗಾರಿಗಳು ಬಾಕಿ ಇರುತ್ತವೆಯೆಂದು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರು ಸಭೆಗೆ ತಿಳಿಸಲಾಗಿ, ಬಾಕಿ ಇರುವ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಮಾನ್ಯ ಸಭಾಧ್ಯಕ್ಷರು ಸೂಚಿಸಿದರು.

(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಗಳೂರು )

15. <u>ವಸತಿ ಯೋಜನೆ ಪ್ರಗತಿ:</u>

ಅ) ವಿವಿಧ ಯೋಜನೆಗಳಲ್ಲಿ ಮನೆಗಳ ನಿರ್ಮಾಣ (ನಗರ )- ಪ್ರಗತಿ ಪರಿಶೀಲಿಸಲಾಗಿ, 2018-19 ರ ಸಾಲಿನಲ್ಲಿ ಅಂಬೇಡ್ಕರ್ ನಗರ ಯೋಜನೆ ಮತ್ತು ವಾಜಪೇಯಿ ವಸತಿ ಯೋಜನೆಯಡಿಯಲ್ಲಿ ಒಟ್ಟು1747 ವಾರ್ಷಿಕ ಗುರಿ ನಿಗದಿಪಡಿಸಿದ್ದು, 1063 ಮನೆಗಳು ಅನುಮೋದನೆಯಾಗಿರುತ್ತವೆ. 559 ಮನೆಗಳು ಪೂರ್ಣಗೊಂಡಿದ್ದು, 2050 ಮನೆಗಳು ಪ್ರಗತಿಯಲ್ಲಿರುತ್ತವೆ. 254 ಮನೆಗಳು ಬಾಕಿ ಇದ್ದು, ಶೇಕಡಾ 76ರಷ್ಟು ಪ್ರಗತಿ ಸಾಧಿಸಲಾಗಿದೆಯೆಂದು ಸಭೆಗೆ ವಿವರಿಸಿದರು. ಬಾಕಿ ಇರುವ 254 ಮನೆಗಳನ್ನು ಹಾಗೂ ದಿನಾಂಕ:01-04-2019 ರಿಂದ 30-06-2019 ರವರೆಗೆ ವಾಜಪೇಯಿ ವಸತಿ ಯೋಜನೆ ಮತ್ತು ವಾಜಪೇಯಿ ನಗರ ನಿವೇಶನ ಯೋಜನೆಗೆ ನಿಗದಿಪಡಿಸಿರುವ 658 ವಾರ್ಷಿಕ ಗುರಿಯನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ತಡೆಹಿಡಿಯಲಾಗಿದೆ ಎಂದು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರು ಸಭೆಯಲ್ಲಿ ತಿಳಿಸಿದರು.

(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಗಳೂರು )

ಆ) ಹೌಸಿಂಗ್ ಫಾರ್ ಆಲ್ :

Project Information Detail

State : Karnataka, District : Dakshina Kannada, City : Mangalore, Financial Year : All Financial Year
Mission Component : Affordable Housing in Partnership, Project Status : All Project Status

| Sl No | Project_ Name | Project_ Cost | Financial Year | No_of Beneficiary As_ Per DPR | Land Details | Status |
|---|---|---|---|---|---|---|
| 1 | 600 DUs AHP | 4000 | 2017-18 | 600 | Idya - 3.86 Acre | Work order issued to contractor and work started |
| 2 | Mangalore AHP Projects | 6150 | 2016-17 | 930 | Padavu - 10 Acre | Yet to get approval from Ministry of Environment and Forest (MoEF).As per 2018-19 SR rate revised DPR need to be submitted for approval to RGRHCL. |
| 3 | Construction of 192 DUs in Mangaluru under AHP | 1135 | 2017-18 | 192 | Idya - 1.85 Acre | As per 2018-19 SR rate revised DPR need to be submitted for approval to RGRHCL. |
| 4 | PKGB Construction of 32 DUs in Mangaluru (Phase - 1) | 290.56 | 2017-18 | 32 | MahakaliPadpu - 1.92 Acre (All 4 Phases include) | Building work completed, infrastructure work under progress. |
| 5 | Construction of 600 DUs in Mangaluru under AHP | 4000 | 2017-18 | 600 | Tiruvailu - 6.33 Acre | As per 2018-19 SR rate revised DPR need to be submitted for approval to RGRHCL. |
| | TOTAL | 15575.56 | | 2354 | | |

16. <u>ಪೌರ ಕಾರ್ಮಿಕರ ಗೃಹಭಾಗ್ಯ ಯೋಜನೆ:</u> ಪೌರ ಕಾರ್ಮಿಕರ ಗೃಹ ಭಾಗ್ಯ ಯೋಜನೆಯು ಪೌರಕಾರ್ಮಿಕರಿಗೆ ಇರುವಂತಹ ಯೋಜನೆಯಾಗಿರುತ್ತದೆ. ಮಹಾಕಾಳಿಪಡ್ಪು ಎಂಬಲ್ಲಿ ಜಿ+3 ಅಪಾರ್ಟ್‌ಮೆಂಟ್ ನಿರ್ಮಿಸಿದ್ದು, 32 ಫಲಾನುಭವಿಗಳ ಪೈಕಿ, 18 ಮಂದಿ ಒಪ್ಪಿಗೆ ಕೊಟ್ಟಿರುತ್ತಾರೆ. ಕೆಲವರು ಕುಟುಂಬದ ವಾಸ್ತವ್ಯಕ್ಕೆ ತೀರಾ ಸಣ್ಣದಾಗಿರುತ್ತದೆಯೆಂದು ಒಪ್ಪಿಗೆಯನ್ನು ನೀಡಿಲ್ಲವೆಂದು ಸಭೆಯಲ್ಲಿ ತಿಳಿಸಿದಾಗ, ಮಾನ್ಯ ಸಭಾಧ್ಯಕ್ಷರು ಸಂಬಂಧಿಸಿದ ಫಲಾನುಭವಿಗಳಿಂದ ಮೊದಲೇ ಒಪ್ಪಿಗೆಯನ್ನು ಪಡೆದುಕೊಳ್ಳಬೇಕಿತ್ತೆಂದು ತಿಳಿಸಿದರು. ಈ ಬಗ್ಗೆ ಸಂಬಂಧಪಟ್ಟ ಫಲಾನುಭವಿಗಳನ್ನು ಕರೆಯಿಸಿ ಮಾತನಾಡಿಕೊಂಡು ಕ್ರಮ ವಹಿಸುವಂತೆ ಮಹಾನಗರಪಾಲಿಕೆಯ ಅಧಿಕಾರಿಗಳಿಗೆ ಸೂಚಿಸಿದರು.

(ಕ್ರಮ: ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ, ಮಂಗಳೂರು )

17. <u>ಸಾರ್ವಜನಿಕ ಉದ್ದೇಶಗಳಿಗೆ ಜಮೀನು ಕಾಯ್ದಿರಿಸುವಿಕೆ:</u> ವಿವಿಧ ಸಾರ್ವಜನಿಕ ಉದ್ದೇಶಗಳಿಗೆ ಜಮೀನು ಕಾದಿರಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಮುಖ್ಯವಾಗಿ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿ ಶಾಲೆ ಮತ್ತು ವಿದ್ಯಾರ್ಥಿನಿಲಯಗಳಿಗೆ ನಿವೇಶನ ನೀಡುವ ಕುರಿತು ಪ್ರಗತಿ ಪರಿಶೀಲಿಸಲಾಯಿತು.
ಅದರಂತೆ ಜಿಲ್ಲೆಯಲ್ಲಿ ವಸತಿಶಾಲೆ, ವಿದ್ಯಾರ್ಥಿನಿಲಯಗಳಿಗೆ, ಶಾಲೆಗಳಿಗೆ, ರುದ್ರಭೂಮಿ, ವಸತಿ ಇತ್ಯಾದಿ ಸಾರ್ವಜನಿಕ ಉದ್ದೇಶಗಳಿಗೆ ನಿವೇಶನ ಕಾದಿರಿಸಲು ಬಾಕಿ ಇರುವ ಪ್ರಕರಣಗಳಲ್ಲಿ

ಸಂಬಂಧಿಸಿದ ಇಲಾಖೆಯಿಂದ ಬೇಡಿಕೆಯನ್ನು ಪಡೆದು ನಿವೇಶನ ಕಾದಿರಿಸಲು ಆದ್ಯತೆ ನೆಲೆಯಲ್ಲಿ ಕ್ರಮ ಕೈಗೊಳ್ಳುವಂತೆ ಮಾನ್ಯ ಸಭಾಧ್ಯಕ್ಷರು ಸಹಾಯಕ ಆಯುಕ್ತರು ಮತ್ತು ಎಲ್ಲಾ ತಹಶೀಲ್ದಾರರುಗಳಿಗೆ ನಿರ್ದೇಶನ ನೀಡಿದರು.

(ಕ್ರಮ: 1) ಸಹಾಯಕ ಆಯುಕ್ತರು, ಮಂಗಳೂರು/ಪುತ್ತೂರು;
2) ಎಲ್ಲಾ ತಾಲ್ಲೂಕು ತಹಶೀಲ್ದಾರರುಗಳಿಗೆ )

18. **ಸರ್ಕಾರಿ ರುದ್ರಭೂಮಿ ಸೌಲಭ್ಯ ಕಲ್ಪಿಸುವ ಬಗ್ಗೆ** ಪ್ರಗತಿ ಪರಿಶೀಲಿಸಲಾಗಿ, ಜಿಲ್ಲೆಯಲ್ಲಿ ಒಟ್ಟು 422 ಗ್ರಾಮಗಳಿದ್ದು, 407 ಗ್ರಾಮಗಳಲ್ಲಿ ಈಗಾಗಲೇ ರುದ್ರಭೂಮಿ ಸೌಲಭ್ಯವಿರುತ್ತದೆ. ಇನ್ನು ಮಂಗಳೂರು ತಾಲ್ಲೂಕಿನಲ್ಲಿ 12 ಗ್ರಾಮಗಳು; ಬೆಳ್ತಂಗಡಿ ತಾಲ್ಲೂಕಿನಲ್ಲಿ 1 ಗ್ರಾಮ ಮತ್ತು ಕಡಬ ತಾಲ್ಲೂಕಿನಲ್ಲಿ 2 ಗ್ರಾಮಗಳು, ಒಟ್ಟು 15 ಗ್ರಾಮಗಳಲ್ಲಿ ರುದ್ರಭೂಮಿ ಸೌಲಭ್ಯವಿರುವುದಿಲ್ಲ. ಮಂಗಳೂರು ತಾಲೂಕಿನ ನಗರ ವಲಯದ ಗ್ರಾಮಗಳು ನಗರ ಪ್ರದೇಶದ ರುದ್ರಭೂಮಿಯನ್ನು ಬಳಕೆ ಮಾಡುತ್ತಿದ್ದು, ಇನ್ನುಳಿದ ಗ್ರಾಮಗಳಲ್ಲಿ ಪಕ್ಕದ ಗ್ರಾಮದ ರುದ್ರಭೂಮಿಯಲ್ಲಿ ಉಪಯೋಗಿಸುತ್ತಿರುವುದಾಗಿಯೂ ಮತ್ತು ರುದ್ರಭೂಮಿ ಇಲ್ಲದ ಗ್ರಾಮಗಳಲ್ಲಿ ಜಮೀನನ್ನು ಕಾದಿರಿಸಲು ಪ್ರಸ್ತಾವನೆಯನ್ನು ತಯಾರಿಸಲಾಗಿದೆಯೆಂದು ಸಂಬಂಧಿಸಿದ ತಹಶೀಲ್ದಾರರು ಸಭೆಯಲ್ಲಿ ತಿಳಿಸಿದರು.
ಪ್ರತಿಯೊಂದು ಗ್ರಾಮಗಳಲ್ಲಿ ಪ.ಜಾತಿ/ಪ.ಪಂಗಡದವರಿಗೆ ರುದ್ರಭೂಮಿ ಸೌಲಭ್ಯವನ್ನು ಒದಗಿಸಬೇಕಾಗಿದ್ದು, ಎಲ್ಲಾ ಗ್ರಾಮಗಳಲ್ಲಿ ಪ.ಜಾತಿ/ಪ.ಪಂಗಡದವರಿಗೆ ರುದ್ರಭೂಮಿ ಕಾದಿರಿಸಲು ಅಗತ್ಯ ಕ್ರಮ ವಹಿಸಲು ಸಹಾಯಕ ಆಯುಕ್ತರುಗಳು ಮತ್ತು ಎಲ್ಲಾ ತಹಶೀಲ್ದಾರರುಗಳಿಗೆ ನಿರ್ದೇಶನ ನೀಡಿದರು.

(ಕ್ರಮ: 1) ಸಹಾಯಕ ಆಯುಕ್ತರು, ಮಂಗಳೂರು/ಪುತ್ತೂರು;
2) ಎಲ್ಲಾ ತಾಲ್ಲೂಕು ತಹಶೀಲ್ದಾರರುಗಳಿಗೆ )

19. **ಡೀಮ್ಡ್ ಫಾರೆಸ್ಟ್‌ಗಳಲ್ಲಿ ಮೂಲಭೂತ ಸೌಲಭ್ಯಗಳಿಗೆ ಜಮೀನಿನ ಬಗ್ಗೆ** ಸಭೆಯಲ್ಲಿ ಚರ್ಚಿಸಲಾಗಿ, ಮೂಲಭೂತ ಸೌಲಭ್ಯಗಳಿಗೆ ಜಮೀನುಗಳ ಬೇಡಿಕೆ ಸಂಬಂಧ ಅರಣ್ಯ ಇಲಾಖೆಯ ಅಭಿಪ್ರಾಯ ಕೋರಿ ಬಂದ ಪ್ರಸ್ತಾವನೆಗಳ ಬಗ್ಗೆ ಕೂಡಲೇ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ ಇವರಿಗೆ ಮಾನ್ಯ ಸಭಾಧ್ಯಕ್ಷರು ಸೂಚಿಸಿದರು.

(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ )

20. **ಆರ್.ಆರ್.ಟಿ. ಪಹಣಿ ತಿದ್ದುಪಡಿ :** ಜಿಲ್ಲೆಯಲ್ಲಿ ಸುಮಾರು 6,262 ಪ್ರಕರಣಗಳು ವಿಲೇವಾರಿಗೆ ಬಾಕಿ ಇರುವುದನ್ನು ಗಮನಿಸಲಾಯಿತು. ಆಕಾರ್ ಬಂದ್, ವಿಸ್ತೀರ್ಣ ಮತ್ತು ಪಹಣಿಯ ಕಲಂ-3 ಮತ್ತು 9ರ ವಿಸ್ತೀರ್ಣ ವ್ಯತ್ಯಾಸದ ಪ್ರಕರಣಗಳನ್ನು ಪರಿಶೀಲಿಸಿಕೊಂಡು, ಪಹಣಿ ತಿದ್ದುಪಡಿಗೆ ಬಾಕಿ ಇರುವ ಪ್ರಕರಣಗಳಲ್ಲಿ ಪ್ರತೀದಿನ ಅಪ್‌ಡೇಟ್ ಮಾಡಿಕೊಂಡು, ಆದ್ಯತೆ ನೆಲೆಯಲ್ಲಿ ಇತ್ಯರ್ಥಪಡಿಸಲು ವಿಶೇಷ ಆಂದೋಲನವನ್ನು ಹಮ್ಮಿಕೊಂಡು ಕೂಡಲೇ ಕ್ರಮ ವಹಿಸುವಂತೆ ಎಲ್ಲಾ ತಾಲ್ಲೂಕು ತಹಶೀಲ್ದಾರರುಗಳಿಗೆ ಮಾನ್ಯ ಸಭಾಧ್ಯಕ್ಷರು ಸೂಚಿಸಿದರು.
ಸದರಿ ಪ್ರಕರಣಗಳನ್ನು ಬೇಗನೇ ಇತ್ಯರ್ಥಪಡಿಸಲು ಅನುಕೂಲವಾಗುವಂತೆ ಜಿಲ್ಲೆಯಲ್ಲಿನ ನಿವೃತ್ತ ಕಂದಾಯ ಅಧಿಕಾರಿಗಳನ್ನು ಮತ್ತು ನೌಕರರನ್ನು ಅವರ ಒಪ್ಪಿಗೆ ಇದ್ದಲ್ಲಿ ಮಾತ್ರ, ಒಂದೊಂದು ಪ್ರಕರಣವಾರು ಪೇಮೆಂಟ್ ನಿಗದಿಪಡಿಸುವುದು (ಅಂದರೆ 1 ಪ್ರಕರಣದಲ್ಲಿ 1 to 5 ಮಾಡಿದ್ದಲ್ಲಿ ಇಂತಿಷ್ಟು ಪೇಮೆಂಟ್? ಮತ್ತು filed ಮಾಡಿ 6 to 9 ಮಾಡಿದ್ದಲ್ಲಿ ಇಂತಿಷ್ಟು ಪೇಮೆಂಟ್? ). ಈ ಬಗ್ಗೆ ಸರಕಾರಕ್ಕೆ ಅನುಮತಿ ಕೋರಿ ಸೂಕ್ತ ಪ್ರಸ್ತಾವನೆಯನ್ನು ತಯಾರಿಸಿ ಸಲ್ಲಿಸಲು ಮಾನ್ಯ ಸಭಾಧ್ಯಕ್ಷರು ಜಿಲ್ಲಾಧಿಕಾರಿಯವರಿಗೆ ಸೂಚಿಸಿದರು.

(ಕ್ರಮ: ಎಲ್ಲಾ ತಾಲ್ಲೂಕು ತಹಶೀಲ್ದಾರರುಗಳಿಗೆ )

**21. 11 ಇ ಪ್ರಕರಣಗಳು** : ಜಿಲ್ಲೆಯಲ್ಲಿ ಸರ್ವೆ ಇಲಾಖೆಯಲ್ಲಿ 11ಇ ಗೆ ಸಂಬಂಧಪಟ್ಟಂತೆ 12,000 ಪ್ರಕರಣಗಳು ಬಾಕಿ ಇದ್ದು, ಮೋಜಣಿದಾರರುಗಳ ಕೊರತೆ ಇರುವುದಾಗಿಯೂ ಮತ್ತು ಈಗ 11ಇ ಪ್ರಕ್ರಿಯೆಯನ್ನು ನಿಲ್ಲಿಸಲಾಗಿದೆಯೆಂದು ಭೂದಾಖಲೆಗಳ ಸಹಾಯಕ ನಿರ್ದೇಶಕರು ಸಭೆಯಲ್ಲಿ ತಿಳಿಸಿದಾಗ, ಈ ವಿಚಾರದಲ್ಲಿ ಜಿಲ್ಲಾಧಿಕಾರಿಯವರಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮಾನ್ಯ ಸಭಾಧ್ಯಕ್ಷರು ಸೂಚಿಸಿದರು.

(ಕ್ರಮ: ಉಪನಿರ್ದೇಶಕರು, ಭೂದಾಖಲೆಗಳ ಇಲಾಖೆ, ದ.ಕ.ಮಂಗಳೂರು )

**22. ಭೂಒಡೆತನ ಯೋಜನೆ**: ಈ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಜಮೀನನ್ನು ಖರೀದಿ ಮಾಡಿ ಕೊಡಲು ಸರಕಾರವು ಶೇಕಡಾ 50 ರಂತೆ ಸಾಲದ ರೂಪದಲ್ಲಿ ಮತ್ತು ಶೇಕಡಾ 50 ರಂತೆ ಸಬ್ಸಿಡಿಯನ್ನು ಕೃಷಿ ಕಾರ್ಮಿಕ ಕುಟುಂಬದಿಂದ ಬಂದ ಮಹಿಳೆಯರಿಗೆ ನೀಡುವುದಾಗಿದೆ. ಈ ವರ್ಷಕ್ಕೆ 8 ಫಲಾನುಭವಿಗಳಿಗೆ ಗುರಿ ನಿಗದಿಪಡಿಸಲಾಗಿದೆ. ಕಳೆದ ವರ್ಷದಲ್ಲಿ 6 ಮಂದಿಗೆ ಗುರಿ ನಿಗದಿಪಡಿಸಿದ್ದು, ಯಾವುದೇ ಪ್ರಸ್ತಾವನೆಗಳು ಬಂದಿರುವುದಿಲ್ಲ. ಸರಕಾರದಿಂದ ನೀಡುವ ಹಣದಲ್ಲಿ ಜಾಗವನ್ನು ಕೊಡಲು ಯಾರೂ ಒಪ್ಪಿಗೆ ನೀಡುತ್ತಿಲ್ಲವೆಂದು ಸಂಬಂಧಿಸಿದ ಅಧಿಕಾರಿಯವರು ಸಭೆಯಲ್ಲಿ ತಿಳಿಸಿದಾಗ, ಈ ವಿಷಯದ ಬಗ್ಗೆ ಪ್ರಸ್ತಾವನೆಯೊಂದಿಗೆ ಜಿಲ್ಲಾಧಿಕಾರಿಯವರಲ್ಲಿ ಬಂದು ಚರ್ಚಿಸುವಂತೆ ಮಾನ್ಯ ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ: ಜಿಲ್ಲಾ ವ್ಯವಸ್ಥಾಪಕರು, ಅಂಬೇಡ್ಕರ್ ಅಭಿವೃದ್ಧಿ ನಿಗಮ, ದ.ಕ.ಮಂಗಳೂರು** )

**23. ವಿದ್ಯಾರ್ಥಿನಿಲಯಗಳಿಗೆ ನಿವೇಶನ ಮಂಜೂರಾತಿ**:

1) ಅಲ್ಪಸಂಖ್ಯಾತರ ಇಲಾಖೆಗೆ ಸಂಬಂಧಿಸಿದಂತೆ, working women hostel ಗೆ ನಿವೇಶನಕ್ಕೆ ಜಮೀನಿನ ಅಗತ್ಯತೆ ಇರುವುದಾಗಿ ಉಪನಿರ್ದೇಶಕರು ಸಭೆಯಲ್ಲಿ ತಿಳಿಸಿದರು.
2) ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಪುತ್ತೂರು ತಾಲ್ಲೂಕಿನಲ್ಲಿ ವಿದ್ಯಾರ್ಥಿನಿಲಯಕ್ಕೆ ನಿವೇಶನ ಬೇಕಾಗಿದೆಯೆಂದು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯವರು ತಿಳಿಸಿದರು.
3) ಜಿಲ್ಲೆಯಲ್ಲಿ ಒಟ್ಟು 21 ಅಂಬೇಡ್ಕರ್ ಭವನಗಳಿಗೆ ನಿವೇಶನಕ್ಕೆ ಜಮೀನಿನ ಅವಶ್ಯಕತೆಯಿದ್ದು, ಈ ಪೈಕಿ ಮಂಗಳೂರು–4; ಬಂಟ್ವಾಳ–1; ಸುಳ್ಯದಲ್ಲಿ–8; ಪುತ್ತೂರು–3 ಮತ್ತು ಬೆಳ್ತಂಗಡಿಯಲ್ಲಿ –5 ಅಂಬೇಡ್ಕರ್ ಭವನಗಳಿಗೆ ನಿವೇಶನಕ್ಕೆ ಜಾಗ ಗುರುತಿಸಬೇಕಾಗಿದೆಯೆಂದು ತಿಳಿಸಿದರು.

ಈ ವಿಚಾರದಲ್ಲಿ ಸಹಾಯಕ ಆಯುಕ್ತರು, ಮಂಗಳೂರು ಮತ್ತು ಪುತ್ತೂರು ಇವರಿಗೆ ಕೂಡಲೇ ಕ್ರಮ ವಹಿಸುವಂತೆ ಮಾನ್ಯ ಸಭಾಧ್ಯಕ್ಷರು ಸೂಚಿಸಿದರು.

(ಕ್ರಮ: 1) ಸಹಾಯಕ ಆಯುಕ್ತರು, ಮಂಗಳೂರು ಮತ್ತು ಪುತ್ತೂರು;
2) ಎಲ್ಲಾ ತಹಶೀಲ್ದಾರರುಗಳಿಗೆ
3) ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಮಂಗಳೂರು;
4) ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿ, ಮಂಗಳೂರು )

**24. ವಕ್ಫ್ ಆಸ್ತಿಗಳ ಸರ್ವೇ ಕಾರ್ಯ:**

ಜಿಲ್ಲೆಯಲ್ಲಿನ ವಕ್ಫ್ ಆಸ್ತಿಗಳ ಸರ್ವೇ ಕಾರ್ಯವು ಪೂರ್ಣಗೊಂಡಿದ್ದು, ಗಜೆಟ್ ನೋಟೀಫಿಕೇಶನ್ ಆಗಿದ್ದರೂ ಸಹ, 5 ತಾಲ್ಲೂಕುಗಳಲ್ಲಿ ಆರ್.ಟಿ.ಸಿ.ಯಲ್ಲಿ ಅಪ್ ಡೇಟ್ ಆಗಲು ಬಾಕಿ ಇರುತ್ತದೆ ಹಾಗೂ 4 ಪ್ರಕರಣಗಳಲ್ಲಿ ಅಂದರೆ ಮಂಗಳೂರು ತಾಲ್ಲೂಕಿನಲ್ಲಿ –3 ಮತ್ತು ಸುಳ್ಯ ತಾಲ್ಲೂಕಿನಲ್ಲಿ –1 ಪ್ರಕರಣ ಒಟ್ಟು 4 ಪ್ರಕರಣಗಳಲ್ಲಿ encroachment ಆಗಿದ್ದು, ಇದಕ್ಕೆ ಮಾನ್ಯ ಉಚ್ಛ ನ್ಯಾಯಾಲಯದಿಂದ ತಡೆಯಾಜ್ಞೆ ಬಂದಿರುವುದಾಗಿ ವಕ್ಫ್ ಇಲಾಖೆಯ ಅಧಿಕಾರಿಯವರು ಸಭೆಯಲ್ಲಿ ತಿಳಿಸಲಾಗಿ, ಆರ್.ಟಿ.ಸಿ.ಯಲ್ಲಿ ಕೂಡಲೇ ಅಪ್ ಡೇಟ್ ಮಾಡಲು ಕ್ರಮ ಕೈಗೊಳ್ಳುವಂತೆ ಎಲ್ಲಾ ತಾಲ್ಲೂಕು ತಹಶೀಲ್ದಾರರುಗಳಿಗೆ ಮಾನ್ಯ ಸಭಾಧ್ಯಕ್ಷರು ಸೂಚಿಸಿದರು.

(ಕ್ರಮ : 1) ಎಲ್ಲಾ ತಾಲ್ಲೂಕು ತಹಶೀಲ್ದಾರರುಗಳಿಗೆ;
2) ವಕ್ಫ್ ಅಧಿಕಾರಿ, ದ.ಕ. ಮಂಗಳೂರು )

**25. ಬೆಳೆ ಸಮೀಕ್ಷೆ:**

ಬೆಳೆ ಸಮೀಕ್ಷೆ ವಿಚಾರದಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಮಾತನಾಡಿ, ಪಿ.ಆರ್. ಪಾವತಿಗೆ ಬಾಕಿ ಇದ್ದು, 9,32,474 ಪ್ಲಾಟ್ ಗಳು ಇರುತ್ತವೆ. ಕೃಷಿಯೇತರ ಸಮೀಕ್ಷೆ ಬಗ್ಗೆ ಸರ್ವೇ ಆಗಿಲ್ಲವೆಂದು ಸಭೆಗೆ ಮಾಹಿತಿ ನೀಡಿದರು.

ಈ ವಿಚಾರದಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯವರು ಮಾತನಾಡಿ, ಶೇಕಡಾ 85ರಷ್ಟು ಬೆಳೆ ಸಮೀಕ್ಷೆ ಕಾರ್ಯ ನಡೆದಿರುವುದಾಗಿ ಸಭೆಯಲ್ಲಿ ತಿಳಿಸಿದರು.

(ಕ್ರಮ: 1) ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಮಂಗಳೂರು;
2) ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಮಂಗಳೂರು;
3) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ದ.ಕ.ಮಂಗಳೂರು )

**26. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**

ಅಂಗನವಾಡಿ ಕಾರ್ಯಕರ್ತೆಯರಿಗೆ ಸಂಬಳ ಸರಿಯಾಗಿ ಸಿಗುತ್ತಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರು ಸಮ್ಮೇಳನ ಸಭೆಯಲ್ಲಿ ಪ್ರಸ್ತಾಪಿಸಿರುವುದಾಗಿ ಮಾನ್ಯ ಸಭಾಧ್ಯಕ್ಷರು ತಿಳಿಸಿದಾಗ, ಅಂಗನವಾಡಿ ಕಾರ್ಯಕರ್ತೆಯರಿಗೆ ಸರಿಯಾದ ಸಮಯಕ್ಕೆ ವೇತನ ಪಾವತಿಸಿರುವುದಾಗಿ ಉಪನಿರ್ದೇಶಕರು ತಿಳಿಸಿದರು.

ಮಾತೃವಂದನಾ ಯೋಜನೆ ಮತ್ತು ಮಾತೃಶ್ರೀ ಯೋಜನೆಯಡಿಯಲ್ಲಿ ನಿಗದಿಪಡಿಸಿದ ಗುರಿಯನ್ನು ಸಾಧಿಸುವುದಾಗಿ ತಿಳಿಸಿದಾಗ, ಈ ಯೋಜನೆಯನ್ನು ತ್ವರಿತವಾಗಿ ಫಲಾನುಭವಿಗಳಿಗೆ ತಲುಪುವಲ್ಲಿ ಕೂಡಲೇ ಕ್ರಮ ವಹಿಸುವಂತೆ ಸೂಚಿಸಿದರು.

(ಕ್ರಮ:ಉಪನಿರ್ದೇಶಕರು,ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,ಮಂಗಳೂರು)

**27. ಸಕಾಲ ಯೋಜನೆ:** ಸಕಾಲ ಯೋಜನೆಯಡಿಯಲ್ಲಿ ಸಾಧಿಸಿರುವ ಪ್ರಗತಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಒಟ್ಟು 53 ಅವಧಿ ಮೀರಿದ ಅರ್ಜಿಗಳು ಬಾಕಿ ಇದ್ದು, ಈ ಪೈಕಿ ಕಂದಾಯ ಇಲಾಖೆಯಲ್ಲಿ 4; ಒಳಾಡಳಿತ ಇಲಾಖೆಯಲ್ಲಿ 25; ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ 18 ಅರ್ಜಿಗಳು ಬಾಕಿ ಇದ್ದು, ನಿಗದಿತ ಕಾಲಮಿತಿಯೊಳಗಡೆ ಬಾಕಿ ಇರುವ ಅರ್ಜಿಗಳನ್ನು ವಿಲೇಗೊಳಿಸಲು ಕ್ರಮ ವಹಿಸುವಂತೆ ಎಲ್ಲಾ ಇಲಾಖಾಧಿಕಾರಿಗಳಿಗೆ ಸೂಚನೆ ನೀಡಿದರು.

(ಕ್ರಮ: ಜಿಲ್ಲಾ ಮಟ್ಟದ ಎಲ್ಲಾ ಇಲಾಖಾ ಅಧಿಕಾರಿಗಳಿಗೆ )

**28.** **ಇ–ಆಫೀಸ್ :** ಇ–ಆಫೀಸ್ ಬಗ್ಗೆ ಪ್ರಗತಿ ಪರಿಶೀಲಿಸಲಾಗಿ, 5 ಇಲಾಖೆಗಳಾದ ಜಿಲ್ಲಾಧಿಕಾರಿ ಕಛೇರಿ; ಜಿಲ್ಲಾ ಪಂಚಾಯತ್ ಕಛೇರಿ; ಪೊಲೀಸ್ ಆಯುಕ್ತರ ಕಛೇರಿ; ಜಿಲ್ಲಾ ತರಬೇತಿ ಕೇಂದ್ರ ಮತ್ತು ತಾಲ್ಲೂಕು ಕಛೇರಿ, ಬೆಳ್ತಂಗಡಿಯಲ್ಲಿ ಇ–ಆಫೀಸ್ ಕಾರ್ಯವು ಪೂರ್ಣಗೊಂಡಿರುತ್ತದೆ. ಉಳಿದ ಇಲಾಖೆಗಳಲ್ಲಿ ಇ–ಆಫೀಸ್ ಪ್ರಕ್ರಿಯೆಯು ಪ್ರಗತಿಯಲ್ಲಿರುವುದಾಗಿ ಅಪರ ಜಿಲ್ಲಾಧಿಕಾರಿಯವರು ತಿಳಿಸಿದಾಗ, ಅರಣ್ಯ ಇಲಾಖೆಯಲ್ಲಿ 2020ರ ಜನವರಿ 1ನೇ ತಾರೀಕಿನೊಳಗಡೆ ಇ–ಆಫೀಸ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕ್ರಮ ವಹಿಸುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಸೂಚಿಸಿದರು.

(ಕ್ರಮ: ಜಿಲ್ಲಾ ಮಟ್ಟದ ಎಲ್ಲಾ ಇಲಾಖಾ ಅಧಿಕಾರಿಗಳಿಗೆ )

**29.** ಹಿಂದುಳಿದ ವರ್ಗಗಳ ಇಲಾಖೆಗೆ ಸಂಬಂಧಪಟ್ಟಂತೆ, ವಿದ್ಯಾರ್ಥಿ ನಿಲಯಗಳಲ್ಲಿ ವಾರ್ಡನ್ ಹುದ್ದೆಗಳು ಖಾಲಿ ಇರುವುದಾಗಿ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಇಲಾಖೆ ಇವರು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರಲಾಗಿ, ಈ ಬಗ್ಗೆ ಸರಕಾರಕ್ಕೆ ಪತ್ರ ಬರೆಯಲಾಗಿದ್ದು, ಇದರ ಒಂದು ಪ್ರತಿಯನ್ನು ನೀಡುವಂತೆ ಮಾನ್ಯ ಸಭಾಧ್ಯಕ್ಷರು ಸೂಚಿಸಿದರು.

(ಕ್ರಮ: ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಇಲಾಖೆ, ದ.ಕ.ಮಂಗಳೂರು )

ಸಭೆಯಲ್ಲಿ ಚರ್ಚಿಸಿರುವಂತೆ, ಈ ಕೆಳಕಂಡ ಅಂಶಗಳ ಬಗ್ಗೆ ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ಮಾನ್ಯ ಸಭಾಧ್ಯಕ್ಷರು ನಿರ್ದೇಶನ ನೀಡಿದರು.

- ರಾಜ್ಯ ಮಟ್ಟದಲ್ಲಿ ಯಾವುದೇ ಇಲಾಖೆಗೆ ಸಂಬಂಧಿಸಿದ ಪ್ರಸ್ತಾವನೆಗಳು ಬಾಕಿ ಇದ್ದಲ್ಲಿ, ಇದನ್ನು ಗಮನ ತರುವುದು.

- ವಸತಿ ಯೋಜನೆಯಡಿಯಲ್ಲಿ ಬಡವರಿಗೆ ವಸತಿ ಕಲ್ಪಿಸುವ ನಿಟ್ಟಿನಲ್ಲಿ ಫಲಾನುಭವಿಗಳೊಂದಿಗೆ ನಿರಂತರವಾಗಿ ಸಂಪರ್ಕಿಸಿ, ಮನೆ ನಿರ್ಮಾಣ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕ್ರಮ ವಹಿಸುವುದು.

- ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಇಡ್ಯಾ ಗ್ರಾಮದಲ್ಲಿ 600 ಮನೆ ನಿರ್ಮಾಣಕ್ಕೆ ಈಗಾಗಲೇ ಕಾಮಗಾರಿ ಪ್ರಾರಂಭವಾಗಿದ್ದು, ಇದನ್ನು ಸಮರ್ಪಕವಾಗಿ ನಡೆಸಲು ಕೂಡಲೇ ಕ್ರಮ ವಹಿಸುವುದು.

- ಮಳೆಯಿಂದ ಹಾನಿಗೊಂಡಿರುವ ಮನೆಗಳ ದುರಸ್ತಿ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸುವುದು ಹಾಗೂ ಹಾನಿಗೊಳಗಾದ ಪ್ರತೀ ಕುಟುಂಬಕ್ಕೆ ತಲಾ ರೂ.1.00 ಲಕ್ಷ ಪರಿಹಾರ ಸರ್ಕಾರದಿಂದ ನೀಡಿರುವ ಬಗ್ಗೆ ಜನರಿಗೆ ತಿಳಿಯಪಡಿಸುವುದು.

- ಅತಿವೃಷ್ಟಿಯಿಂದ ಮನೆ ಕಳೆದುಕೊಂಡಿರುವ ಸಂತ್ರಸ್ತರಿಗೆ ಮೊದಲ ಕಂತು ರೂ.1.00 ಲಕ್ಷ ಸಂತ್ರಸ್ಥರ ಖಾತೆಗೆ ಜಮೆಯಾಗಿರುವ ಬಗ್ಗೆ ಅಧಿಕಾರಿಗಳು ಖುದ್ದು ಪರಿಶೀಲನೆ ನಡೆಸಲು ಕ್ರಮ ವಹಿಸುವುದು.

- ತುಂಬೆ ಅಣೆಕಟ್ಟಿನಲ್ಲಿ 7 ಮೀಟರ್ ನೀರು ನಿಲ್ಲಿಸುವ ನಿಟ್ಟಿನಲ್ಲಿ ಸ್ಥಳ ಪರಿಶೀಲನೆ ನಡೆಸಿ, ಕೂಡಲೇ ವರದಿ ಸಲ್ಲಿಸುವುದು.

- ಜಿಲ್ಲೆಯ ಪ್ರಮುಖ ಸ್ಥಳಗಳಲ್ಲಿ ಅಂದರೆ, ಬಸ್ಸ್ ನಿಲ್ದಾಣ, ಮಾರುಕಟ್ಟೆ, ಮುಂತಾದ ಪ್ರಮುಖ ಸ್ಥಳಗಳಲ್ಲಿ ಸಾರ್ವಜನಿಕರು ಓಡಾಟ ಜಾಸ್ತಿ ಇರುವ ಸ್ಥಳಗಳಲ್ಲಿ ಶೌಚಾಲಯಗಳನ್ನು ನಿರ್ಮಿಸುವುದು ಹಾಗೂ ಇವುಗಳ ನಿರ್ವಹಣೆಯನ್ನು ಸಮರ್ಪಕಗೊಳಿಸಲು ಕ್ರಮ ಕೈಗೊಳ್ಳುವುದು.

- ನಗರದಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಒಳಚರಂಡಿ ಕಾಮಗಾರಿಗಳನ್ನು ಅಸಮರ್ಪಕವಾಗಿ ನಡೆಸಲಾಗುತ್ತಿದ್ದು, ಇದನ್ನು ಸರಿಪಡಿಸಲು ಕೂಡಲೇ ಕ್ರಮ ವಹಿಸುವುದು.

ಕೊನೆಯದಾಗಿ ಅಪರ ಜಿಲ್ಲಾಧಿಕಾರಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ವಿ.ಪೊನ್ನುರಾಜ್)
ವ್ಯವಸ್ಥಾಪಕ ನಿರ್ದೇಶಕರು,ಕೆ.ಪಿ.ಸಿ.ಎಲ್.
ಹಾಗೂ ದ.ಕ.ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ
ಬೆಂಗಳೂರು

-ಸಂಬಂಧಪಟ್ಟ ಅಧಿಕಾರಿಗಳಿಗೆ -ಸೂಕ್ತ ಕ್ರಮಕ್ಕಾಗಿ

## ದಿನಾಂಕ: 05.12.2019 ಹಾಗೂ 06.12.2019 ರಂದು ತುಮಕೂರು ಹಾಗೂ ಶಿವಮೊಗ್ಗ ನಗರಕ್ಕೆ ಭೇಟಿ ನೀಡಿದ ವರದಿ.

ದಿನಾಂಕ: 05.12.2019 ರಂದು ಬೆಳಗ್ಗೆ 11.30 ಗಂಟೆಗೆ ಮಾನ್ಯ ಲೋಕಸಭಾ ಸದಸ್ಯರ ಸೂಚನೆಯಂತೆ, ಜಿಲ್ಲೆಯ ರೈತ ಸಮುದಾಯದ ನಿರುದ್ಯೋಗಿ ಯುವಕ/ ಯುವತಿಯರಿಗೆ ಕೌಶಲ್ಯ ತರಬೇತಿ ನೀಡುವ ಮೂಲಕ ರೈತರ ಆದಾಯವನ್ನು 2022ರ ವೇಳೆಗೆ ದುಪ್ಪಟ್ಟುಗೊಳಿಸುವ ಸಂಬಂಧ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕ ಕೇಂದ್ರ, ತುಮಕೂರು ಕಛೇರಿಯಲ್ಲಿ ಕರೆದಿದ್ದ ಸಭೆಯಲ್ಲಿ ಪಾಲ್ಗೊಂಡು ಈ ಕೆಳಕಂಡ ಅಂಶಗಳ ಬಗ್ಗೆ ಚರ್ಚಿಸಲಾಯಿತು. ಎಂಎಸ್ಎಂಇ ಟೆಕ್ನಾಲಜಿ ಸೆಂಟರ್ ಅನುಷ್ಠಾನದ ಬಗ್ಗೆ.

- ತುಮಕೂರು ಜಿಲ್ಲೆಯಲ್ಲಿ ಸಂಶೋಧನಾ ಕೇಂದ್ರ ಮತ್ತು ಸ್ಕಿಲ್ ಪಾರ್ಕ್ ಸ್ಥಾಪಿಸುವ ಬಗ್ಗೆ.
- ತುಮಕೂರು ಜಿಲ್ಲೆಯಲ್ಲಿ ಸ್ಮಾರ್ಟ್ ಆಪ್ ಇನ್ನೊವೇಷನ್ ಹಬ್ ಸ್ಥಾಪಿಸುವ ಬಗ್ಗೆ.
- ಆಹಾರ ಸಂಸ್ಕರಣ ಹಬ್ ಸ್ಥಾಪಿಸುವ ಬಗ್ಗೆ.

ಸಭೆಯಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು. ಪ್ರಸ್ತಾವನೆಯ ವಿವರ ಲಗತ್ತಿಸಿದೆ.

2. ಮಧ್ಯಾಹ್ನ 12.15 ಗಂಟೆಗೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಆಟೋರಿಕ್ಷಾ ವಾಹನಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ಇಸ್ರೋ ಅಧಿಕಾರಿ, ಪ್ರಾದೇಶಿಕ ಸಾರಿಗೆ ಅಧಿಕಾರಿ, ಪೋಲಿಸ್ ಉಪ ಅಧೀಕ್ಷಕರು, ಜಿಲ್ಲೆಯಲ್ಲಿರುವ ವಿವಿಧ ಆಟೋ ಚಾಲಕ ಸಂಘದವರು ಹಾಗೂ ಒಕ್ಕೂಟಗಳ ಪಧಾಧಿಕಾರಿಗಳು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಳ್ಳಲಾಯಿತು. ಆಟೋ ಚಾಲಕರ ಸಹಾಕರ ಸಂಘ ಸ್ಥಾಪಿಸಿ ನಗರದಲ್ಲಿರುವ ಅರ್ಥಿಕವಾಗಿ ಹಿಂದುಳಿದಿರುವ ಆಟೋ ಚಾಲಕರನ್ನು ಈ ಸಂಘದಲ್ಲಿ ಸದಸ್ಯತ್ವ ನೀಡಿದಲ್ಲಿ ಹೆಚ್ಚಿನ ಅನುಕೂಲವಾಗುತ್ತದೆ. ನಗರದಲ್ಲಿ ಚಾಲ್ತಿಯಲ್ಲಿರುವ ಆಟೋ ಚಾಲಕರ ಪರವಾನಗಿಯ ಕುರಿತು ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಂದ ಮಾಹಿತಿ ಪಡೆದು, ಸಹಕಾರ ಸಂಘವನ್ನು ಸ್ಥಾಪಿಸುವುದರಿಂದ ಆಟೋ ಚಾಲಕರಿಗೆ ಪರಿಸರ ಸ್ನೇಹಿ ಆಟೋ ಖರೀದಿಸಲು ಹಾಗೂ ಸಾಲ ಸೌಲಭ್ಯ ಪಡೆಯಲು ಸಹಾಯಕವಾಗಲಿದೆ ಎಂದು ಸಭೆಯಲ್ಲಿರುವವರಿಗೆ ಅರ್ಥೈಸಲಾಯಿತು. ನಗರದಲ್ಲಿ ಪರಿಸರ ಸಂರಕ್ಷಣೆ ಎಲ್ಲರ ಜವಾಬ್ದಾರಿಯಾಗಿದ್ದು, ತುಮಕೂರು ನಗರವನ್ನು ಪ್ರದೂಷಣ ರಹಿತ ಸ್ಮಾರ್ಟ್ ನಗರವನ್ನಾಗಿ ಮಾಡಲು ನಗರದಲ್ಲಿರುವ ಹೆಚ್ಚು ಹೊಗೆ ಸೂಸುವ ಹಳೆಯ ಆಟೋಗಳನ್ನು ಬದಲಾಯಿಸಬೇಕಾಗಿದ್ದು, ಆಸಕ್ತರಿರುವವರು ಹಾಗೂ ಇ–ಆಟೋ ಖರೀದಿ ಮಾಡಲು ಆರ್ಥಿಕವಾಗಿ ಹಿಂದುಳಿದಿರುವ ಆಟೋ ಚಾಲಕರನ್ನು ಆಯ್ಕೆ ಮಾಡಿ ಮೊದಲ ಆದ್ಯತೆ ನೀಡಿ ಅಂತಹವರಿಗೆ ನೆರವಾಗುವುದು ಹಾಗೂ ಬಿಎಸ್–4, ಬಿಎಸ್–5 ಆಟೋ ಹೊಂದಿರುವ ಚಾಲಕರನ್ನು ಕೂಡ ಈ ಸಂಘದಲ್ಲಿ ಸದಸ್ಯತ್ವ ಕೊಡುವುದು ಈ ಸಂಘದ ಮುಖ್ಯ ಉದ್ದೇಶವಾಗಿರಬೇಕು ಎಂದು ತಿಳಿಸಲಾಯಿತು. ಪರಿಸರ ಸಂರಕ್ಷಣೆಯ ಬಗ್ಗೆ ಕಾಳಜಿಯಿರುವ ಆಟೋ ಚಾಲಕರಿಗೆ ಸಹಕಾರ ಸಂಘಗಳ ಉಪ ನಿಬಂಧಕರು ಸಹಕಾರ ಸ್ಥಾಪಿಸಲು ನೆರವು ನೀಡಲ್ಲಿದ್ದು, ಅದಲ್ಲದೇ ಆಟೋಗಳ ಮೇಲೆ ಜಾಹೀರಾತು ಪ್ರಕಟಿಸಲು ಸಹಕಾರ ನೀಡಿ ಹಾಗೂ ಸಂಘದಲ್ಲಿ ಏನಾದರೂ ಗೊಂದಲಗಳುಂಟಾದಲ್ಲಿ ಬಗೆಹರಿಸಲಾಗುವುದೆಂದು ಸಭೆಯಲ್ಲಿ ಜಿಲ್ಲಾಧಿಕಾರಿಗಳು ತಿಳಿಸಿದರು.

3. ಮಧ್ಯಾಹ್ನ 03.30 ಗಂಟೆಗೆ ತುಮಕೂರು ಸ್ಮಾರ್ಟ್ ಸಿಟಿ ಯೋಜನೆಯಡಿ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳು, ಆಯುಕ್ತರು – ತುಮಕೂರು ಮಹಾನಗರ ಪಾಲಿಕೆ, ಮುಖ್ಯ ಅಭಿಯಂತರರು – ತುಸ್ಮಾಸಿ, ಕಾರ್ಯಪಾಲಕ ಅಭಿಯಂತರರುಗಳು ಹಾಗೂ ಇತರೆ ಅಭಿಯಂತರರೊಂದಿಗೆ ಸ್ಥಳ ಪರಿಶೀಲನೆಗೆ ತೆರಳಲಾಯಿತು. ಪ್ರತ್ಯೇಕ ವಿವರ ಈ ಕೆಳಕಂಡಂತಿದೆ.

- **ಜನರಲ್ ಕಾರಿಯಪ್ಪ ರಸ್ತೆ:–** ಸ್ಮಾರ್ಟ್ ಸಿಟಿ ಯೋಜನೆಯಡಿ ಸ್ಮಾರ್ಟ್ ರಸ್ತೆ ಪರಿಕಲ್ಪನೆಯಲ್ಲಿ ಪ್ರಾಯೋಗಿಕವಾಗಿ ಈ ರಸ್ತೆಯನ್ನು ಆಯ್ಕೆಮಾಡಿ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಕಾಮಗಾರಿಯ ಅವಧಿಯು ಸಹ ಮುಕ್ತಾಯಗೊಂಡಿದ್ದರೂ ಈವರೆಗೂ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಈಗಾಗಲೇ ಹಲವಾರು ಭಾರಿ ಖುದ್ದಾಗಿ ಸ್ಮಾರ್ಟ್ ಸಿಟಿ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿ ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳು ದೂರುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ತುರ್ತಾಗಿ ಪೂರ್ಣಗೊಳಿಸುವಂತೆ ಸೂಚಿಸಲಾಗಿತ್ತು. **ಅದಾಗ್ಯೂ ಸಹ ವಾಸ್ತುಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೆ ಮಂದಗತಿಯಲ್ಲಿ ಕಾಮಗಾರಿಯನ್ನು ನಡೆಸುತ್ತಿರುತ್ತಾರೆ.** ಅಲ್ಲಲ್ಲಿ ಛೇಂಬರ್‌ಗಾಗಿ ಅಗೆದ ಮಣ್ಣು, ಜೆಲ್ಲಿಕಲ್ಲು ಹಾಗೂ ಅನುಪಯೋಗಿ ಕಸದ ರಾಶಿಯನ್ನು ಸರಿಯಾದ ರೀತಿಯಲ್ಲಿ ತೆಗೆಯದೆ ಸಂಚಾರ ದಟ್ಟಣೆಗೆ ಅಡಚಣೆಯಾಗುತ್ತಿರುತ್ತದೆ.







- **ಹೊರಪೇಟೆ ರಸ್ತೆ** :– ಈ ರಸ್ತೆಯನ್ನು ಸ್ಮಾರ್ಟ್ ರಸ್ತೆ ಪ್ಯಾಕೇಜ್ – 1 (04 ರಸ್ತೆಗಳು – ಎಂ.ಜಿ ರಸ್ತೆ, ವಿವೇಕಾನಂದ ರಸ್ತೆ, ಹೊರಪೇಟೆ ರಸ್ತೆ, ಜೆ.ಸಿ ರಸ್ತೆ) ಅಡಿಯಲ್ಲಿ ಅಭಿವೃದ್ಧಿ ಪಡಿಸುತ್ತಿದ್ದು, ದಿನಾಂಕ: 01.02.2019 ರಂದು **ಕಾರ್ಯಾದೇಶ ನೀಡಿ ಈಗಾಗಲೇ 10 ತಿಂಗಳಾದರೂ ಸಹ ಶೇ. 50% ರಷ್ಟು ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ.** ಈಗಾಗಲೇ ಹಲವಾರು ಭಾರಿ ತುರ್ತಾಗಿ ಪೂರ್ಣಗೊಳಿಸುವಂತೆ ಸೂಚಿಸಲಾಗಿರುತ್ತದೆ. ಈ ಎಲ್ಲಾ ಸ್ಮಾರ್ಟ್ ರಸ್ತೆಗಳಲ್ಲು ಹಸಿರೀಕರಣ ಗಮನದಲ್ಲಿಟ್ಟುಕೊಂಡು ರಸ್ತೆಯ ಎರಡು ಬದಿಗಳಲ್ಲಿ Landscaping ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಪ್ರಶ್ನಿಸಿದಾಗ ನಕ್ಷೆಗಳನ್ನು ತಯಾರಿಸಿರುವ ಪಿಎಂಸಿ ಸಿಬ್ಬಂದಿಗಳಲ್ಲಿಯೇ ಸದರಿ ರಸ್ತೆಯ ನಕ್ಷೆಯಲ್ಲಿ Landscaping ಒಳಗೊಂಡಿದೆಯೇ ಇಲ್ಲವೆಂಬ ಸ್ಪಷ್ಟಿಕರಣವಿರುವುದಿಲ್ಲ. ಹಾಗೆಯೇ ಅಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರು ಡ್ರೈನ್‌ನಲ್ಲಿರುವ ಕಸದ ರಾಶಿಯನ್ನು ತೆಗೆದು ರಸ್ತೆಯ ಬದಿಯಲ್ಲೇ ಹಾಕುತ್ತಿದ್ದನ್ನು ಕಂಡು ಪ್ರಶ್ನಿಸಿದಾಗ ಕವರ್ ಸ್ಲಾಬ್ಸ್ ಮುಚ್ಚುವುದಕ್ಕಿಂತ ಮುಂಚೆ ಡ್ರೈನ್‌ನ್ನು ಸ್ವಚ್ಛಗೊಳಿಸಲಾಗುತ್ತಿದೆ ಎಂದು ಉತ್ತರಿಸಿದರು. ಮಳೆಗಾಲದಲ್ಲಿಯೆ ರಸ್ತೆಯ ಬದಿಯಲ್ಲಿ ಇರುವ ಕಸದ ರಾಶಿಯನ್ನು ತೆರವುಗೊಳಿಸಿ ಒಳ್ಳೆಯ ಮಣ್ಣನ್ನು ಹಾಕಿದ್ದರೆ ಇಷ್ಟರಲ್ಲಿ ಸಸಿಗಳನ್ನು ನೆಡಬಹುದಾಗಿತ್ತು. ಹಾಗಾಗಿ ಸದರಿ ರಸ್ತೆಯ ಡ್ರೈನ್ ಬದಿಯಲ್ಲಿ Landscaping ಮಾಡಲು ಸೂಚಿಸಲಾಯಿತು. ಈಗಾಗಲೇ ಜಿಲ್ಲಾಧಿಕಾರಿಗಳು ಪ್ರಸ್ತುತ ಅಗೆದಿರುವ ರಸ್ತೆಗಳ ಕಾಮಗಾರಿಯನ್ನು

ಪೂರ್ಣಗೊಳಿಸುವವರೆಗೂ ಬೇರೆ ಯಾವ ರಸ್ತೆಗಳನ್ನು ಅಗೆಯಬಾರದು ಎಂದು ಸೂಚಿಸಿದ್ದರಿಂದ ಸದರಿ ರಸ್ತೆಯಲ್ಲಿ ಕ್ರಾಸ್ ಡ್ರೈನ್ ಕೆಲಸವನ್ನು ಪ್ರಾರಂಭಿಸಿರುವುದಿಲ್ಲ, ಆದ ಕಾರಣ ಪೋಲಿಸ್ ಸಹಯೋಗದೊಂದಿಗೆ ರಸ್ತೆಯನ್ನು ತಡೆದು ಕ್ರಾಸ್ ಡ್ರೈನ್ ಕೆಲಸವನ್ನು ಪ್ರಾರಂಭಿಸುತ್ತೇವೆ ಎಂದು ಕಾರ್ಯಪಾಲಕ ಅಭಿಯಂತರರು ಸ್ಥಳದಲ್ಲಿ ಒಪ್ಪಿಗೆ ಕೇಳಿದರು. ಈ ಸಂಬಂಧ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಮುಂದಿನ ಕ್ರಮವಹಿಸಲು ಸೂಚಿಸಲಾಯಿತು.







- **ಅಶೋಕ ರಸ್ತೆ** :- ಈ ರಸ್ತೆಯನ್ನು ಸ್ಮಾರ್ಟ್ ರಸ್ತೆ ಪ್ಯಾಕೇಜ್ – 3ಎ (02 ರಸ್ತೆ – ಅಶೋಕ ರಸ್ತೆ ಹಾಗೂ ಡಿಸಿ ಕಛೇರಿ ರಸ್ತೆ) ಅಡಿಯಲ್ಲಿ ಅಭಿವೃದ್ಧಿ ಪಡಿಸುತ್ತಿದ್ದು, ದಿನಾಂಕ:27.04.2019 ರಂದು **ಕಾರ್ಯಾದೇಶ ನೀಡಿ ಈಗಾಗಲೇ 07 ತಿಂಗಳಾದರೂ ಸಹ ರಸ್ತೆಯಲ್ಲಿ ಶೇ. 50% ರಷ್ಟು ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ**. ಅದರಲ್ಲೂ ಈವರೆಗೂ ರಸ್ತೆಯ ಒಂದು ಭಾಗದಲ್ಲಿ ಮಾತ್ರ ಕಾಮಗಾರಿಯನ್ನು ಕೈಗೊಂಡಿದ್ದು, ಅದೂ ಸಹ ಮಂದಗತಿಯಲ್ಲಿ ನಡೆಸುತ್ತಿರುತ್ತಾರೆ. ಸದರಿ ರಸ್ತೆಯಲ್ಲಿ ಈಗಾಗಲೇ ಡ್ರೈನ್ ಅಸ್ತಿತ್ವದಲ್ಲಿದ್ದು, ಛೇಂಬರ್ಸ್ ಹಾಗೂ ಡ್ರೈನ್ ನಡುವೆCarriageway ತುಂಬಾ ಅಂತರವಿರುತ್ತದೆ. ಅಶೋಕ ರಸ್ತೆಯು ನಗರ ಕೇಂದ್ರ ಭಾಗವಾಗಿದ್ದು, ಸಾಕಷ್ಟು ವಾಹನ ಸಂಚಾರ ಕೂಡಿರುತ್ತದೆ. ಈ ಅಂಶವನ್ನು ಅರಿತು Carriagewayನ್ನು ಕಡಿಮೆಗೊಳಿಸಿ ಛೇಂಬರ್ಸ್‌ಗಳನ್ನು ಮಾಡಿದ್ದರೆ ಟ್ರಾಫಿಕ್‌ಗೆ ತೊಂದರೆಯಾಗುತ್ತಿರಲಿಲ್ಲ. ಈಗಾಗಲೇ ದಿನಾಂಕ: 27.11.2019 ರಂದು ಹಾಗೂ ದಿನಾಂಕ: 05.12.2019 ರಂದು ನಗರದ ಮಾಜಿ ಜನಪ್ರತಿನಿಧಿಯೊಬ್ಬರೂ ಈ ರಸ್ತೆಯಲ್ಲಿನ
- ಕಾಮಗಾರಿಯು ಗುಣಮಟ್ಟದಲ್ಲ ಎಂದು ಗಂಭೀರ ಆರೋಪವನ್ನು ಮಾಡಿರುತ್ತಾರೆ. ಹಾಗೆಯೇ ಸದರಿ ರಸ್ತೆಯಲ್ಲಿ ಕೆಲವು ಕಟ್ಟಡಗಳು ಒತ್ತುವರಿಯಾಗಿರುವುದು ಗಮನಕ್ಕೆ ಬಂದಿರುತ್ತದೆ. ಹಾಗಾಗಿ ಕೂಡಲೇ ಇದನ್ನು ಪರಿಶೀಲಿಸಲು ಆಯುಕ್ತರು, ತುಮಕೂರು ಮಹಾನಗರ ಪಾಲಿಕೆ ಇವರಿಗೆ ಸೂಚಿಸಲಾಯಿತು.







- **ನಾರ್ಥ್ ಬಸ್ ಸ್ಟಾಂಡ್ ರಸ್ತೆ :-** ಈ ರಸ್ತೆಯನ್ನು ಸ್ಮಾರ್ಟ್ ರಸ್ತೆ ಪ್ಯಾಕೇಜ್ – 2 (06 ರಸ್ತೆಗಳು) ಅಡಿಯಲ್ಲಿ ಅಭಿವೃದ್ಧಿ ಪಡಿಸುತ್ತಿದ್ದು, ಈ ದಿನ ನಾರ್ಥ್ ಬಸ್ ಸ್ಟಾಂಡ್ ರಸ್ತೆಯ ಸ್ಥಳ ಪರಿಶೀಲನೆ ಮಾಡಲಾಯಿತು. **ಸದರಿ ಪ್ಯಾಕೇಜ್‌ಗೆ ದಿನಾಂಕ: 28.02.2019 ರಂದು ಕಾರ್ಯದೇಶ ನೀಡಿ ಈಗಾಗಲೇ 10 ತಿಂಗಳಾಗಿರುತ್ತದೆ.** ಈ ರಸ್ತೆಯಲ್ಲಿ ಡಕ್ಟಿಂಗ್ ಒಳಗೊಂಡಿಲ್ಲದ ಮತ್ತು ರಾಜಕಾಲುವೆ ಮೇಲೆ ಶೇ. 50% ರಷ್ಟು ಫುಟ್‌ಪಾತ್ ಕೆಲಸವು ಮುಕ್ತಾಯಗೊಂಡಿರುತ್ತದೆ. ಇದು NGT ಮಾರ್ಗಸೂಚಿಯಂತೆ ಇದೆಯೇ ಎಂಬ ಬಗ್ಗೆ ಪರಿಶೀಲಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.

- 




- **ಜೆ.ಸಿ.ರಸ್ತೆ :-** ಈ ರಸ್ತೆಯನ್ನು ಸ್ಮಾರ್ಟ್ ರಸ್ತೆ ಪ್ಯಾಕೇಜ್ – 1 (04 ರಸ್ತೆಗಳು – ಎಂ.ಜಿ ರಸ್ತೆ, ವಿವೇಕಾನಂದ ರಸ್ತೆ, ಹೊರಪೇಟೆ ರಸ್ತೆ, ಜೆ.ಸಿ ರಸ್ತೆ) ಅಡಿಯಲ್ಲಿ ಅಭಿವೃದ್ಧಿ ಪಡಿಸುತ್ತಿದ್ದು, ದಿನಾಂಕ: **01.02.2019 ರಂದು ಕಾರ್ಯಾದೇಶ ನೀಡಿ ಈಗಾಗಲೇ 10 ತಿಂಗಳಾದರೂ ಸಹ ಶೇ. 50% ರಷ್ಟು ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ. ಸದರಿ ರಸ್ತೆಯ ಎರಡು ಬದಿಯಲ್ಲಿ ಹೂ ಹಾಗೂ ಹಣ್ಣಿನ ವ್ಯಾಪಾರಿಗಳು ಇದ್ದು, ದಿನನಿತ್ಯ ಬದಿಯಲ್ಲಿ ಇರುವ ರಾಜಗಾಲುವೆಯಲ್ಲಿ ಬಹಳಷ್ಟು ಕಸ ಸಂಗ್ರಹಣೆಯಾಗುತ್ತಿರುತ್ತದೆ.** ಆದ್ದರಿಂದ ಸದರಿ ರಸ್ತೆ ಬದಿಯಲ್ಲಿರುವ ವ್ಯಾಪಾರಿಗಳನ್ನು ಹಾಗೂ ವಿನಾಯಕ ಮಾರುಕಟ್ಟೆ ಬದಿಯಲ್ಲಿರುವ ತರಕಾರಿ ವ್ಯಾಪಾರಿಗಳನ್ನು ಗಮನದಲ್ಲಿಟ್ಟುಕೊಂಡು ವೆಂಡಿಂಗ್ ಜೋನ್ಸ್ ಪ್ರಸ್ತಾವನೆಯನ್ನು ಸಿದ್ಧಪಡಿಸಲು ಸೂಚಿಸಲಾಯಿತು. ಹಾಗೆಯೇ ವಿನಾಯಕ ಮಾರುಕಟ್ಟೆ ಜಾಗದಲ್ಲಿ ಅಪಾರವಾಗಿ ಸಂಗ್ರಹವಾಗಿರುವ ಕಸದ ರಾಶಿಯನ್ನು ಕೂಡಲೇ ತೆರವುಗೊಳಿಸಲು ಆಯುಕ್ತರು, ತುಮಕೂರು ಮಹಾನಗರ ಪಾಲಿಕೆಗೆ ಸೂಚಿಸಲಾಯಿತು.





- **ರಿಂಗ್ ರಸ್ತೆ (ಫೇಸ್ – 1 & ಫೇಸ್ – 2 ) :-** ತುಮಕೂರು ವರ್ತುಲ ರಿಂಗ್ ರಸ್ತೆ ಅಭಿವೃದ್ಧಿ ಸಂಬಂಧವಾಗಿ ಫೇಸ್ – 1 ಗೆ ದಿನಾಂಕ: 23.11.2018 ರಂದು ಕಾರ್ಯಾದೇಶ ನೀಡಿದ್ದು ಹಾಗೂ ಫೇಸ್ – 2ಗೆ ದಿನಾಂಕ: 29.05.2019 ರಂದು ಕಾರ್ಯಾದೇಶ ನೀಡಲಾಗಿರುತ್ತದೆ. **ಸದರಿ ಯೋಜನೆಯಲ್ಲಿ ಫೇಸ್ – 01 ಕಾಮಗಾರಿಯು ಕಾರ್ಯಾದೇಶದ ಪ್ರಕಾರ ದಿನಾಂಕ: 22.11.2019 ರಂದು ಪೂರ್ಣಗೊಳಿಸಬೇಕಾಗಿತ್ತು. ಆದರೆ ಫೇಸ್–1 ಕಾಮಗಾರಿಯು ಶೇ. 50–60% ಮಾತ್ರ ಪೂರ್ಣಗೊಂಡಿರುತ್ತದೆ.** ಈ ವಿಷಯವಾಗಿ ಗುತ್ತಿಗೆದಾರರಲ್ಲಿ ಪ್ರಶ್ನಿಸಿದಾಗ ರಸ್ತೆಯ ಬದಿಗಳಲ್ಲಿರುವ ಮರಗಳ ಸ್ಥಳಾಂತರ, ಕೆಲವು ಕಟ್ಟಡಗಳ ಒತ್ತುವರಿ ಹಾಗೂ ಇತ್ಯಾದಿ ಕಾರಣಗಳಿಂದ ವಿಳಂಬವಾಗುತ್ತಿದೆ ಎಂದು ಉತ್ತರಿಸಿದರು. **ಆದ್ದರಿಂದ ಒತ್ತುವರಿಯಾಗಿರುವ ಕಟ್ಟಡಗಳ ತೆರವಿಗೆ ಖುದ್ದಾಗಿ ಒಬ್ಬರು ತಹಸಿಲ್ದಾರ್ ರವರನ್ನು ನಿಯೋಜಿಸಲು ಜಿಲ್ಲಾಧಿಕಾರಿಯವರಿಗೆ ಸೂಚಿಸಲಾಯಿತು.** ಇದನ್ನು ಹೊರತುಪಡಿಸಿ ಉಳಿದಿರುವ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಸೂಚಿಸಲಾಯಿತು.






* **ಆಯುಷ್ ಆಸ್ಪತ್ರೆ :-** ತುಮಕೂರು ಸ್ಮಾರ್ಟ್ ಸಿಟಿ ವತಿಯಿಂದ ಆಯುಷ್ ಆಸ್ಪತ್ರೆಯನ್ನು ನಿರ್ಮಿಸುತ್ತಿದ್ದು, ಇದನ್ನು ನಿರ್ಮಿಸಲು ಯೋಜಿಸಿರುವ ಸ್ಥಳವನ್ನು ಪರಿಶೀಲಿಸಲು ತೆರಳಲಾಯಿತು. **ಸದರಿ ಸ್ಥಳದ ಪಕ್ಕದಲ್ಲಿಯೇ ಉದ್ಯಾನವನದ ಜಾಗವಿದ್ದು, ಆಸ್ಪತ್ರೆಗೆ ಅದನ್ನು ಒಳಗೂಡಿಸಿ ಉದ್ಯಾನವನ್ನು ನಿರ್ಮಿಸಲು TUDA ದಿಂದ ಬೇಕಾದ ಆದೇಶಗಳನ್ನು ನೀಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.**





* **ಮಹಾತ್ಮ ಗಾಂಧಿ ಸ್ಟೇಡಿಯಂ ನಿರ್ಮಾಣ :-** ಈ ಯೋಜನೆಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸ್ಮಾರ್ಟ್ ಸಿಟಿ ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿದ್ದು, ದಿನಾಂಕ: 27.09.2019 ರಂದು ಕಾರ್ಯಾದೇಶ ನೀಡಿರುತ್ತಾರೆ. ಪ್ರಸ್ತುತ ಸ್ಟೇಡಿಯಂನಲ್ಲಿ ತೆರವುಗೊಳಿಸುವ ಕಾರ್ಯವು ಪ್ರಗತಿಯಲ್ಲಿದ್ದು, ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಪಡೆದು ತ್ವರಿತಗತಿಯಲ್ಲಿ ಪ್ರಾರಂಭಿಸುವಂತೆ ಸೂಚಿಸಲಾಯಿತು.



- **ಸೈನ್ಸ್ ಥೀಮ್ ಪಾರ್ಕ್ @ ಅಮಾನಿಕೆರೆ :-** ಈ ಪಾರ್ಕ್‌ನ್ನು ಅಮಾನಿಕೆರೆ ಒಂದು ಭಾಗದಲ್ಲಿ ವಿಜ್ಞಾನವನ್ನು ಪರಿಕಲ್ಪನೆಯಾಗಿಟ್ಟುಕೊಂಡು ನಿರ್ಮಿಸಲಾಗಿದ್ದು, ದಿನಾಂಕ: 16.11.2019 ರಂದು ಕಾಮಗಾರಿಯು ಪೂರ್ಣಗೊಂಡಿರುತ್ತದೆ. **ಸದರಿ ಪಾರ್ಕ್ ಪ್ರವೇಶಕ್ಕೆ ಎರಡು ದ್ವಾರಗಳಿದ್ದು, ಮುಖ್ಯ ದ್ವಾರದಲ್ಲಿ ಮಾತ್ರ ಪ್ರವೇಶ ಶುಲ್ಕ ಪಾವತಿಸಿಕೊಳ್ಳುತ್ತಿರುತ್ತಾರೆ. ಆದರೆ ಈ ಪಾರ್ಕ್‌ಗೆ ಮತ್ತೊಂದು ದ್ವಾರವಿರುವುದರಿಂದ ಪ್ರತ್ಯೇಕವಾಗಿ ಪ್ರವೇಶ ಶುಲ್ಕವಿದ್ದರೆ ಉತ್ತಮವೆಂದು ಅಭಿಪ್ರಾಯ ವ್ಯಕ್ತಪಡಿಸಲಾಯಿತು**. ಹಾಗೆಯೇ ಅಮಾನಿಕೆರೆ ಪಾದಚಾರಿ ಮಾರ್ಗದಲ್ಲಿ ಹಾಗೂ ಸೈನ್ಸ್ ಥೀಮ್ ಪಾರ್ಕ್‌ನಲ್ಲಿ ಕಡಿಮೆ ದೀಪಗಳಿರುವುದು ಕಂಡುಬಂದಿದ್ದು, **ಆಕರ್ಷಕ ವಿನ್ಯಾಸ ದೀಪಗಳನ್ನು ಅಳವಡಿಸಲು ಸೂಚಿಸಲಾಯಿತು**. ಹಾಗೆಯೇ ಅಮಾನಿಕೆರೆಯಲ್ಲಿ ಕೈಗೊಂಡಿರುವ ಇನ್ನುಳಿದ ಯೋಜನೆಗಳ ಪ್ರಗತಿಯ ಬಗ್ಗೆ ಮಾಹಿತಿಯನ್ನು ಪಡೆಯಲಾಯಿತು.






- **ಭಗವಾನ್ ಮಹಾವೀರ್ ರಸ್ತೆ :-** ದಿನಾಂಕ: 06.12.2019 ರಂದು ಬೆಳ್ಳಗ್ಗೆ 06.00 ಗಂಟೆಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಈ ರಸ್ತೆಯನ್ನು ಸ್ಮಾರ್ಟ್ ರಸ್ತೆ ಪ್ಯಾಕೇಜ್ – 2 (06 ರಸ್ತೆಗಳು) ಅಡಿಯಲ್ಲಿ ಅಭಿವೃದ್ಧಿ ಪಡಿಸುತ್ತಿದ್ದು, ಸದರಿ ಪ್ಯಾಕೇಜ್‌ಗೆ ದಿನಾಂಕ: 28.02.2019 ರಂದು ಕಾರ್ಯಾದೇಶ ನೀಡಿ ಈಗಾಗಲೇ 10 ತಿಂಗಳಾಗಿರುತ್ತದೆ. ಅದಾಗ್ಯೂ ಸಹ ಕಾಮಗಾರಿಯು ಶೇ. 50% ರಷ್ಟು ಪೂರ್ಣಗೊಂಡಿರುವುದಿಲ್ಲ. ಈ ಹಿಂದೆ ಅಂದರೆ ದಿನಾಂಕ: 19.10.2019 ರಂದು ಈ ರಸ್ತೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಗುತ್ತಿಗೆದಾರರಿಗೆ **ಒಂದು ವಾರದ ಗಡುವನ್ನು ಅಂದರೆ ದಿನಾಂಕ: 20.10.2019 ರಿಂದ 27.10.2019ರೊಳಗೆ ಸಂಪೂರ್ಣ ರಸ್ತೆಯಲ್ಲಿರುವ ಮಣ್ಣಿನ ರಾಶಿಯನ್ನು ರೋಲರ್ ಯಂತ್ರದಿಂದ ಸಮಗೊಳಿಸಿ ಹಾಗೂ ಡ್ರೈನ್ ನಿರ್ಮಿಸುವ ಕಾರ್ಯವೂ ಸಹ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿತ್ತು.ಇಲ್ಲವಾದಲ್ಲಿ ಕರಾರನ್ನು ಅಂತಿಮಗೊಳಿಸಲು ಟೆಂಡರ್**

**ನಿಯಮಾವಳಿಗಳ ಪ್ರಕಾರ ಕ್ರಮವಹಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಗಿತ್ತು.** ಅದಾಗ್ಯೂ ಸಹ ಆ ದಿನ ನೋಡಿದಕ್ಕೂ ಈ ದಿನಕ್ಕು ಯಾವುದೇ ಬದಲಾವಣೆಯಾಗಿರುವುದಿಲ್ಲ. ಅದರಲ್ಲು ಈ ದಿನದ ವೀಕ್ಷಣೆಯಲ್ಲಿ ಗಮನಿಸಿದ ಪ್ರಮುಖ ಅಂಶಗಳು ಈ ಕೆಳಕಂಡಂತಿದೆ:

- ಈ ಹಿಂದೆ ಸೂಚಿಸಿದಂತೆ ರಸ್ತೆಯಲ್ಲಿರುವ ಸಂಪೂರ್ಣ ಮಣ್ಣಿನ ರಾಶಿಯನ್ನು ತೆರವುಗೊಳಿಸುವುದರ ಬಗ್ಗೆ ಯಾವುದೇ ರೀತಿ ಕ್ರಮ ಕೈಗೊಂಡಿರುವುದಿಲ್ಲ.








- ಈ ರಸ್ತೆಯಲ್ಲಿ ಗಮನಿಸಿದಂತೆ ಕೆಲವು ಕಡೆ ಡ್ರೈನ್ ಹಾದುಹೋಗಿರುತ್ತದೆ. ಇನ್ನು ಕೆಲವು ಕಡೆ ಡ್ರೈನ್ ಸೌಲಭ್ಯವೆ ಇರುವುದಿಲ್ಲ. ಕಾರಣ ಒತ್ತುವರಿ (encroachment) ಇರುತ್ತದೆ. ಆದುದರಿಂದ, ಜಿಲ್ಲಾಧಿಕಾರಿಗಳು ಕೂಡಲೇ ಸ್ಥಳ ಪರಿಶೀಲಿಸಿ ವರದಿ ಸಲ್ಲಿಸಲು ಸಂಬಂಧಪಟ್ಟವರಿಗೆ ಸೂಚಿಸಿದೆ. (ಕ್ರಮ: **ಜಿಲ್ಲಾಧಿಕಾರಿಗಳು ಹಾಗೂ ಆಯುಕ್ತರು, ತುಮಕೂರು ಮಹಾನಗರ ಪಾಲಿಕೆ**).





➢ ಈ ರಸ್ತೆಯಲ್ಲಿ ಟ್ರಕ್ಸ್ ಹಾಗೂ ದೊಡ್ಡ ವಾಹನಗಳನ್ನು ನಿಲಿಸುತ್ತಿದ್ದು, ಇದನ್ನು ತೆರವುಗೊಳಿಸಲು ಸಂಬಂಧಪಟ್ಟವರಿಗೆ ಕೂಡಲೇ ಸೂಚಿಸತಕ್ಕದ್ದು. **(ಕ್ರಮ: ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು, ತುಮಕೂರು ಜಿಲ್ಲೆ)**





➢ ಸ್ಮಾರ್ಟ್ ರಸ್ತೆ ಬದಿಯಲ್ಲಿ ಇರುವ ಪ್ರಥಮ ದರ್ಜೆ ಕಾಲೇಜು, ಲಿಂಕ್ ರಸ್ತೆಯನ್ನು ಅಭಿವೃದ್ಧಿಪಡಿಸುವುದು.




➢ ಸದರಿ ರಸ್ತೆಯಲ್ಲಿ ಕೆಲವು ಕಟ್ಟಡಗಳು ಒತ್ತುವರಿಯಾಗಿದ್ದು, ಕಾಂಪೌಂಡ್‌ಗಳನ್ನು ತೆರವುಗೊಳಿಸಬೇಕಾಗಿರುತ್ತದೆ. ಅದರಲ್ಲಿ ಕೆಲವು ಕಟ್ಟಡದ ಕಾಂಪೌಂಡ್‌ಗಳನ್ನು ತೆರವುಗೊಳಿಸಲು ಒಪ್ಪಿರುತ್ತಾರೆ. ಇನ್ನುಳಿದಂತೆ ತುಮಕೂರು ವಿಶ್ವವಿದ್ಯಾನಿಲಯದ ಮಹಿಳಾ ವಿದ್ಯಾರ್ಥಿ ನಿಲಯ ಕಟ್ಟಡ ಕಾಂಪೌಂಡ್ ಸಹ ಒಂದಾಗಿದ್ದು, ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು. **(ಕ್ರಮ: ಕುಲಪತಿಗಳು, ತುಮಕೂರು ವಿಶ್ವ ವಿದ್ಯಾನಿಲಯ ಹಾಗೂ ಆಯುಕ್ತರು)**





- ದುರಸ್ತಿಯಲ್ಲಿರುವ ವಾಹನಗಳನ್ನು ಸ್ಥಳಾಂತರಿಸಲು ಹಾಗೂ ಸದರಿ ರಸ್ತೆಯಲ್ಲಿ ಆಟೋ ರಿಕ್ಷಾಗಳನ್ನು ಹೊರಗೆ ನಿಲ್ಲಿಸುತ್ತಿದ್ದು,ರಸ್ತೆಯಲ್ಲಿ ನಿಲ್ಲಿಸದಂತೆ ನೋಡಿಕೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸತಕ್ಕದ್ದು. **(ಕ್ರಮ: ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತುಮಕೂರು ಜಿಲ್ಲೆ)**




- ಸದರಿ ರಸ್ತೆಯ ಬದಿಯಲ್ಲಿ ಕೆಲವು ಹಳೆ ಕಟ್ಟಡಗಳಿದ್ದು, ಅದರ ಕಾಂಪೌಂಡ್ ಗೋಡೆಗಳು ದುರಸ್ಥಿಯಾಗಿರುತ್ತದೆ. ಅಂತಹದನ್ನು ಗುರುತಿಸಿ ಸರಿಪಡಿಸಲು ಗುತ್ತಿಗೆದಾರರು ಹಾಗೂ ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸತಕ್ಕದ್ದು. **(ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್)**




- ಈ ರಸ್ತೆಯ ಕೆಲವು ಕಡೆ ಡ್ರೈನ್ ವ್ಯವಸ್ಥೆಯು ತೀವ್ರ ಹದಗೆಟ್ಟಿದ್ದು, ಕೂಡಲೇ ಸಂಬಂಧಪಟ್ಟವರಿಗೆ ಕ್ರಮ ಕೈಗೊಳ್ಳಲು ಸೂಚಿಸತಕ್ಕದ್ದು. **(ಕ್ರಮ: ಆಯುಕ್ತರು, ತುಮಕೂರು ಮಹಾನಗರ ಪಾಲಿಕೆ)**




ಆಯುಕ್ತರು, ತುಮಕೂರು ಮಹಾನಗರ ಪಾಲಿಕೆ ಇವರೊಂದಿಗೆ ಚರ್ಚಿಸಿ ಪ್ರಸ್ತಾವನೆಯನ್ನು ತಯಾರಿಸುವಂತೆ ಪಿಎಂಸಿಯವರಿಗೆ ಸೂಚಿಸತಕ್ಕದ್ದು. (ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್)

ಒಟ್ಟಾರೆ ಈ ಮೇಲ್ಕಂಡ ಎಲ್ಲಾ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿದಾಗ ಯಾವ ಒಂದು ಕಾಮಗಾರಿಯೂ ಸಹ ಪೂರ್ಣಗೊಳ್ಳುವ ಹಂತದಲ್ಲಿ ಇರುವುದಿಲ್ಲ. ಇದರಿಂದ ದಿನನಿತ್ಯ ಸಾರ್ವಜನಿಕರಿಗೆ ತೀವ್ರ ಸಮಸ್ಯೆಗಳು ಉಂಟಾಗುತ್ತಿದ್ದು ಹಾಗೂ ಜನಪ್ರತಿನಿಧಿಗಳು ಸಾರ್ವಜನಿಕರಿಗೆ ಉತ್ತರಿಸಲು ಸಾಧ್ಯವಾಗುತ್ತಿಲ್ಲ. ಪ್ರತಿ ಮಾಹೆಯ ಸ್ಥಳ ವೀಕ್ಷಣೆಯಲ್ಲಿಯೂ ಎಲ್ಲಾ ಗುತ್ತಿಗೆದಾರರಿಗೂ ಹಾಗೂ ಸ್ಮಾರ್ಟ್ ಸಿಟಿ ಅಧಿಕಾರಿಗಳಿಗೂ ಕಾಮಗಾರಿಗಳನ್ನು ವಿಳಂಬ ಮಾಡದೇ ತ್ವರಿತಗತಿಯಲ್ಲಿ ಪೂರ್ಣಗೊಳಿಸಿ, ತಪ್ಪಿದಲ್ಲಿ ಅಂತಹವರ ಮೇಲೆ ನಿಯಮಾನುಸಾರ ಕ್ರಮಕೈಗೊಳ್ಳತಕ್ಕದ್ದು ಎಂದು ಉಸ್ತುವಾರಿ (ಪ್ರ) ವ್ಯವಸ್ಥಾಪಕ ನಿರ್ದೇಶಕರಿಗೆ ಆದೇಶಿರುತ್ತೇನೆ.

ಗೌರವಗಳೊಂದಿಗೆ,

ತಮ್ಮ ವಿಶ್ವಾಸಿ,

ಶ್ರೀಮತಿ ವಿ.ಮಂಜುಲ, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಸು)

## ನಮೂನೆ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರ.ಸಂ. | ಅಂಶಗಳು | |
|---|---|---|
| 1. | ಉಸ್ತುವಾರಿ ಜಿಲ್ಲೆಯ ಹೆಸರು | ಧಾರವಾಡ |
| 2. | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಗೌರವ ಗುಪ್ತ |
| 3. | ಪ್ರವಾಸ ಕೈಗೊಂಡ ದಿನಾಂಕ | 16.12.2019 |

| | | |
|---|---|---|
| **A)** | **ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ** | |
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | ಅತೀವೃಷ್ಟಿಯಿಂದಾಗಿ ಹಾನಿಗೊಳಗಾದ ಮನೆಗಳ ಪುನರ್ ನಿರ್ಮಾಣದ ಪ್ರಗತಿಯನ್ನು ಗಮನಿಸಿದರು |
| b) | ನಿರ್ದೇಶನ ನೀಡಿದ ಬಗ್ಗೆ ಸಾರಂಶ | 1)2ನೇ ಕಂತಿನ ಹಣ ಬಿಡುಗಡೆ ಬಗ್ಗೆ ಜಿ.ಪಿ.ಎಸ್ ಟ್ಯಾಗ್ ಪರಿಶೀಲಿಸಲು.<br>2)ಹಣ ಬಟವಾಡೆಯಾದ ಬಗ್ಗೆ ನೇರವಾಗಿ ಮೊಬೈಲ್/SMS ಮೂಲಕ ಸಂದೇಶ ರವಾನಿಸುವ ಕುರಿತು ಪರಿಶೀಲಿಸಲು<br>3)ಅಂಗನವಾಡಿ ಕಟ್ಟಡಗಳ ದುರಸ್ಥಿ ಕಾರ್ಯವನ್ನು ಶೀಘ್ರವಾಗಿ ಪೂರ್ಣಗೊಳಿಸಲು ನಿರ್ದೇಶನ ನೀಡಿದರು |
| **B)** | **ಕ್ಷೇತ್ರ ವೀಕ್ಷಣೆ** | ಧಾರವಾಡ ತಾಲ್ಲೂಕಿನ ಅಳ್ನಾವರ ಪಟ್ಟಣದ ತಿಲಕ್ ನಗರ, ಮುಗದ ಗ್ರಾಮ, ದೇಸಾಯಿ ಜಾಳ |

| ಕ್ರ.ಸಂ. | ಭೇಟಿ ನೀಡಿದ ತಾಲ್ಲೂಕು/ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| | ಧಾರವಾಡ | ತಿಲಕ್ ನಗರ, ಮುಗದ ಗ್ರಾಮ, ಅಳ್ನಾವರ ಮತ್ತು ದೇಸಾಯಿ ಜಾಳ | ಅತೀವೃಷ್ಟಿಯಿಂದಾಗಿ ಹಾನಿಗೊಳಗಾದ ಮನೆಗಳ ಪುನರ್ ನಿರ್ಮಾಣದ ಪ್ರಗತಿಯನ್ನು ಗಮನಿಸಿದರು |

| | | |
|---|---|---|
| **C)** | **ಇತರೆ ವಿಷಯಗಳು** | ಮುಗದ ಗ್ರಾಮದ ಅಂಗನವಾಡಿ ಕೇಂದ್ರ ಸಂಖ್ಯೆ 2ರ ದುರಸ್ಥಿ ಕಾರ್ಯವ ನ್ನು ಪರಿಶೀಲಿಸಿ, ಇನ್ನುಳಿದ ಅಂಗನವಾಡಿ ಕಟ್ಟಡಗಳ ದುರಸ್ಥಿ ಕಾರ್ಯವ ನ್ನು ಶೀಘ್ರವಾಗಿ ಪೂರ್ಣಗೊಳಿಸಲು ನಿರ್ದೇಶನ ನೀಡಲಾಗಿದೆ. |

ಸರ್ಕಾರದ ಪ್ರಧಾನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
ಕರ್ನಾಟಕ ಸರ್ಕಾರ

**ಶ್ರೀ ಗೌರವ ಗುಪ್ತ ಭಾ.ಆ.ಸೇ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾ_ ಬೆಂಗಳೂರ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರು ದಿ. 16.12.2019 ರಂದು ಅಗಸ್ಟ್ ಹಾಗೂ ಅಕ್ಟೋಬರ್ –2019 ತಿಂಗಳಿನಲ್ಲಿ ಆದ ಅತಿವೃಷ್ಟಿಯಿಂದಾಗಿ ಹಾನಿಗೊಳಗಾದ ಅಳ್ನಾವರ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಹಾಗೂ ಧಾರವಾಡ ತಾಲೂಕ ವ್ಯಾಪ್ತಿಯಲ್ಲಿ ಬರುವ ಮುಗದ ಗ್ರಾಮದಲ್ಲಿ ಸ್ಥಳ ಪರಿಶೀಲನೆ ಮಾಡಿದ ಮಾಹಿತಿ.**

ಮಾನ್ಯರು ಈ ಕೆಳಗೆ ಕಾಣಿಸಿದ ಅಳ್ನಾವರ ಪಟ್ಟಣದ ತಿಲಕ ನಗರ ಹಾಗೂ ದೇಸಾಯಿ ಚಾಳ ಪ್ರದೇಶದಲ್ಲಿರುವ ಅತಿವೃಷ್ಟಿಯಿಂದಾಗಿ ಹಾನಿಗೊಳಗಾದ ಮನೆಗಳ ಪುನರ್ ನಿರ್ಮಾಣದ ಪ್ರಗತಿ ಪರಿಶೀಲಿಸಿದರು.

| ಫಲಾನುಭವಿಯ ಹೆಸರು | ವಿಳಾಸ | ಮೊಬೈಲ ನಂ |
|---|---|---|
| • ಮಹಾಂತವ್ವ ಸದಾಶಿವಯ್ಯಾ ಕೋಟಿ | ತಿಲಕ ನಗರ | 7760218289 |
| • ಶಿವಪ್ಪ ಶೆಟ್ಟಪ್ಪ ಗರಗದ | ತಿಲಕ ನಗರ | 984486087 |
| • ಶಿವಗಂಗವ್ವ ರುದ್ರಪ್ಪಾ ಪಗಡಿ | ತಿಲಕ ನಗರ | 9902228836 |
| • ಯಶವಂತ ನಿಂಗಪ್ಪಾ ಕೇಸರೇಕರ | ತಿಲಕ ನಗರ | 6364431655 |
| • ಅಣ್ಣಪ್ಪ ಮಲ್ಲಪ್ಪ ಕಡಿ | ತಿಲಕ ನಗರ | 7022810572 |
| • ಸಿದ್ದಪ್ಪ ಮಲ್ಲಪ್ಪ ಕಡಿ | ತಿಲಕ ನಗರ | 9880405642 |
| • ಅರವಿಂದ ಈಶ್ವರಪ್ಪ ಕುಶಲಾಪೂರ | ತಿಲಕ ನಗರ | 9980543559 |
| • ವಿಜಯಕುಮಾರ ಈಶ್ವರಪ್ಪ ಕುಶಲಾಪೂರ | ತಿಲಕ ನಗರ | 7348999237 |
| • ಖಾತುನಬಿ ಮಹ್ಮದ ಹೊನ್ನಾಪೂರ | ದೇಸಾಯಿ ಚಾಳ | 8971587145 |
| • ಬೇಗಂ ಕುತ್ಬುದ್ದಿನ್ ಯರಗಟ್ಟಿ | ದೇಸಾಯಿ ಚಾಳ | 9036395769 |

ಎಲ್ಲ ಫಲಾನುಭವಿಗಳು ಕಟ್ಟಡ ಕಾಮಗಾರಿಯ ಮೊದಲನೆ ಹಂತದ ಕಾಮಗಾರಿಯನ್ನು ಪ್ರಾರಂಭಿಸಿದ ಬಗ್ಗೆ ಪರಿಶೀಲಿಸಿದರು ಹಾಗೂ ಮನೆ ನಿರ್ಮಾಣಕ್ಕಾಗಿ ಈಗಾಗಲೇ ರಾಜೀವ ಗಾಂಧಿ ವಸತಿ ನಿಗಮದಿಂದ ಮೊದಲನೆ ಹಂತವಾಗಿ ತಲಾ ರೂ. 1 ಲಕ್ಷ ಪರಿಹಾರ ಧನ ಮಂಜೂರಾದ ಬಗ್ಗೆ ಹಾಗೂ ತಲಾ ಮಾಸಿಕ ಬಾಡಿಗೆ ರೂ. 5000/–ಗಳು ಸಂದಾಯವಾದ ಬಗ್ಗೆ ಫಲಾನುಭವಿಗಳಿಂದ ಖಚಿತ ಪಡಿಸಿಕೊಂಡರು. ಈ ಕುರಿತು ಅಳ್ನಾವರ ಪಟ್ಟಣ ಪಂಚಾಯತ ಮುಖ್ಯಾಧಿಕಾರಿಗಳಿಗೆ ಕೂಡಲೇ 2ನೇ ಹಂತದ ಹಣ ಬಿಡುಗಡೆ ಬಗ್ಗೆ ಜಿ.ಪಿ.ಎಸ್. ಟ್ಯಾಗ ಪರಿಶೀಲನೆಯನ್ನು ಕೈಗೊಳ್ಳಲು ನಿರ್ದೇಶನ ನೀಡಿದರು.

ಇದೆ ರೀತಿಗಾಗಿ ಗ್ರಾಮೀಣ ಭಾಗದಲ್ಲಿ ತಹಶೀಲದಾರ ಅಳ್ನಾವರ ಇವರು ಫಲಾನುಭವಿಗಳಿಗೆ 2ನೇ ಹಂತದ ಹಣ ಬಿಡುಗಡೆ ಬಗ್ಗೆ ಜಿ.ಪಿ.ಎಸ್. ಟ್ಯಾಗ ಪರಿಶೀಲನೆಯನ್ನು ಕೈಗೊಳ್ಳಲು ನಿರ್ದೇಶನ ನೀಡಿದರು. ರಾಜೀವ ಗಾಂಧಿ ವಸತಿ ನಿಗಮದಿಂದ ಫಲಾನುಭವಿಗಳಿಗೆ ಹಣ ಬಟವಡೆ ಆದ ಬಗ್ಗೆ ನೇರವಾಗಿ ಮೊಬೈಲ ಎಸ್.ಎಮ್.ಎಸ್ ಮೂಲಕ ಸಂದೇಶ ರವಾನಿಸುವ ಕುರಿತು ಪರಿಶೀಲಿಸಿ ಕ್ರಮಕೈಗೊಳ್ಳಲು ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಇವರಿಗೆ ನಿರ್ದೇಶನ ನೀಡಿದರು.

ನಂತರ ಮಾನ್ಯರು ಕೆಳಗೆ ಕಾಣಿಸಿದ ಧಾರವಾಡ ತಾಲೂಕ ವ್ಯಾಪ್ತಿಯಲ್ಲಿ ಬರುವ ಮುಗದ ಗ್ರಾಮದಲ್ಲಿರುವ ಅತಿವೃಷ್ಟಿಯಿಂದಾಗಿ ಹಾನಿಗೊಳಗಾದ ಮನೆಗಳ ಪುನರ್ ನಿರ್ಮಾಣದ ಪ್ರಗತಿ ಪರಿಶೀಲಿಸಿದರು.

| ಫಲಾನುಭವಿಯ ಹೆಸರು | ವಿಳಾಸ | ಮೊಬೈಲ ನಂ |
| --- | --- | --- |
| • ಶ್ರೀ ನನ್ನೇಸಾಬ ರಾಜೇಸಾಬ ಮುಜಾವರ | ಮುಗದ ಗ್ರಾಮ | 9916098585 |
| • ಶ್ರೀ ಈರಪ್ಪ ತಿಪ್ಪಣ್ಣ ಕಮಡೋಳ್ಳಿ | ಮುಗದ ಗ್ರಾಮ | 9632569699 |
| • ಶ್ರೀ ದುರಗಪ್ಪ ಯಲ್ಲಪ್ಪ ಅಬ್ಬಿಗೇರಿ | ಮುಗದ ಗ್ರಾಮ | 9632480927 |

ಎಲ್ಲ ಫಲಾನುಭವಿಗಳು ಕಟ್ಟಡ ಕಾಮಗಾರಿಯ ಮೊದಲನೆ ಹಂತದ ಕಾಮಗಾರಿಯನ್ನು ಪ್ರಾರಂಭಿಸಿದ ಬಗ್ಗೆ ಪರಿಶೀಲಿಸಿದರು ಹಾಗೂ ಮನೆ ನಿರ್ಮಾಣಕ್ಕಾಗಿ ಈಗಾಗಲೇ ರಾಜೀವ ಗಾಂಧಿ ವಸತಿ ನಿಗಮದಿಂದ ಮೊದಲನೆ ಹಂತವಾಗಿ ತಲಾ ರೂ. 1 ಲಕ್ಷ ಪರಿಹಾರ ಧನ ಮಂಜೂರಾದ ಬಗ್ಗೆ ಹಾಗೂ ಎ ಕೇಟಗೇರಿ ಮನೆಗಳಿಗೆ ತಲಾ ಮಾಸಿಕ ಬಾಡಿಗೆ ರೂ. 5000/– ಗಳು ಸಂದಾಯವಾದ ಬಗ್ಗೆ ಫಲಾನುಭವಿಗಳಿಂದ ಖಚಿತ ಪಡಿಸಿಕೊಂಡರು. ಈ ಕುರಿತು ಧಾರವಾಡ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಧಾರವಾಡ ಇವರಿಗೆ ಕೂಡಲೇ 2ನೇ ಹಂತದ ಹಣ ಬಿಡುಗಡೆ ಬಗ್ಗೆ ಜಿ.ಪಿ.ಎಸ್. ಟ್ಯಾಗ ಪರಿಶೀಲನೆಯನ್ನು ಕೈಗೊಳ್ಳಲು ನಿರ್ದೇಶನ ನೀಡಿದರು. ರಾಜೀವ ಗಾಂಧಿ ವಸತಿ ನಿಗಮದಿಂದ ಫಲಾನುಭವಿಗಳಿಗೆ ಹಣ ಬಟವಡೆ ಆದ ಬಗ್ಗೆ ನೇರವಾಗಿ ಮೊಬೈಲ ಎಸ್.ಎಮ್.ಎಸ್ ಮೂಲಕ ಸಂದೇಶ ರವಾನಿಸುವ ಕುರಿತು ಪರಿಶೀಲಿಸಿ ಕ್ರಮಕೈಗೊಳ್ಳಲು ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಇವರಿಗೆ ನಿರ್ದೇಶನ ನೀಡಿದರು.

ನಂತರ ಇದೇ ಗ್ರಾಮದಲ್ಲಿನ ಅಂಗನವಾಡಿ ಕೇಂದ್ರ ಸಂಖ್ಯೆ:2 ಕ್ಕೆ ಭೇಟಿ ನೀಡಿ ಅತೀವೃಷ್ಟಿಯಿಂದ ಹಾನಿಯಾದ ಸದರ ಅಂಗನವಾಡಿ ಕಟ್ಟಡದ ದುರಸ್ಥಿ ಕಾರ್ಯವನ್ನು ಪರಿಶೀಲಿಸಿದರು. ಹಾಗೂ ಇದೇ ರೀತಿ ಇನ್ನುಳಿದ ಅಂಗನವಾಡಿ ಕಟ್ಟಡದ ದುರಸ್ಥಿ ಕಾರ್ಯವನ್ನು ಶೀಘ್ರವಾಗಿ ಪೂರ್ಣಗೊಳಿಸಲು ನಿರ್ದೇಶನ ನೀಡಿದರು.

# ನಮೂನೆ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರ.ಸಂ | ಅಂಶಗಳು | ವಿವರ |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಗದಗ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಡಾ. ರಾಜಕುಮಾರ ಖತ್ರಿ ಭಾ.ಆ.ಸೇ. |
| 3 | ಪ್ರವಾಸ ಕೈಗೊಂಡ ದಿನಾಂಕ | 16-12-2019 |
| A | **ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ** | |
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | ತಹಶೀಲ್ದಾರ ಕಛೇರಿ ನರಗುಂದದಲ್ಲಿ ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರವಾಹ ಹಾನಿ ಕುರಿತಂತೆ ಕೈಗೊಂಡ ಕ್ರಮಗಳ ಕುರಿತು ಪ್ರಗತಿ ಪರಿಶೀಲನೆ. |
| b) | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | ರಸ್ತೆ ಕಾಮಗಾರಿ, ಶಾಲೆಗಳ ಮತ್ತು ಶುದ್ಧ ಕುಡಿಯುವ ನೀರಿನ ಘಟಕಗಳ ಮತ್ತು ಹಾಗೂ ಸಂತ್ರಸ್ತರ ಮನೆ ನಿರ್ಮಾಣ ಕಾಮಗಾರಿಗಳ ಕುರಿತು ಶೀಘ್ರ ಕ್ರಮಕ್ಕೆ ನಿರ್ದೇಶನ.<br><br>ಪ್ರಾರಂಭವಾಗದೇ ಇರುವ ಕೆಲಸಗಳನ್ನು ಬೇಗನೆ ಪ್ರಾರಂಭಿಸಿ ಮುಕ್ತಾಯಗೊಳಿಸಲು ಸೂಚನೆ. |
| B | ಕ್ಷೇತ್ರ ವೀಕ್ಷಣೆ | ಮನೆ ನಿರ್ಮಾಣ ಮಾಡುತ್ತಿರುವ ಸ್ಥಳಗಳನ್ನು ವೀಕ್ಷಣೆ ಮಾಡಲಾಯಿತು. |

| ಕ್ರ ಸಂ | ಭೇಟಿ ನೀಡಿದ ತಾಲೂಕು/ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| 1 | ನರಗುಂದ ತಾಲೂಕು ಕೊಣ್ಣೂರು ಗ್ರಾಮ | ಪ್ರವಾಹ ಪೀಡಿತ ಪ್ರದೇಶ | • ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಕೈಗೊಂಡ ಪರಿಹಾರ ಕಾರ್ಯಗಳ ಪರಿಶೀಲನೆ<br>• ಪ್ರವಾಹದಲ್ಲಿ ಸಿಲುಕಿ ಶಿಥಿಲಾವಸ್ಥೆಯಲ್ಲಿದ್ದ ಸರ್ಕಾರಿ ಶಾಲೆಗೆ ಭೇಟಿ ನೀಡಿ ಹೊಸ ಶಾಲೆ ನಿರ್ಮಾಣ ಅಗತ್ಯ ಕ್ರಮಕ್ಕೆ ಸೂಚನೆ<br>• ಸಂತ್ರಸ್ತರಿಗೆ ನೀಡಿದ ಪರಿಹಾರದಲ್ಲಿ ಕೈಗೊಳ್ಳುತ್ತಿರುವ ಮನೆ ನಿರ್ಮಾಣ ಕಾರ್ಯಗಳ ಪರಿಶೀಲನೆ |

| | | |
|---|---|---|
| C | ಇತರೆ ವಿಷಯಗಳು | ಬೇರೆ ಸ್ಥಳದಲ್ಲಿ ಮನೆಗಳನ್ನು ನಿರ್ಮಿಸುವ ಬಗ್ಗೆ ಚರ್ಚಿಸಲಾಯಿತು. |

## ನಮೂನೆ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರಮ ಸಂಖ್ಯೆ | ಅಂಶಗಳು | ವಿವರ |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಹಾವೇರಿ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಮನೋಜ್ ಕುಮಾರ್ ಮೀನಾ, ಭಾ.ಆ.ಸೇ. |
| 3 | ಪ್ರವಾಸ ಕೈಗೊಂಡ ದಿನಾಂಕ | 19-12-2019 ಮತ್ತು 20-12-2019 |
| | | |
| A | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | |
| a | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | 1. ಅತಿವೃಷ್ಟಿಯಿಂದ ಹಾನಿಯಾದ ಎ ಮತ್ತು ಬಿ ವರ್ಗದ ಮನೆಗಳ ಪುನರ್ ನಿರ್ಮಾಣ ಕಾಮಗಾರಿಯ ತಳಪಾಯ ಹಂತದ ಜಿಪಿಎಸ್ ಕಾರ್ಯವನ್ನು ಒಂದು ವಾರದೊಳಗೆ ಪೂರ್ಣಗೊಳಿಸುವುದು.<br>2. ಮೂಲಭೂತ ಸೌಕರ್ಯಗಳ ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸುವುದು<br>3. ಸ್ಥಳಾಂತರಿಸಬೇಕಾದ ಗ್ರಾಮದ ಪ್ರಸ್ತಾವನೆಗಳನ್ನು ತಹಶೀಲ್ದಾರ್‌ಗಳು ಮುಂದಿನ ಸಭೆಯ ಮುಂಚಿತವಾಗಿ ಸಲ್ಲಿಸಲು ಸೂಚಿಸಿದೆ<br>4. ಎಲ್ಲಾ ಗ್ರಾಮಗಳಲ್ಲಿ ಸ್ಮಶಾನ ಭೂಮಿ ಗುರುತಿಸುವುದು, ಸರಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ ಭೂಸ್ವಾಧೀನಕ್ಕೆ/ಖರೀದಿ ಕುರಿತು ಜಮೀನು ಗುರುತಿಸಿ ಪ್ರಸ್ತಾವನೆ ಸಲ್ಲಿಸುವುದು<br>5. ಬಾಕಿ ಇರುವ 94ಸಿ/94ಸಿಸಿ ಪ್ರಕರಣಗಳಿಗೆ ಸಂಭಂದಿಸಿದಂತೆ ಹಕ್ಕುಪತ್ರಗಳನ್ನು ವಿತರಿಸಲು ಕ್ರಮ ಕೈಗೊಳ್ಳುವುದು.<br>6. ಕಂದಾಯ ನ್ಯಾಯಾಲಯದಲ್ಲಿ 1 ವರ್ಷ ಮೇಲ್ಪಟ್ಟು ಇರುವ ಪ್ರಕರಣಗಳನ್ನು 3 ತಿಂಗಳೊಳಗಾಗಿ ಕ್ರಮ ಮುಕ್ತಾಯಗೊಳಿಸಲು ಸೂಚಿಸಿದೆ<br>7. ಪಹಣಿ ಪತ್ರಗಳಲ್ಲಿರುವ ಕಾಲಂ ನಂ 3 ಮತ್ತು 9 ವ್ಯತ್ಯಾಸಗಳನ್ನು ಇತ್ಯರ್ಥಗೊಳಿಸಲು ಕೂಡಲೇ ಕ್ರಮಕೈಗೊಳ್ಳುವುದು.<br>8. ಜಿಲ್ಲಾಧಿಕಾರಿಗಳ ಕಚೇರಿ, ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್‌ಗಳಲ್ಲಿ ಇ-ಆಫೀಸ್ ತಂತ್ರಾಂಶವನ್ನು ಅಳವಡಿಸುವುದು.<br>9. ಸಕಾಲ ಬಾಕಿ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ವಿಲೇಗೊಳಿಸಲು |
| b | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | |

| B | ಕ್ಷೇತ್ರ ವೀಕ್ಷಣೆ | | |
|---|---|---|---|
| ಕ್ರಮ ಸಂಖ್ಯೆ | ಭೇಟಿ ನೀಡಿದ ತಾಲ್ಲೂಕು/ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
| 1 | ಸವಣೂರು ತಾಲ್ಲೂಕು – ಸವಣೂರು ಪಟ್ಟಣ | ಹಾನಿಗೊಳಗಾದ ಮನೆಗಳ ಪರಿಶೀಲನೆ | ಅತಿವೃಷ್ಠಿಯಿಂದ ಹಾನಿಯಾದ ಎ ಮತ್ತು ಬಿ ವರ್ಗದ ಮನೆಗಳ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಲು ಸಾರ್ವಜನಿಕರಿಗೆ ತಿಳಿಸಲಾಯಿತು. |
| 2 | ಸವಣೂರು ತಾಲ್ಲೂಕು – ಹುರಳಿಕೊಪ್ಪಿ | ಹಾನಿಗೊಳಗಾದ ಮನೆಗಳ ಪರಿಶೀಲನೆ, ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಭೇಟಿ | ಅತಿವೃಷ್ಠಿಯಿಂದ ಹಾನಿಯಾದ ಎ ಮತ್ತು ಬಿ ವರ್ಗದ ಮನೆಗಳ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಲು ಸಾರ್ವಜನಿಕರಿಗೆ ತಿಳಿಸಲಾಯಿತು. |
| 3 | ಸವಣೂರು ತಾಲ್ಲೂಕು – ಕುರುಬುರಮಲ್ಲೂರು | ಹಾನಿಗೊಳಗಾದ ಮನೆಗಳ ಪರಿಶೀಲನೆ, ಶುದ್ಧ ಕುಡಿಯುವ ನೀರಿನ ಘಟಕ | ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ವಚ್ಛವಾಗಿಡಲು ಸೂಚಿಸಲಾಯಿತು. |
| 4 | ಸವಣೂರು ತಾಲ್ಲೂಕು – ಕುಣಿಮೆಳ್ಳಿಹಳ್ಳಿ | ಹಾನಿಗೊಳಗಾದ ಮನೆಗಳ ಪರಿಶೀಲನೆ | ಅತಿವೃಷ್ಠಿಯಿಂದ ಹಾನಿಯಾದ ಎ ಮತ್ತು ಬಿ ವರ್ಗದ ಮನೆಗಳ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಲು ಸಾರ್ವಜನಿಕರಿಗೆ ತಿಳಿಸಲಾಯಿತು. |

| C) | ಇತರೆ ವಿಷಯಗಳು |
|---|---|
| | ➢ ಹಿಂಗಾರು ಋತುವಿನ ಬೆಳೆ ಕಟಾವಿಗೆ ಸಂಬಂಧಿಸಿದಂತೆ ಡಿಸೆಂಬರ್ ಅಂತ್ಯದೊಳಗೆ ಹಾಗೂ ಮುಂಗಾರು ಮಳೆಗೆ ಸಂಬಂಧಿಸಿದಂತೆ ಅಕ್ಟೋಬರ್ ಅಂತ್ಯದೊಳಗೆ ಫಾರಂ 2ರನ್ನು ಸಲ್ಲಿಸುವಂತೆ ಹಾಗೂ 1328ರಷ್ಟು ಬೆಳೆ ಕಟಾವು ಇದೆಯೋ ಇಲ್ಲವೋ ಎಂಬುದರ ಬಗ್ಗೆ ಜಂಟಿ ಸರ್ವೆ ನಡೆಸಿ, ಅಪ್‌ಲೋಡ್ ಮಾಡುವಂತೆ ತಿಳಿಸಲಾಯಿತು.<br><br>➢ ಬೆಳೆ ಹಾನಿಗೆ ಸಂಬಂಧಿಸಿದಂತೆ ಫಲಾನುಭವಿಗಳಿಗೆ ಪರಿಹಾರ ಧನವನ್ನು ನೀಡಲು ಹಾಗೂ ಮುಂದಿನ ವೀಡೀಯೋ ಸಂವಾದದ ಒಳಗೆ ಎಲ್ಲಾ ಪರಿಹಾರಧನ ಪಾವತಿ ಮಾಡುವಂತೆ ಸೂಚಿಸಿದರು. ಪ್ರವಾಹದಿಂದ ಕೃಷಿ ಭೂಮಿ ಹಾನಿ 157.465 ಲಕ್ಷ ರೂ. ಗಳು ಬಿಡುಗಡೆಯಾಗಿದ್ದು, ಬಿಡುಗಡೆಯಾಗಿರುವ ಮೊತ್ತವನ್ನು ಸಂಬಂಧಪಟ್ಟ ಫಲಾನುಭವಿಗಳಿಗೆ ವಿತರಿಸಲು ಕ್ರಮಕೈಗೊಳ್ಳುವಂತೆ ಸೂಚಿಸಿದರು. ಬೆಳೆಹಾನಿಗೆ ವಿತರಿಸಿದ ಪರಿಕರಗಳಲ್ಲಿ ಶೇ. 69 ರಷ್ಟು ವಿತರಿಸಲು ಬಾಕಿಯಿದ್ದು, ಪ್ರಧಾನ ಮಂತ್ರಿ ವಸತಿ ಭೀಮಾ ಯೋಜನೆಗೆ ಸಂಬಂಧಿಸಿದಂತೆ ಡಿಸೆಂಬರ್ 2019ರ ಮಾಹೆಯೊಳಗೆ ಪಾವತಿ ಮಾಡಲು ಕೃಷಿ ನಿರ್ದೇಶಕರಿಗೆ ಸೂಚಿಸಲಾಯಿತು.<br><br>➢ ಮನೆ ಹಾನಿಗೊಳಗಾದ ಸಂತ್ರಸ್ಥರುಗಳಿಗೆ ಪರಿಹಾರಧನವನ್ನು ಖಾತೆಗೆ ಜಮಾ ಮಾಡುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಚರ್ಚಿಸುತ್ತಾ, ಸಂಬಂಧಪಟ್ಟ ಫಲಾನುಭವಿಗಳಿಗೆ ಕೆ–2ರ ತಂತ್ರಾಂಶದಡಿ ಪಾವತಿ ಮಾಡಬೇಕಾಗಿರುವುದರಿಂದ, ಫಲಾನುಭವಿಗಳ Receipient ID Creat ಮಾಡಿ, ಕೆ–2ರ ತಂತ್ರಾಂಶದಡಿ ಬಿಲ್ ತಯಾರಿಸಿ ಸಂಬಂಧಪಟ್ಟ ಖಜಾನೆಗೆ ಕಳುಹಿಸಿದ್ದಲ್ಲಿ, ಜಮಾ ಮಾಡುವುದಾಗಿ ತಿಳಿಸಲಾಯಿತು |

(ಮನೋಜ್ ಕುಮಾರ್ ಮೀನಾ)
ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ
ಹಾಗೂ
ಹಾವೇರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಸರ್ಕಾರದ ಕಾರ್ಯದರ್ಶಿಯವರ ಕಛೇರಿ
ವಸತಿ ಇಲಾಖೆ

ಸಂಖ್ಯೆ: ವಇ 149 ಕಾ (ಆಶಾ) 2019 ದಿನಾಂಕ: 26-12-2019

## ಟಿಪ್ಪಣಿ

ವಿಷಯ: ಶ್ರೀ ಮನೋಜ್ ಕುಮಾರ್ ಮೀನಾ, ಹಾವೇರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರವರ ಡಿಸೆಂಬರ್ 2019 ರ ಜಿಲ್ಲಾ ಪರಿಶೀಲನಾ ವರದಿಯನ್ನು ಸಲ್ಲಿಸುವ ಕುರಿತು.

* * *

ಶ್ರೀ ಮನೋಜ್ ಕುಮಾರ್ ಮೀನಾ, ಸರ್ಕಾರದ ಕಾರ್ಯದರ್ಶಿ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ದಿನಾಂಕ: 19-12-2019 ರಿಂದ 20-12-2019 ರವರೆಗೆ ಹಾವೇರಿ ಜಿಲ್ಲೆಯ ಪ್ರಗತಿ ಪರಿಶೀಲನೆ ಸಭೆಯನ್ನು ನಡೆಸಿ, ಪ್ರವಾಹ ಸ್ಥಳಗಳಿಗೆ ಭೇಟಿ ನೀಡಿರುವ ವರದಿಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

(ಪಿ. ಶ್ರೀನಿವಾಸ)
ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
ವಸತಿ ಇಲಾಖೆ

**ಇವರಿಗೆ:**

1) ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಸಿಆಸುಇ (ಆಡಳಿತ ಸುಧಾರಣೆ), ಬಹುಮಹಡಿ ಕಟ್ಟಡ, ಬೆಂಗಳೂರು.

ಕೊಠಡಿ ಸಂಖ್ಯೆ: 213, 2ನೇ ಮಹಡಿ, ವಿಕಾಸ ಸೌಧ, ಬೆಂಗಳೂರು-560001
ದೂರವಾಣಿ: 080-22256356/22034504, 22253718 (ಫ್ಯಾಕ್ಸ್)

<u>ನಮೂನೆ</u>

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರಮ ಸಂಖ್ಯೆ | ಅಂಶಗಳು | ವಿವರ |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಹಾವೇರಿ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಮನೋಜ್ ಕುಮಾರ್ ಮೀನಾ, ಭಾ.ಆ.ಸೇ. |
| 3 | ಪ್ರವಾಸ ಕೈಗೊಂಡ ದಿನಾಂಕ | 19-12-2019 ಮತ್ತು 20-12-2019 |
| | | |
| A | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | |
| a | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | 1. ಅತಿವೃಷ್ಟಿಯಿಂದ ಹಾನಿಯಾದ ಎ ಮತ್ತು ಬಿ ವರ್ಗದ ಮನೆಗಳ ಪುನರ್ ನಿರ್ಮಾಣ ಕಾಮಗಾರಿಯ ತಳಪಾಯ ಹಂತದ ಜಿಪಿಎಸ್ ಕಾರ್ಯವನ್ನು ಒಂದು ವಾರದೊಳಗೆ ಪೂರ್ಣಗೊಳಿಸುವುದು.<br>2. ಮೂಲಭೂತ ಸೌಕರ್ಯಗಳ ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸುವುದು<br>3. ಸ್ಥಳಾಂತರಿಸಬೇಕಾದ ಗ್ರಾಮದ ಪ್ರಸ್ತಾವನೆಗಳನ್ನು ತಹಶೀಲ್ದಾರ್‌ಗಳು ಮುಂದಿನ ಸಭೆಯ ಮುಂಚಿತವಾಗಿ ಸಲ್ಲಿಸಲು ಸೂಚಿಸಿದೆ<br>4. ಎಲ್ಲಾ ಗ್ರಾಮಗಳಲ್ಲಿ ಸ್ಮಶಾನ ಭೂಮಿ ಗುರುತಿಸುವುದು, ಸರಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ ಭೂಸ್ವಾಧೀನಕ್ಕೆ/ಖರೀದಿ ಕುರಿತು ಜಮೀನು ಗುರುತಿಸಿ ಪ್ರಸ್ತಾವನೆ ಸಲ್ಲಿಸುವುದು<br>5. ಬಾಕಿ ಇರುವ 94ಸಿ/94ಸಿಸಿ ಪ್ರಕರಣಗಳಿಗೆ ಸಂಭಂದಿಸಿದಂತೆ ಹಕ್ಕುಪತ್ರಗಳನ್ನು ವಿತರಿಸಲು ಕ್ರಮ ಕೈಗೊಳ್ಳುವುದು.<br>6. ಕಂದಾಯ ನ್ಯಾಯಾಲಯದಲ್ಲಿ 1 ವರ್ಷ ಮೇಲ್ಪಟ್ಟು ಇರುವ ಪ್ರಕರಣಗಳನ್ನು 3 ತಿಂಗಳೊಳಗಾಗಿ ಕ್ರಮ ಮುಕ್ತಾಯಗೊಳಿಸಲು ಸೂಚಿಸಿದೆ<br>7. ಪಹಣಿ ಪತ್ರಗಳಲ್ಲಿರುವ ಕಾಲಂ ನಂ 3 ಮತ್ತು 9 ವ್ಯತ್ಯಾಸಗಳನ್ನು ಇತ್ಯರ್ಥಗೊಳಿಸಲು ಕೂಡಲೇ ಕ್ರಮಕೈಗೊಳ್ಳುವುದು.<br>8. ಜಿಲ್ಲಾಧಿಕಾರಿಗಳ ಕಚೇರಿ, ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್‌ಗಳಲ್ಲಿ ಇ–ಆಫೀಸ್ ತಂತ್ರಾಂಶವನ್ನು ಅಳವಡಿಸುವುದು.<br>9. ಸಕಾಲ ಬಾಕಿ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ವಿಲೇಗೊಳಿಸಲು |
| b | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | |

| B | ಕ್ಷೇತ್ರ ವೀಕ್ಷಣೆ | | |
|---|---|---|---|
| ಕ್ರಮ ಸಂಖ್ಯೆ | ಭೇಟಿ ನೀಡಿದ ತಾಲ್ಲೂಕು/ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
| 1 | ಸವಣೂರು ತಾಲ್ಲೂಕು – ಸವಣೂರು ಪಟ್ಟಣ | ಹಾನಿಗೊಳಗಾದ ಮನೆಗಳ ಪರಿಶೀಲನೆ | ಅತಿವೃಷ್ಟಿಯಿಂದ ಹಾನಿಯಾದ ಎ ಮತ್ತು ಬಿ ವರ್ಗದ ಮನೆಗಳ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಲು ಸಾರ್ವಜನಿಕರಿಗೆ ತಿಳಿಸಲಾಯಿತು. |
| 2 | ಸವಣೂರು ತಾಲ್ಲೂಕು – ಹುರಳಿಕೊಪ್ಪಿ | ಹಾನಿಗೊಳಗಾದ ಮನೆಗಳ ಪರಿಶೀಲನೆ, ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಭೇಟಿ | ಅತಿವೃಷ್ಟಿಯಿಂದ ಹಾನಿಯಾದ ಎ ಮತ್ತು ಬಿ ವರ್ಗದ ಮನೆಗಳ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಲು ಸಾರ್ವಜನಿಕರಿಗೆ ತಿಳಿಸಲಾಯಿತು. |
| 3 | ಸವಣೂರು ತಾಲ್ಲೂಕು – ಕುರುಬುರಮಲ್ಲೂರು | ಹಾನಿಗೊಳಗಾದ ಮನೆಗಳ ಪರಿಶೀಲನೆ, ಶುದ್ಧ ಕುಡಿಯುವ ನೀರಿನ ಘಟಕ | ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ವಚ್ಛವಾಗಿಡಲು ಸೂಚಿಸಲಾಯಿತು. |
| 4 | ಸವಣೂರು ತಾಲ್ಲೂಕು – ಕುಣಿಮೆಳ್ಳಿಹಳ್ಳಿ | ಹಾನಿಗೊಳಗಾದ ಮನೆಗಳ ಪರಿಶೀಲನೆ | ಅತಿವೃಷ್ಟಿಯಿಂದ ಹಾನಿಯಾದ ಎ ಮತ್ತು ಬಿ ವರ್ಗದ ಮನೆಗಳ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಲು ಸಾರ್ವಜನಿಕರಿಗೆ ತಿಳಿಸಲಾಯಿತು. |

**C) ಇತರೆ ವಿಷಯಗಳು**

- ಹಿಂಗಾರು ಋತುವಿನ ಬೆಳೆ ಕಟಾವಿಗೆ ಸಂಬಂಧಿಸಿದಂತೆ ಡಿಸೆಂಬರ್ ಅಂತ್ಯದೊಳಗೆ ಹಾಗೂ ಮುಂಗಾರು ಮಳೆಗೆ ಸಂಬಂಧಿಸಿದಂತೆ ಅಕ್ಟೋಬರ್ ಅಂತ್ಯದೊಳಗೆ ಫಾರಂ 2ರನ್ನು ಸಲ್ಲಿಸುವಂತೆ ಹಾಗೂ 1328ರಷ್ಟು ಬೆಳೆ ಕಟಾವು ಇದೆಯೋ ಇಲ್ಲವೋ ಎಂಬುದರ ಬಗ್ಗೆ ಜಂಟಿ ಸರ್ವೆ ನಡೆಸಿ, ಅಪ್‌ಲೋಡ್ ಮಾಡುವಂತೆ ತಿಳಿಸಲಾಯಿತು.

- ಬೆಳೆ ಹಾನಿಗೆ ಸಂಬಂಧಿಸಿದಂತೆ ಫಲಾನುಭವಿಗಳಿಗೆ ಪರಿಹಾರ ಧನವನ್ನು ನೀಡಲು ಹಾಗೂ ಮುಂದಿನ ವೀಡೀಯೋ ಸಂವಾದದ ಒಳಗೆ ಎಲ್ಲಾ ಪರಿಹಾರಧನ ಪಾವತಿ ಮಾಡುವಂತೆ ಸೂಚಿಸಿದರು. ಪ್ರವಾಹದಿಂದ ಕೃಷಿ ಭೂಮಿ ಹಾನಿ 157.465 ಲಕ್ಷ ರೂ. ಗಳು ಬಿಡುಗಡೆಯಾಗಿದ್ದು, ಬಿಡುಗಡೆಯಾಗಿರುವ ಮೊತ್ತವನ್ನು ಸಂಬಂಧಪಟ್ಟ ಫಲಾನುಭವಿಗಳಿಗೆ ವಿತರಿಸಲು ಕ್ರಮಕೈಗೊಳ್ಳುವಂತೆ ಸೂಚಿಸಿದರು. ಬೆಳೆಹಾನಿಗೆ ವಿತರಿಸಿದ ಪರಿಕರಗಳಲ್ಲಿ ಶೇ. 69 ರಷ್ಟು ವಿತರಿಸಲು ಬಾಕಿಯಿದ್ದು, ಪ್ರಧಾನ ಮಂತ್ರಿ ವಸತಿ ಭೀಮಾ ಯೋಜನೆಗೆ ಸಂಬಂಧಿಸಿದಂತೆ ಡಿಸೆಂಬರ್ 2019ರ ಮಾಹೆಯೊಳಗೆ ಪಾವತಿ ಮಾಡಲು ಕೃಷಿ ನಿರ್ದೇಶಕರಿಗೆ ಸೂಚಿಸಲಾಯಿತು.

- ಮನೆ ಹಾನಿಗೊಳಗಾದ ಸಂತ್ರಸ್ಥರುಗಳಿಗೆ ಪರಿಹಾರಧನವನ್ನು ಖಾತೆಗೆ ಜಮಾ ಮಾಡುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಚರ್ಚಿಸುತ್ತಾ, ಸಂಬಂಧಪಟ್ಟ ಫಲಾನುಭವಿಗಳಿಗೆ ಕೆ-2ರ ತಂತ್ರಾಂಶದಡಿ ಪಾವತಿ ಮಾಡಬೇಕಾಗಿರುವುದರಿಂದ, ಫಲಾನುಭವಿಗಳ Receipient ID Creat ಮಾಡಿ, ಕೆ-2ರ ತಂತ್ರಾಂಶದಡಿ ಬಿಲ್ ತಯಾರಿಸಿ ಸಂಬಂಧಪಟ್ಟ ಖಜಾನೆಗೆ ಕಳುಹಿಸಿದ್ದಲ್ಲಿ, ಜಮಾ ಮಾಡುವುದಾಗಿ ತಿಳಿಸಲಾಯಿತು

(ಮನೋಜ್ ಕುಮಾರ್ ಮೀನಾ)
ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ
ಹಾಗೂ
ಹಾವೇರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

# ನಮೂನೆ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರ. ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ವಿಜಯಪುರ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ॥ ಜೆ. ರವಿಶಂಕರ್, ಭಾ.ಆ.ಸೇ., |
| 3 | ಪ್ರವಾಸ ಕೈಗೊಂಡ ದಿನಾಂಕ | 19.12.2019 ಮತ್ತು 20.12.2019 |

| A | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ |
|---|---|
| | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು ಮತ್ತು ನಿರ್ದೇಶನ ನೀಡಿದ ಬಗ್ಗೆ ಸಾರಾಂಶ |

<u>ಅಗಸ್ಟ್ 2019ರ ಪ್ರವಾಹದಿಂದ ಹಾನಿಯಾದ ಮನೆಗಳ ಪುನರ್ ನಿರ್ಮಾಣ :</u>

ವಿಜಯಪುರ ಜಿಲ್ಲೆಯಲ್ಲಿ ಮನೆ ಹಾನಿ ಮತ್ತು ಪರಿಹಾರ ವಿತರಿಸಿದ ವಿವರದ ಕೋಷ್ಟಕ:

ಮಾಹೆ ಅಗಸ್ಟ್ – 2019 ರಲ್ಲಿ ಸಂಭವಿಸಿದ ಹಾನಿಗೀಡಾದ ಮನೆಗಳ ವಿವರ ಪರಿಹಾರ ಧನ ನೀಡಿದ ಬಗ್ಗೆ.

| ಕ್ರ. ಸಂ. | ತಾಲೂಕು | ಬಿದ್ದ ಮನೆಗಳ ವಿವರ | | | ಶೇ. 15% ರಿಂದ 25% ರವರೆಗೆ ಹಾನಿಗೀಡಾದ ಮನೆಗಳ | | ಶೇ. 25% ರಿಂದ 75% ರವರೆಗೆ ಹಾನಿಗೀಡಾದ ಮನೆಗಳ | |
|---|---|---|---|---|---|---|---|---|
| | | ಅಧಿಕೃತ | ಅನಧಿಕೃತ | ಒಟ್ಟು | ಸಂಖ್ಯೆ | ರೂ. 50,000/- ಪರಿಹಾರ ಧನ ನೀಡಿದ ಮೊತ್ತ (ರೂ. ಲಕ್ಷಗಳಲ್ಲಿ) | ಸಂಖ್ಯೆ | ರೂ. 1.00 ಲಕ್ಷ ಪರಿಹಾರ ಧನ ನೀಡಿದ ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಮುದ್ದೇಬಿಹಾಳ | 100 | 08 | 108 | 103 | 51.50 | 05 | 5.00 |
| 2 | ನಿಡಗುಂದಿ | 45 | 09 | 54 | 41 | 20.50 | 13 | 13.00 |
| ಒಟ್ಟು | | 145 | 17 | 162 | 144 | 72.00 | 18 | 18.00 |

'ಬಿ' ಶ್ರೇಣಿಯ 18 ಮನೆಯವರು ಹಾನಿಯಾದ ಮನೆಯನ್ನು ಆರಂಭದಲ್ಲಿ ನೀಡಿರುವ ರೂ.1.00 ಲಕ್ಷದಲ್ಲಿ ದುರಸ್ಥಿ ಮಾಡಿಕೊಂಡಿದ್ದು, ಸಧ್ಯ ಬಾಕಿ ಮೊತ್ತ ರೂ.4.00 ಲಕ್ಷ ಪಡೆಯಲು ಮನೆ ನಿರ್ಮಿಸಲು ಬೇರೆ ಸ್ಥಳವಿಲ್ಲವೆಂದು ತಿಳಿಸುತ್ತಿರುವುದಾಗಿ ಸಭೆಯಲ್ಲಿ ಹಾಜರಿದ್ದ ಮುದ್ದೇಬಿಹಾಳ ಮತ್ತು ನಿಡಗುಂದಿ ತಹಶೀಲ್ದಾರರು ವರದಿಯನ್ವಯ ಇಂದು ದಿನಾಂಕ: 19-12-2019 ರಂದು ಸದರಿ ಮನೆಗಳಿಗೆ ಭೇಟಿ ನೀಡಿದಾಗ ಇದೇ ಅಭಿಪ್ರಾಯವನ್ನು ನನಗೂ ತಿಳಿಸಿರುವುದಾಗಿ ಆದರೂ ಹೊಸದಾಗಿ ಮನೆ ನಿರ್ಮಿಸಿಕೊಳ್ಳಲು ಖಾಸಗಿ ಜಮೀನು ಖರೀದಿಗೆ ಮತ್ತೊಮ್ಮೆ ಪ್ರಯತ್ನಿಸುವುದು, ಇಲ್ಲವಾದಲ್ಲಿ ಮಹಜರು ಮಾಡಿ ವರದಿ ಸಲ್ಲಿಸಲು ತಹಶೀಲ್ದಾರರಿಗೆ ಸೂಚಿಸಲಾಯಿತು.

**<u>ಲೋಕೋಪಯೋಗಿ ಇಲಾಖೆ, ವಿಜಯಪುರ :</u>**

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಜಯಪುರ ಇವರ ಪ್ರವಾಹ ಪರಿಹಾರ ಕಾರ್ಯಕ್ಕಾಗಿ ಒಟ್ಟು ರೂ.36.00 ಲಕ್ಷ ಬಿಡುಗಡೆಯಾಗಿದ್ದು, ಒಟ್ಟು 06 ಕಾಮಗಾರಿಗಳನ್ನು ಕೈಕೊಳ್ಳಲಾಗಿರುತ್ತದೆ. 02 ಕಾಮಗಾರಿ ಮುಕ್ತಾಯವಾಗಿದ್ದು, 4 ಕಾಮಗಾರಿ ಪ್ರಗತಿಯಲ್ಲಿರುವುದಾಗಿ ಎಂಬ ವರದಿಯನ್ವಯ 15 ದಿನದಲ್ಲಿ ಪ್ರಗತಿಯಲ್ಲಿರುವ ಎಲ್ಲಾ ಕಾಮಗಾರಿಗಳನ್ನು ಮುಕ್ತಾಯ ಮಾಡಲು ಸೂಚಿಸಲಾಯಿತು.

**<u>ಸಣ್ಣ ನೀರಾವರಿ ಇಲಾಖೆ :</u>**

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ವಿಜಯಪುರ ಇವರ ಪ್ರವಾಹ ಪರಿಹಾರ ಕಾಮಗಾರಿ ಕೈಕೊಳ್ಳಲು ಒಟ್ಟು ರೂ.91.50 ಲಕ್ಷ ಬಿಡುಗಡೆಯಾಗಿದ್ದು, ಒಟ್ಟು 05 ಕಾಮಗಾರಿಗಳನ್ನು ಕೈಕೊಳ್ಳಲಾಗಿದ್ದು, ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಎಂಬ ವರದಿಯನ್ವಯ 15 ದಿನದಲ್ಲಿ ಪ್ರಗತಿಯಲ್ಲಿರುವ ಎಲ್ಲಾ ಕಾಮಗಾರಿಗಳನ್ನು ಮುಕ್ತಾಯ ಮಾಡಲು ಸೂಚಿಸಲಾಯಿತು.

**<u>ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ (KRRDA) :</u>**

ಕಾರ್ಯ ನಿರ್ವಾಹಕ ಅಭಿಯಂತರರು, ಪಿ.ಎಂ.ಜಿ.ಎಸ್.ವ್ಯಾಯ್._(KRRDA) ವಿಜಯಪುರ ಇವರು ಪ್ರವಾಹ ಪರಿಹಾರ ಕಾಮಗಾರಿ ಕೈಕೊಳ್ಳಲು ಒಟ್ಟು ರೂ.202.50 ಲಕ್ಷ ಬಿಡುಗಡೆಯಾಗಿದ್ದು, ಒಟ್ಟು 15 ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ತಯಾರಿಸಲಾಗಿದೆ ಎಂದು ತಿಳಿಸಿದ ಮೇರೆಗೆ, ಕಾಮಗಾರಿಗಳ ಅನುಮೋದನೆ ಕೂಡಲೇ ಪಡೆದು ಕಾಮಗಾರಿ ಪ್ರಾರಂಭಿಸಿ ವರದಿ ಸಲ್ಲಿಸಲು ಸೂಚಿಸಲಾಯಿತು.

**<u>ಕರ್ನಾಟಕ ರೂರಲ್ ಇನಫ್ರಾಸ್ಟ್ರಕ್ಚರ್ ಡೆವಲಪಮೆಂಟ್ ಲಿಮಿಟೆಡ್ (KRIDL) :</u>**

ಉಪನಿರ್ದೇಶಕರು, ಕೆ.ಆರ್.ಐ.ಡಿ.ಎಲ್. ವಿಜಯಪುರ ಇವರು ಪ್ರವಾಹ ಪರಿಹಾರ ಕಾಮಗಾರಿ ಕೈಕೊಳ್ಳಲು ಒಟ್ಟು ರೂ.200.00 ಲಕ್ಷ ಬಿಡುಗಡೆಯಾಗಿದ್ದು, ಒಟ್ಟು 10 ಕಾಮಗಾರಿಗಳ ಅಂದಾಜು ಪತ್ರಿಕೆಗಳ ಅನುಮೋದನೆಗಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ. ಇವರಿಗೆ ಸಲ್ಲಿಸಲಾಗಿದೆ ಎಂದು ತಿಳಿಸಿದ ಮೇರೆಗೆ ಕಾಮಗಾರಿವಾರು ಪರಿಶೀಲಿಸಿ, ಜಿಲ್ಲಾ ಪಂಚಾಯತ ರವರಿಗೆ ಮತ್ತು ಪ್ರವಾಹ ಪರಿಹಾರ ಕಾಮಗಾರಿಗಳಾಗಿರುವುದರಿಂದ ಶೀಘ್ರವಾಗಿ ಕಾಮಗಾರಿ ಮುಕ್ತಾಯಗೊಳಿಸಿ ವರದಿ ಸಲ್ಲಿಸಲು ಸೂಚಿಸಲಾಯಿತು.

<u>ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ :</u>

ಸರ್ಕಾರದಿಂದ ಒಟ್ಟು 120 ಕಾಮಗಾರಿಗಳಿಗೆ ರೂ.4,384.00 ಲಕ್ಷ ಬಿಡುಗಡೆ ಮಾಡುವುದಾಗಿ ತಿಳಿಸಿದ್ದು, ಇನ್ನೂ ಅನುದಾನ ಬಿಡುಗಡೆಯಾಗಿರುವುದಿಲ್ಲವೆಂದು ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ವಿಜಯಪುರ ಇವರು ತಿಳಿಸಿದ ಮೇರೆಗೆ ಜಿಲ್ಲಾಧಿಕಾರಿಗಳು ವಿಜಯಪುರ ಇವರು ದಿನಾಂಕ: 18/12/2019 ರಂದು ನಡೆದ ಮಾನ್ಯ ಮುಖ್ಯ ಕಾರ್ಯದರ್ಶಿಗಳವರ ವಿಡಿಯೋ ಸಂವಾದದಲ್ಲಿ ಒಂದು ವಾರದೊಳಗೆ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲು ನಿರ್ದೇಶನ ನೀಡಿರುವುದರಿಂದ ಶೀಘ್ರ ಕ್ರಮ ಕೈಕೊಳ್ಳಲು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ರವರಿಗೆ ಅಗತ್ಯ ಮಂಜೂರಾತಿ ನೀಡಲು ತಿಳಿಸಿದ ಮೇರೆಗೆ, ಅದರನ್ವಯ ಕ್ರಮ ಜರುಗಿಸಲು

ಸೂಚಿಸಲಾಯಿತು.

<u>ಎಸ್.ಡಿ.ಆರ್.ಎಫ್/ಎನ್.ಡಿ.ಆರ್.ಎಫ್ ರಡಿಯಲ್ಲಿನ ಕಾಮಗಾರಿಗಳು :</u>

ವಿಜಯಪುರ ಜಿಲ್ಲೆಯಲ್ಲಿ ಪ್ರವಾಹ ಕಡಿಮೆಯಾದ ತಕ್ಷಣ ಶಾಸಕರ ಅಧ್ಯಕ್ಷತೆಯ ಟಾಸ್ಕ್‌ಫೋರ್ಸ್ ಸಭೆಯ ಕೋರಿಕೆಯಂತೆ ಈ ಕೆಳಗಿನ ಕಾಮಗಾರಿಗಳನ್ನು ಕೈಕೊಳ್ಳಲು ಎಸ್.ಡಿ.ಆರ್.ಎಫ್/ ಎನ್.ಡಿ.ಆರ್.ಎಫ್ ರಡಿ ಮಂಜೂರಾತಿ ನೀಡಲಾಗಿರುತ್ತದೆ.

ರೂ. ಲಕ್ಷಗಳಲ್ಲಿ

| ಕ್ರ. ಸಂ | ತಾಲ್ಲೂಕು | ರಸ್ತೆ ದುರಸ್ತಿ ಕಾಮಗಾರಿಗಳು | | 75% ಅನುದಾನ ಬಿಡುಗಡೆಮಾಡಿದ ಮೊತ್ತ | | ಅನುಷ್ಠಾನ ಇಲಾಖೆ | ಶಾಲಾ ಕಟ್ಟಡ ದುರಸ್ತಿ ಕಾಮಗಾರಿಗಳು | | 75% ಅನುದಾನ ಬಿಡುಗಡೆಮಾಡಿದ ಮೊತ್ತ | | ಅನುಷ್ಠಾನ ಇಲಾಖೆ | ನಿವ್ವಳ ಒಟ್ಟು | |
|---|---|---|---|---|---|---|---|---|---|---|---|---|---|
| | | ಕಾಮಗಾರಿ ಸಂಖ್ಯೆ | ಮೊತ್ತ | ಕಾಮಗಾರಿ ಸಂಖ್ಯೆ | ಮೊತ್ತ | | ಕಾಮಗಾರಿ ಸಂಖ್ಯೆ | ಮೊತ್ತ | ಕಾಮಗಾರಿ ಸಂಖ್ಯೆ | ಮೊತ್ತ | | ಕಾಮಗಾರಿ ಸಂಖ್ಯೆ | ಮೊತ್ತ |
| 1 | ಇಂಡಿ | 37 | 63.90 | 37 | 46.80 | ಕಾ.ನಿ. | 8 | 17.00 | 2 | 3.75 | ಕಾ.ನಿ. | 45 | 80.90 |
| 2 | ಮುದ್ದೇಬಿಹಾಳ | 45 | 62.10 | 45 | 46.57 | ಪಂಚಾಯತ್ | 13 | 19.50 | 0 | 0 | ಪಂಚಾಯತ್ | 58 | 81.60 |
| 3 | ಬಬಲೇಶ್ವರ | 0 | 0 | 0 | 0 | ರಾಜ್ ಇಂ. | 31 | 46.50 | 31 | 44.87 | ರಾಜ್ ಇಂ. | 31 | 46.50 |
| 4 | ಚಡಚಣ | 0 | 0 | 0 | 0 | ವಿಭಾಗ, | 7 | 10.50 | 3 | 3.37 | ವಿಭಾಗ, | 7 | 10.50 |
| | ಒಟ್ಟು | 82 | 126 | 82 | 93.37 | ವಿಜಯಪುರ | 59 | 93.5 | 36* | 51.99 | ವಿಜಯಪುರ | 141 | 219.5 |

ಈ ಕಾಮಗಾರಿಗಳ ಕುರಿತು ಚರ್ಚಿಸಲಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ತಿಳಿಸಿದರು. ಬಹಳ ಕಡಿಮೆ ಮೊತ್ತದ ಕಾಮಗಾರಿಗಳಾಗಿದ್ದು, ತುರ್ತು ಅಗತ್ಯವಿದ್ದಾಗ ಮಾತ್ರ ಎಸ್.ಡಿ.ಆರ್.ಎಫ್/ಎನ್.ಡಿ.ಆರ್.ಎಫ್ ರಡಿ ಕೈಕೊಳ್ಳಲು ಅವಕಾಶವಿರುತ್ತದೆ. ಅದರಂತೆ ನೀಡಿದ ತುರ್ತು ಕಾಮಗಾರಿಗಳನ್ನು 4 ತಿಂಗಳಾದರೂ ಮುಕ್ತಾಯಗೊಳಿಸದಿರುವುದಕ್ಕೆ ಗಂಭೀರವಾಗಿ ಪರಿಗಣಿಸಲಾಯಿತು. ಹಾಗೂ ಒಂದು ವಾರದಲ್ಲಿ ಈಗಾಗಲೇ ಆಡಳಿತಾತ್ಮಕ ಮಂಜೂರಾತಿ ನೀಡಿರುವ ಕಾಮಗಾರಿಗಳನ್ನು ಮುಕ್ತಾಯಗೊಳಿಸಿ ಜಿ.ಪಿ.ಎಸ್. ಫೋಟೋ ಸಹಿತ ಬಾಕಿ ಹಣ ಕೋರಿ ವರದಿ ಸಲ್ಲಿಸದಿದ್ದರೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ವಿಜಯಪುರ ಇವರು ಸಂಬಂಧಪಟ್ಟ ಕಿರಿಯ ಅಭಿಯಂತರರು / ಸಹಾಯಕ ಅಭಿಯಂತರರು / ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಇವರ ವಿರುದ್ಧ ಪ್ರಧಾನ ಕಾರ್ಯದರ್ಶಿಗಳು ಪಂ.ರಾ.ಇಂ. ವಿಭಾಗ ಬೆಂಗಳೂರು ಇವರಿಗೆ ವರದಿ ಸಲ್ಲಿಸಿ ನನಗೆ ಒಂದು ಪ್ರತಿ ಸಲ್ಲಿಸುವಂತೆ ತಿಳಿಸಲಾಯಿತು.

ಸದರಿ ಕಾಮಗಾರಿಗಳ ಪ್ರಗತಿ ಕುರಿತು ದಿನಾಂಕ: 20/12/2019 ರಂದು ಬೆಳಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ. ವಿಜಯಪುರ, ಕಾರ್ಯನಿರ್ವಾಹಕ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಂ.ಇಂ.ವಿಭಾಗ ಇವರೊಂದಿಗೆ ಮತ್ತೊಮ್ಮೆ ಚರ್ಚಿಸಿ ರಸ್ತೆ ಕಾಮಗಾರಿಗಳನ್ನು ಒಂದು ವಾರದಲ್ಲಿ ಮುಕ್ತಾಯಗೊಳಿಸಿ ಹಾಗೂ ಶಾಲಾ ಕಾಮಗಾರಿಗಳನ್ನು ಜನವರಿ-06, 2020ರ ಒಳಗಾಗಿ ಮುಕ್ತಾಯಗೊಳಿಸಿ ವರದಿ ಸಲ್ಲಿಸಲು ತಿಳಿಸಲಾಯಿತು.

<u>ಸಂಸದರ ಮತ್ತು ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ :</u>

ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಪ್ರತಿ ತಿಂಗಳ ಕೆ.ಡಿ.ಪಿ ಸಭೆಯಲ್ಲಿ ಶಾಸಕರ ಮತ್ತು ಸಂಸದರ ಕ್ಷೇತ್ರಾಭಿವೃದ್ಧಿ ಬಳಕೆ ಬಗ್ಗೆ ಪ್ರಗತಿ ಪರಿಶೀಲಿಸುತ್ತಿದ್ದು ಹಾಲಿ ಆರ್ಥಿಕ ವರ್ಷದಲ್ಲಿ ಶೇ. 14.29 ರಷ್ಟು

| | | |
|---|---|---|
| | | ಮಾತ್ರ ಶಾಸಕರ ನಿಧಿ ಖರ್ಚಾಗಿರುವ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ರವರು ಅರೆಸರ್ಕಾರಿ ಪತ್ರ ಬರೆದು ಅಸಮಧಾನ ವ್ಯಕ್ತ ಪಡಿಸಿರುವುದನ್ನು ಗಮನಿಸಲಾಯಿತು.<br><br>ಜಿಲ್ಲಾಧಿಕಾರಿಗಳು ನವೆಂಬರ್‌ನಿಂದ ಕೆ-2 ಮೂಲಕ ಹಣ ಪಾವತಿ ಮಾಡಬೇಕಾಗಿದ್ದು, ಕೆಲವು ತಾಂತ್ರಿಕ ತೊಂದರೆಗಳಿಂದ ವೆಚ್ಚ ಕಡಿಮೆಯಾಗಿದೆ. ಡಿಸೆಂಬರ್ ಅಂತ್ಯದೊಳಗೆ ಹೆಚ್ಚಿನ ಪ್ರಗತಿ ಸಾಧಿಸುವುದಾಗಿ ಎಂದು ವರದಿ ಸಲ್ಲಿಸಿದರು.<br><br>ಬಳಕೆಯಾಗದ 02 ಕೋಟಿಯನ್ನು ಶಾಲಾ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಿದ್ದು ರೂ.92.68 ಲಕ್ಷ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ಇನ್ನೂ ಹಾಜರುಪಡಿಸದ ಕುರಿತು ವಿಷಾದ ವ್ಯಕ್ತಪಡಿಸಿ ಕಾರ್ಯದರ್ಶಿಗಳು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ ವಿಜಯಪುರ ರವರೊಂದಿಗೆ ಸಮನ್ವಯ ಸಾಧಿಸಿ ಒಂದು ವಾರದೊಳಗೆ ಖುದ್ದು ಅಂದಾಜು ಪಟ್ಟಿಯನ್ನು ಪಡೆದು ಜಿಲ್ಲಾಧಿಕಾರಿಗಳಿಗೆ ಬೇಟಿಯಾಗಿ ನೀಡಲು ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ವಿಜಯಪುರ, ರವರಿಗೆ ಸೂಚಿಸಲಾಯಿತು.<br><br>ವಿಮಾನ ನಿಲ್ದಾಣ :<br><br>ವಿಜಯಪುರ ವಿಮಾನ ನಿಲ್ದಾಣದ ಕಾಮಗಾರಿಗೆ ಅನುದಾನದ ಕುರಿತಂತೆ ರೂ.220.00 ಕೋಟಿ ಅಂದಾಜು ಪತ್ರಿಕೆ ತಯಾರಿಸಿ ವ್ಯವಸ್ಥಾಪಕ ನಿರ್ದೇಶಕರು, ಮೂಲ ಸೌಕರ್ಯ ಅಭಿವೃದ್ಧಿ ಇಲಾಖೆ, ಇವರಿಗೆ ಸಲ್ಲಿಸಿದ ಬಗ್ಗೆ ಪರಿಶೀಲಿಸಿ, ಈ ಕುರಿತು ಸರ್ಕಾರದ ಮಟ್ಟದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿ. ಬೆಂಗಳೂರು ಇವರೊಂದಿಗೆ ಚರ್ಚಿಸಿ ಅನುದಾನ ಮಂಜೂರಾತಿ ಕುರಿತು ಮನವಿ ಮಾಡಲಾಗುವದೆಂದು ತಿಳಿಸಲಾಯಿತು.<br><br>ವಸತಿ ನಿಲಯಗಳಿಗೆ ಸರ್ಕಾರಿ ಜಮೀನು ಮಂಜೂರಾತಿ ಕುರಿತು :<br><br>ಸಮಾಜ ಕಲ್ಯಾಣ ಇಲಾಖೆಯಿಂದ ವಸತಿ ಶಾಲೆಗಳಿಗಾಗಿ ಗೈರಾಣ ಜಮೀನು ಮಂಜೂರಾತಿಗಾಗಿ 05 ಪ್ರಸ್ತಾವನೆಗಳು ಹಾಗೂ ಹಿಂದುಳಿದ ವರ್ಗಗಳ ಇಲಾಖೆಯ 01 ಪ್ರಸ್ತಾವನೆ ಹಾಗೂ ಅಲ್ಪಸಂಖ್ಯಾತರ ಇಲಾಖೆ 01 ಪ್ರಸ್ತಾವನೆ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಇವರಿಗೆ ಸಲ್ಲಿಸಿದ ಬಗ್ಗೆ ಪರಿಶೀಲಿಸಿ, ಈ ಕುರಿತು ಸರ್ಕಾರದ ಮಟ್ಟದಲ್ಲಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳವರೊಂದಿಗೆ ಮಂಜೂರಾತಿ ಕುರಿತು ಮನವಿ ಮಾಡಲಾಗುವದೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳವರು ತಿಳಿಸಿದರು. |

| B | ಕ್ಷೇತ್ರ ವೀಕ್ಷಣೆ | | |
|---|---|---|---|
| ಕ್ರ. ಸಂ. | ಭೇಟಿ ನೀಡಿದ ತಾಲ್ಲೂಕು/ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
| 1 | ಅರಾಳ ದಿಣ್ಣೆ | | ಈ ಗ್ರಾಮದಲ್ಲಿ 2 ಸಂಖ್ಯೆ R.O. Plant ಗಳಿದ್ದು ಇದರಲ್ಲಿ 1 ಸಂಖ್ಯೆ ಕಾರ್ಯನಿರ್ವಹಿಸುತ್ತಿದ್ದು ಇನ್ನೊಂದು ಸಂಖ್ಯೆ ಕಾರ್ಯನಿರ್ವಹಿಸದಿರುವುದನ್ನು ಗಮನಿಸಿ, ಸ್ಥಳದಲ್ಲಿ ಹಾಜರಿದ್ದ ಪಂಚಾಯತ್ ರಾಜ್ ಇಲಾಖೆಯ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಪಿ.ಡಿ.ಓ |

| | | | |
|---|---|---|---|
| | | | ರವರಿಗೆ ಸ್ಥಳೀಯರ ಕೋರಿಕೆಯಂತೆ R.O. Plant ನ್ನು ಬೇರೆಡೆ ಸ್ಥಳಾಂತರಿಸುವ ಕುರಿತು ಅಗತ್ಯಕ್ರಮ ತೆಗೆದುಕೊಂಡು ವರದಿ ನೀಡಲು ಸೂಚಿಸಲಾಯಿತು. |
| 2 | ಎಲಗೂರು | ದೇವಸ್ಥಾನದ ಮುಂಭಾಗ ಹಾಗೂ ಗ್ರಾಮದ ಎಸ್.ಸಿ. ಕಾಲೋನಿ | ಈ ಪ್ರದೇಶಗಳಲ್ಲಿ ಸ್ಥಾಪಿತವಾಗಿರುವ R.O. Plant ಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿವೆ |
| 3 | ಮಸೂತಿ ಗ್ರಾಮ | ಗ್ರಾಮದಲ್ಲಿ | ಈ ಗ್ರಾಮದಲ್ಲಿ ಪ್ರವಾಹದಿಂದ ಹಾನಿಗೊಳಗಾದ ಒಟ್ಟು 55 ಮನೆಗಳನ್ನು ಪರಿವೀಕ್ಷಿಸಲಾಯಿತು. ಇದರಲ್ಲಿ 13 ಮನೆಗಳು 'ಬಿ' ಶ್ರೇಣಿಗೆ ಸೇರಿದ್ದು, ಎಲ್ಲರಿಗೂ ಈಗಾಗಲೆ ರೂ.1.00 ಲಕ್ಷಗಳನ್ನು ಫಲಾನುಭವಿಗಳ ಖಾತೆಗಳಿಗೆ ಜಮೆಯಾಗಿದ್ದು, ಈ ಬಗ್ಗೆ ಸದರಿಯವರ ಬ್ಯಾಂಕ್ ಖಾತೆ ಪುಸ್ತಕಗಳನ್ನು ಪರಿಶೀಲಿಸಿ ಖಾತರಿ ಪಡಿಸಿಕೊಳ್ಳಲಾಯಿತು. ಆದರೆ, ಯಾವುದೇ ಮನೆ ಕಟ್ಟುವ ಕಾಮಗಾರಿಗಳು ಪಾರಂಭಿಸದೇ ಇರುವುದನ್ನು ಗಮನಿಸಲಾಯಿತು.<br><br>ಪ್ರಸ್ತುತ ವಾಸವಿರುವ ಮನೆಗಳನ್ನು ಕೆಡವಿ ಹೊಸದಾಗಿ ಮನೆ ಕಟ್ಟಲು, ಈ ಪ್ರದೇಶಗಳು ನೆರೆ ಪೀಡಿತ ಪ್ರದೇಶವಾಗಿರುವುದರಿಂದ, ಪದೇ-ಪದೇ ನೆರೆಗೆ ಅವುತಿಯಾಗುವ ಎಲ್ಲಾ ಸಾಧ್ಯತೆ ಇರುತ್ತದೆ. ಬೇರೆಡೆ ಸ್ಥಳಾಂತರ ಮಾಡಿ ಅಲ್ಲಿ ಮನೆ ಕಟ್ಟಿಕೊಳ್ಳಲು ಯಾವುದೇ ಸರ್ಕಾರಿ ಜಾಗ ಇರುವುದಿಲ್ಲ ಹಾಗೂ ಖಾಸಗಿ ಜಾಗ ಖರೀದಿಸಲು ಪ್ರಯತ್ನ ನೆಡೆಯುತ್ತಿದೆ.<br><br>ಪ್ರವಾಹಕ್ಕೆ ಒಳಗಾದ ಎಲ್ಲಾ ಕುಟುಂಬಗಳ ಒಕ್ಕೂರಲ ಬೇಡಿಕೆ ತಮ್ಮನ್ನು KBJNL ರವರು ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಮಾಡಿ ಕೊಡಬೇಕಾಗಿ ವಿನಂತಿಸಿರುತ್ತಾರೆ. |
| 4 | ಮಸೂತಿ ಗ್ರಾಮ | ಗ್ರಾಮ | ಈ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ಆಹಾರ ಪದಾರ್ಥಗಳ ದಾಸ್ತಾನು ಹಾಗೂ ಹಾಜರಾತಿ ಪುಸ್ತಕದ ಪರಿಶೀಲನೆ ಮಾಡಲಾಯಿತು. |
| 5 | ವಡವಡಗಿ ಗ್ರಾಮ | | ವಡವಡಗಿ ಹಾಗೂ 5 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಸರಬರಾಜು ಅಗುತ್ತಿದ್ದ ಕುಡಿರುವ ನೀರು ಸುಮಾರು 8 ದಿನಗಳಿಂದ ಕಾರ್ಯನಿರ್ವಹಿಸದಿರುವ ಬಗ್ಗೆ ದೂರಿದರು. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳನ್ನು ವಿಚಾರಿಸಿದಾಗ, ಸದರಿ ಯೋಜನೆಯಲ್ಲಿ ಸ್ಥಾಪಿತವಾಗಿರುವ ಜಾಕ್‌ವೆಲ್‌ನಲ್ಲಿ ಮೋಟಾರ್ ನೀರಿನಲ್ಲಿ ಮುಳುಗಡೆಯಾಗಿದ್ದು ಅದನ್ನು ಮೇಲಕ್ಕೆ ಎತ್ತಿ ಕೂಡಲೆ ದುರಸ್ತಿಮಾಡಿ 2 ದಿನಗಳಲ್ಲಿ ನೀರು ಸರಬರಾಜನ್ನು ಪುನಸ್ಥಿತಿಗೆ ತರಲಾಗುವುದೆಂದು ಸ್ಥಳದಲ್ಲಿದ್ದ ಸಂಬಂದಪಟ್ಟ ಅಧಿಕಾರಿರವರು ಅಶ್ವಾಸನೆ ನೀಡಿರುತ್ತಾರೆ. |

| | | | |
|---|---|---|---|
| 6 | ವಿಜಯಪುರ ನಗರ (ಜಾಡರ ಗಲ್ಲಿ) | 1)ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ಹಾಸ್ಟೆಲ್ (ಎಸ್.ಸಿ) 2)ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ಹಾಸ್ಟೆಲ್ (ಎಸ್.ಟಿ) 3)ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ಹಾಸ್ಟೆಲ್ 4)ಸರ್ಕಾರಿ ವೃತ್ತಿಪರ ಬಾಲಕಿಯರ ಹಾಸ್ಟೆಲ್ | ಸಂಜೆ ಸುಮಾರು 7 ಗಂಟೆಗೆ ವಿಜಯಪುರ ನಗರದಲ್ಲಿರುವ 4 ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗಳಿಗೆ ಭೇಟಿನೀಡಿ ಅಲ್ಲಿನ ವ್ಯವಸ್ಥೆಗಳ ಬಗ್ಗೆ ಪರಿಶೀಲಿಸಿ, ಈ 4 ಹಾಸ್ಟೆಲ್‌ಗಳು ಒಳ್ಳೆಯ ರೀತಿಯಲ್ಲಿ ಹಾಗೂ ಮಾದರಿ ಹಾಸ್ಟೆಲ್‌ಗಳಾಗಿ ಕಾರ್ಯ ನಿರ್ವಹಿಸುತ್ತಿದ್ದನ್ನು ಗಮನಿಸಲಾಗಿತು.<br>ಈ ಹಾಸ್ಟೆಲ್‌ನಲ್ಲಿರುವ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ, ಸಿ.ಸಿ ಕ್ಯಾಮರ/ಟಿ.ವಿ ವ್ಯವಸ್ಥೆ, ಭೋಜನಾ ವ್ಯವಸ್ಥೆ, ನೀರಿ ವ್ಯವಸ್ಥೆ ಹಾಗೂ ಶುಚಿತ್ವವನ್ನು ಕಂಡು ಮೆಚ್ಚುಗೆ ವ್ಯಕ್ತ ಪಡಿಸಲಾಯಿತು.<br><br>ವಿಜಯಪುರ ನಗರದಲ್ಲಿರುವ 4 ಮೆಟ್ರಿಕ್ ಪೂರ್ವ ಹಾಸ್ಟೆಲ್ ಗೆ ಭೇಟಿನೀಡಿ ಎಲ್ಲಾ ಮಕ್ಕಳೊಂದಿಗೆ ಕೆಲವು ಕಾಲ ಸಂವಾದ ನೆಡೆಸಿ ಅವರ ವಿದ್ಯಾಭ್ಯಾಸದ ಬಗ್ಗೆ ಹಾಗೂ ಹಾಸ್ಟೆಲ್‌ನಲ್ಲಿ ಕೊರತೆಯೇನಾದರು ಇದೆಯೇ ಎಂಬುದರ ಬಗ್ಗೆ ವಿಚಾರಿಸಲಾಯಿತು. |

| | | |
|---|---|---|
| C | ಇತರೆ ವಿಷಯಗಳು | |
| 1 | | ವಿಜಯಪುರ ಜಿಲ್ಲೆಯಲ್ಲಿ 2017-18ನೇ ಸಾಲಿನಲ್ಲಿ 848 ಲಕ್ಷ ಕ್ವಿಂಟಲ್ ಹಾಗೂ 2018-19ನೇ ಸಾಲಿನಲ್ಲಿ 345 ಲಕ್ಷ ಕ್ವಿಂಟಲ್ ತೊಗರಿ ಉತ್ಪನ್ನವನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿಲಾಗಿದ್ದು, ಸದರಿ ಉತ್ಪನ್ನದ ದಾಸ್ತಾನ್ನು ಜಿಲ್ಲೆಯ ರಾಜ್ಯ ಉಗ್ರಾಣ ನಿಗಮ ಹಾಗೂ ಪಕ್ಕದ ಜಿಲ್ಲೆಯಲ್ಲಿ ದಾಸ್ತಾನು ಮಾಡಲಾಗಿರುತ್ತದೆ.<br>2019-20ನೇ ಸಾಲಿನಲ್ಲಿ 306729 ಹೆಕ್ಟೇರು ಬಿತ್ತನೆಯಾಗಿದ್ದು ಅಂದಾಜು ಸುಮಾರು 15 ಲಕ್ಷ ಕ್ವಿಂಟಲ್ ಇಳುವರಿಯಲ್ಲಿ ಸುಮಾರು 5 ರಿಂದ 6 ಲಕ್ಷ ಕ್ವಿಂಟಲ್ ಖರೀದಿಸಬಹುದೆಂದು ಅಂದಾಜಿಸಲಾಗಿದ್ದು, ಇದನ್ನು ಶೇಖರಿಸಲು ಉಗ್ರಾಣ ಸಮಸ್ಯೆ ಉಂಟಾಗಬಹುದೆಂದು ಸಂಬಂದಪಟ್ಟ ಅಧಿಕಾರಿಗಳಿಗೆ ಅವಶ್ಯ ಕ್ರಮ ಕೈಗೊಳ್ಳಲು ಸೂಚಿಸಿದಾಗ, ಈ ಕುರಿತಂತೆ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಲಾಗಿರುತ್ತದೆ. |
| 2 | | ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ 1ನೇ ಹಂತದ ಕಾಮಗಾರಿಯನ್ನು ರೂ. 23 ಕೋಟಿ ಅನುದಾನ ಬಿಡುಗಡೆಯಾಗಿದ್ದು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಆದರೆ, 2ನೇ ಹಂತದ ಕಾಮಗಾರಿಗೆ ರೂ.39 ಕೋಟಿ ಪ್ರಸ್ತಾವನೆಯು ಸರ್ಕಾರದಲ್ಲಿದ್ದು ಈ ವರೆಗೂ ಅನುಮೋದನೆ ಯಾಗಿರುವುದಿಲ್ಲ. |
| 3 | | ವಿಜಯಪುರ ನಗರದ ಮಾ.ಬಾಗಾಯತ ಗ್ರಾಮದ ರಿ.ಸ.ಸಂ.313 ಮತ್ತು 314ರಲ್ಲಿ ಜಿಲ್ಲಾ ಸಂಕೀರ್ಣ ಕಟ್ಟಡ ಕಟ್ಟಲು ಈಗಾಗಲೆ, ಸಂಪುಟ ಸಭೆ ಅನುಮೋದನೆ ದೊರೆತಿದ್ದು, ಆಡಳಿತಾತ್ಮಕ ಅನುಮೋದನೆಯು ಮಾಡುವ ಹಂತದಲ್ಲಿರುತ್ತದೆ. ಪ್ರಸ್ತುತ, ಕೆ.ಹೆಚ್.ಬಿ ವತಿಯಿಂದ ನಿರ್ಮಿಸಲು ಯೋಜಿಸಲಾಗಿರುತ್ತದೆ. ಆದರೆ, ಸಂಪೂರ್ಣ ಪ್ರಸ್ತಾವನೆಯ ಪ್ರಕ್ರಿಯೆಯನ್ನು ಪಿ.ಡಬ್ಲ್ಯೂ.ಡಿ ವತಿಯಿಂದ ಕೈಗೊಳ್ಳಲಾಗಿರುತ್ತದೆ. ಅದುದರಿಂದ ಗೃಹಮಂಡಳಿ ಬದಲು ಪಿ.ಡಬ್ಲ್ಯೂ.ಡಿ ವತಿಯಿಂದ ಕೈಗೊಳ್ಳಲು ಸರ್ಕಾರ ಮಟ್ಟದಲ್ಲಿ ತೀರ್ಮಾನವಾಗಬೇಕಿರುತ್ತದೆ. |
| 4 | | ವಿಜಯಪುರ ನಗರದ ಭೂತನಾಳ ಕೆರೆಯ ಬಳಿ ಕೆ.ಎಮ್.ಎಫ್. ಮುಂಭಾಗದ ಸರ್ವೆ ನಂ 38/ಅ ರಲ್ಲಿರುವ 8 ಎಕರೆ 10 ಗುಂಟೆ ನಿವೇಶನದಲ್ಲಿ ಯುವ ಸಬಲೀಕರಣ ಮತ್ತು ಕೀಡಾ ಇಲಾಖೆ ವತಿಯಿಂದ |

| | | |
|---|---|---|
| | | ಸೈಕ್ಲಿಂಗ್ ವೆಲೋಡ್ರೋಂನ್ನು ರೂ. 734.70 ಲಕ್ಷಗಳಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ಗುತ್ತಿಗೆ ನಿಯಮದ ಪ್ರಕಾರ, ಈ ಕಾಮಗಾರಿಯು (ಟೆಂಡರ್ ಅವಧಿ 18 ತಿಂಗಳು) ಡಿಸೆಂಬರ್ 2016ರಲ್ಲಿ ಪೂರ್ಣಗೊಳ್ಳಬೇಕಾಗಿತ್ತು. ಇಲ್ಲಿಯವರೆಗೆ ಶೇ.65ರಷ್ಟು ಭೌತಿಕ ಹಾಗೂ ಸುಮಾರು ರೂ.4 ಕೋಟಿ ಆರ್ಥಿಕವಾಗಿ ಕಾಮಗಾರಿ ಪೂರ್ಣಗೊಂಡಿರುವುದಾಗಿ ಸ.ಕಾ.ಅ ರವರು ತಿಳಿಸಿರುತ್ತಾರೆ. ಉಳಿದಂತೆ, ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ಅನುಷ್ಠಾನ ಮಾಡಲು ಸರ್ಕಾರದಿಂದ ಕಾಮಗಾರಿಗೆ ಅವಶ್ಯವಿರುವ ಅನುದಾನ ಬಿಡುಗಡೆ ಮಾಡಬೇಕಾಗಿರುತ್ತದೆ. |
| 5 | | ದಿನಾಂಕ 09.12.2019 ರಂದು ಮಧ್ಯಾಹ್ನ ವಿಜಯಪುರ ಜಿಲ್ಲೆ, ತಿಕೋಟಾ ತಾಲ್ಲೂಕು, ಸೋಮದೇವರ ಹಟ್ಟಿ, ಮಲಕನದೇವನ ಹಟ್ಟಿ ಮತ್ತು ಘುಬನೂರು ಗ್ರಾಮಗಳಲ್ಲಿ ಭೂಮಿಯಿಂದ ಶಬ್ದವಾಗುತ್ತಿರುವ ಬಗ್ಗೆ ತಿಳಿದು ಬಂದ ಕಾರಣ ಸದರಿ ಗ್ರಾಮಗಳ ಅಕ್ಷಾಂಶ ಮತ್ತು ರೇಖಾಂಶಗಳನ್ನು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಬೆಂಗಳೂರು ಇವರಿಗೆ ನೀಡಿ ಭೂಕಂಪಕ್ಕೆ ಸಂಬಂಧಿಸಿದಂತೆ ವೈಜ್ಞಾನಿಕವಾಗಿ ಮಾಹಿತಿ ನೀಡಲು ಕೋರಿದಾಗ ಸದರಿಯವರು ಆಲಮಟ್ಟಿ ಸೀಸ್‌ಮಿಕ್ ಉಪಕರಣದಲ್ಲಿ ಭೂಕಂಪನದ ಮಾಹಿತಿಯು ದಾಖಲೆಯಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.<br><br>ಭೂಕಂಪನ ಮಾಪಕ ಯಂತ್ರ (ಸೀಸ್‌ಮಿಕ್ ಉಪಕರಣ)ವನ್ನು ಅಳವಡಿಸುವುದು ಗ್ರಾಮಸ್ಥರ ಬೇಡಿಕೆಯಾಗಿದ್ದು, ಈ ಕುರಿತು ಸರ್ಕಾರದ ಮಟ್ಟದಲ್ಲಿ ಕ್ರಮ ಜರುಗಿಸಬೇಕಾಗಿದೆ. |
| 6 | | ತಿಕೋಟಾ ಮತ್ತು ಬಬಲೇಶ್ವರ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮಾಡಲು ರೂ.10 ಕೋಟಿ ಅನುದಾನ ಮಂಜೂರಾಗಿದ್ದು, ಸರ್ಕಾರದಿಂದ ಅನುದಾನ ಬಿಡುಗಡೆ ಯಾಗಬೇಕಿರುತ್ತದೆ. |

(ಡಾ|| ಜಿ. ರವಿಶಂಕರ್, ಭಾ.ಆ.ಸೇ.)
ನ್ಯವಸ್ಥಾಪಕ ನಿರ್ದೇಶಕರು,
ಕ.ನ.ನೀ.ಸ ಮತ್ತು ಒ.ಚ ಮಂಡಳ, ಬೆಂಗಳೂರು
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ವಿಜಯಪುರ

ನಮೂನೆ

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಪ್ರವಾಸ ವರದಿ

| ಕ್ರ.ಸಂ: | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಬಾಗಲಕೋಟೆ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಶ್ರೀ ಅಂಜುಂ ಪರ್ವೆಜ್,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು |
| 3 | ಪ್ರವಾಸ ಕೈಗೊಂಡ ದಿನಾಂಕ | 19-12-2019 |
| ಎ | **ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ**<br>**ದಿನಾಂಕ:19-12-2019 ರಂದು ಜಿಲ್ಲಾ ಮಟ್ಟದ ಸಭೆಯಲ್ಲಿ ನೀಡಿದ ಸೂಚನೆಗಳು:-**<br>• ಬಾಗಲಕೋಟೆ ಜಿಲ್ಲೆಯಲ್ಲಿ ಕಳೆದ ಅಗಷ್ಟ 2019 ನೇ ತಿಂಗಳಲ್ಲಿ ನೆರೆ ಹಾವಳಿಯ ಬಗ್ಗೆ ಹಾಗೂ ಅಕ್ಟೋಬರ್ 2019 ರಲ್ಲಿ ಅತೀ ಮಳೆಯಿಂದ ಬೆಳೆಗಳ ನಾಶ ಹಾಗೂ ಮನೆಗಳ ಹಾನಿ ಜನ-ಜಾನುವಾರುಗಳ ಹಾನಿ ಹಾಗೂ ತೆಗೆದುಕೊಂಡ ಕ್ರಮಗಳ ಕುರಿತು ಮಾಹಿತಿಯನ್ನು ಜಿಲ್ಲಾಧಿಕಾರಿಗಳಿಂದ ಪಡೆಯಲಾಯಿತು.<br>• ಸರ್ಕಾರದ ಆದೇಶದಂತೆ ಸಂತ್ರಸ್ತ ಕುಟುಂಬಗಳ ಮನೆಗಳ ಸಮೀಕ್ಷೆಯ ಅನುಸಾರ 'ಎ' ಮತ್ತು 'ಬಿ' ವರ್ಗಗಳ ಫಲಾನುಭವಿಗಳಿಗೆ ಮನೆ ಕಟ್ಟಲು ರಾಜ್ಯ ಮಟ್ಟದಿಂದ ಅನುದಾನ ಜಮೆ ಆದ ಕುರಿತು ಹಾಗೂ 'ಸಿ' ವರ್ಗಗಳ ಫಲಾನುಭವಿಗಳಿಗೆ ಸಹಾಯಧನ ಮಂಜೂರಾದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಒಕ್ಕಣಿಕೆಯ ಪತ್ರದಲ್ಲಿ ಫಲಾನುಭವಿಗಳಿಗೆ ನೀಡಲು ಎಲ್ಲ ತಹಶೀಲ್ದಾರರಿಗೆ ಸೂಚಿಸಲಾಯಿತು.<br>• ಕೃಷಿ ಇಲಾಖೆಯಿಂದ ಪ್ರವಾಹದಿಂದ ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಬೆಳೆಹಾನಿಯಾದ ರೈತರಿಗೆ ಇನ್‌ಪುಟ್ ಸಬ್ಸಿಡಿಯನ್ನು 36,674 ರೈತರ ಪೈಕಿ 33,499 ರೈತರಿಗೆ ರೂ.78.01 ಕೋಟಿ ಪರಿಹಾರವನ್ನು ರೈತರ ಖಾತೆಗಳಿಗೆ ನೇರವಾಗಿ ಸರ್ಕಾರದಿಂದ ಜಮೆಯಾಗಿದೆ ಎಂದು ಜಂಟಿ ನಿರ್ದೇಶಕರು ತಿಳಿಸಿದಾಗ, ಇನ್ನುಳಿದ ಅರ್ಹ ಫಲಾನುಭವಿಗಳಿಗೂ ಕೂಡಲೇ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳುವಂತೆ ಜಂಟಿ ನಿರ್ದೇಶಕರಿಗೆ ಸೂಚಿಸಲಾಯಿತು.<br>• ರೈತರ ಬೆಳೆ ವಿಮೆಯಲ್ಲಿ ಆಧಾರ್ ಲಿಂಕ್ ಮಾಡಿಸಬೇಕಾಗಿದ್ದು, ಕೂಡಲೇ ಜಿಲ್ಲೆಯ ಎಲ್ಲಾ ಅರ್ಹ ರೈತರ ಖಾತೆಗಳಿಗೆ ಆಧಾರ್ ಲಿಂಕ್ ಮಾಡಿಸಲು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ ಇವರಿಗೆ ಸೂಚಿಸಲಾಯಿತು.<br>• ಹೆಸ್ಕಾಂ ಇಲಾಖೆಯ 8427 ವಿದ್ಯುತ್ ಕಂಬಗಳಲ್ಲಿ 7783 ಕಂಬಗಳು, 4694 ಟ್ರಾನ್ಸ್‌ಫಾರ್ಮರ್‌ಗಳಲ್ಲಿ 3525 - ಟ್ರಾನ್ಸ್‌ಫಾರ್ಮರ್‌ಗಳು, 292 ಕಂಡಕ್ಟರ್‌ಗಳಲ್ಲಿ 149 ಕಂಡಕ್ಟರಗಳನ್ನು ಸರಿಪಡಿಸಲಾಗಿದೆ ಎಂದು ಹೆಸ್ಕಾಂ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದಾಗ, ಇನ್ನೂ ಬಾಕಿ ಇರುವದನ್ನು ಕೂಡಲೇ ದುರಸ್ತಿಗೊಳಿಸಲು ಸೂಚಿಸಲಾಯಿತು. | |

- ಗ್ರಾಮೀಣ ರಸ್ತೆ 595.28 ಕಿ.ಮೀ. ಹಾನಿಗೊಳಗಾಗಿದ್ದು, 254 ಕಿ.ಮೀ. ರಸ್ತೆ ದುರಸ್ತಿಯಾಗಿರುತ್ತದೆ ಎಂದು ಕಾರ್ಯನಿರ್ವಾಹಕ ಅಭಿಯಂತರರು, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ ಇವರು ತಿಳಿಸಿದಾಗ, ಈಗ ಮಳೆ ಇರುವುದಿಲ್ಲ, ಬೇಗನೆ ಎಲ್ಲಾ ರಸ್ತೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚಿಸಲಾಯಿತು. ಈಗಾಗಲೇ ಮತಕ್ಷೇತ್ರವಾರ ಒಟ್ಟು ರೂ.40.00 ಕೋಟಿ ಅನುದಾನ ಸರ್ಕಾರದಿಂದ ಬಿಡುಗಡೆಯಾಗಿದ್ದು, ಈ ಅನುದಾನದ ಬಗ್ಗೆ ಕ್ರಿಯಾ ಯೋಜನೆ ತಯಾರಿಸಿ ಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸಲು ತಿಳಿಸಿದರು. ಕಾಮಗಾರಿಗಳ ಪರಿಶೀಲನೆ ಮಾಡಿ ವರದಿ ಸಲ್ಲಿಸಲು ಐ.ಎ.ಎಸ್. ಪರೀಕ್ಷಾರ್ಥಿ ಅಧಿಕಾರಿ: ಶ್ರೀಮತಿ ಗ್ರರೀಮಾ ಪಂವಾರ ಇವರಿಗೆ ನಿರ್ದೇಶನ ನೀಡಲಾಯಿತು.
- 62 ಕುಡಿಯುವ ನೀರಿನ ಯೋಜನೆಗಳಲ್ಲಿ 58 ಪೂರ್ಣಗೊಂಡಿದ್ದು, 4 ಮಾತ್ರ ವಿದ್ಯುತ್ ಅಳವಡಿಕೆಯ ತೊಂದರೆ ಇರುವ್ವದರಿಂದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲವೆಂದು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯನಿರ್ವಾಹಕ ಅಭಿಯಂತರರು ಸಭೆಗೆ ತಿಳಿಸಿದಾಗ, ಯಾವುದೇ ಕಾರಣಕ್ಕೂ ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಹಾಗೂ ಕೂಡಲೇ ವಿದ್ಯುತ್ ಸಂಪರ್ಕ ನೀಡುವಂತೆ ಸೂಚಿಸಲಾಯಿತು.
- 113 ಶಾಲೆಗಳಲ್ಲಿ 316 ಕೊಠಡಿಗಳ ದುರಸ್ತಿಗೆ ರೂ.2.69 ಕೋಟಿ ಅನುದಾನವನ್ನು ಶಾಲಾ ಅಭಿವೃದ್ಧಿ ಸಮಿತಿಯವರಿಗೆ [ಎಸ್.ಡಿ.ಎಂ.ಸಿ.]ಅನುದಾನ ಬಿಡುಗಡೆಯಾಗಿದ್ದು, ಶಾಲಾ ಕೊಠಡಿಗಳ ಕಾಮಗಾರಿಗಳಲ್ಲಿ 77 ಕೊಠಡಿಗಳು ಮುಕ್ತಾಯಗೊಂಡಿದ್ದು, ಉಳಿದ 239 ಕೊಠಡಿಗಳ ದುರಸ್ತಿ ಕಾಮಗಾರಿ ಪ್ರಗತಿಯಲ್ಲಿವೆ ಎಂದು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟೆ ಇವರು ಸಭೆಯಲ್ಲಿ ತಿಳಿಸಿದರು. ಶಾಲಾ ದುರಸ್ತಿ ಕಾಮಗಾರಿಗಳು ಒಳ್ಳೆಯ ಗುಣಮಟ್ಟದ್ದಾಗಿರಬೇಕು ಹಾಗೂ ಸದರಿ ಕಾಮಗಾರಿಗಳ ಪರಿಶೀಲನೆ ಮಾಡಿ ವರದಿ ಸಲ್ಲಿಸಲು ಐ.ಎ.ಎಸ್. ಪರೀಕ್ಷಾರ್ಥಿ ಅಧಿಕಾರಿ: ಶ್ರೀಮತಿ ಗ್ರರೀಮಾ ಪಂವಾರ ಇವರಿಗೆ ನಿರ್ದೇಶನ ನೀಡಲಾಯಿತು.
- 102 ಅಂಗನವಾಡಿ ಕಟ್ಟಡಗಳಲ್ಲಿ 7 ಕಾಮಗಾರಿಗಳು ಪ್ರಾರಂಭವಾಗಿದ್ದು, 95 ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಿ ಪೂರ್ಣಗೊಳಿಸಲು ಕಾರ್ಯನಿರ್ವಾಹಕ ಅಭಿಯಂತರರು, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ ಇವರಿಗೆ ಸೂಚಿಸಲಾಯಿತು.
- ಎಂ.ಎಲ್.ಬಿ.ಸಿ. ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯವರು ಪೂರ್ಣಗೊಳಿಸಲಾಗಿದೆ ಎಂದು ತಿಳಿಸಿದಾಗ, ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಬಿಡುಗಡೆಗೊಳಿಸಿದ ಅನುದಾನಕ್ಕೆ ಎಲ್ಲಾ ಅನುಷ್ಠಾನ ಅಧಿಕಾರಿಗಳಿಗೆ ಕೂಡಲೇ ಅನುದಾನ ವಿನಿಯೋಗಿತಾ ಪತ್ರ ನೀಡಲು ಸೂಚಿಸಲಾಯಿತು.

- ಪಿ.ಡಿ. ಖಾತೆಯಲ್ಲಿ ರೂ.25.00 ಕೋಟಿ ಅನುದಾನ ಲಭ್ಯವಿರುವ ಬಗ್ಗೆ ಈ ಅನುದಾನಕ್ಕೆ ವಿವರಣೆ ಪಡೆದು ತಹಶೀಲ್ದಾರ್ ಹತ್ತಿರ ಲಭ್ಯವಿರುವ ಅನುದಾನಕ್ಕೆ ಬರುವ ಬಡ್ಡಿ ಉಪಯೋಗಿಸಿಕೊಳ್ಳಲು ಸರ್ಕಾರದ ಅನುಮತಿ ಪಡೆಯುವುದು ಕಡ್ಡಾಯವೆಂದು ತಿಳಿಸಿದರು.
- 131 ಫಲಾನುಭವಿಗಳು ಬಿದ್ದ ಮನೆಗಳನ್ನು ಬೇರೆ ಕಡೆ ತಮ್ಮ ಸ್ವಂತ ನಿವೇಶನದಲ್ಲಿ ಕಟ್ಟಿಸಿಕೊಳ್ಳಲಾಗುತ್ತದೆ ಎಂದು ಸಭೆಯಲ್ಲಿ ತಿಳಿದು ಬಂದಾಗ, ಹಳೆಯ ಮನೆಗಳನ್ನು ಸಂಪೂರ್ಣವಾಗಿ ನೆಲಸಮ ಮಾಡಲು ಸಂಬಂಧಿಸಿದ ತಹಶೀಲದಾರರಿಗೆ ತಿಳಿಸಲಾಯಿತು.
- 'ಸಿ' ವರ್ಗದ ಮನೆಗಳಿಗೆ ಅನುದಾನ ಬೇಡಿಕೆ ಇದ್ದಲ್ಲಿ, ದಿನಾಂಕ:20-12-2019 ರೊಳಗಾಗಿ ಸಲ್ಲಿಸಲು ಸೂಚಿಸಲಾಯಿತು.
- ಕುಡಿಯುವ ನೀರಿನ ಕಾಮಗಾರಿಗಳ ಅನುಷ್ಠಾನ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಸಭೆಯನ್ನು ಕರೆದು ನಿಗದಿತ ಅವಧಿಯೊಳಗಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. ಬಾಗಲಕೋಟೆ ರವರಿಗೆ ಸೂಚಿಸಿತು.
- 137 ಕುಡಿಯುವ ನೀರಿನ ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದು, ಕೂಡಲೇ ಅನುದಾನ ಪಾವತಿಸಲು ಸೂಚಿಸಲಾಯಿತು.
- ಜಾನುವಾರುಗಳಿಗೆ ಯಾವುದೇ ಮೇವಿನ ಕೊರತೆಯಾಗದಂತೆ ಮುನ್ನೆಚ್ಚರಿಕೆ ವಹಿಸಲು ಹಾಗೂ ಕ್ರಿಯಾ ಯೋಜನೆಯನ್ನು ತಯಾರಿಸಲು ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ ಯವರಿಗೆ ಸೂಚಿಸಲಾಯಿತು.
- ಉದ್ಯೋಗಖಾತ್ರಿ ಯೋಜನೆಯಡಿ ಕೂಲಿಕಾರರ ವೇತನವನ್ನು ಆನ್‌ಲೈನ್ ಮುಖಾಂತರ ಪಾವತಿ ಮಾಡುತ್ತಿರುವ್ಯದರಿಂದ, ಅಂತರ್ಜಾಲದ ತೊಂದರೆಯಿಂದ ಗ್ರಾಮೀಣ ಪ್ರದೇಶಗಳಲ್ಲಿ ಪಾವತಿಸಲು ವಿಳಂಬವಾಗುತ್ತಿದ್ದು, ಜಿಲ್ಲಾವಾರು ಅನುದಾನ ಬಿಡುಗಡೆ ಮಾಡಿದರೆ ಸೂಕ್ತವಾಗುತ್ತದೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ. ಬಾಗಲಕೋಟೆ ರವರು ತಿಳಿಸಿದಾಗ, ಸಂಬಂಧಪಟ್ಟ ಕಾರ್ಯದರ್ಶಿಗಳ ಜೊತೆ ಚರ್ಚಿಸುತ್ತೇನೆ ಎಂದು ತಿಳಿಸಲಾಯಿತು.
- ರಬಕವಿ-ಬನಹಟ್ಟಿ ಹೊಸ ತಾಲ್ಲೂಕು ರಚನೆಯಾಗಿದ್ದರಿಂದ, ಮ್ಯುಟೇಶನ್ ನಿಗದಿತ ಪ್ರಮಾಣದಲ್ಲಿ ಪ್ರಗತಿ ಸಾಧ್ಯವಾಗದ ಕಾರಣ ಉಪ ವಿಭಾಗಾಧಿಕಾರಿಗಳಿಗೆ ಮೇಲ್ವಿಚಾರಣೆ ಮಾಡಲು ತಿಳಿಸಲಾಯಿತು.
- ರುದ್ರಭೂಮಿ ಹೊಂದದೇ ಇರುವ 112 ಗ್ರಾಮಗಳ ಪಟ್ಟಿಯನ್ನು ನೀಡಲು ತಹಶೀಲ್ದಾರರಿಗೆ ಸೂಚಿಸಲಾಯಿತು ಹಾಗೂ ರುದ್ರಭೂಮಿ ಇರದೇ ಗ್ರಾಮಗಳಲ್ಲಿ ಸರಕಾರಿ ಜಾಗೆ ಗುರುತಿಸಿ ಪ್ರಸ್ತಾವನೆ ಕಳಿಸಲು ತಿಳಿಸಿದರು.

- ನ್ಯಾಯಾಲಯದ ಪ್ರಕರಣಗಳು ಬಾಕಿ ಇದ್ದು, ಉಪವಿಭಾಗಾಧಿಕಾರಿಗಳು ಹಾಗೂ ಎಲ್ಲಾ ತಹಶೀಲ್ದಾರರು ಕೂಡಲೇ ತಿಂಗಳಲ್ಲಿ 4 ದಿನ ಅದಾಲತ್ ನಡೆಸಿ ಪ್ರಕರಣಗಳನ್ನು ವಿಲೇವಾರಿ ಮಾಡಲು ಸೂಚಿಸಲಾಯಿತು. ನ್ಯಾಯಾಲಯ ಪ್ರಕರಣ ಜಿಲ್ಲೆಯ ಎಲ್ಲಾ ತಹಶೀಲ್ದಾರರ ಬಳಿ ಬಾಕಿ ಇದ್ದು ಅದರಲ್ಲಿ ತಹಶೀಲ್ದಾರ್, ಬೀಳಗಿ ಇವರ ಬಳಿ 174 ಪ್ರಕರಣಗಳು ಬಾಕಿ ಇದ್ದು, ಈ ಕುರಿತು ಕೂಡಲೇ ನಿಕಾಲೆ ಮಾಡಲು ತಿಳಿಸಿದರು. ನ್ಯಾಯಾಲಯ ಪ್ರಕರಣಗಳು 50 ರ ಮೇಲೆ ಬಾಕಿ ಇಟ್ಟುಕೊಳ್ಳಬಾರದು, ಉಪವಿಭಾಗಾಧಿಕಾರಿಗಳು, ಬಾಗಲಕೋಟೆ ಇವರ ಬಳಿ 223 ನ್ಯಾಯಾಲಯ ಪ್ರಕರಣಗಳು ಬಾಕಿ ಇದ್ದು ಪ್ರತಿ ತಿಂಗಳು 30 ಪ್ರಕರಣಗಳು ವಿಲೇವಾರಿ ಮಾಡಲು ಸ್ರಚಿಸಿದರು.
- ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ವೈಯಕ್ತಿಕ/ ಸಮುದಾಯ/ ಸಾರ್ವಜನಿಕರ ಶೌಚಾಲಯಗಳ ನಿರ್ಮಾಣದಲ್ಲಿ ಪ್ರಗತಿ ಸಾಧಿಸಲು ಸ್ರಚಿಸಲಾಯಿತು.
- ಘನತ್ಯಾಜ್ಯ ನಿರ್ವಹಣೆಯಲ್ಲಿ ಅಮೀನಗಡ ಹಾಗೂ ಬೆಳಗಲಿ ಪಟ್ಟಣ ಪಂಚಾಯತಿಯವರು ಕಡಿಮೆ ಪ್ರಗತಿ ಸಾಧಿಸಿರುತ್ತಾರೆ. ಘನತ್ಯಾಜ್ಯವನ್ನು ಮನೆಗಳಿಂದ ಸಂಗ್ರಹ ಮಾಡುವಾಗಲೇ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಕಸ ವಿಂಗಡಣೆ ಮಾಡುವಬಗೆ ನೋಡಿಕೊಳ್ಳಲು ನಗರಾಭಿವೃದ್ಧಿ ಅಧಿಕಾರಿಗಳಿಗೆ ಸ್ರಚಿಸಲಾಯಿತು.
- ಪುರಸಭೆ/ಪಟ್ಟಣ ಪಂಚಾಯತಿ/ ನಗರಸಭೆಯ ಅಧಿಕಾರಿಗಳು ಬೆಳಿಗ್ಗೆ 6-00 ಘಂಟೆಗೆ ಎಲ್ಲಾ ವಾರ್ಡಗಳಲ್ಲಿ ಭೇಟಿ ನೀಡಿ ಮೇಲ್ವಿಚಾರಣೆ ಮಾಡಲು ಸ್ರಚಿಸಲಾಯಿತು.
- ಶಾಸಕರ/ ಸಂಸದರ ನಿಧಿಯಿಬಿದ ಪಂ.ರಾ.ಇಂ. ವಿಭಾಗ, ಕೆ.ಆರ್.ಐ.ಡಿ.ಎಲ್ ಹಾಗೂ ನಿರ್ಮಿತಿ ಕೇಂದ್ರದ ಏಜನ್ಸಿಯವರಿಗೆ ಕಾಮಗಾರಿಗಳನ್ನು ನೀಡಿದ್ದು, ಸನ್ 2011-12 ರಿಂದ ಬಾಕಿ ಇದ್ದು, ಇನ್ನೂ ಕೆಲವು ಕಾಮಗಾರಿಗಳು ಪ್ರಾರಂಭಿಸಿರುವುದಿಲ್ಲ. ಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸಲು ಸ್ರಚಿಸಲಾಯಿತು.
- ಸದರಿ ಸಭೆಗೆ ಕೆ.ಆರ್.ಐ.ಡಿ.ಎಲ್ ಅಧಿಕಾರಿಗಳು ಬರದೆ ಇರುವ್ವದರಿಂದ ಮುಂದಿನ ಸಭೆಗೆ ಸದರಿಯವರನ್ನು ಕೂಡಾ ಸಭೆಗೆ ಹಾಜರಾಗಲು ಸ್ರಚಿಸಲಾಯಿತು. ನಿರ್ಮಿತಿ ಕೇಂದ್ರದವರು ತಮ್ಮಲ್ಲಿ ಬಾಕಿ ಇರುವ ಕಾಮಗಾರಿಗಳನ್ನು ಒಬಿದು ವಾರದಲ್ಲಿ ಪ್ರಗತಿ ಸಾಧಿಸಲು ತಿಳಿಸಿದರು.
- 14ನೇ ಹಣಕಾಸು ಯೋಜನೆಬುಲ್ಲಿ ಸನ್ 2015-16 ರಲ್ಲಿ 2 ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ. ಕಾಮಗಾರಿಗಳು ಬದಲಾವಣೆಯಾಗಬೇಕಾಗದಲ್ಲಿ ಕೂಡಲೇ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದು ಕಾಮಗಾರಿ ಪ್ರಾರಂಭಿಸುವಬಗೆ ನಗರಾಭಿವೃದ್ಧಿ ಅಧಿಕಾರಿಗಳಿಗೆ ಸ್ರಚಿಸಲಾಯಿತು.

- ಜಿಲ್ಲೆಯಲ್ಲಿ 48 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಯಾವುದೇ ರೋಗರುಜಿನಗಳು ಹರಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಕೊಳ್ಳಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯ ಅಧಿಕಾರಿಗಳು ತಿಳಿಸಿದಾಗ, ಎರಡು ಮಕ್ಕಳ ಸೂತ್ರದಲ್ಲಿ ಶೇ.65.39 ರಷ್ಟು ಮಾತ್ರ ಪ್ರಗತಿಯಾಗಿದ್ದು, ಸಾರ್ವಜನಿಕರಲ್ಲಿ ಮನವರಿಕೆ/ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಸೂಚಿಸಲಾಯಿತು.
- ಕೊನೆಯದಾಗಿ ಅಧ್ಯಕ್ಷರು ಮುಂದಿನ ಸಭೆಗೆ ಬರುವಾಗ ಎಲ್ಲಾ ಇಲಾಖೆಯವರು ತಮ್ಮ ಇಲಾಖೆಗೆ ಸಂಬಂಧಿಸಿದ ಪ್ರಗತಿ ವಿವರ ಹಾಗೂ ಅಗತ್ಯ ದಾಖಲೆಗಳೊಂದಿಗೆ ಮಾಹಿತಿಯೊಂದಿಗೆ ಸಭೆಗೆ ಹಾಜರಿರಲು ಸೂಚಿಸಿದರು. ಎಲ್ಲಾ ಅಧಿಕಾರಿಗಳಿಗೆ ಸಭೆಯಲ್ಲಿ ನೀಡಿರುವ ಎಲ್ಲಾ ಸಲಹೆ, ಸೂಚನೆ ಹಾಗೂ ನಿರ್ದೇಶನಗಳನ್ನು ಚಾಚು ತಪ್ಪದೇ ಪಾಲಿಸಿ, ಪ್ರವಾಹ ಹಾಗೂ ಮಳೆಯಿಂದ ಹಾನಿಗೊಂಡ ರಸ್ತೆ, ಸೇತುವೆ, ವಿದ್ಯುತ್ಕಂಬ, ಟ್ರಾನ್ಸ್‌ಫಾರ್ಮರ್‌ಗಳು, ನೀರುಸರಬರಾಜು ಯೋಜನೆಯ ಬಾಕಿ ಇರುವ ಕಾಮಗಾರಿಗಳನ್ನು ಡಿಸೆಂಬರ್ 2019ನೇ ಮಾಹೆಯೊಳಗಾಗಿ ಮುಕ್ತಾಯಗೊಳಿಸಲು ಹಾಗೂ ಉಳಿದಂತೆ ನಿಯಮಿತವಾಗಿ ಚಾಲ್ತಿ ಕಾಮಗಾರಿಗಳಲ್ಲಿಯೂ ಪ್ರಗತಿ ಸಾಧಿಸಲು ಸೂಚಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ಅಂಜುಂ ಪರ್ವೇಜ್ ಭಾ.ಆ.ಸೇ)**
**ಸರ್ಕಾರದ ಪ್ರಧಾನ ಕಾರ್ಯದರ್ಶಿ**
**ನಗರಾಭಿವೃದ್ಧಿ ಇಲಾಖೆ ಹಾಗೂ**
**ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ**

ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಡಿಸೆಂಬರ-2019 ತಿಂಗಳ ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ.

| ಕ್ರ.ಸಂ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ರಾಯಚೂರು |
| 2 | ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಶ್ರೀ ಜಿ.ಕುಮಾರ ನಾಯಕ ಭಾ.ಆ.ಸೇ |
| 3 | ಭೇಟಿಯಾದ/ಪ್ರವಾಸದ ದಿನಾಂಕ | **20-12-2019** |

A) ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ:

| ಭೇಟಿ ನೀಡಿದ ಕ್ಷೇತ್ರ/ ಸ್ಥಳ | ಮುಖ್ಯವಾಗಿ ಗಮನಿಸಿದ ಅಂಶಗಳು | ನಿರ್ದೇಶನ/ಸಲಹೆಗಳು |
|---|---|---|
| ದೇವದುರ್ಗ ತಾಲೂಕಿನ ಗಬ್ಬೂರು ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆ. | •ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ಮಾಣ ಹಂತದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡವನ್ನು ಪರಿಶೀಲಿಸಲಾಯಿತು.<br>•ಕುಡಿಯುವ ನೀರಿನ ಲಭ್ಯತೆ ಬಗ್ಗೆ ಪರಿಶೀಲನೆ<br>•ರಸ್ತೆ ಸಂಪರ್ಕ ಕುರಿತು ಪರಿಶೀಲನೆ | • ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ಮಾಣ ಹಂತದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡವನ್ನು ಉತ್ತಮ ಗುಣಮಟ್ಟದ ಕಟ್ಟಡ ನಿರ್ಮಾಣ ಮಾಡಲು ಕ್ರೈಸ್ ಸಂಸ್ಥೆಯವರಿಗೆ ನಿರ್ದೇಶನ ನೀಡಲಾಯಿತು.<br>• ಕಾಲುವೆ ಮೂಲಕ ಹೆಚ್ಚುವರಿಯಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಯಿತು.<br>• ಸದರಿ ವಸತಿ ಶಾಲೆಗೆ ಹೋಗುವ ರಸ್ತೆ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳುವಂತೆ ತಹಶೀಲ್ದಾರರು ದೇವದುರ್ಗ ಇವರಿಗೆ ಸೂಚನೆಯನ್ನು ನೀಡಲಾಯಿತು. |
| ದೇವದುರ್ಗ ಪಟ್ಟಣದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಮತ್ತು ಮೆಟ್ರಿಕ್ ನಂತರ ಬಾಲಕರ ಮತ್ತು ಬಾಲಕೀಯರ ವಸತಿ ನಿಲಯದ ಶಾಲೆ. | • ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ದೇವದುರ್ಗ ಪಟ್ಟಣದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿನಿಯರ ವಿದ್ಯಾಭ್ಯಾಸ ಕುರಿತಂತೆ ಆಂಗ್ಲ ಭಾಷೆಯಲ್ಲಿ ಕೆಲ ಪ್ರಶ್ನೆಗಳನ್ನು ಕೇಳುವುದರೊಂದಿಗೆ ವಿದ್ಯಾರ್ಥಿನಿಯರ ಪ್ರತಿಭೆಯನ್ನು ಗಮನಿಸಲಾಯಿತು. | • ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿನಿಯರ ವಿದ್ಯಾಭ್ಯಾಸ ಕುರಿತಂತೆ ಆಂಗ್ಲ ಭಾಷೆಯಲ್ಲಿ ಕೆಲ ಪ್ರಶ್ನೆಗಳನ್ನು ಕೆಳುವುದರೊಂದಿಗೆ ವಿದ್ಯಾರ್ಥಿನಿಯರ ಪ್ರತಿಭೆಯನ್ನು ಗಮನಿಸಿ, ಉತ್ತಮವಾಗಿ ವಿದ್ಯಾಭ್ಯಾಸದ ಕುರಿತು ಸಲಹೆಯನ್ನು ನೀಡಲಾಯಿತು. |

| | | |
|---|---|---|
| | • ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಡಯಟ್ ಚಾರ್ಟ್ , ಮೆನು ಚಾರ್ಟ್ ಮತ್ತು ಬಯೋ ಮೆಟ್ರಿಕ್ ನ್ನು ಪರಿಶೀಲಿಸಲಾಯಿತು.<br>• ಮೆಟ್ರಿಕ್ ನಂತರ ಬಾಲಕರ ಮತ್ತು ಬಾಲಕೀಯರ ವಸತಿ ನಿಲಯದ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ, ಸ್ವಚ್ಛತೆ ಹಾಗೂ ನೀರಿನ ವ್ಯವಸ್ಥೆ ಕುರಿತು ಪರಿಶೀಲನೆ. | • ವಿದ್ಯಾರ್ಥಿಗಳಿಗೆ ಪರೀಕ್ಷೆಗಳಲ್ಲಿ ಗುಣಮಟ್ಟದ ಶಿಕ್ಷಣದಿಂದ ಉತ್ತಮ ಫಲಿತಾಂಶ ಸಾಧಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಶಿಕ್ಷಕರಿಗೆ ಸೂಚಿಸಲಾಯಿತು. |
| ದೇವದುರ್ಗ ತಾಲೂಕಿನ ಹೂವಿನಡಗಿ ಗ್ರಾಮದಲ್ಲಿ 2019 ನೇ ಅಗಸ್ಟ್ ಮಾಹೆಯಲ್ಲಿ ಉಂಟಾದ ನೆರೆಹಾವಳಿಯಿಂದ ಹಾನಿಯಾದ ಮನೆಗಳಿಗೆ ಭೇಟಿ ನೀಡಿರುವುದು | ದೇವದುರ್ಗ ತಾಲೂಕಿನ ಹೂವಿನಡಗಿ ಗ್ರಾಮದಲ್ಲಿ 2019 ನೇ ಅಗಸ್ಟ್ ಮಾಹೆಯಲ್ಲಿ ಉಂಟಾದ ನೆರೆಹಾವಳಿಯಿಂದ ಹಾನಿಯಾದ ಮನೆಗಳಿಗೆ ಭೇಟಿ ನೀಡಿ, ಮನೆಗಳ ಕಟ್ಟಡ ನಿರ್ಮಾಣದ ಕುರಿತು ಪರಿಶೀಲನೆ. | ಜಿಲ್ಲೆಯಲ್ಲಿ ಉಂಟಾದ ನೆರೆಹಾವಳಿಯಿಂದ ಮುಳುಗಡೆಯಾದ ಹೂವಿನ ಹಡಗಿ ಗ್ರಾಮಕ್ಕೆ ಭೇಟಿ ನೀಡಿ ನೆರೆ ಸಂತ್ರಸ್ತರಿಗೆ ಅಲ್ಲಿ ಮನೆ ನಿರ್ಮಾಣಕ್ಕೆ ಸರ್ಕಾರದಿಂದ ಒದಗಿಸಲಾಗಿರುವ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಲಾಯಿತು. ಸಂಪೂರ್ಣ ಮನೆ ಕಳೆದುಕೊಂಡ ಸಂತ್ರಸ್ತರಿಗೆ ರೂ.1.00 ಲಕ್ಷ ನೇರವಾಗಿ ಅವರ ಖಾತೆಗೆ ಬಿಡುಗಡೆ ಮಾಡಲಾಗಿದ್ದು, ಕಟ್ಟಡ ನಿರ್ಮಾಣದ ಪ್ರಗತಿ ಆಧಾರದ ಮೇಲೆ ಉಳಿದ ಹಣವನ್ನು ಬಿಡುಗಡೆ ಮಾಡಲಾಗುವುದೆಂದು ನೆರೆ ಸಂತ್ರಂಸ್ಥರಿಗೆ ಮಾನ್ಯ ಮುಖ್ಯ ಮಂತ್ರಿಗಳ ಮನವಿ ಪತ್ರದ ಮೂಲಕ ಮನವರಿಕೆ ಮಾಡಿಕೊಡಲಾಯಿತು. ನೆರೆ ಹಾವಳಿಯಿಂದ ಹಾನಿಗೊಳಗಾದ ಸಾರ್ವಜನಿಕ ಆಸ್ತಿಗಳನ್ನು ಪುನರ್‌ನಿರ್ಮಿಸುವ ಕುರಿತು ಮಾಹಿತಿ ಪಡೆದು, ಬಾಕಿ ಕಾಮಗಾರಿಗಳನ್ನು ಶೀಘ್ರದಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು. ಅದೇರೀತಿ ಬೆಳೆ ಪರಿಹಾರ ನೀಡುವ ಕಾರ್ಯ ನಡೆಯುತ್ತಿದ್ದು, ಸಂಬಂಧಿಸಿದ ರೈತರ ಮಾಹಿತಿಯನ್ನು ಕ್ರೋಢಿಕರಿಸಿ ಪರಿಹಾರ ವಿತರಿಸುವ ಕಾರ್ಯ ನಡೆಯುತ್ತಿದ್ದು, ನಿಗಧಿತ ಅವಧಿಯಲ್ಲಿ ರೈತರಿಗೆ ಪರಿಹಾ ನೀಡಬೇಕೆಂದು ನಿರ್ದೇಶನ ನೀಡಲಾಯಿತು. |

| | | |
|---|---|---|
| ದೇವದುರ್ಗ ತಾಲೂಕಿನ ಲಿಂಗದಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಕರ್ನಾಟಕ ಹಾಲು ಒಕ್ಕೂಟ ಸಂಘದ ಸಭೆಯಲ್ಲಿ ಭಾಗವಹಿಸಿರುವುದು. | ರಾಯಚೂರು ಜಿಲ್ಲೆಯಲ್ಲಿ ಹಾಲು ಉತ್ಪಾದನೆ ಕುರಿತಂತೆ, ಹೈನುಗಾರಿಕೆ ಉತ್ತೇಜನೆ ಮಾಡುವ ಕುರಿತು ಹಾಲು ಉತ್ಪಾದಕರ ಸಂಘಗಳ ರಚನೆ ಕುರಿತು ಪರಿಶೀಲನೆ. | ಕಳೆದ ತಿಂಗಳಿನಲ್ಲಿ ನೀಡಿದ ಸಲಹೆಯಂತೆ ಜಿಲ್ಲೆಯಲ್ಲಿ ಹಾಲು ಉತ್ಪಾದನೆ ಮೂಲಕ ಹೈನುಗಾರಿಕೆ ಉತ್ತೇಜನೆ ಮಾಡುವ ಕುರಿತು ಪ್ರಾಯೋಗಿಕವಾಗಿ ಜಿಲ್ಲೆಯಲ್ಲಿ ಮಾದರಿ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಹೈನುಗಾರಿಕೆ ಮೂಲಕ ರೈತರ ಆದಾಯವನ್ನು ಹೆಚ್ಚಿಸುವ ಯೋಜನೆಯನ್ನು ರೂಪಿಸಬೇಕೆಂದು ತಿಳಿಸಲಾಗಿತ್ತು, ಅದರಂತೆ, ದೇವದುರ್ಗ ತಾಲೂಕಿನ ಲಿಂಗದಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯತ್ ಮಟ್ಟದ ಒಕ್ಕೂಟದ ವತಿಯಿಂದ ಮಹಿಳಾ ಹಾಲು ಉತ್ಪಾದಕರ ಸಂಘಗಳನ್ನು ರಚಿಸುವುದಕ್ಕಾಗಿ ಚಿಂಚೋಡಿ, ಬುಂಕಲದೊಡ್ಡಿ ಹಾಗೂ ಲಿಂಗದಳ್ಳಿ ಗ್ರಾಮದ ಸ್ವ ಸಹಾಯ ಗುಂಪುಗಳು ಸದಸ್ಯರುಗಳ ಸಭೆಯಲ್ಲಿ ಭಾಗವಹಿಸಿ ರಾಯಚೂರು ಜಿಲ್ಲೆಗೆ ಪ್ರತಿ ದಿನ 35,000 ಲೀಟರ್ ಅವಶ್ಯಕತೆಯಿದ್ದು ಪ್ರಸ್ತುತ, ಪ್ರತಿ ದಿನ 25,000 ಲೀಟರ್ ಮಾತ್ರ ಉತ್ಪಾದನೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯವಿದ್ದು, ಪಶು ಸಂಗೋಪನಾ ಇಲಾಖೆಯಿಂದ ವಿಮಾ ಸೌಲಭ್ಯ ಮತ್ತು ಜಾನುವಾರುಗಳಿಗೆ ಚಿಕಿತ್ಸಾ ಸೌಲಭ್ಯವನ್ನು ಪಡೆದುಕೊಂಡು ಹಾಲು ಉತ್ಪಾದಕ ಸಂಘವನ್ನು ರಚಿಸಿಕೊಳ್ಳಬೇಕೆಂದು ಸಲಹೆಯನ್ನು ನೀಡಲಾಯಿತು. |

ಜಿ. ಕುಮಾರ ನಾಯಕ ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

**ದಿನಾಂಕ 23.12.2019 ರಂದು ಬೆಳಿಗ್ಗೆ 9.30 ಗಂಟೆಗೆ ಶ್ರೀ ಮಂಜುನಾಥ ಪ್ರಸಾದ್ ಎನ್. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕೊಪ್ಪಳ ಜಿಲ್ಲಾ ಪಂಚಾಯಿತ್ ಜೆ.ಹೆಚ್ ಪಾಟೀಲ್ ಸಭಾಂಗಣದಲ್ಲಿ ಜರುಗಿದ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯ ನಡುವಳಿಗಳು**

---

**ಸಭೆಯಲ್ಲಿ ಉಪಸ್ಥಿತರಿದ್ದವರು: ಹಾಜರಾತಿ ವಹಿಯ ಪ್ರಕಾರ**

ದಿನಾಂಕ:23.12.2019 ರಂದು ಬೆಳ್ಳಿಗೆ 9.30 ಗಂಟೆಗೆ ಕೊಪ್ಪಳ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕೊಪ್ಪಳ ಜಿಲ್ಲೆಯ ಪ್ರಗತಿ ಪರಿಶೀಲನೆ ಸಭೆಯನ್ನು ಮಾನ್ಯ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದಶಿಗಳು ರವರ ಅಧ್ಯಕ್ಷತೆಯಲ್ಲಿ ಜರುಗಿಸಲಾಯಿತು. ಅಪರ ಜಿಲ್ಲಾಧಿಕಾರಿಗಳು ಇವರು ಸಭೆಗೆ ಆಗಮಿಸಿದ ಮಾನ್ಯ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳುರವರನ್ನು ಸ್ವಾಗತಿಸಿದರು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಹಾಜರಿದ್ದ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ಮಾನ್ಯ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಭೆಗೆ ಹಾಜರಾಗಿದ್ದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಜಿಲ್ಲೆಯಲ್ಲಿ ಇತ್ತೀಚನೆ ಆಗಿರುವ ಅತೀವೃಷ್ಠಿ ಹಾನಿಯ ಬಗ್ಗೆ ಈ ಕೆಳಗಿನಂತೆ ವಿವರಿಸಲಾಯಿತು.

**ಕಂದಾಯ ಇಲಾಖೆ (ಅತೀವೃಷ್ಠಿ):-**

ಅಪರ ಜಿಲ್ಲಾಧಿಕಾರಿಗಳು ಮಾತನಾಡಿ ಆಗಷ್ಟ-2019ರ ಮಾಹೆಯಲ್ಲಿ ಕೊಪ್ಪಳ ಜಿಲ್ಲೆಯ ಮುನಿರಾಬಾದ್ ಗ್ರಾಮದಲ್ಲಿ ತುಂಗಭದ್ರ ಜಲಾಶಯ ಗೇಟ್ ಒಡೆದು ಸುಮಾರು 150 ಮನೆಗಳಿಗೆ ನೀರು ನುಗ್ಗಿರುತ್ತದೆ ಸದರಿ ಮನೆಯವರಿಗೆ ಸರ್ಕಾರದ ನಿರ್ದೇಶನದ ಪ್ರಕಾರ ಪ್ರತಿ ಮನೆಗೆ ರೂ. 10000/- ರಂತೆ ಒಟ್ಟು 15.00 ಲಕ್ಷ ಪರಿಹಾರವನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ ಮತ್ತು ಮೂರು ಪಕ್ಕಾ ಮನೆಗಳು ಹಾನಿಯಾಗಿರುವುದರಿಂದ ಸರ್ಕಾರದ ನಿರ್ದೇಶನದ ಪ್ರಕಾರ ಪ್ರತಿ ಮನೆಗೆ ರೂ. 50000/- ರಂತೆ ಒಟ್ಟು 1.50 ಲಕ್ಷ ಪರಿಹಾರವನ್ನು ವಿತರಿಸಲಾಗಿದೆ ಬೆಳೆಹಾನಿಗೆ ಸಂಬಂಧಿಸಿದಂತೆ ಪರಿಹಾರ ತಂತ್ರಾಂಶದಲ್ಲಿ ಡಾಟಾ ಎಂಟ್ರಿ ಮಾಡಲಾಗಿದೆ ಇದುವರೆದೂ 15.00 ಲಕ್ಷ ಪರಿಹಾರ ಸಂಬಧಪಟ್ಟ ಫಳಾನುಭವಿಗಳಿಗೆ ಆರ್.ಟಿ.ಜಿ.ಎಸ್ ಮೂಲಕ ಸರ್ಕಾರ ನೇರವಾಗಿ ಪರಿಹಾರವನ್ನು ನೀಡಿರುತ್ತಾರೆ ಎಂದು ಸಭೆಯಲ್ಲಿ ತಿಳಿಸಿದರು

ಮುಂದುವರೆದು ಆಗಷ್ಟ-2019 ರಿಂದ ಅಕ್ಟೋಬರ್ -2019ರ ವರೆಗೆ ಜಿಲ್ಲೆಯಲ್ಲಿ ಸುರಿಧ ಮಳೆಯಿಮದ ಒಟ್ಟು 1377 ಮನೆಗಳು ಹಾನಿಯಾಗಿದ್ದು, ಸದರಿ ಮನೆಗಳಿಗೆ ಎನ್.ಡಿ.ಆರ್.ಎಫ್ ನಿರ್ದೇಶನದ ಪ್ರಕಾರ ಒಟ್ಟು 51.14 ಲಕ್ಷ ಪರಿಹಾರವನ್ನು ಸಂಬಂಧಪಟ್ಟ ಫಲಾನುಭವಿಗಳ ಖಾತೆಗೆ ಆರ್.ಟಿ.ಜಿ.ಎಸ್ ಮೂಲಕ ವಿತರಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಜಿಲ್ಲೆಯಲ್ಲಿ ಸುರಿದ ಮಳೆಯಿಂದ ಒಟ್ಟು 5 ಮಾನವ ಜೀವಹಾನಿಯಾಗಿದ್ದು, ಸದರಿಯವರಿಗೆ ತಲಾ 5.00 ಲಕ್ಷ ದಂತೆ ಒಟ್ಟು 25.00 ಲಕ್ಷ ಪರಿಹಾರವನ್ನು ವಿತರಿಸಲಾಗಿದೆ ಮತ್ತು 6 ಜಾನುವಾರುಗಳು ಮೃತಪಟ್ಟಿದ್ದು, ರೂ. 18,000/- ಸಾವಿರ ಪರಿಹಾರವನ್ನು ವಿತರಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಅಕ್ಟೋಬರ್-2019ರ ಮಾಹೆಯಲ್ಲಿ ಸುರಿದ ಮಳೆಯಿಂದ ಜಿಲ್ಲೆಯಲ್ಲಿ 79.85 ಹೆಕ್ಟರ್ ಕೃಷಿ ಬೆಳೆ ಮತ್ತು 587.70 ಹೆಕ್ಟರ್ ತೋಟಗಾರಿಕೆ ಬೆಳೆ ಹಾನಿಯಾಗಿರುತ್ತದೆ ಫಲಾನುಭವಿಗಳಿಗೆ ಪರಿಹಾರ ನೀಡುವ ಕುರಿತು ದಿನಾಂಕ: 11-11-2019 ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು..

ಅದೇ ರೀತಿ 13 ಶಾಲಾ ಕೋಠಡಿಗಳು ಸಂಪೂರ್ಣ ಹಾನಿಯಾಗಿರುತ್ತದೆ ಅದಕ್ಕೆ ರೂ. 1.33 ಕೋಟಿ ಅನುದಾನದ ಅವಶ್ಯಕತೆ ಇರುತ್ತದೆ ಎಂದು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಕೊಪ್ಪಳ ಇವರು

ವರದಿ ಸಲ್ಲಿಸಿರುತ್ತಾರೆ ಎಂದು ತಿಳಿಸಿದರು ಹಾಗೂ 5 ಅಂಗನವಾಡಿ ಕೇಂದ್ರಗಳು ಸಹ ಹಾನಿಯಾಗಿದ್ದು, ದುರಸ್ಥಿಗಾಗಿ ರೂ. 14.00 ಲಕ್ಷ ಬೇಕಾಗುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

**ಸಹಕಾರ ಸಂಘಗಳ ಇಲಾಖೆ:-**

ಸಹಕಾರ ಸಂಘದ ಅಧಿಕಾರಿಗಳು ಮಾತನಾಡುತ್ತಾ, ಕೊಪ್ಪಳ ಜಿಲ್ಲೆಯಲ್ಲಿ ರೈತರ ಸಾಲ ಮನ್ನಾ ಯೋಜನೆ ಅಡಿ 23976 ರೈತ ಸದಸ್ಯರಿಗೆ ರೂ.104.25 ಕೋಟಿ ಮನ್ನಾ ಕುರಿತು ಮಾಹಿತಿ ಸಲ್ಲಿಸಲಾಗಿದೆ. ಈ ಪೈಕಿ ಇದುವರೆಗೆ 21239 ರೈತ ಸದಸ್ಯರಿಗೆ ರೂ.86.99 ಕೋಟಿ ಮೊತ್ತವು ಸರ್ಕಾರದಿಂದ ಬಿಡುಗಡೆಯಾಗಿರುತ್ತದೆ. ಇನ್ನೂ ಸರ್ಕಾರದಿಂದ 2737 ರೈತ ಸದಸ್ಯರಿಗೆ ರೂ.17.26 ಕೋಟಿ ಬಿಡುಗಡೆಯಾಗುವುದು ಬಾಕಿ ಇರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಮುಂದುವರೆದು ಸರ್ಕಾರದಿಂದ ಬಿಡುಗಡೆಯಾಗಿರುವ ಸಾಲಮನ್ನಾ ಮೊತ್ತದಲ್ಲಿ ಗಂಗಾವತಿ ತಾಲೂಕಿನಲ್ಲಿ ವಾಣಿಜ್ಯ ಬ್ಯಾಂಕಿನ ಮೂಲಕ ರೈತ ಸದಸ್ಯರಿಗೆ ಕೃಷಿಸಾಲ ವಿತರಿಸುವ 9 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ 3998 ರೈತ ಸದಸ್ಯರ ರೂ.20.76 ಕೋಟಿ ಸಾಲ ಮನ್ನಾ ಮೊತ್ತವು ಕೂಡಾ ಸೇರಿರುತ್ತದೆ. ಸದರಿ ರೈತ ಸದಸ್ಯರು ಆರ್.ಡಿ.ಸಿ.ಸಿ. ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದಿರುವುದಿಲ್ಲವೆಂಬ ಕಾರಣಕ್ಕಾಗಿ ರೂ.20.76 ಕೋಟಿ ಮೊತ್ತವು ಅಪೆಕ್ಸ್ ಬ್ಯಾಂಕಿಗೆ ಹಿಂದಿರುಗಿರುತ್ತದೆ. ಪ್ರಸ್ತುತ ಎಲ್ಲಾ ರೈತರು ಆರ್.ಡಿ.ಸಿ.ಸಿ. ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆದಿದ್ದು, ಸಾಲಮನ್ನಾ ಮೊತ್ತವನ್ನು ಸದರಿಯವರ ಖಾತೆಗೆ ವರ್ಗಾಯಿಸುವ ಕುರಿತು ಕ್ರಮ ಕೈಗೊಳ್ಳಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

**ಲೋಕೋಪಯೋಗಿ ಇಲಾಖೆ:-**

ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಗಂಗಾವತಿ ತಾಲೂಕಿನ ಕಂಪ್ಲಿ ಸೇತುವೆ ಕಾಮಗಾರಿಯ ಕುರಿತು ವಿವರಣೆ ನೀಡಲು ಕೇಳಲಾಗಿ, ಕಾರ್ಯನಿರ್ವಾಹಕ ಇಂಜಿನೀಯರರು, ಲೋ.ಇ. ಕೊಪ್ಪಳ ಇವರು ಮಾತನಾಡುತ್ತಾ, ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಕಂಪ್ಲಿ ಗ್ರಾಮದ ಹತ್ತಿರವಿರುವ ಸೇತುವೆಯನ್ನು 1961 ರಲ್ಲಿ ರೂ.18.71 ಲಕ್ಷಗಳಿಗೆ ನಿರ್ಮಿಸಲಾಗಿರುತ್ತದೆ.

ಈ ಸೇತುವೆಯು ಮುಳುಗುವ ಸೇತುವೆಯಾಗಿದ್ದು (Submersible Bridge), ತುಂಗಭದ್ರ ಡ್ಯಾಂನಿಂದ ಸುಮಾರು 1 ಲಕ್ಷ ಕ್ಯೂಸೆಕ್ಸ ನೀರು ಬಿಡುಗಡೆ ಮಾಡಿದಾಗ ಸೆತುವೆಯು ಸಂಪೂರ್ಣ ಮುಳಗಿ ಹೋಗಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ಸುಮಾರು 2.00 ಲಕ್ಷ ಕ್ಯೂಸೆಕ್ಸ ನೀರು ಬಿಡುಗಡೆ ಮಾಡಿರುವುದರಿಂದ ಸೇತುವೆ ಸಂಪೂರ್ಣ ಮುಳುಗಿ ಹೋಗಿ ಹ್ಯಾಂಡರೇಲ್ ಎಲ್ಲ ಹಾಳಾಗಿರುತ್ತವೆ. ಪ್ರತಿ ವರ್ಷ ಹೆಚ್ಚು ನೀರು ಬಿಡುಗಡೆ ಮಾಡಿದಾಗ ಸೇತುವೆಯ ಅಪ್ರೋಚ್ ರಸ್ತೆ ಮತ್ತು ಹ್ಯಾಂಡರೇಲ್ ಹಾಳಾಗುತ್ತದೆ. ಸೇತುವೆಯ ಮೇಲೆ ಹ್ಯಾಂಡರೇಲ್ ಇಲ್ಲದೆ ವಾಹನ ಸಂಚಾರಕ್ಕೆ ಸುರಕ್ಷತೆ ಇಲ್ಲದಂತಾಗುತ್ತದೆ ಮತ್ತು ವಾಹನ ಸಂಚಾರ ಸ್ಥಗಿತಗೊಳಿಸಲಾಗುತ್ತದೆ. ಸೇತುವೆಯು ನಿರ್ಮಿಸಿ ಸುಮಾರು 57 ವರ್ಷಗಳಾಗಿದ್ದು, ಶಿಥಿಲಾವಸ್ಥೆಯಲ್ಲಿದ್ದು, ಭಾರಿ ವಾಹನ ಸಂಚಾರಕ್ಕೆ ಅಪಾಯಕಾರಿಯಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ನೆರೆಹಾವಳಿ (Flood Damage work) ಅಡಿಯಲ್ಲಿ ರೂ. 65.00 ಲಕ್ಷಗಳಿಗೆ ದುರಸ್ತಿ ಕಾಮಗಾರಿ ಮಂಜೂರಾಗಿದ್ದು, ಸದರಿ ದುರಸ್ತಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ವಾಹನ ಸಂಚಾರ ದಟ್ಟಣೆಯು ಪ್ರತಿ ವರ್ಷ ಹೆಚ್ಚುತ್ತಾ ಇರುವುದರಿಂದ ಸದರಿ ಸೇತುವೆಯು ಬಹಳ ಹಳೆಯದಾಗಿರುವುದರಿಂದ ಹೊಸ ಸೇತುವೆ ನಿರ್ಮಾಣ ಮಾಡುವುದು ಅವಶ್ಯವಿರುತ್ತದೆ. ಹೊಸ ಸೇತುವೆ ನಿರ್ಮಾಣಕ್ಕಾಗಿ ರೂ. 91.30 ಕೋಟಿ ಮೊತ್ತದ ರೇಖಾ ಅಂದಾಜು ಪತ್ರಿಕೆಯೊಂದಿಗೆ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಅಧಿಕ್ಷಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬಳ್ಳಾರಿ ಇವರ ಮುಖಾಂತರ ಮಾನ್ಯ ಮುಖ್ಯ ಇಂಜಿನೀಯರು, ಸಂಪರ್ಕ ಮತ್ತು ಕಟ್ಟಡ (ಈಶಾನ್ಯ) ಕಲಬುರಗಿ ಇವರಿಗೆ ಸಲ್ಲಿಸಲಾಗಿದೆ.

2019–20ನೇ ಸಾಲಿನಲ್ಲಿ ನೈಸರ್ಗಿಕ ವಿಕೋಪದಿಂದ ಹಾನಿಗೊಳಗಾದ ಕಾಮಗಾರಿಗಳಿಗೆ ಸರ್ಕಾರದಿಂದ ರೂ.3.55 ಕೋಟಿ ಅನುದಾನ ನಿಗದಿಪಡಿಸಲಾಗಿದ್ದು, ಸದರಿ ಅನುದಾನಕ್ಕೆ ತಕ್ಕಂತೆ ಗಂಗಾವತಿ, ಯಲಬುರ್ಗಾ ಮತ್ತು ಕೊಪ್ಪಳ ತಾಲೂಕುಗಳಿಗೆ ಸಂಬಂಧಿಸಿದಂತೆ ರಸ್ತೆ, ಸಿ.ಡಿ, ಸೇತುವೆ ದುರಸ್ತಿ ಕಾಮಗಾರಿಗಳಿಗೆ ಅನುಮೋದನೆ ಪಡೆದು, ಟೆಂಡರ್ ಕರೆಯಲಾಗಿರುತ್ತದೆ ಎಂದು ಸಭೆಗೆ ಮಾಹಿತಿ ನೀಡಿದರು.

**ಪಂ.ರಾ.ಇಂ. ಇಲಾಖೆ:–**

2019–20ನೇ ಸಾಲಿನಲ್ಲಿ ನೈಸರ್ಗಿಕ ವಿಕೋಪದಿಂದ ಹಾನಿಗೊಳಗಾದ ಕಾಮಗಾರಿಗಳಿಗೆ ಸರ್ಕಾರದಿಂದ ರೂ.21.15 ಕೋಟಿ ಅನುದಾನ ನಿಗದಿಪಡಿಸಲಾಗಿದ್ದು, ಸರ್ಕಾರಕ್ಕೆ ಕ್ರಿಯಾ ಯೋಜನೆ ಸಲ್ಲಿಸುವ ಕುರಿತು ಮಾಹಿತಿಯನ್ನು ನೀಡಲು ಮಾನ್ಯ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ತಿಳಿಸಿದರು. ಕಾರ್ಯನಿರ್ವಾಹಕ ಅಧಿಕಾರಿಗಳು ಪಂ.ರಾ.ಇಂ. ವಿಭಾಗ ಕೊಪ್ಪಳ ಇವರು ಮಾತನಾಡುತ್ತಾ, ಈಗಾಗಲೇ ಕೊಪ್ಪಳ ಹೊರತುಪಡಿಸಿ, ಕನಕಗಿರಿ, ಗಂಗಾವತಿ, ಕುಷ್ಟಗಿ ವಿಧಾನಸಭಾ ಕ್ಷೇತ್ರವಾರು ಕ್ರಿಯಾ ಯೋಜನೆಯನ್ನು ತಯಾರಿಸಿ ಮುಖ್ಯ ಇಂಜೀನಿಯರರು, ಪಂ.ರಾ.ಇಂ. ಇಲಾಖೆ, ಬೆಂಗಳೂರು ಇವರಿಗೆ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೊಪ್ಪಳ ಶಾಸಕರು ಇನ್ನು ಕ್ರಿಯಾ ಯೋಜನೆ ನೀಡಿರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಕೂಡಲೇ ಮಾನ್ಯ ಶಾಸಕರಿಗೆ ಖುದ್ದಾಗಿ ಸಂಪರ್ಕಿಸಿ ಕ್ರಿಯಾ ಯೋಜನೆ ರೂಪಿಸಿ, ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲು ಸೂಚಿಸಿದರು.

**ಸಾಮಾಜಿಕ ಭದ್ರತೆ ಯೋಜನೆ:–**

ಮಾನ್ಯ ಅಪರ ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಜಿಲ್ಲೆಯಲ್ಲಿ ವೃಧ್ಯಾಪ್ಯ ವೇತನ 34714, ವಿಧವಾ ವೇತನ 54806, ಅಂಗವಿಕಲ ವೇತನ 43555, ಮನಸ್ವಿನಿ 3179, ಮೈತ್ರಿ 28, ಸಂಧ್ಯಾ ಸುರಕ್ಷಾ 87373 ಮತ್ತು ಮೃತ ರೈತ ಪತ್ನಿಗೆ ವಿಧವಾ ವೇತನ ಪಾವತಿ 83 ಪ್ರಕರಣಗಳಿಗೆ ಮಂಜೂರು ಮಾಡಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಸದರಿ ಯೋಜನೆಗಳಲ್ಲಿ ಆಧಾರ ಸೀಡಿಂಗ, ಕೆ–1 ರಿಂದ ಕೆ–2 ವರ್ಗಾವಣೆ ಮತ್ತು ತಾತ್ಕಾಲಿಕ ಸ್ಥಗಿತಗೊಂಡಿರುವ ಪ್ರಕರಣಗಳಲ್ಲಿ ಕಡ್ಡಾಯವಾಗಿ ಶೇ100% ಆಧಾರ ಜೋಡಣೆ ಮತ್ತು ಭಾಗಶಃ ಪರಿಶೀಲನೆ ನಡೆಸಿ ಕ್ರಮವಹಿಸುವುದು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು 60 ಷರ್ವ ವಯೋಮಿತಿ ಹೊಂದಿದ ಫಲಾನುಭವಿಗಳನ್ನು ಗುರುತಿಸಿ, ಸದರಿ ಫಲಾನುಭವಿಗಳಿಂದ ದಾಖಲೆಗಳನ್ನು ಪಡೆದು ನೇರವಾಗಿ ವೃಧ್ಯಾಪ್ಯ ವೇತನ ಮಂಜೂರಿ ಮಾಡಲು ಸೂಚಿಸಲಾಯಿತು.

**ರುದ್ರ ಭೂಮಿ:–**

ಮಾನ್ಯ ಅಪರ ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಜಿಲ್ಲೆಯಲ್ಲಿ ಈಗಾಗಲೇ ಪ.ಜಾತಿ ಮತ್ತು ಪ.ಪಂ. ಜಾತಿಯವರಿಗೆ ಸ್ಮಾಶಾನ ಭೂಮಿ ಒದಗಿಸಲು ಬಿಡುಗಡೆಮಾಡಿದ ಅನುದಾನದಲ್ಲಿ 13 ಗ್ರಾಮಗಳಿಗೆ ಖಾಸಗಿ ಜಮೀನನ್ನು ಖರೀದಿಸಿ ಮಂಜೂರು ನೀಡಲಾಗಿರುತ್ತದೆ. ಹಾಗೂ ಜಿಲ್ಲೆಯಲ್ಲಿ ಒಟ್ಟು 301 ಗ್ರಾಮಗಳಲ್ಲಿ ರುದ್ಧಭೂಮಿ ಅವಶ್ಯಕತೆ ಇರುವುದಾಗಿ ಸಭೆಯ ಗಮನಕ್ಕೆ ತಂದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಸಾರ್ವಜನಿಕ ರುದ್ರಭೂಮಿಗಾಗಿ ಸರ್ಕಾರಿ ಜಮೀನು ಲಭ್ಯವಿದ್ದಲ್ಲಿ ಕಾಯ್ದಿರಿಸುವುದು ಹಾಗೂ ಸರ್ಕಾರಿ ಜಮೀನು ಇಲ್ಲದ ಗ್ರಾಮಗಳಲ್ಲಿ ಖಾಸಗಿ ಜಮೀನು ಖರಿದಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದರು.

**94ಸಿ, 94, ಸಿಸಿ ಮತ್ತು 94 ಎ & ಬಿ :–**

ಮಾನ್ಯ ಅಪರ ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಜಿಲ್ಲೆಯಲ್ಲಿ ಜಿಲ್ಲೆಯಲ್ಲಿ ಈಗಾಗಲೇ 94ಸಿ, 94, ಸಿಸಿ ಮತ್ತು 94 ಎ & ಬಿ ಪ್ರಕರಣಗಳ ವಿಲೇವಾರಿಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳು ಬಾಕಿ ಇರುಇವುದಿಲ್ಲ. ಈಲ್ಲೆಯಲ್ಲಿ ಅಕ್ರಮ ಸಕ್ರಮ ಸಮಿತಿಗಳು ಇನ್ನು ರಚನೆಯಾಗಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಕಂದಾಯ ಅಧಿಕಾರಿಗಳು ಮಾನ್ಯ ಶಾಸಕರುಗಳಿಗೆ ಸಂಕರ್ಪಿಸಿ ಅಕ್ರಮ ಸಕ್ರಮ ಸಮಿತಿಗಳನ್ನು ರಚಿಸಲು ಸೂಚಿಸಿದರು.

**ಕರ್ನಾಟಕ ಭೂಸುಧಾರಣಾ ಕಾಯ್ದೆ, 1961ರ, ಕಲಂ 79ಎ ಮತ್ತು 79 ಬಿ ಉಲ್ಲಂಘನೆ ಪ್ರಕರಣಗಳು**

ಮಾನ್ಯ ಜಿಲ್ಲಾಧಿಕರಿಗಳು ಮಾತನಾಡುತ್ತಾ ಜಿಲ್ಲೆಯಲ್ಲಿ 309 ಪ್ರಕರಣಗಳು ದಾಖಲಾಗಿದ್ದು, ಇದರ ಪೈಕಿ 265 ಪ್ರಕರಣಗಳನ್ನು ವಿಲೇ ಮಾಡಲಾಗಿರುತ್ತದೆ. ಸರ್ಕಾರದ ಪರವಾಗಿ ಆದೇಶವಾಗಿರುವ 4 ಪ್ರಕರಣಗಳ ಪೈಕಿ 1 ಪ್ರಕರಣ ಕೆ.ಎ.ಟಿ. ಇಂದ ಮರು ವಿಚಾರಣೆ ಮಾಡಲು ಉಪವಿಭಾಗಾಧಿಕಾರಿಗಳಿಗೆ ಹಿಂತಿರುಗಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

**ಕರ್ನಾಟಕ ಭೂಸುಧಾರಣಾ ಕಾಯ್ದೆ, ನಿಯಮ-109ರಡಿಯಲ್ಲಿನ ಪ್ರಕರಣಗಳು**

ಮಾನ್ಯ ಜಿಲ್ಲಾಧಿಕರಿಗಳು ಮಾತನಾಡುತ್ತಾ ಜಿಲ್ಲೆಯಲ್ಲಿ 211 ಪ್ರಕರಣಗಳು ದಾಖಲಾಗಿದ್ದು, ಇದರ ಪೈಕಿ 192 ಪ್ರಕರಣಗಳಿಗೆ ಅನುಮತಿ ನೀಡಲಾಗಿರುತ್ತದೆ. ಬಾಕಿ ಉಳಿದ 19 ಪ್ರಕರಣಗಳಿಗೆ ತಹಶೀಲ್ದಾರರಿಂದ ಪರಿಶೀಲನಾ ವರದಿ ಬರಬೇಕಾಗಿರುವುದಾಗಿ ತಿಳಿಸಿದರು. ಇನ್ನು ವಿಲೇ ಮಾಡಲಾಗಿರುತ್ತದೆ. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಕೂಡಲೇ ಸಂಬಂಧಪಟ್ಟ ತಹಶೀಲ್ದಾರರು ಸದರಿ ಪ್ರಕರಣಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಸೂಚಿಸಿದರು.

**ಮಿನಿ ವಿಧಾನಸೌಧ ನಿರ್ಮಾಣ:-**

ಮಾನ್ಯ ಜಿಲ್ಲಾಧಿಕರಿಗಳು ಮಾತನಾಡುತ್ತಾ, ಕೊಪ್ಪಳ ಜಿಲ್ಲೆಯಲ್ಲಿ ನೂತನವಾಗಿ ಕನಕಗಿರಿ, ಕುಕನೂರು ಮತ್ತು ಕಾರಟಗಿ ತಾಲೂಕುಗಳನ್ನು ರಚಿಸಲಾಗಿದ್ದು, ಇನ್ನು ಮಿನಿ ವಿಧಾನಸೌಧ ನಿರ್ಮಾಣ ಮಾಡಲು ಜಮೀನು ಗುರುತಿಸುವ ಕಾರ್ಯ ಪ್ರಗತಿಯಲ್ಲಿರುವುದಾಗಿ ಸಭೆಯ ಗಮನಕ್ಕೆ ತಂದರುಯ. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಮಿನಿ ವಿಧಾನ ಸೌಧ ನಿರ್ಮಾಣ ಮಾಡಲು ಪಟ್ಟಣದ ಸಮೀಪ ಇರುವ ಸರ್ಕಾರಿ ಜಮೀನು ಗುರುತಿಸಿ, ಕಾಯ್ದಿರಿಸಲು ಹಾಗೂ ಸರ್ಕಾರಿ ಭೂಮಿ ಲಭ್ಯವಿಲ್ಲದ ಪಕ್ಷದಲ್ಲಿ ಖಾಸಗಿ ಭೂಮಿಯನ್ನು ಗುರುತಿಸಿ ಪ್ರಸ್ತಾವನೆಯನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸಲು ತಹಶೀಲ್ದಾರರುಗಳಿಗೆ ಸೂಚಿಸಿದರು.

**ಸಮಾಜ ಕಲ್ಯಾಣ ಇಲಾಖೆ:-**

**ಅರಣ್ಯ ಹಕ್ಕು:-**

ಈ ಹಿಂದೆ ಸ್ವೀಕೃತವಾದ ಒಟ್ಟು 106 ಅರ್ಜಿಗಳಲ್ಲಿ 09 ಅರ್ಜಿಗಳನ್ನು ಅನುಮೋದಿಸಲಾಗಿದ್ದು, ಈ ಪೈಕಿ 04 ಅರ್ಜಿಗಳಿಗೆ ಸಂಬಂಧಿಸಿದಂತೆ, ಹಕ್ಕು ಪತ್ರ ವಿತರಿಸಿದ್ದು, 05 ಅರ್ಜಿಗಳಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಸಲ್ಲಿಸಲು ತಿಳಿಸಲಾಗಿರುತ್ತದೆ. ಹಾಗೂ ತಿರಸ್ಕೃತ 97 ಅರ್ಜಿಗಳನ್ನು ಮರು ಪರಿಶೀಲಿಸಲು ಸೂಚಿಸಿಲಾಗಿದ್ದು, ಅರಣ್ಯ ಹಕ್ಕು ಸಮಿತಿಯಲ್ಲಿ ಬಾಕಿ ಇರುತ್ತವೆ ಎಂದು ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ ರವರು ತಿಳಿಸಿದರು, ಆಗ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಅರಣ್ಯ ಇಲಾಖೆ ಅಧಿಕಾರಿಗಳಿಗೆ ತ್ವರಿತವಾಗಿ ಅರ್ಜಿಗಳನ್ನು ವಿಲೇ ಮಾಡಲು ಸೂಚಿಸಿದರು.

**ವಸತಿ ನಿಲಯದ ಹೊರಸಂಪನ್ಮೂಲ ಸಿಬ್ಬಂದಿ ವೇತನ:-**

ಮಾನ್ಯ ಜಿಲ್ಲಾಧಿಕಾರಿಗಳು, ಕೊಪ್ಪಳ ರವರು ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳ ಹೊರಸಂಪನ್ಮೂಲ ಸಿಬ್ಬಂದಿಗಳಿಗೆ ಸುಮಾರು 6 ತಿಂಗಳುಗಳಿಂದ ವೇತನ ಪಾವತಿಯಾಗಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು. ಆಗ ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ ರವರು ಪರಿಶಿಷ್ಟ ಜಾತಿಯ ಮೆಟ್ರಿಕ್ ನಂತರದ ವಸತಿ ನಿಲಯಗಳ ನಿರ್ವಹಣೆ ಬಿಡುಗಡೆಯಾದ ಅನುದಾನದಲ್ಲಿ ಪ್ರಸಕ್ತ ಸಾಲಿಗೆ ಹೊರಸಂಪನ್ಮೂಲ ಸಿಬ್ಬಂದಿ ವೇತನಕ್ಕಾಗಿ ಆಬ್‌ಜೇಕ್ಟಿವ್ ಕೋಡ್ 034 ರಲ್ಲಿ ಯಾವುದೇ ಅನುದಾನ ನಿಗಧಿಯಾಗಿಲ್ಲವಾದ್ದರಿಂದ ಹಾಗೂ ಉಳಿದ ಲೆಕ್ಕ ಶಿರ್ಷಿಕೆಗಳಡಿ ಕಡಿಮೆ ಅನುದಾನ ನಿಗಧಿಯಾಗಿರುವುದರಿಂದ ಹೊರಸಂಪನ್ಮೂಲ ಸಿಬ್ಬಂದಿಗಳಿಗೆ ವೇತನ ಪಾವತಿ ಮಾಡಲು ತೊಂದರೆಯಾಗಿದ್ದು, ಅನುದಾನ ಬಿಡುಗಡೆಗಾಗಿ ಮಾನ್ಯ ಆಯುಕ್ತರು ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಆಯುಕ್ತರು ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಪತ್ರ ಸಂ:ಸಕನಿ/ಲೇಪಶಾ/ಎ-2/ಸಿಆರ್-4/ಹೆಅ /2019-20 ದಿ:25.11.2019ರ ಮೂಲಕ ಹೆಚ್ಚುವರಿ ಅನುದಾನ ಬಿಡುಗಡೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದ ಅನುದಾನದ ವಿವರ ಈ ಕೆಳಗಿನಂತೆ ಇರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

| ಕ್ರ ಸಂ | ಲೆಕ್ಕ ಶೀರ್ಷಿಕೆ | ಆಬ್‌ಜೇಕ್ಟಿವ್ ಕೋಡ್ | ವಿವರ | ಪ್ರಸ್ತಾಪಿತ ಹೆಚ್ಚುವರಿ ಅನುದಾನ ವಿವರ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | 2225-00-101-0-29 ಜಿ.ಪಂ | 034 | ಮೆಟ್ರಿಕ್ ನಂತರದ ವಸತಿ ನಿಲಯಗಳ ನಿರ್ವಹಣೆ | 153.85 |
| 2 | 2225-00-101-0-30 ಜಿ.ಪಂ | 034 | ಕಛೇರಿಗಳ ನಿರ್ವಹಣೆ | 5.50 |
| 3 | 2225-00-101-0-32 ಜಿ.ಪಂ | 034 | ವಸತಿ ಶಾಲೆಗಳ ನಿರ್ವಹಣೆ | 13.00 |
| 4 | 2225-00-101-0-61 ತಾ.ಪಂ | 034 | ಮೆಟ್ರಿಕ್ ಪೂರ್ವ ವಸತಿ ನಿಲಯಗಳ ನಿರ್ವಹಣೆ | 154.59 |
| | **ಒಟ್ಟು** | | | **326.94** |

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಈ ಬಗ್ಗೆ ಸರ್ಕಾರದ ಹಂತದಲ್ಲಿ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

**ಅಂಬೇಡ್ಕರ ಅಭಿವೃದ್ಧಿ ನಿಗಮ:-**

ಅಂಬೇಡ್ಕರ ಅಭಿವೃದ್ಧಿ ನಿಗಮದ ಅಧಿಕಾರಿಗಳು ಮಾತನಾಡುತ್ತಾ, ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ಕೋರೆಯಲಾದ ಭಾವಿಗಳ ಪೈಕಿ ಇನ್ನು 78 ಕೊಳವೆ ಬಾಳವೆ ಭಾವಿಗಳಿಗೆ ವಿದ್ಯುದ್ದೀಕರಣಕ್ಕೆ ಬಾಕಿ ಇರುವುದಾಗಿ ಸಭೆಯ ಗಮನಕ್ಕೆ ತಂದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಸದರಿ ಪ್ರಕರಣಗಳಲ್ಲಿ ಸಂಬಂಧಪಟ್ಟ ಜೇಸ್ಕಾಂ ಅಧಿಕಾರಿಗಳಿಗೆ ಕೂಡಲೇ ಪರಿಶೀಲಿಸಿ, ಕ್ರಮ ಕೈಗೊಂಡು ಪೂರ್ಣಗೊಳಿಸಲು ಸೂಚಿಸಿದರು.

ಅಂಬೇಡ್ಕರ ಅಭಿವೃದ್ಧಿ ನಿಗಮದ ಅಧಿಕಾರಿಗಳು ಮಾತನಾಡುತ್ತಾ, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಭೂ ಒಡೆತನ ಯೋಜನೆ ಅಡಿಯಲ್ಲಿ ಪರಿತ್ಯಕ್ತ ದೇವದಾಸಿ ಭೂರಹಿತ 18 ಕೃಷಿಕಾರ್ಮಿಕ ಮಹಿಳೆಯರಿಗೆ ಒಟ್ಟು 50 ಎಕರೆ ಜಮಿನನ್ನು ಖರೀದಿಗಾಗಿ ಅನುಮೋದನೆ ನೀಡಲಾಗಿದ್ದು ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು

ಸಲ್ಲಿಸಲು ಕ್ರಮವಹಿಸಲಾಗಿದೆ. ಅಲೆಮಾರಿ ಕೋಶದ ಭೂ ಒಡೆತನ ಯೋಜನೆಯಡಿಯಲ್ಲಿ ಮೊದಲ ಹಂತದಲ್ಲಿ ಕನಕಗಿರಿ ಹಾಗೂ ಗಂಗಾವತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಅಲೆಮಾರಿ ಜನಾಂಗದದವರಿಗೆ 280 ಎಕರೆ ನೀರಾವರಿ ಜಮಿನನ್ನು ಒಟ್ಟು: 280 ಫಲಾಪೇಕ್ಷಿಗಳಿಗೆ ಖರೀದಿಗಾಗಿ ಅನುಮೋದನೆ ನೀಡಲಾಗಿದ್ದು ಕೇಂದ್ರ ಕಛೇರಿಗೆ ಬೆಂಗಳೂರು ಇವರಿಂದ ಒಟ್ಟು 84 ಜನರಿಗೆ ಮಂಜೂರಾತಿ ಆದೇಶ ಬಂದಿರುತ್ತದೆ. ಜಮೀನು ನೋಂದಣಿ ಕಾರ್ಯ ಪ್ರಗತಿಯಲ್ಲಿದೆ. ವಾಲ್ಮೀಕಿ ನಿಗಮಕ್ಕೆ ಭೂ ಒಡೆತನ ಯೋಜನೆಯಡಿ ಪ್ರಸ್ತಾವನೆಗಳು ಬಂದಿದ್ದು ಜಮೀನು ಖರೀದಿಗೆ ಆಯ್ಕೆ ಸಮಿತಿ ಅನುಮೋದನೆ ಪಡೆದು ಜಮೀನು ಖರೀದಿಗೆ ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು.

**ಕೃಷಿ ಇಲಾಖೆ:-**

2019 ರ ಕೊಪ್ಪಳ ಜಿಲ್ಲೆಯ ಮಳೆ ಪರಸ್ಥಿತಿ ಅವಲೋಕಿಸಲಾಗಿ, 21-12-2019 ರ ಅಂತ್ಯಕ್ಕೆ ವಾಡಿಕೆ ಮಳೆಗೆ ಶೇ 599.00 ರಷ್ಟು ವಾಸ್ತವಿಕ ಮಳೆ 620.00 ಮೀ.ಮೀ ಆಗಿರುತ್ತದೆ. ಶೇ 4 ರಷ್ಟು ಮಳೆ ಹೆಚ್ಚು ಬಂದಿರುತ್ತದೆ. ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯ ವಾಡಿಕೆ ಮಳೆ 376.00 ಮೀ.ಮೀ ವಾಸ್ತವಿಕ ಮಳೆ 352.00 ಮೀ.ಮೀ ಆಗಿರುತ್ತದೆ. ಶೇ 6 ರಷ್ಟು ಮಳೆ ಕೊರತೆ ಕಂಡು ಬಂದಿರುತ್ತದೆ. ಹಿಂಗಾರು ಹಂಗಾಮಿನಲ್ಲಿ ವಾಡಿಕೆ ಮಳೆ 141.00 ಮೀ.ಮೀ ಯಿದ್ದು, ವಾಸ್ತವಿಕ ಮಳೆ 222.00 ಮೀ.ಮೀ ಆಗಿರುತ್ತದೆ. ಶೇ 57 ರಷ್ಟು ಮಳೆ ಹೆಚ್ಚು ಬಂದಿರುತ್ತದೆ.

ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯ ಬಿತ್ತನೆ ಗುರಿ 252500 ಹೆಕ್ಟರ್ ಇದ್ದು, 249485 ಹೆಕ್ಟರ್ ಪ್ರದೇಶ ಬಿತ್ತನೆಯಾಗಿರುತ್ತದೆ. ಶೇ 99% ಬಿತ್ತನೆಯಾಗಿರುತ್ತದೆ. ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯ ಬಿತ್ತನೆ ಗುರಿ 155200 ಹೆಕ್ಟರ್ ಇದ್ದು, 172058 ಹೆಕ್ಟರ್ ಪ್ರದೇಶ ಬಿತ್ತನೆಯಾಗಿರುತ್ತದೆ. 111% ಬಿತ್ತನೆಯಾಗಿದೆ. ಹಿಂಗಾರು ಹಂಗಾಮಿನಲ್ಲಿ ಒಳ್ಳೆಯ ಮಳೆಯಾಗಿದ್ದು, ಜಿಲ್ಲೆಯಲ್ಲಿ ಬೆಳೆಗಳು ಸಮೃದ್ಧವಾಗಿರುತ್ತವೆ.

ಭಾರತ ಸರ್ಕಾರವು " ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (PM-KISAN) " ಎಂಬ ಹೊಸ ಯೋಜನೆಯನ್ನು ಘೋಷಿಸಿದ್ದು, ಸದರಿ ಯೋಜನೆಯಡಿ ಭೂ ಒಡೆತನ ಹೊಂದಿರುವ ಪ್ರತಿ ರೈತ ಕುಟುಂಬಕ್ಕೆ 3 ಕಂತುಗಳಲ್ಲಿ ವಾರ್ಷಿಕವಾಗಿ ಒಟ್ಟು ರೂ 6,000/- ಗಳನ್ನು ನೀಡಲು ಉದ್ದೇಶಿಸಿದ್ದು, ಈ ಯೋಜನೆಯಡಿಯಲ್ಲಿ ಭೂಮಿ ಇರುವ ಎಲ್ಲಾ ರೈತರು (ಸಣ್ಣ, ಅತಿ ಸಣ್ಣ ಹಾಗೂ ದೊಡ್ಡ ರೈತರು) ಅರ್ಹರಾಗಿರುತ್ತಾರೆ. ಇದರ ಜೊತೆ ರಾಜ್ಯ ಸರ್ಕಾರದಿಂದ 4,000/- ಗಳನ್ನು ಹೆಚ್ಚುವರಿಯಾಗಿ ಪ್ರೋತ್ಸಾಹಧನ ನೀಡಲು ಘೋಷಿಸಿದೆ. ಜಿಲ್ಲೆಯ PMKISAN ಯೋಜನೆಯಡಿಯಲ್ಲಿ 155565 ರೈತರು ನೊಂದಣಿ ಮಾಡಿಕೊಂಡಿದ್ದು, ಇದರ ಪೈಕಿ ಕೇಂದ್ರ ಸರ್ಕಾರಕ್ಕೆ 147309 ಅರ್ಜಿಗಳು ಸಲ್ಲಿಕೆಯಾಗಿದ್ದು, 144875 ಫಲಾನುಭವಿಗಳಿಗೆ ಪ್ರೋತ್ಸಾಹಧನ ನೀಡಲಾಗಿದ್ದು, ಮೊದಲನೇ ಕಂತಿನಲ್ಲಿ 142398 ರೈತರಿಗೆ ಪ್ರೋತ್ಸಾಹಧನ ನೀಡಲಾಗಿದೆ. ಎರಡನೇ ಕಂತಿನಲ್ಲಿ 139961 ರೈತರಿಗೆ ಪ್ರೋತ್ಸಾಹಧನ ನೀಡಲಾಗಿದೆ ಹಾಗೂ ಮೂರನೇ ಕಂತಿನಲ್ಲಿ 116890 ರೈತರಿಗೆ ಪ್ರೋತ್ಸಾಹಧನ ನೀಡಲಾಗಿದೆ ಹಾಗೂ ರಾಜ್ಯ ಸರ್ಕಾರದ ಮೊದಲನೇ ಕಂತಿನಲ್ಲಿ 85890 ರೈತರಿಗೆ ಪ್ರೋತ್ಸಾಹಧನ ನೀಡಲಾಗಿದೆ.

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯಡಿ 2016-17 ನೇ ಸಾಲಿನಲ್ಲಿ ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯ ಒಟ್ಟು 112068 ಫಲಾನುಭವಿಗಳಿಗೆ ರೂ 13251.58/- ಲಕ್ಷ ಬೆಳೆವಿಮೆ ಮಂಜೂರಾಗಿದ್ದು, ಇನ್ನೂವರೆಗೂ 97383 ಫಲಾನುಭವಿಗಳಿಗೆ ರೂ 11836.04/- ಲಕ್ಷ ಪಾವತಿಯಾಗಿದ್ದು, ಉಳಿದ ಮೊತ್ತವನ್ನು ಜಮೆ ಮಾಡಲಾಗುತ್ತಿದೆ. 2017-18 ನೇ ಸಾಲಿನಲ್ಲಿ ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯ ಒಟ್ಟು 9300 ಫಲಾನುಭವಿಗಳಿಗೆ ರೂ 1214.37/-ಲಕ್ಷ ಬೆಳೆವಿಮೆ ಮಂಜೂರಾಗಿದ್ದು, ಇನ್ನೂವರೆಗೂ 8723 ಫಲಾನುಭವಿಗಳಿಗೆ ರೂ 1189.93/- ಲಕ್ಷ ಪಾವತಿಯಾಗಿದ್ದು, ಉಳಿದ ಮೊತ್ತವನ್ನು ಜಮೆ ಮಾಡಲಾಗುತ್ತಿದೆ. 2018-19 ನೇ ಸಾಲಿನಲ್ಲಿ ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯ ಒಟ್ಟು 90545 ಫಲಾನುಭವಿಗಳಿಗೆ ರೂ 23476.571/-ಲಕ್ಷ ಬೆಳೆವಿಮೆ ಮಂಜೂರಾಗಿದ್ದು, ಇನ್ನೂವರೆಗೂ 85941 ಫಲಾನುಭವಿಗಳಿಗೆ ರೂ 22315.86/- ಲಕ್ಷ ಪಾವತಿಯಾಗಿದ್ದು, ಉಳಿದ ಮೊತ್ತವು NEFT Reject ಆಗಿರುವುದರಿಂದ Verification ಮಾಡುವ ಹಂತದಲ್ಲಿದ್ದು, ಕ್ರಮವಾಗಿ ಉಳಿದ ಮೊತ್ತವನ್ನು ಜಮೆ ಮಾಡಲಾಗುವುದೆಂದು ಸಭೆಯ ಗಮನಕ್ಕೆ ತಂದರು.

**ಜಿಲ್ಲಾ ಪಂಚಾಯತ್:–**

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಕೊಪ್ಪಳ ಮಾತನಾಡುತ್ತಾ, ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿಯಲ್ಲಿ LOB (Left Out of Baseline) ನಲ್ಲಿ ಗುರುತಿಸಲಾದ ವೈಯಕ್ತಿಕ ಶೌಚಾಲಯಗಳನ್ನು ಹೊಂದದೆ ಇರುವ ಕುಟುಂಬಗಳ ಸಂಖ್ಯೆ 7566 ಇದ್ದು ಈಗಾಗಲೇ 5282 ಫಲಾನುಭವಿಗಳಿಗೆ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲಾಗಿದ್ದು, ಇದರಲ್ಲಿ ಕೆಲವು ತಾಂತ್ರಿಕ ತೊಂದರೆ, ಇತರೆ ಸಮಸೆಯಿಂದಾಗಿ 1605 ಫಲಾನುಭವಿಗಳನ್ನು Delete ಮಾಡಲು ರಾಜ್ಯ ಸರಕಾರಕ್ಕೆ ಪತ್ರ ಬರೆಯಲಾಗಿದ್ದು ಇನ್ನು ಬಾಕಿ ಉಳಿದಿರುವ 679 ಫಲಾನುಭವಿಗಳಿಗೆ ಈ ತಿಂಗಳ ಅಂತ್ಯಕ್ಕೆ ಪ್ರಗತಿ ಸಾಧಿಸಲಾವುದು ಎಂದು ತಿಳಿಸಿದರು.

ಮುಂದವರೆದು ಜಿಲ್ಲೆಯಲ್ಲಿ ಬರುವ ಪ್ರತಿಯೊಂದು ಗ್ರಾಮ ಪಂಚಾಯತಗಳಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕ ನಿಮಾಣಕ್ಕೆ ಕೇಂದ್ರ ಹಾಗೂ ರಾಜ್ಯ ಸರಕಾರದ ಮಾರ್ಗಸೂಚಿ ಅನುಗುಣವಾಗಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಲಭ್ಯವಿರುವ ಸರಕಾರಿ ಸ್ಥಳವನ್ನು ಗುರುತಿಸಲಾಗಿದ್ದು, ತಹಸೀಲ್ದಾರ ರವರಿಗೆ ಸ್ಥಳ ಹಸ್ತಾಂತರ ಕುರಿತು ಪತ್ರಗಳನ್ನು ಬರೆಯಲಾಗಿದೆ. ಇನ್ನು ಕೆಲವು ಉಪ ವಿಭಾಗಾಧಿಕಾರಿಗಳು (ಎ.ಸಿ) ಅಧಿಕಾರಿಗಳ ಕಛೇರಿಯಲ್ಲಿ ಇರುವುದಾಗಿ ತಿಳಿಸಲಾಯಿತು.

ಮಾನ್ಯ ಸಭಾ ಅಧ್ಯಕ್ಷರು ಮಾತನಾಡುತ್ತಾ, ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿಯಲ್ಲಿ ಬರುವ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಲಭ್ಯವಿರುವ ಸರಕಾರಿ ಸ್ಥಳವನ್ನು ಪರಿಶೀಲನೆ ಮಾಡಿ ಬೇಗನೆ ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ನೀಡಲು ತಹಸೀಲ್ದಾರ ರವರಿಗೆ ಸೂಚಿಸಿದರು.

**ಶುದ್ಧ ಕುಡಿಯುವ ನೀರಿನ ಘಟಕ :**

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಜಿಲ್ಲೆಯಲ್ಲಿ ಇರುವ ಶುದ್ಧ ಕುಡಿಯುವ ನೀರಿನ ಘಟಕಗಳು ಎಷ್ಟು ಇರುತ್ತವೆ. ಇದರಲ್ಲಿ ಕಾರ್ಯನಿರ್ವಹಿಸುತ್ತುರುವ ಘಟಕಗಳು ಎಷ್ಟು, ಮತ್ತು ಕಾರ್ಯನಿರ್ವಹಿಸದೇ ಇರುವ ಘಟಕಗಳು ಎಷ್ಟು ಎಂದು ಕೇಳಲಾಗಿ, ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳು ಸಭೆಗೆ ಹಾಜರಾಗದೇ ಇರುವುದರಿಂದ ಸದರಿ ವಿಷಯವಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಖುದ್ದಾಗಿ ಸ್ಥಳ ಪರಿಶೀಲಿಸಿ ಸಕ್ತ ಕ್ರಮ ಕೈಗೊಂಡು ವರದಿಯನ್ನು ಸಲ್ಲಿಸಲು ಸೂಚಿಸಿದರು.

**<u>ಜಿಲ್ಲಾ ನಗರಾಭಿವೃದ್ಧಿ ಕೋಶ</u> :–**

ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡುತ್ತಾ, ಇಂದಿರಾ ಕ್ಯಾಂಟಿನ್ 2 ಪೂರ್ಣಗೊಂಡಿವೆ. ಕೊಪ್ಪಳ ನಗರಸಭೆ ಹಾಗೂ ಯಲಬುರ್ಗಾ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಈಗಾಗಲೇ ಇಂದಿರಾ ಕ್ಯಾಂಟಿನ್ ಆಹಾರ ಸರಬರಾಜುನ್ನು ಪ್ರಾರಂಭಿಸಲಾಗಿದೆ. ಗಂಗಾವತಿಯಲ್ಲಿ 1 ಇಂದಿರಾ ಕ್ಯಾಂಟಿನ್ ಕಟ್ಟಡ ನಿರ್ಮಾಣ ಕಾರ್ಯವು ಮುಕ್ತಾಯಗೊಂಡಿರುತ್ತದೆ. ಅಡುಗೆ ಕೋಣೆಗೆ ಮೂಲಭೂತ ಸೌಕರ್ಯವನ್ನು ಒದಗಿಸುವ ಕಾರ್ಯವು ಬಾಕಿ ಇರುತ್ತದೆ. ಹಾಗೂ ಗಂಗಾವತಿ ನಗರದ ವ್ಯಾಪ್ತಿಯಲ್ಲಿ ಇನ್ನೊಂದು ಕ್ಯಾಂಟಿನ್ ಕಟ್ಟಡ ಸ್ಥಳವನ್ನು ಗುರುತಿಸಬೇಕಾಗಿದೆ. ಕುಷ್ಟಗಿ ಪುರಸಭೆ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟಿನ್ ಕಟ್ಟಡ ನಿರ್ಮಾಣಕ್ಕಾಗಿ ಕೆ.ಎಸ್.ಆರ್.ಟಿ.ಸಿ ಬಸ್ಸ್ ನಿಲ್ದಾಣದ ಸ್ಥಳದಲ್ಲಿ ನಿವೇಶನವನ್ನು ಕಾಯ್ದಿರಿಸಿ ಅಧಿಕೃತ ಜ್ಞಾಪನವನ್ನು ಹೊರಡಿಸಲಾಗಿದ್ದು ಕಟ್ಟಡ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಈಗಾಗಲೇ ಮಾನ್ಯ ಪೌರಾಡಳಿತ ನಿರ್ದೇಶನಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

**ಭೂ ಮಾಪನ ಶಾಖೆ:–**

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಜಿಲ್ಲೆಯಲ್ಲಿ 1–ಡಿ.ಡಿ.ಎಲ್.ಆರ್. ಮತ್ತು ಎ.ಡಿ.ಎಲ್.ಆರ್. ಹುದ್ದೆಗಳು ಖಾಲಿ ಇದ್ದು, ಇದರಿಂದ ಸರ್ವೆ ಕಾರ್ಯದಲ್ಲಿ ಸಾರ್ವಜನಿಕರಿಗೆ ತುಂಬಾ

ತೊಂದರೆಯಾಗುತ್ತಿದ್ದು, ಕೂಡಲೇ ಸರ್ಕಾರದ ಮಟ್ಟದಲ್ಲಿ ಹುದ್ದೆಗಳನ್ನು ಭರ್ತಿ ಮಾಡಲು ವಿನಂತಿಸಿದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು.

ಕೊನೆಯಲ್ಲಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ದಿನಾಂಕ:23.12.2019
ಸ್ಥಳ : ಕೊಪ್ಪಳ

[ಶ್ರೀ ಎನ್ ಮಂಜುನಾಥ ಪ್ರಸಾದ್,]
**ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,**
**ಕಂದಾಯ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ**
**ಕಾರ್ಯದರ್ಶಿಗಳು**

ಪ್ರತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಗೆ,**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ.
2. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಕೊಪ್ಪಳ.
3. ಉಪವಿಭಾಗಾಧಿಕಾರಿಗಳು, ಕೊಪ್ಪಳ
4. ಭೂದಾಖಲೆಗಳ ಉಪನಿರ್ದೇಶಕರು, ಕೊಪ್ಪಳ
5. ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ
6. ಅರಣ್ಯ ಉಪ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ) ಕೊಪ್ಪಳ.
7. ಅರಣ್ಯ ಉಪ ಸಂರಕ್ಷಣಾಧಿಕಾರಿಗಳು (ಸಾಮಾಜಿಕ) ಕೊಪ್ಪಳ.
8. ಉಪ ನಿರ್ದೇಶಕರು, ಕೃಷಿ ಇಲಾಖೆ, ಕೊಪ್ಪಳ
9. ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ.
10. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಕೊಪ್ಪಳ
11. ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಕೊಪ್ಪಳ
12. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕೊಪ್ಪಳ
13. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೊಪ್ಪಳ
14. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕೊಪ್ಪಳ
15. ಉಪ ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕೊಪ್ಪಳ
16. ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ಕೊಪ್ಪಳ
17. ಜಿಲ್ಲಾ ವಾರ್ತಾಧಿಕಾರಿಗಳು, ಕೊಪ್ಪಳ
18. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಕೊಪ್ಪಳ
19. ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ
20. ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆ, ಕೊಪ್ಪಳ
21. ಜಿಲ್ಲಾ ವ್ಯವಸ್ಥಾಪಕರು, ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಕೊಪ್ಪಳ
22. ಜಿಲ್ಲಾ ವ್ಯವಸ್ಥಾಪಕರು, ದಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಕೊಪ್ಪಳ
23. ಜಿಲ್ಲಾ ವ್ಯವಸ್ಥಾಪಕರು, ಡಾ: ಅಂಬೇಡ್ಕರ್ ಅಭಿವೃದ್ಧಿ ನಿಗಮ ಕೊಪ್ಪಳ
24. ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕೊಪ್ಪಳ
25. ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾಜ್.ಇಂ. ಕೊಪ್ಪಳ
26. ಕಾರ್ಯನಿರ್ವಾಹಕ ಅಭಿಯಂತರರು, ಜೆಸ್ಕಾಂ, ಕೊಪ್ಪಳ
27. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಕೊಪ್ಪಳ
28. ತಹಶೀಲ್ದಾರ, ಕೊಪ್ಪಳ/ಯಲಬುರ್ಗಾ/ಕುಷ್ಟಗಿ/ಗಂಗಾವತಿ/ಕುಕನೂರು/ಕಾರಟಗಿ/ ಕನಕಗಿರಿ

29. ಪೌರಾಯುಕ್ತರು, ನಗರಸಭೆ, ಕೊಪ್ಪಳ
30. ಕಾರ್ಯನಿರ್ವಾಹಕ ಅಧಿಕಾರಿಗಳು, ತಾ.ಪಂ. ಕೊಪ್ಪಳ/ಯಲಬುರ್ಗಾ/ಕುಷ್ಟಗಿ/ಗಂಗಾವತಿ
31. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕೊಪ್ಪಳ
32. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಕೊಪ್ಪಳ
33. ವಿಭಾಗೀಯ ನಿಯಂತ್ರಕರು, ಎನ್.ಈ.ಕೆ.ಎಸ್.ಆರ್.ಟಿ.ಸಿ ಕೊಪ್ಪಳ
34. ಕಾರ್ಯನಿರ್ವಾಹಕ ಅಭಿಯಂತರರು, ಕೆ.ಹೆಚ್.ಬಿ, ಕೊಪ್ಪಳ
35. ಸಹಾಯಕ ನಿರ್ದೇಶಕರು, ಪಿಂಚಣಿ ಮತ್ತು ಸಣ್ಣ ಉಳಿತಾಯ ಇಲಾಖೆ, ಕೊಪ್ಪಳ.
36. ಕಾರ್ಯನಿರ್ವಾಹಕ ಇಂಜಿನೀಯರರು, ಯೋಜನಾ ಕೋಶ, (ಪಿ.ಎಂ.ಜಿ.ಎಸ್.ವೈ) ಕೊಪ್ಪಳ
37. ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕೊಪ್ಪಳ
38. ಉಪನಿರ್ದೇಶಕರು, ರೇಷ್ಮೆ ಇಲಾಖೆ, ಕೊಪ್ಪಳ.
39. ಜಿಲ್ಲಾ ಆಯುಷ್ ಅಧಿಕಾರಿಗಳು, ಕೊಪ್ಪಳ
40. ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಜಿ.ಪಂ. ಕೊಪ್ಪಳ
41. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ, ಕೊಪ್ಪಳ.
42. ಸಹಾಯಕ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ.
43. ಮೀನುಗಾರಿಕೆ ಸಹಾಯಕ ನಿರ್ದೇಶಕರು, ಕೊಪ್ಪಳ
44. ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಕೊಪ್ಪಳ.
45. ಉಪನಿರ್ದೇಶಕರು, ಖಾದಿ ಗ್ರಾಮೋದ್ಯೋಗ ಇಲಾಖೆ, ಜಿ.ಪಂ. ಕೊಪ್ಪಳ.
46. ಜಿಲ್ಲಾ ಗ್ರಂಥಾಲಯ ಅಧಿಕಾರಿಗಳು, ಕೊಪ್ಪಳ
47. ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು, ಕೊಪ್ಪಳ
48. ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಕೊಪ್ಪಳ
49. ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕೊಪ್ಪಳ
50. ಜಿಲ್ಲಾ ಅಧಿಕಾರಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಕೊಪ್ಪಳ
51. ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಕೊಪ್ಪಳ
52. ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ, ಕೊಪ್ಪಳ
53. ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಕೊಪ್ಪಳ
54. ಕೌಶಲ್ಯ ಅಭಿವೃದ್ಧಿ, ಉಧ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕೊಪ್ಪಳ
55. ಮುಖ್ಯ ಅಭಿಯಂತರರ ಕಛೇರಿ, ಕನೀನಿನಿ, ನೀರಾವರಿ ಕೇಂದ್ರ ವಲಯ, ಮುನಿರಾಬಾದ
56. ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಇಲಾಖೆ, ಕುಷ್ಟಗಿ
57. ಜಿಲ್ಲಾ ನೊಂದಣಾಧಿಕಾರಿಗಳು, ಕೊಪ್ಪಳ
58. ಜಿಲ್ಲಾ ವಕ್ಫ್ ಅಧಿಕಾರಿಗಳು, ಕೊಪ್ಪಳ
59. ಉಪ ನಿಬಂಧಕರು, ಸಹಕಾರ ಸಂಘಗಳು, ಕೊಪ್ಪಳ
60. ಲೀಡ್ ಬ್ಯಾಂಕ ಮ್ಯಾನೇಜರ ಎಸ್.ಬಿ.ಐ. ಕೊಪ್ಪಳ
61. ಜಿಲ್ಲಾಧಿಕಾರಿಗಳ ಆಪ್ತಶಾಖೆಗೆ ಮಾಹಿತಿಗಾಗಿ.

Email :- dpardeputysecretary@gmail.com.

i) Swarnalatha - DS. DPAR-AR.

DPARAR/2/ESP/2019-DPARAR US WS A-DPAR AR SEC

## ನಮೂನೆ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರಮ ಸಂಖ್ಯೆ | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | Koppal |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | N. Manjunatha Prasad |
| 3 | ಪ್ರವಾಸ ಕೈಗೊಂಡ ದಿನಾಂಕ | 23.12.2019 |
| | | |
| A | **ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ** | |
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | ಸಭೆಯ ನಡವಳಿಗಳು ಲಗತ್ತಿಸಿದೆ. |
| b) | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | ಸಭೆಯ ನಡವಳಿಗಳು ಲಗತ್ತಿಸಿದೆ. |
| B) | **ಕ್ಷೇತ್ರ ವೀಕ್ಷಣೆ** | ಶೂ |

| ಕ್ರಮ ಸಂಖ್ಯೆ | ಭೇಟಿ ನೀಡಿದ ತಾಲ್ಲೂಕು/ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| - | - | - | - |

| | | |
|---|---|---|
| C) | **ಇತರೆ ವಿಷಯಗಳು** | - |

**ದಿನಾಂಕ 23.12.2019 ರಂದು ಬೆಳಗ್ಗೆ 9.30 ಗಂಟೆಗೆ ಶ್ರೀ ಮಂಜುನಾಥ ಪ್ರಸಾದ್ ಎನ್. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕೊಪ್ಪಳ ಜಿಲ್ಲಾ ಪಂಚಾಯಿತ್ ಜಿ.ಹೆಚ್ ಪಾಟೀಲ್ ಸಭಾಂಗಣದಲ್ಲಿ ಜರುಗಿದ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯ ನಡುವಳಿಗಳು**

---

ಸಭೆಯಲ್ಲಿ ಉಪಸ್ಥಿತರಿದ್ದವರು: ಹಾಜರಾತಿ ವಹಿಯ ಪ್ರಕಾರ

ದಿನಾಂಕ:23.12.2019 ರಂದು ಬೆಳಿಗೆ 9.30 ಗಂಟೆಗೆ ಕೊಪ್ಪಳ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕೊಪ್ಪಳ ಜಿಲ್ಲೆಯ ಪ್ರಗತಿ ಪರಿಶೀಲನೆ ಸಭೆಯನ್ನು ಮಾನ್ಯ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದಶಿಗಳು ರವರ ಅಧ್ಯಕ್ಷತೆಯಲ್ಲಿ ಜರುಗಿಸಲಾಯಿತು. ಅಪರ ಜಿಲ್ಲಾಧಿಕಾರಿಗಳು ಇವರು ಸಭೆಗೆ ಆಗಮಿಸಿದ ಮಾನ್ಯ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳುರವರನ್ನು ಸ್ವಾಗತಿಸಿದರು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಹಾಜರಿದ್ದ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ಮಾನ್ಯ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಭೆಗೆ ಹಾಜರಾಗಿದ್ದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಜಿಲ್ಲೆಯಲ್ಲಿ ಇತ್ತೀಚನೆ ಆಗಿರುವ ಅತೀವೃಷ್ಟಿ ಹಾನಿಯ ಬಗ್ಗೆ ಈ ಕೆಳಗಿನಂತೆ ವಿವರಿಸಲಾಯಿತು

3/1/2019

ಕಂದಾಯ ಇಲಾಖೆ (ಅತೀವೃಷ್ಠಿ):-

ಅಪರ ಜಿಲ್ಲಾಧಿಕಾರಿಗಳು ಮಾತನಾಡಿ ಆಗಷ್ಟ-2019ರ ಮಾಹೆಯಲ್ಲಿ ಕೊಪ್ಪಳ ಜಿಲ್ಲೆಯ ಮುನಿರಾಬಾದ್ ಗ್ರಾಮದಲ್ಲಿ ತುಂಗಭದ್ರ ಜಲಾಶಯ ಗೇಟ್ ಒಡೆದು ಸುಮಾರು 150 ಮನೆಗಳಿಗೆ ನೀರು ನುಗ್ಗಿರುತ್ತದೆ ಸದರಿ ಮನೆಯವರಿಗೆ ಸರ್ಕಾರದ ನಿರ್ದೇಶನದ ಪ್ರಕಾರ ಪ್ರತಿ ಮನೆಗೆ ರೂ. 10000/- ರಂತೆ ಒಟ್ಟು 15.00 ಲಕ್ಷ ಪರಿಹಾರವನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ ಮತ್ತು ಮೂರು ಪಕ್ಕಾ ಮನೆಗಳು ಹಾನಿಯಾಗಿರುವುದರಿಂದ ಸರ್ಕಾರದ ನಿರ್ದೇಶನದ ಪ್ರಕಾರ ಪ್ರತಿ ಮನೆಗೆ ರೂ. 50000/- ರಂತೆ ಒಟ್ಟು 1.50 ಲಕ್ಷ ಪರಿಹಾರವನ್ನು ವಿತರಿಸಲಾಗಿದೆ ಬೆಳೆಹಾನಿಗೆ ಸಂಬಂಧಿಸಿದಂತೆ ಪರಿಹಾರ ತಂತ್ರಾಂಶದಲ್ಲಿ ಡಾಟಾ ಎಂಟ್ರಿ ಮಾಡಲಾಗಿದೆ ಇದುವರೆದೂ 15.00 ಲಕ್ಷ ಪರಿಹಾರ ಸಂಬಧಪಟ್ಟ ಫಳಾನುಭವಿಗಳಿಗೆ ಆರ್.ಟಿ.ಜಿ.ಎಸ್ ಮೂಲಕ ಸರ್ಕಾರ ನೇರವಾಗಿ ಪರಿಹಾರವನ್ನು ನೀಡಿರುತ್ತಾರೆ ಎಂದು ಸಭೆಯಲ್ಲಿ ತಿಳಿಸಿದರು

ಮುಂದುವರೆದು ಆಗಷ್ಟ-2019 ರಿಂದ ಅಕ್ಟೋಬರ್ -2019ರ ವರೆಗೆ ಜಿಲ್ಲೆಯಲ್ಲಿ ಸುರಿದ ಮಳೆಯಿಮದ ಒಟ್ಟು 1377 ಮನೆಗಳು ಹಾನಿಯಾಗಿದ್ದು, ಸದರಿ ಮನೆಗಳಿಗೆ ಎನ್.ಡಿ.ಆರ್.ಎಫ್ ನಿರ್ದೇಶನದ ಪ್ರಕಾರ ಒಟ್ಟು 51.14 ಲಕ್ಷ ಪರಿಹಾರವನ್ನು ಸಂಬಂಧಪಟ್ಟ ಫಲಾನುಭವಿಗಳ ಖಾತೆಗೆ ಆರ್.ಟಿ.ಜಿ.ಎಸ್ ಮೂಲಕ ವಿತರಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು

ಜಿಲ್ಲೆಯಲ್ಲಿ ಸುರಿದ ಮಳೆಯಿಂದ ಒಟ್ಟು 5 ಮಾನವ ಜೀವಹಾನಿಯಾಗಿದ್ದು, ಸದರಿಯವರಿಗೆ ತಲಾ 5.00 ಲಕ್ಷ ದಂತೆ ಒಟ್ಟು 25.00 ಲಕ್ಷ ಪರಿಹಾರವನ್ನು ವಿತರಿಸಲಾಗಿದೆ ಮತ್ತು 6 ಜಾನುವಾರುಗಳು ಮೃತಪಟ್ಟಿದ್ದು, ರೂ. 18.000/- ಸಾವಿರ ಪರಿಹಾರವನ್ನು ವಿತರಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಅಕ್ಟೋಬರ್-2019ರ ಮಾಹೆಯಲ್ಲಿ ಸುರಿದ ಮಳೆಯಿಂದ ಜಿಲ್ಲೆಯಲ್ಲಿ 79.85 ಹೆಕ್ಟರ್ ಕೃಷಿ ಬೆಳೆ ಮತ್ತು 587.70 ಹೆಕ್ಟರ್ ತೋಟಗಾರಿಕೆ ಬೆಳೆ ಹಾನಿಯಾಗಿರುತ್ತದೆ ಫಲಾನುಭವಿಗಳಿಗೆ ಪರಿಹಾರ ನೀಡುವ ಕುರಿತು ದಿನಾಂಕ. 11-11-2019 ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು

ಅದೇ ರೀತಿ 13 ಶಾಲಾ ಕೋಠಡಿಗಳು ಸಂಪೂರ್ಣ ಹಾನಿಯಾಗಿರುತ್ತವೆ ಅದಕ್ಕೆ ರೂ. 1.33 ಕೋಟಿ ಅನುದಾನದ ಅವಶ್ಯಕತೆ ಇರುತ್ತದೆ ಎಂದು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಕೊಪ್ಪಳ ಇವರು

2019-20ನೇ ಸಾಲಿನಲ್ಲಿ ನೈಸರ್ಗಿಕ ವಿಕೋಪದಿಂದ ಹಾನಿಗೊಳಗಾದ ಕಾಮಗಾರಿಗಳಿಗೆ ಸರ್ಕಾರದಿಂದ ರೂ.3.55 ಕೋಟಿ ಅನುದಾನ ನಿಗದಿಪಡಿಸಲಾಗಿದ್ದು, ಸದರಿ ಅನುದಾನಕ್ಕೆ ತಕ್ಕಂತೆ ಗಂಗಾವತಿ. ಯಲಬುರ್ಗಾ ಮತ್ತು ಕೊಪ್ಪಳ ತಾಲೂಕುಗಳಿಗೆ ಸಂಬಂಧಿಸಿದಂತೆ ರಸ್ತೆ, ಸಿ.ಡಿ, ಸೇತುವೆ ದುರಸ್ತಿ ಕಾಮಗಾರಿಗಳಿಗೆ ಅನುಮೋದನೆ ಪಡೆದು. ಟೆಂಡರ್ ಕರೆಯಲಾಗಿರುತ್ತದೆ ಎಂದು ಸಭೆಗೆ ಮಾಹಿತಿ ನೀಡಿದರು.

ಪಂ.ರಾ.ಇಂ. ಇಲಾಖೆ:-

2019-20ನೇ ಸಾಲಿನಲ್ಲಿ ನೈಸರ್ಗಿಕ ವಿಕೋಪದಿಂದ ಹಾನಿಗೊಳಗಾದ ಕಾಮಗಾರಿಗಳಿಗೆ ಸರ್ಕಾರದಿಂದ ರೂ.21.15 ಕೋಟಿ ಅನುದಾನ ನಿಗದಿಪಡಿಸಲಾಗಿದ್ದು, ಸರ್ಕಾರಕ್ಕೆ ಕ್ರಿಯಾ ಯೋಜನೆ ಸಲ್ಲಿಸುವ ಕುರಿತು ಮಾಹಿತಿಯನ್ನು ನೀಡಲು ಮಾನ್ಯ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ತಿಳಿಸಿದರು. ಕಾರ್ಯನಿರ್ವಾಹಕ ಅಧಿಕಾರಿಗಳು ಪಂ.ರಾ.,ಇಂ. ವಿಭಾಗ ಕೊಪ್ಪಳ ಇವರು ಮಾತನಾಡುತ್ತಾ, ಈಗಾಗಲೇ ಕೊಪ್ಪಳ ಹೊರತುಪಡಿಸಿ, ಕನಕಗಿರಿ, ಗಂಗಾವತಿ, ಕುಷ್ಟಗಿ ವಿಧಾನಸಭಾ ಕ್ಷೇತ್ರವಾರು ಕ್ರಿಯಾ ಯೋಜನೆಯನ್ನು ತಯಾರಿಸಿ ಮುಖ್ಯ ಇಂಜೀನಿಯರರು, ಪಂ.ರಾ.ಇಂ. ಇಲಾಖೆ, ಬೆಂಗಳೂರು ಇವರಿಗೆ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೊಪ್ಪಳ ಶಾಸಕರು ಇನ್ನು ಕ್ರಿಯಾ ಯೋಜನೆ ನೀಡಿರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಕೂಡಲೇ ಮಾನ್ಯ ಶಾಸಕರಿಗೆ ಖುದ್ದಾಗಿ ಸಂಪರ್ಕಿಸಿ ಕ್ರಿಯಾ ಯೋಜನೆ ರೂಪಿಸಿ, ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲು ಸೂಚಿಸಿದರು.

ಸಾಮಾಜಿಕ ಭದ್ರತೆ ಯೋಜನೆ:-

ಮಾನ್ಯ ಅಪರ ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಜಿಲ್ಲೆಯಲ್ಲಿ ವೃಧ್ಯಾಪ್ಯ ವೇತನ 34714, ವಿಧವಾ ವೇತನ 54806, ಅಂಗವಿಕಲ ವೇತನ 43555, ಮನಸ್ವಿನಿ 3179, ಮೈತ್ರಿ 28, ಸಂಧ್ಯಾ ಸುರಕ್ಷಾ 87373 ಮತ್ತು ಮೃತ ರೈತ ಪತ್ನಿಗೆ ವಿಧವಾ ವೇತನ ಪಾವತಿ 83 ಪ್ರಕರಣಗಳಿಗೆ ಮಂಜೂರು ಮಾಡಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಸದರಿ ಯೋಜನೆಗಳಲ್ಲಿ ಆಧಾರ ಸೀಡಿಂಗ, ಕೆ-1 ರಿಂದ ಕೆ-2 ವರ್ಗಾವಣೆ ಮತ್ತು ತಾತ್ಕಾಲಿಕ ಸ್ಥಗಿತಗೊಂಡಿರುವ ಪ್ರಕರಣಗಳಲ್ಲಿ ಕಡ್ಡಾಯವಾಗಿ ಶೇ100% ಆಧಾರ ಜೋಡಣೆ ಮತ್ತು ಭಾಗಶಃ ಪರಿಶೀಲನೆ ನಡೆಸಿ ಕ್ರಮವಹಿಸುವುದು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು 60 ವರ್ಷ ವಯೋಮಿತಿ ಹೊಂದಿದ ಫಲಾನುಭವಿಗಳನ್ನು, ಗುರುತಿಸಿ, ಸದರಿ ಫಲಾನುಭವಿಗಳಿಂದ ದಾಖಲೆಗಳನ್ನು ಪಡೆದು ನೇರವಾಗಿ ವೃಧ್ಯಾಪ್ಯ ವೇತನ ಮಂಜೂರಿ ಮಾಡಲು ಸೂಚಿಸಲಾಯಿತು

ರುದ್ರ ಭೂಮಿ:-

ಮಾನ್ಯ ಅಪರ ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಜಿಲ್ಲೆಯಲ್ಲಿ ಈಗಾಗಲೇ ಪ.ಜಾತಿ ಮತ್ತು ಪ.ಪಂ ಜಾತಿಯವರಿಗೆ ಸ್ಮಾಶಾನ ಭೂಮಿ ಒದಗಿಸಲು ಬಿಡುಗಡೆಮಾಡಿದ ಅನುದಾನದಲ್ಲಿ 13 ಗ್ರಾಮಗಳಿಗೆ ಖಾಸಗಿ ಜಮೀನನ್ನು ಖರೀದಿಸಿ ಮಂಜೂರು ನೀಡಲಾಗಿರುತ್ತದೆ ಹಾಗೂ ಜಿಲ್ಲೆಯಲ್ಲಿ ಒಟ್ಟು 301 ಗ್ರಾಮಗಳಲ್ಲಿ ರುದ್ರಭೂಮಿ ಅವಶ್ಯಕತೆ ಇರುವುದಾಗಿ ಸಭೆಯ ಗಮನಕ್ಕೆ ತಂದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಸಾರ್ವಜನಿಕ ರುದ್ರಭೂಮಿಗಾಗಿ ಸರ್ಕಾರಿ ಜಮೀನು ಲಭ್ಯವಿದ್ದಲ್ಲಿ ಕಾಯ್ದಿರಿಸುವುದು ಹಾಗೂ ಸರ್ಕಾರಿ ಜಮೀನು ಇಲ್ಲದ ಗ್ರಾಮಗಳಲ್ಲಿ ಖಾಸಗಿ ಜಮೀನು ಖರಿದಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದರು.

94ಸಿ, 94, ಸಿಸಿ ಮತ್ತು 94 ಎ & ಬಿ :-

ವಸತಿ ನಿಲಯದ ಹೊರಸಂಪನ್ಮೂಲ ಸಿಬ್ಬಂದಿ ವೇತನ -

ಮಾನ್ಯ ಜಿಲ್ಲಾಧಿಕಾರಿಗಳು ಕೊಪ್ಪಳ ರವರು ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳ ಹೊರಸಂಪನ್ಮೂಲ ಸಿಬ್ಬಂದಿಗಳಿಗೆ ಸುಮಾರು 5 ತಿಂಗಳುಗಳಿಂದ ವೇತನ ಪಾವತಿಯಾಗಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು. ಆಗ ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ ರವರು ಪರಿಶಿಷ್ಟ ಜಾತಿಯ ಮೆಟ್ರಿಕ್ ನಂತರದ ವಸತಿ ನಿಲಯಗಳ ನಿರ್ವಹಣೆ ಬಿಡುಗಡೆಯಾದ ಅನುದಾನದಲ್ಲಿ ಪ್ರಸಕ್ತ ಸಾಲಿಗೆ ಹೊರಸಂಪನ್ಮೂಲ ಸಿಬ್ಬಂದಿ ವೇತನಕ್ಕಾಗಿ ಆಬ್‌ಜೆಕ್ಟಿವ್ ಕೋಡ್ 034 ರಲ್ಲಿ ಯಾವುದೇ ಅನುದಾನ ನಿಗದಿಯಾಗಿಲ್ಲವಾದ್ದರಿಂದ ಹಾಗೂ ಉಳಿದ ಲೆಕ್ಕ ಶೀರ್ಷಿಕೆಗಳಡಿ ಕಡಿಮೆ ಅನುದಾನ ನಿಗಧಿಯಾಗಿರುವುದರಿಂದ ಹೊರಸಂಪನ್ಮೂಲ ಸಿಬ್ಬಂದಿಗಳಿಗೆ ವೇತನ ಪಾವತಿ ಮಾಡಲು ತೊಂದರೆಯಾಗಿದ್ದು, ಅನುದಾನ ಬಿಡುಗಡೆಗಾಗಿ ಮಾನ್ಯ ಆಯುಕ್ತರು ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಆಯುಕ್ತರು ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಪತ್ರ ಸಂ:ಸಕಇ/ಲೆಪಶಾ/ಎ-2/ಸಿಆರ್-4/ಹೆಅ /2019-20 ದಿ:25.11.2019ರ ಮೂಲಕ ಹೆಚ್ಚುವರಿ ಅನುದಾನ ಬಿಡುಗಡೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದ ಅನುದಾನದ ವಿವರ ಈ ಕೆಳಗಿನಂತೆ ಇರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

| ಕ್ರ ಸಂ | ಲೆಕ್ಕ ಶೀರ್ಷಿಕೆ | ಆಬ್‌ಜೆಕ್ಟಿವ್ ಕೋಡ್ | ವಿವರ | ಪ್ರಸ್ತಾಪಿತ ಹೆಚ್ಚುವರಿ ಅನುದಾನ ವಿವರ (ರೂ ಲಕ್ಷಗಳಲ್ಲಿ) |
|---|---|---|---|---|
| 1 | 2225-00-101-0-29 ಜಿ.ಪಂ | 034 | ಮೆಟ್ರಿಕ್ ನಂತರದ ವಸತಿ ನಿಲಯಗಳ ನಿರ್ವಹಣೆ | 153.85 |
| 2 | 2225-00-101-0-30 ಜಿ.ಪಂ | 034 | ಕಚೇರಿಗಳ ನಿರ್ವಹಣೆ | 5.50 |
| 3 | 2225-00-101-0-32 ಜಿ.ಪಂ | 034 | ವಸತಿ ಶಾಲೆಗಳ ನಿರ್ವಹಣೆ | 13.00 |
| 4 | 2225-00-101-0-61 ತಾ.ಪಂ | 034 | ಮೆಟ್ರಿಕ್ ಪೂರ್ವ ವಸತಿ ನಿಲಯಗಳ ನಿರ್ವಹಣೆ | 154.59 |
| | ಒಟ್ಟು | | | 326.94 |

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಈ ಬಗ್ಗೆ ಸರ್ಕಾರದ ಹಂತದಲ್ಲಿ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

ಅಂಬೇಡ್ಕರ ಅಭಿವೃದ್ಧಿ ನಿಗಮ:-

ಅಂಬೇಡ್ಕರ ಅಭಿವೃದ್ಧಿ ನಿಗಮದ ಅಧಿಕಾರಿಗಳು ಮಾತನಾಡುತ್ತಾ, ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ಕೊರೆಯಲಾದ ಬಾವಿಗಳ ಪೈಕಿ ಇನ್ನು 78 ಕೊಳವೆ ಬಾಳವೆ ಬಾವಿಗಳಿಗೆ ವಿದ್ಯುದ್ದೀಕರಣಕ್ಕೆ ಬಾಕಿ ಇರುವುದಾಗಿ ಸಭೆಯ ಗಮನಕ್ಕೆ ತಂದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ ಸದರಿ ಪ್ರಕರಣಗಳಲ್ಲಿ ಸಂಬಂಧಪಟ್ಟ ಜೆಸ್ಕಾಂ ಅಧಿಕಾರಿಗಳಿಗೆ ಕೂಡಲೇ ಪರಿಶೀಲಿಸಿ, ಕ್ರಮ ಕೈಗೊಂಡು ಪೂರ್ಣಗೊಳಿಸಲು ಸೂಚಿಸಿದರು.

ಅಂಬೇಡ್ಕರ ಅಭಿವೃದ್ಧಿ ನಿಗಮದ ಅಧಿಕಾರಿಗಳು ಮಾತನಾಡುತ್ತಾ, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಭೂ ಒಡೆತನ ಯೋಜನೆ ಅಡಿಯಲ್ಲಿ ಪರಿತ್ಯಕ್ತ ದೇವದಾಸಿ ಭೂರಹಿತ 18 ಕೃಷಿಕಾರ್ಮಿಕ ಮಹಿಳೆಯರಿಗೆ ಒಟ್ಟು 50 ಎಕರೆ ಜಮೀನನ್ನು ಖರೀದಿಗಾಗಿ ಅನುಮೋದನೆ ನೀಡಲಾಗಿದ್ದು ಕೇಂದ್ರ ಕಚೇರಿಗೆ ಪ್ರಸ್ತಾವನೆಯನ್ನು

ಜಿಲ್ಲಾ ಪಂಚಾಯತ್:-

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಕೊಪ್ಪಳ ಮಾತನಾಡುತ್ತಾ, ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿಯಲ್ಲಿ LOB (Left Out of Baseline) ನಲ್ಲಿ ಗುರುತಿಸಲಾದ ವೈಯಕ್ತಿಕ ಶೌಚಾಲಯಗಳನ್ನು ಹೊಂದದೆ ಇರುವ ಕುಟುಂಬಗಳ ಸಂಖ್ಯೆ 7566 ಇದ್ದು ಈಗಾಗಲೇ 5282 ಫಲಾನುಭವಿಗಳಿಗೆ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲಾಗಿದ್ದು, ಇದರಲ್ಲಿ ಕೆಲವು ತಾಂತ್ರಿಕ ತೊಂದರೆ, ಇತರೆ ಸಮಸೆಯಿಂದಾಗಿ 1605 ಫಲಾನುಭವಿಗಳನ್ನು Delete ಮಾಡಲು ರಾಜ್ಯ ಸರಕಾರಕ್ಕೆ ಪತ್ರ ಬರೆಯಲಾಗಿದ್ದು ಇನ್ನು ಬಾಕಿ ಉಳಿದಿರುವ 679 ಫಲಾನುಭವಿಗಳಿಗೆ ಈ ತಿಂಗಳ ಅಂತ್ಯಕ್ಕೆ ಪ್ರಗತಿ ಸಾಧಿಸಲಾವುದು ಎಂದು ತಿಳಿಸಿದರು.

ಮುಂದವರೆದು ಜಿಲ್ಲೆಯಲ್ಲಿ ಬರುವ ಪ್ರತಿಯೊಂದು ಗ್ರಾಮ ಪಂಚಾಯತಗಳಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣಕ್ಕೆ ಕೇಂದ್ರ ಹಾಗೂ ರಾಜ್ಯ ಸರಕಾರದ ಮಾರ್ಗಸೂಚಿ ಅನುಗುಣವಾಗಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಲಭ್ಯವಿರುವ ಸರಕಾರಿ ಸ್ಥಳವನ್ನು ಗುರುತಿಸಲಾಗಿದ್ದು, ತಹಸೀಲ್ದಾರ ರವರಿಗೆ ಸ್ಥಳ ಹಸ್ತಾಂತರ ಕುರಿತು ಪತ್ರಗಳನ್ನು ಬರೆಯಲಾಗಿದೆ. ಇನ್ನು ಕೆಲವು ಉಪ ವಿಭಾಗಾಧಿಕಾರಿಗಳು (ಎ.ಸಿ) ಅಧಿಕಾರಿಗಳ ಕಛೇರಿಯಲ್ಲಿ ಇರುವುದಾಗಿ ತಿಳಿಸಲಾಯಿತು.

ಮಾನ್ಯ ಸಭಾ ಅಧ್ಯಕ್ಷರು ಮಾತನಾಡುತ್ತಾ, ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿಯಲ್ಲಿ ಬರುವ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಲಭ್ಯವಿರುವ ಸರಕಾರಿ ಸ್ಥಳವನ್ನು ಪರಿಶೀಲನೆ ಮಾಡಿ ಬೇಗನ ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ನೀಡಲು ತಹಸೀಲ್ದಾರ ರವರಿಗೆ ಸೂಚಿಸಿದರು.

ಶುದ್ಧ ಕುಡಿಯುವ ನೀರಿನ ಘಟಕ :

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಜಿಲ್ಲೆಯಲ್ಲಿ ಇರುವ ಶುದ್ಧ ಕುಡಿಯುವ ನೀರಿನ ಘಟಕಗಳು ಎಷ್ಟು ಇರುತ್ತವೆ. ಇದರಲ್ಲಿ ಕಾರ್ಯನಿರ್ವಹಿಸುತ್ತುರುವ ಘಟಕಗಳು ಎಷ್ಟು, ಮತ್ತು ಕಾರ್ಯನಿರ್ವಹಿಸದೇ ಇರುವ ಘಟಕಗಳು ಎಷ್ಟು ಎಂದು ಕೇಳಲಾಗಿ, ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳು ಸಭೆಗೆ ಹಾಜರಾಗದೇ ಇರುವುದರಿಂದ ಸದರಿ ವಿಷಯವಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಖುದ್ದಾಗಿ ಸ್ಥಳ ಪರಿಶೀಲಿಸಿ ಸಕ್ತ ಕ್ರಮ ಕೈಗೊಂಡು ವರದಿಯನ್ನು ಸಲ್ಲಿಸಲು ಸೂಚಿಸಿದರು.

ಜಿಲ್ಲಾ ನಗರಾಭಿವೃದ್ಧಿ ಕೋಶ :-

ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡುತ್ತಾ, ಇಂದಿರಾ ಕ್ಯಾಂಟಿನ್ 2 ಪೂರ್ಣಗೊಂಡಿವೆ ಕೊಪ್ಪಳ ನಗರಸಭೆ ಹಾಗೂ ಯಲಬುರ್ಗಾ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಈಗಾಗಲೇ ಇಂದಿರಾ ಕ್ಯಾಂಟಿನ್ ಆಹಾರ ಸರಬರಾಜುನ್ನು ಪ್ರಾರಂಭಿಸಲಾಗಿದೆ. ಗಂಗಾವತಿಯಲ್ಲಿ 1 ಇಂದಿರಾ ಕ್ಯಾಂಟಿನ್ ಕಟ್ಟಡ ನಿರ್ಮಾಣ ಕಾರ್ಯವು ಮುಕ್ತಾಯಗೊಂಡಿರುತ್ತದೆ. ಅಡುಗೆ ಕೋಣೆಗೆ ಮೂಲಭೂತ ಸೌಕರ್ಯವನ್ನು ಒದಗಿಸುವ ಕಾರ್ಯವು ಬಾಕಿ ಇರುತ್ತದೆ. ಹಾಗೂ ಗಂಗಾವತಿ ನಗರದ ವ್ಯಾಪ್ತಿಯಲ್ಲಿ ಇನ್ನೊಂದು ಕ್ಯಾಂಟಿನ್ ಕಟ್ಟಡ ಸ್ಥಳವನ್ನು ಗುರುತಿಸಬೇಕಾಗಿದೆ. ಕುಷ್ಟಗಿ ಪುರಸಭೆ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟಿನ್ ಕಟ್ಟಡ ನಿರ್ಮಾಣಕ್ಕಾಗಿ ಕೆ.ಎಸ್.ಆರ್.ಟಿ.ಸಿ ಬಸ್ಸ್ ನಿಲ್ದಾಣದ ಸ್ಥಳದಲ್ಲಿ ನಿವೇಶನವನ್ನು ಕಾಯ್ದಿರಿಸಿ ಅಧಿಕೃತ ಜ್ಞಾಪನವನ್ನು ಹೊರಡಿಸಲಾಗಿದ್ದು ಕಟ್ಟಡ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಈಗಾಗಲೇ ಮಾನ್ಯ ಪೌರಾಡಳಿತ ನಿರ್ದೇಶನಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಭೂ ಮಾಪನ ಶಾಖೆ:-

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಜಿಲ್ಲೆಯಲ್ಲಿ 1-ಡಿ.ಡಿ.ಎಲ್.ಆರ್ ಮತ್ತು ಎ.ಡಿ.ಎಲ್.ಆರ್ ಹುದ್ದೆಗಳು ಖಾಲಿ ಇದ್ದು, ಇದರಿಂದ ಸರ್ವೆ ಕಾರ್ಯದಲ್ಲಿ ಸಾರ್ವಜನಿಕರಿಗೆ ತುಂಬಾ

29. ಪೌರಾಯುಕ್ತರು, ನಗರಸಭೆ, ಕೊಪ್ಪಳ

30. ಕಾರ್ಯನಿರ್ವಾಹಕ ಅಧಿಕಾರಿಗಳು, ತಾ.ಪಂ ಕೊಪ್ಪಳ/ಯಲಬುರ್ಗಾ/ಕುಷ್ಟಗಿ/ಗಂಗಾವತಿ

31. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕೊಪ್ಪಳ

32. ಆಯುಕ್ತರು, ನಗರಾಬಿವೃದ್ಧಿ ಪ್ರಾಧಿಕಾರ, ಕೊಪ್ಪಳ

33. ವಿಬಾಗೀಯ ನಿಯಂತ್ರಕರು, ಎನ್.ಈ.ಕೆ.ಎಸ್.ಆರ್.ಟಿ.ಸಿ ಕೊಪ್ಪಳ

34. ಕಾರ್ಯನಿರ್ವಾಹಕ ಅಭಿಯಂತರರು, ಕೆ.ಹೆಚ್.ಬಿ, ಕೊಪ್ಪಳ

35. ಸಹಾಯಕ ನಿರ್ದೇಶಕರು, ಪಿಂಚಣಿ ಮತ್ತು ಸಣ್ಣ ಉಳಿತಾಯ ಇಲಾಖೆ, ಕೊಪ್ಪಳ.

36. ಕಾರ್ಯನಿರ್ವಾಹಕ ಇಂಜನೀಯರರು, ಯೋಜನಾ ಕೋಶ, (ಪಿ.ಎಂ.ಜಿ.ಎಸ್.ವೈ) ಕೊಪ್ಪಳ

37. ಕಾರ್ಯನಿರ್ವಾಹಕ ಅಭಿಯಂತರರು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕೊಪ್ಪಳ

38. ಉಪನಿರ್ದೇಶಕರು, ರೇಷ್ಮೆ ಇಲಾಖೆ, ಕೊಪ್ಪಳ

39. ಜಿಲ್ಲಾ ಆಯುಷ್ ಅಧಿಕಾರಿಗಳು, ಕೊಪ್ಪಳ

40. ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಜಿ.ಪಂ. ಕೊಪ್ಪಳ

41. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ, ಕೊಪ್ಪಳ.

42 ಸಹಾಯಕ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ

43. ಮೀನುಗಾರಿಕೆ ಸಹಾಯಕ ನಿರ್ದೇಶಕರು, ಕೊಪ್ಪಳ

44. ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಕೊಪ್ಪಳ.

45. ಉಪನಿರ್ದೇಶಕರು, ಖಾದಿ ಗ್ರಾಮೋದ್ಯೋಗ ಇಲಾಖೆ, ಜಿ.ಪಂ. ಕೊಪ್ಪಳ

46. ಜಿಲ್ಲಾ ಗ್ರಂಥಾಲಯ ಅಧಿಕಾರಿಗಳು, ಕೊಪ್ಪಳ

47. ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು, ಕೊಪ್ಪಳ

48. ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಕೊಪ್ಪಳ

49. ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕೊಪ್ಪಳ

50. ಜಿಲ್ಲಾ ಅಧಿಕಾರಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಕೊಪ್ಪಳ

51. ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಕೊಪ್ಪಳ

52 ಕಾರ್ಯನಿರ್ವಾಹಕ ಅಬಿಯಂತರರು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ, ಕೊಪ್ಪಳ

53 ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಕೊಪ್ಪಳ

54 ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕೊಪ್ಪಳ

55. ಮುಖ್ಯ ಅಭಿಯಂತರರ ಕಛೇರಿ, ಕನೀನಿನಿ, ನೀರಾವರಿ ಕೇಂದ್ರ ವಲಯ, ಮುನಿರಾಬಾದ

56. ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ಇಲಾಖೆ, ಕುಷ್ಟಗಿ

57. ಜಿಲ್ಲಾ ನೊಂದಣಾಧಿಕಾರಿಗಳು, ಕೊಪ್ಪಳ

58. ಜಿಲ್ಲಾ ವಕ್ಫ್ ಅಧಿಕಾರಿಗಳು, ಕೊಪ್ಪಳ

59. ಉಪ ನಿಬಂಧಕರು, ಸಹಕಾರ ಸಂಘಗಳು, ಕೊಪ್ಪಳ

60 ಲೀಡ್ ಬ್ಯಾಂಕ ಮ್ಯಾನೇಜರ ಎಸ್.ಬಿ.ಐ. ಕೊಪ್ಪಳ

61 ಜಿಲ್ಲಾಧಿಕಾರಿಗಳ ಆಪ್ತಶಾಖೆಗೆ ಮಾಹಿತಿಗಾಗಿ

RO 02 SAMITI 2020

**ದಿನಾಂಕ : 7.12.2019 ರಂದು ಶ್ರೀ ಎಂ.ಎಸ್. ಶ್ರೀಕರ್, ಭಾ.ಆ.ಸೇ., ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.**

1. **ಪ್ರಕೃತಿ ವಿಕೋಪ:-**

- ಬಳ್ಳಾರಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ 366 ಮಿ.ಮೀ. ಸರಾಸರಿ ಮಳೆ ಎದುರು 387 ಮಿ.ಮೀ. ಮಳೆಯಾಗಿರುತ್ತದೆ ಮತ್ತು ಹಿಂಗಾರು ಹಂಗಾಮಿನಲ್ಲಿ (06-012-2019 ರವರೆಗೆ) 144 ಮಿ.ಮೀ. ಸರಾಸರಿ ಮಳೆ ಎದುರು 232 ಮಿ.ಮೀ. ಮಳೆಯಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.
- ಮುಂಗಾರು ಹಂಗಾಮಿನಲ್ಲಿ 449180 ಹೆಕ್ಟರ್ ಗುರಿ ಎದುರು 424464 ಹೆಕ್ಟರ್ ಶೇ.94.5 ಬಿತ್ತನೆ ಆಗಿರುತ್ತದೆ. ಹಿಂಗಾರು ಹಂಗಾಮಿನಲ್ಲಿ 173865 ಹೆಕ್ಟರ್ ಗುರಿ ಎದುರು 76053 ಹೆಕ್ಟರ್ ಶೇ.43.74 ಬಿತ್ತನೆ ಆಗಿರುತ್ತದೆ ಎಂದು ಸಭೆಗೆ ತಿಳಿಸಿದರು.
- ಪ್ರಸ್ತುತ ಜಿಲ್ಲೆಯಲ್ಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳ ಕೊರತೆ ಇರುವುದಿಲ್ಲ ಎಂದು ಸಭೆಗೆ ತಿಳಿಸಿದರು.
- ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 91 ಟಿಎನ್‌ಆರ್.2019 ದಿ:14-08-2019 ರಲ್ಲಿ ಪ್ರವಾಹದಿಂದ ಭಾದಿತ ಸಂತ್ರಸ್ಥರ ಬಟ್ಟೆ-ಬರೆ ಹಾಗೂ ದಿನಬಳಕೆ ವಸ್ತುಗಳಿಗೆ ಪ್ರತಿ ಕುಟುಂಬಕ್ಕೆ ರೂ.10000/- ರಂತೆ ಪರಿಹಾರ ನೀಡಲು ಆದೇಶಿಸಿದ್ದು, ಆಗಸ್ಟ್ 2019ರ ತಿಂಗಳಲ್ಲಿ ಜಿಲ್ಲೆಯಲ್ಲಿ ಒಟ್ಟು 804 ಕುಟುಂಬಗಳಿಗೆ ಒಟ್ಟು ರೂ.80.40 ಲಕ್ಷ ಪರಿಹಾರ ವಿತರಣೆ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.
- ಆಗಸ್ಟ್ 2019ರ ತಿಂಗಳಲ್ಲಿ ಸಿರುಗುಪ್ಪ ತಾಲ್ಲೂಕಿನಲ್ಲಿ ಒಟ್ಟು 05 ಜೀವ ಹಾನಿ ಸಂಭವಿಸಿದ್ದು, ರೂ.5.00 ಲಕ್ಷದಂತೆ ಒಟ್ಟು ರೂ.25.00 ಲಕ್ಷ ಪರಿಹಾರ ಸಂತ್ರಸ್ಥರಿಗೆ ವಿತರಣೆ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.
- ಆಗಸ್ಟ್ 2019ರ ತಿಂಗಳಲ್ಲಿ ಪ್ರವಾಹ ಪೀಡಿತ ಹಡಗಲಿ ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿ ಒಟ್ಟು 1017 ಮನೆಗಳು ಹಾನಿಯಾಗಿದ್ದು, ಸರ್ಕಾರದ ನಿರ್ದೇಶನದಂತೆ ಒಟ್ಟು ರೂ.554.50 ಲಕ್ಷ ಅನುದಾನ ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು. ("ಸಿ" ವರ್ಗದ ಮನೆಗಳಿಗೆ ರೂ.50000 ಮತ್ತು ("ಎ ಮತ್ತು ಬಿ" ವರ್ಗದ ಮನೆಗಳಿಗೆ ರೂ.500000).
- ಸೆಪ್ಟಂಬರ್ ಮತ್ತು ಅಕ್ಟೋಬರ್ 2019ರ ತಿಂಗಳಲ್ಲಿ ಪ್ರವಾಹದಿಂದ ಹಡಗಲಿ, ಹರಪನಹಳ್ಳಿ, ಸಿರುಗುಪ್ಪ, ಬಳ್ಳಾರಿ ಮತ್ತು ಹ.ಬೊ.ಹಳ್ಳಿ ತಾಲ್ಲೂಕಿನಲ್ಲಿ 1523 ಮನೆಗಳು ಹಾನಿಯಾಗಿದ್ದು ಇವುಗಳಿಗೆ ಪರಿಹಾರ ನೀಡಲು ರೂ.7.75 ಕೋಟಿ ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

- ಸೆಪ್ಟಂಬರ್ ಮತ್ತು ಅಕ್ಟೋಬರ್ 2019ರ ತಿಂಗಳಲ್ಲಿ ಪ್ರವಾಹದಿಂದ ಜಿಲ್ಲೆಯಲ್ಲಿ ಸಂಭವಿಸಿದ ಬೆಳೆ ನಷ್ಟದ ಕುರಿತು ಜಂಟಿ ಸಮೀಕ್ಷೆ ಪೂರ್ಣಗೊಳಿಸಿ ಸರ್ಕಾರಕ್ಕೆ ಜಂಟಿ ಸಮೀಕ್ಷೆ ವರದಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.
- ಆಗಸ್ಟ್ 2019ರ ತಿಂಗಳಲ್ಲಿ ಪ್ರವಾಹದಿಂದ ಹಡಗಲಿ ಮತ್ತು ಹರಪನಹಳ್ಳಿ ತಾಲ್ಲೂಕಿನಲ್ಲಿ ಸಂಭವಿಸಿದ್ದ ನಷ್ಟವಾಗಿದ್ದ ಬೆಳೆಗಳ ಮಾಹಿತಿಯನ್ನು ಪರಿಹರ ತಂತ್ರಾಂಶದಲ್ಲಿ ಡೇಟಾ ಎಂಟ್ರಿ ಮಾಡುವ ಕಾರ್ಯ ಪೂರ್ಣಗೊಳಿಸಲಾಗಿದೆ ಮತ್ತು ಈಗಾಗಲೇ 2057 ರೈತರುಗಳಿಗೆ ರೂ.3.94 ಕೋಟಿ ಪರಿಹಾರ ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು.
- ಆಗಸ್ಟ್ 2019ರ ತಿಂಗಳಲ್ಲಿ ಹಡಗಲಿ ತಾಲ್ಲೂಕಿನಲ್ಲಿ ಸಂಭವಿಸಿದ ಪ್ರವಾಹದಿಂದ ಮುಳುಗಡೆ ಸ್ಥಿತಿಯಲ್ಲಿದ್ದ ಹಡಗಲಿ ತಾಲ್ಲೂಕಿನ ಬ್ಯಾಲಹುಣಸಿ, ಅಂಗೂರು, ಮದಲಗಟ್ಟ ಮತ್ತು ಕುರುವತ್ತಿ ಗ್ರಾಮಗಳನ್ನು ಸ್ಥಳಾಂತರಿಸುವ ಕುರಿತು ಮತ್ತು ಸಿರುಗುಪ್ಪ ತಾಲ್ಲೂಕಿನ ಹಚ್ಚೊಳ್ಳಿ ನವ ಗ್ರಾಮದಲ್ಲಿ ಆಸರೆ ಯೋಜನೆಯಡಿ ನಿರ್ಮಿಸಲಾದ ಮನೆಗಳಿಗೆ ಬೇಕಾಗುವ ಮೂಲಭೂತ ಸೌಕರ್ಯಗಳ ದುರಸ್ಥಿ ಪಡಿಸಲು ಬೇಕಾಗುವ ಅನುದಾನ ಕುರಿತು ಪರಿಶೀಲನೆ ಮಾಡಿ ವರದಿ ನೀಡಲು ಸಿ.ಪಿ.ಓ. ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು. ಸದರಿ ಸಮಿತಿಯು ಸ್ಥಳಾಂತರಿಸಲು ಮತ್ತು ಮೂಲ ಭೂತ ಸೌಕರ್ಯಗಳನ್ನು ಕಲ್ಪಿಸಲು ಸವಿವರ ಅಂದಾಜು ಪಟ್ಟಿಗಳನ್ನು ತಯಾರಿಸಿ ಸಲ್ಲಿಸಿದ್ದು ಈಗಾಗಲೇ ಈ ಕಾರ್ಯಾಲಯದ ಪತ್ರ ಸಂ.ಕಂ.ಪ್ರವಿ.04-19-20 ದಿ:25-09-19 ರಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.
- 2018-19 ನೇ ಸಾಲಿನಲ್ಲಿ ಹಿಂಗಾರು ಹಂಗಾಮಿನಲ್ಲಿ ಬರ ಪರಿಸ್ಥಿತಿಯಿಂದ ನಷ್ಟವಾಗಿದ್ದ ಬೆಳೆಗಳ ಮಾಹಿತಿಯನ್ನು ಪರಿಹರ ತಂತ್ರಾಂಶದಲ್ಲಿ ಡೇಟಾ ಎಂಟ್ರಿ ಮಾಡುವ ಕಾರ್ಯ ಪೂರ್ಣಗೊಳಿಸಲಾಗಿದೆ ಎಂದು ತಿಳಿಸಿದರು. ಈಗಾಗಲೇ 29703 ರೈತರುಗಳಿಗೆ ರೂ.20.96 ಕೋಟಿ ಪರಿಹಾರ ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು.

## 2. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆ:-

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಜಿಲ್ಲೆಯ ಹಿಂದುಳಿದ ಪ್ರದೇಶದ ತಾಲ್ಲೂಕುಗಳಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಪ್ರಮುಖವಾಗಿ ಶಿಕ್ಷಣ, ಆರೋಗ್ಯ, ರಸ್ತೆ ಸಂಪರ್ಕ, ಕುಡಿಯುವ ನೀರು, ಶೌಚಾಲಯ ಮತ್ತು ಮೂಲಭೂತ ಸೌಕರ್ಯಗಳ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 2013-14ನೇ ಸಾಲಿನಿಂದ 2019-20 ಸಾಲಿನವರೆಗೆ ಮೈಕ್ರೋ ಮತ್ತು ಮ್ಯಾಕ್ರೋ ಯೋಜನೆ ಅಡಿಯಲ್ಲಿ ಈ ಕೆಳಕಂಡಂತೆ ಬಳ್ಳಾರಿ ಜಿಲ್ಲೆಗೆ ಒಟ್ಟು ರೂ.809.39 ಕೋಟಿ ಅನುದಾನ ಹಂಚಿಕೆಯಾಗಿದ್ದು, ಇಲ್ಲಿಯವರೆಗೆ ಒಟ್ಟು 3176

ಕಾಮಗಾರಿಗಳನ್ನು ಕೈಗೆತ್ತಿಕೊಂಡು ಈ ಪೈಕಿ 2317 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಪೂರ್ಣಗೊಂಡ ಕಾಮಗಾರಿಗಳಿಗೆ ಒಟ್ಟು ರೂ.473.92 ಕೋಟಿ ಅನುದಾನ ವೆಚ್ಚ ಮಾಡಲಾಗಿರುತ್ತದೆ. ವಿವರಗಳು ಈ ಕೆಳಗಿನಂತೆ ಇರುತ್ತದೆ.

| ಕ್ರ.ಸಂ | ವಲಯ | ಮಂಡಳಿಯಿಂದ ಅನುಮೋದನೆಯಾದ ಕಾಮಗಾರಿಗಳ ಸಂಖ್ಯೆ | ಪೂರ್ಣ ಗೊಳಿಸಿದ ಕಾಮಾಗರಿಗಳ ಸಂಖ್ಯೆ | ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ | ಪ್ರಾರಂಭಿಸದೇ ಇರುವ ಕಾಮಗಾರಿಗಳ ಸಂಖ್ಯೆ | ಮಂಡಳಿಯಿಂದ ಜಿಲ್ಲೆಗೆ ಅನುಮೋದಿಸಿದ ಮೊತ್ತ (ರೂ.ಲಕ್ಷಗಳಲ್ಲಿ) | ವೆಚ್ಚ ಮಾಡಿದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|---|---|---|
| 1 | ಮೈಕ್ರೋ & ಮ್ಯಾಕ್ರೋ | 3176 | 2317 | 627 | 232 | 80939 | 47392 |

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 2019-20 ಸಾಲಿನಲ್ಲಿ ಮೈಕ್ರೋ ಮತ್ತು ಮ್ಯಾಕ್ರೋ ಯೋಜನೆ ಅಡಿಯಲ್ಲಿ ಜಿಲ್ಲೆಗೆ ಒಟ್ಟು 214.74 ಕೋಟಿ ಅನುದಾನ ಹಂಚಿಕೆಯಾಗಿದ್ದು ಈ ಪೈಕಿ ಒಟ್ಟು 211.39 ಕೋಟಿ ಅನುದಾನಕ್ಕೆ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಮಂಡಳಿಗೆ ಸಲ್ಲಿಸಲಾಗಿರುತ್ತದೆ. ಅದರಂತೆ ಮಂಡಳಿಯಿಂದ ಸದರಿ ಮೊತ್ತಕ್ಕೆ ಒಟ್ಟು 512 ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದಿಸಿ ಕಳುಹಿಸಿರುತ್ತಾರೆ. ಅನುಮೋದಿತ ಕಾಮಗಾರಿಗಳ ಕ್ರಿಯಾ ಯೋಜನಗೆ ನಿಗಧಿಪಡಿಸಿದ ಅನುಷ್ಠಾನಾಧಿಕಾರಿಗಳು ಅಂದಾಜು ಪಟ್ಟಿಗಳನ್ನು ತಯಾರಿಸಿ ಆಡಳಿತಾತ್ಮಕ ಮಂಜೂರಾತಿಗಾಗಿ ಸಲ್ಲಿಸಲಾಗಿದ್ದು, ಸದರಿ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ. ಸಂಬಂಧಿಸಿದ ಅನುಷ್ಠಾನಾಧಿಕಾರಿಗಳು ಆಡಳಿತಾತ್ಮಕ ಅನುಮೋದನೆ ನೀಡಿದ ಕಾಮಗಾರಿಗಳಿಗೆ ಅನುಷ್ಠಾನಿಸಲು ನಿಯಮಾನುಸಾರ ಪ್ರಕಾರ ಅಗತ್ಯ ಟೆಂಡರ್ ಕ್ರಮವನ್ನು ವಹಿಸುತ್ತಿದ್ದಾರೆ.

**ಭೌತಿಕ ಪ್ರಗತಿ ವರದಿ :**

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳಲ್ಲಿ 2019-20ನೇ ಸಾಲಿನ ಅಕ್ಟೋಬರ್-2019ರ ಮಾಹೆಗೆ ಮಂಡಳಿಯಿಂದ ಬಳ್ಳಾರಿ ಜಿಲ್ಲೆಗೆ ಒಟ್ಟು 89 ಕಾಮಗಾರಿಗಳು ಭೌತಿಕ ಗುರಿ ನಿಗಧಿಪಡಿಸಲಾಗಿದ್ದು ಈ ಪೈಕಿ ಒಟ್ಟು 77 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು ಒಟ್ಟು ಶೇ.87% ಸಂಚಿತ ಗುರಿ ಸಾಧಿಸಿ ಕಲಬುರಗಿ ವಿಭಾಗ ಮಟ್ಟದಲ್ಲಿ ಬಳ್ಳಾರಿ ಜಿಲ್ಲೆಯು ಮೊದಲ ಸ್ಥಾನದಲ್ಲಿರುತ್ತದೆ.

**ಆರ್ಥಿಕ ಪ್ರಗತಿ ವರದಿ :**

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳಿಗೆ 2019-20ನೇ ಸಾಲಿನ ಅಕ್ಟೋಬರ್-2019ರ ಮಾಹೆಗೆ ಮಂಡಳಿಯಿಂದ ಬಳ್ಳಾರಿ ಜಿಲ್ಲೆಗೆ ಒಟ್ಟು 29.21 ಕೋಟಿ ಆರ್ಥಿಕ ಗುರಿ ನಿಗಧಿಪಡಿಸಲಾಗಿದ್ದು ಈ ಪೈಕಿ ಒಟ್ಟು 25.24 ಕೋಟಿ ಅನುದಾನ ವೆಚ್ಚ ಮಾಡಿ ಒಟ್ಟು ಶೇ.86.41% ರಷ್ಟು ಆರ್ಥಿಕ ಗುರಿ ಸಾಧಿಸಿ ಕಲಬುರಗಿ ವಿಭಾಗ ಮಟ್ಟದಲ್ಲಿ ಬಳ್ಳಾರಿ ಜಿಲ್ಲೆಯು ಎರಡನೇ ಸ್ಥಾನದಲ್ಲಿರುತ್ತದೆ.

**3. ಜಿಲ್ಲಾ ಖನಿಜ ಪ್ರತಿಷ್ಠಾನ, ಬಳ್ಳಾರಿ:-**

ಜಿಲ್ಲಾ ಖನಿಜ ಪ್ರತಿಷ್ಠಾನ ಬಳ್ಳಾರಿಯಲ್ಲಿ ವರ್ಷವಾರು ಹಂಚಿಕೆಯಾದ ಅನುದಾನಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ 4 ಹಂತದಲ್ಲಿ ಕ್ರಿಯಾ ಯೋಜನೆ ಮಂಜೂರಿಯಾಗಿರುತ್ತದೆ.

2016-17, 2017-18 ನೇ ಸಾಲಿಗಾಗಿ ಹಂತ-1.

2017–18 ನೇ ಸಾಲಿಗಾಗಿ ಹಂತ–2 ಹಾಗೂ

2019–20 ರಿಂದ 2021–22 ನೇ ಸಾಲಿಗಾಗಿ ಹಂತ–3 ಮತ್ತು ಹಂತ–4 ಮೇಲಿನಂತ ಕ್ರಿಯಾ ಯೋಜನೆಗಳು ಮಂಜೂರಿಯಾಗಿದ್ದು, ವಿವರ ಕೆಳಗಿನಂತಿದೆ.

- **ಕ್ರಿಯಾ ಯೋಜನೆಯ ಹಂತ–1 (2016–17 ಮತ್ತು 2017–18) :**

ಜಿಲ್ಲಾ ಖನಿಜ ಪ್ರತಿಷ್ಠಾನ ಬಳ್ಳಾರಿ ಇಲ್ಲಿ ಲಭ್ಯವಿರುವ ಅನುದಾನಕ್ಕೆ ಸಂಬಂಧಿಸಿದಂತೆ ಈಗಾಗಲೇ 2016–17 ಮತ್ತು 2017–18ನೇ ಸಾಲಿಗಾಗಿ ಪ್ರಥಮ ಹಂತದಲ್ಲಿ 22242.43 ಲಕ್ಷ ರೂಪಾಯಿಗಳ ಅನುದಾನ ಹಂಚಿಕೆಯಾಗಿದ್ದು, ಈ ಅನುದಾನದಲ್ಲಿ ನಿಯಮ 18(2) ರಂತೆ ಆಡಳಿತಾತ್ಮಕ ವೆಚ್ಚಕ್ಕಾಗಿ (ಶೇ.5 ರಷ್ಟು) 1112.12 ಲಕ್ಷ ರೂಪಾಯಿಗಳು ಹಾಗೂ ನಿಯಮ 18(1) ರಂತೆ Endowment ಗಾಗಿ (ಶೇ.20 ರಷ್ಟು) 4448.49 ಲಕ್ಷ ರೂಪಾಯಿಗಳು ಹೀಗೆ ಒಟ್ಟು 5560.61 ಲಕ್ಷ ರೂಪಾಯಿಗಳನ್ನು ಕಾಯ್ದಿರಿಸಿ ಉಳಿದ 16681.82 ಲಕ್ಷ ರೂಪಾಯಿಗಳಿಗೆ 149 ಕಾಮಗಾರಿಗಳಿಗೆ ಕ್ರಿಯಾ ಯೋಜನೆಯು ಮಂಜೂರಾತಿಯಾಗಿರುತ್ತದೆ. ಮಂಜೂರಾದ ಕ್ರಿಯಾ ಯೋಜನೆಯಂತೆ ಎಲ್ಲಾ ಕಾಮಗಾರಿಗಳ ಅನುಷ್ಠಾನಕ್ಕೆ ಅನುಷ್ಠಾನಾಧಿಕಾರಿಗಳನ್ನು ನೇಮಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಕಾಮಗಾರಿಗಾಗಿ ಕಾಯ್ದಿರಿಸಿದ ಅನುದಾನದಲ್ಲಿ **4633.25 ಲಕ್ಷ** ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದ್ದು, **12048.55 ಲಕ್ಷ** ರೂಪಾಯಿಗಳು ಇನ್ನೂ ಬಳಕೆಗೆ ಲಭ್ಯವಿರುತ್ತದೆ.

- **ಕ್ರಿಯಾ ಯೋಜನೆಯ ಹಂತ–2 (2017–18) :**

2017–18 ನೇ ಸಾಲಿಗಾಗಿ ಎರಡನೇ ಹಂತದಲ್ಲಿ 30,000.00 ಲಕ್ಷ ರೂಪಾಯಿಗಳ ಅನುದಾನ ಹಂಚಿಕೆಯಾಗಿದ್ದು ಈ ಅನುದಾನದಲ್ಲಿ ನಿಯಮ 18(2) ರಂತೆ ಆಡಳಿತಾತ್ಮಕ ವೆಚ್ಚಕ್ಕಾಗಿ (ಶೇ.5 ರಷ್ಟು) 1500.00 ಲಕ್ಷ ರೂಪಾಯಿಗಳು ಹಾಗೂ ನಿಯಮ 18(1) ರಂತೆ Endowmentಗಾಗಿ (ಶೇ.20 ರಷ್ಟು) 6000.00 ಲಕ್ಷ ರೂಪಾಯಿಗಳು ಹೀಗೆ ಒಟ್ಟು 7500.00 ಲಕ್ಷ ರೂಪಾಯಿಗಳನ್ನು ಕಾಯ್ದಿರಿಸಿ ಉಳಿದ 22500.00 ಲಕ್ಷ ರೂಪಾಯಿಗಳಿಗೆ 116 ಕಾಮಗಾರಿಗಳಿಗೆ ಕ್ರಿಯಾ ಯೋಜನೆಯು ಮಂಜೂರಾತಿಯಾಗಿರುತ್ತದೆ. ಮಂಜೂರಾದ ಕ್ರಿಯಾ ಯೋಜನೆಯಂತೆ ಎಲ್ಲಾ ಕಾಮಗಾರಿಗಳ ಅನುಷ್ಠಾನಕ್ಕೆ ಅನುಷ್ಠಾನಾಧಿಕಾರಿಗಳನ್ನು ನೇಮಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಕಾಮಗಾರಿಗಾಗಿ ಕಾಯ್ದಿರಿಸಿದ ಅನುದಾನದಲ್ಲಿ **4279.33 ಲಕ್ಷ** ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದ್ದು, **18220.67 ಲಕ್ಷ** ರೂಪಾಯಿಗಳು ಇನ್ನೂ ಬಳಕೆಗೆ ಲಭ್ಯವಿರುತ್ತದೆ.

- **ಕ್ರಿಯಾ ಯೋಜನೆಯ ಹಂತ–3 (2019–2020) ರಿಂದ 2021–22) :**

2018–19 ರಿಂದ 2020–21 ನೇ ಸಾಲಿಗಾಗಿ ಮೂರನೇ ಹಂತದಲ್ಲಿ 1,02,648.40 ಲಕ್ಷ ರೂಪಾಯಿಗಳ ಅನುದಾನ ಹಂಚಿಕೆಯಾಗಿದ್ದು ಈ ಅನುದಾನದಲ್ಲಿ ನಿಯಮ 18(2) ರಂತೆ ಆಡಳಿತಾತ್ಮಕ ವೆಚ್ಚಕ್ಕಾಗಿ (ಶೇ.5 ರಷ್ಟು) 5132.42 ಲಕ್ಷ ರೂಪಾಯಿಗಳು ಹಾಗೂ ನಿಯಮ 18(1) ರಂತೆ Endowment ಗಾಗಿ (ಶೇ.10 ರಷ್ಟು) 10264.84 ಲಕ್ಷ ರೂಪಾಯಿಗಳು ಹೀಗೆ ಒಟ್ಟು 15397.26 ಲಕ್ಷ ರೂಪಾಯಿಗಳನ್ನು ಕಾಯ್ದಿರಿಸಿದ್ದು, 87251.14 ಲಕ್ಷ ರೂಪಾಯಿಗಳ ಅನುದಾನ ಕಾಮಗಾರಿಗಾಗಿ ಬಳಸಲು ಅವಕಾಶವಿದ್ದು, ಸದರಿ ಮೊತ್ತದಲ್ಲಿ ಈಗಾಗಲೇ 82251.14 ಲಕ್ಷ ರೂಪಾಯಿಗಳಿಗೆ 473 ಕಾಮಗಾರಿಗಳಿಗೆ ಕ್ರಿಯಾ ಯೋಜನೆಯು ಮಂಜೂರಾತಿಯಾಗಿರುತ್ತದೆ. ಮಂಜೂರಾದ ಕ್ರಿಯಾ ಯೋಜನೆಯಂತೆ ಎಲ್ಲಾ ಕಾಮಗಾರಿಗಳ ಅನುಷ್ಠಾನಕ್ಕೆ ಅನುಷ್ಠಾನಾಧಿಕಾರಿಗಳನ್ನು ನೇಮಿಸಲಾಗಿದ್ದು, ಸದರಿ ಕಾಮಗಾರಿಗಳಲ್ಲಿ 118 ಕಾಮಗಾರಿಗಳಿಗೆ

ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ. ಕಾಮಗಾರಿಗಾಗಿ ಕಾಯ್ದಿರಿಸಿದ ಅನುದಾನದಲ್ಲಿ **3660.46 ಲಕ್ಷ** ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದ್ದು, **78590.68 ಲಕ್ಷ** ರೂಪಾಯಿಗಳು ಇನ್ನೂ ಬಳಕೆಗೆ ಲಭ್ಯವಿರುತ್ತದೆ.

- **ಕ್ರಿಯಾ ಯೋಜನೆಯ ಹಂತ-4 (2019-2020) ರಿಂದ 2021-22) :**

ಮಾನ್ಯ ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರಕಾರ ರವರು ಸೂಚಿಸಿರುವಂತೆ 2018-19 ರಿಂದ 2020-21 ನೇ ಸಾಲಿಗಾಗಿ ಕ್ರಿಯಾ ಯೋಜನೆಯನ್ನು ತಯಾರಿಸಲು ಬಾಕಿ ಉಳಿದಿರುವ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸುವಂತೆ ಸೂಚಿಸಿದ ಹಿನ್ನಲೆಯಲ್ಲಿ ದಿನಾಂಕ 30.10.2019 ರಂದು ನಡೆದ ಗೌರ್ನಿಂಗ್ ಕೌನ್ಸಿಲ್ ಸಭೆಯಲ್ಲಿ 19071.00 ಲಕ್ಷಗಳ ಅನುದಾನಕ್ಕೆ ಕ್ರಿಯಾ ಯೋಜನೆಗೆ ಅನುಮೋದನೆಯನ್ನು ಪಡೆಯಲಾಗಿದೆ. ಸದರಿ ಅನುಮೋದನೆಗೆ ದಿನಾಂಕ 19.11.2019 ರ ಪತ್ರದಲ್ಲಿ ಕೆ.ಎಮ್.ಇ.ಆರ್.ಸಿ ಯಿಂದ ಸಹಮತಿಯನ್ನು ನೀಡಿರುತ್ತಾರೆ.

ಕ್ರಿಯಾ ಯೋಜನೆ ತಯಾರಿಸಲು ಬಾಕಿ ಉಳಿದಿರುವ ಅನುದಾನ 24826.00 ಲಕ್ಷ ರೂಪಾಯಿಗಳು. ಈ ಅನುದಾನದಲ್ಲಿ ನಿಯಮ 18(2) ರಂತೆ ಆಡಳಿತಾತ್ಮಕ ವೆಚ್ಚಕ್ಕಾಗಿ (ಶೇ.5 ರಷ್ಟು) 1241.30 ಲಕ್ಷ ರೂಪಾಯಿಗಳು ಹಾಗೂ ನಿಯಮ 18(1) ರಂತೆ Endowment ಗಾಗಿ (ಶೇ.10 ರಷ್ಟು) 2482.60 ಲಕ್ಷ ರೂಪಾಯಿಗಳು ಹೀಗೆ ಒಟ್ಟು 3723.90 ಲಕ್ಷ ರೂಪಾಯಿಗಳನ್ನು ಕಾಯ್ದಿರಿಸಿದ್ದು, 21102.10 ಲಕ್ಷ ರೂಪಾಯಿಗಳ ಅನುದಾನ ಕಾಮಗಾರಿಗಾಗಿ ಬಳಸಲು ಅವಕಾಶವಿದ್ದು, ಸದರಿ ಮೊತ್ತದಲ್ಲಿ ಈಗಾಗಲೇ 19071.00 ಲಕ್ಷ ರೂಪಾಯಿಗಳಿಗೆ 284 ಕಾಮಗಾರಿಗಳಿಗೆ ಕ್ರಿಯಾ ಯೋಜನೆಯು ಮಂಜೂರಾತಿಯಾಗಿರುತ್ತದೆ. ಮಂಜೂರಾದ ಕ್ರಿಯಾ ಯೋಜನೆಯಂತೆ ಎಲ್ಲಾ ಕಾಮಗಾರಿಗಳ ಅನುಷ್ಠಾನಕ್ಕೆ ಅನುಷ್ಠಾನಾಧಿಕಾರಿಗಳನ್ನು ನೇಮಿಸಲಾಗಿದ್ದು, ತುರ್ತು ಅಂದಾಜು ಪತ್ರಿಕೆಯನ್ನು ತಯಾರಿಸಿ ಆಡಳಿತಾತ್ಮಕ ಮಂಜೂರಾತಿಗಾಗಿ ಸಲ್ಲಿಸುವಂತೆ ಸೂಚಿಸಲಾಗಿದೆ.

- **ಒಟ್ಟು 4 ಹಂತದ ಕ್ರಿಯಾ ಯೋಜನೆ (2016-17 ರಿಂದ 2021-22) :**

ಜಿಲ್ಲಾ ಖನಿಜ ಪ್ರತಿಷ್ಠಾನ ಬಳ್ಳಾರಿ. ಇಲ್ಲಿ 2016-17 ರಿಂದ 2021-22 ನೇ ಸಾಲಿನವರೆಗೆ ಒಟ್ಟು 179716.83 ಲಕ್ಷ ರೂಪಾಯಿಗಳ ಅನುದಾನ ಹಂಚಿಕೆಯಾಗಿರುತ್ತದೆ. ಈ ಅನುದಾನದಲ್ಲಿ ನಿಯಮ 18(2) ರಂತೆ ಆಡಳಿತಾತ್ಮಕ ವೆಚ್ಚಕ್ಕಾಗಿ (ಶೇ.5 ರಷ್ಟು) 8985.84 ಲಕ್ಷ ರೂಪಾಯಿಗಳು ಹಾಗೂ ನಿಯಮ 18(1) ರಂತೆ Endowmentಗಾಗಿ 23195.93 ಲಕ್ಷ ರೂಪಾಯಿಗಳು ಹೀಗೆ ಒಟ್ಟು 147535.06 ಲಕ್ಷ ರೂಪಾಯಿಗಳನ್ನು ಕಾಯ್ದಿರಿಸಲಾಗಿದೆ. ಉಳಿದ 147535.06 ಲಕ್ಷ ರೂಪಾಯಿಗಳಿಗೆ 1022 ಕಾಮಗಾರಿಗಳಿಗೆ ಕ್ರಿಯಾ ಯೋಜನೆಯು ಮಂಜೂರಾತಿಯಾಗಿರುತ್ತದೆ. ಮಂಜೂರಾದ ಕ್ರಿಯಾ ಯೋಜನೆಯಂತೆ ಹಂತ-1 ಮತ್ತು 2 ರ ಕ್ರಿಯಾ ಯೋಜನೆಯಲ್ಲಿನ ಎಲ್ಲಾ ಕಾಮಗಾರಿಗಳ ಅನುಷ್ಠಾನಕ್ಕೆ ಅನುಷ್ಠಾನಾಧಿಕಾರಿಗಳನ್ನು ನೇಮಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 3ನೇ ಹಂತದ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳ ಅನುಷ್ಠಾನಕ್ಕೆ ದಿನಾಂಕ: 13.09.2019 ರಂದು ಅನುಷ್ಠಾನಾಧಿಕಾರಿಗಳನ್ನು ನೇಮಿಸಲಾಗಿದೆ. ಹಂತ-1, 2, 3 ಮತ್ತು 4ರ ಕ್ರಿಯಾ ಯೋಜನೆಯಲ್ಲಿ ಕಾಮಗಾರಿಗಾಗಿ ಕಾಯ್ದಿರಿಸಿದ ಒಟ್ಟು ಅನುದಾನ 147535.06 ಲಕ್ಷ ರೂಪಾಯಿಗಳಿದ್ದು, ಇದರಲ್ಲಿ **12573.04 ಲಕ್ಷ** ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನೂ **134962.02 ಲಕ್ಷ** ರೂಪಾಯಿಗಳ ಅನುದಾನ ಬಳಕೆಗೆ ಅವಕಾಶವಿರುತ್ತದೆ.

- **ಆಡಳಿತಾತ್ಮಕ ವೆಚ್ಚ ( ಶೇ. 5ರಷ್ಟು ) :**

ಜಿಲ್ಲಾ ಖನಿಜ ಪ್ರತಿಷ್ಠಾನ ಬಳ್ಳಾರಿ. ಇಲ್ಲಿ 2016-17 ರಿಂದ 2020-21 ನೇ ಸಾಲಿನವರೆಗೆ ಒಟ್ಟು 179716.83 ಲಕ್ಷ ರೂಪಾಯಿಗಳ ಅನುದಾನ ಹಂಚಿಕೆಯಾಗಿರುತ್ತದೆ. ಹಂಚಿಕೆಯಾದ ಮೊತ್ತಕ್ಕೆ ನಿಯಮ 18(2) ರಂತೆ ಆಡಳಿತಾತ್ಮಕ ವೆಚ್ಚಕ್ಕಾಗಿ (ಶೇ.5 ರಷ್ಟು) **8985.84 ಲಕ್ಷ** ರೂಪಾಯಿಗಳನ್ನು ಕಾಯ್ದಿರಿಸಲಾಗಿದೆ. ಇದರಲ್ಲಿ ಇಲ್ಲಿಯವರೆಗೆ **110.30** ಲಕ್ಷ ರೂಪಾಯಿಗಳನ್ನು ಬಳಕೆ ಮಾಡಲಾಗಿದ್ದು, ಇನ್ನು **8875.54** ಲಕ್ಷ ರೂಪಾಯಿಗಳ ಬಳಕೆಗೆ ಅವಕಾಶವಿರುತ್ತದೆ.

- **Endowment ಗಾಗಿ ಕಾಯ್ದಿರಿಸಿದ್ದು :**

ಜಿಲ್ಲಾ ಖನಿಜ ಪ್ರತಿಷ್ಠಾನ ಬಳ್ಳಾರಿ. ಇಲ್ಲಿ 2016-17 ರಿಂದ 2020-21 ನೇ ಸಾಲಿನವರೆಗೆ ಒಟ್ಟು 179716.83 ಲಕ್ಷ ರೂಪಾಯಿಗಳ ಅನುದಾನ ಹಂಚಿಕೆಯಾಗಿರುತ್ತದೆ. ಹಂಚಿಕೆಯಾದ ಮೊತ್ತಕ್ಕೆ ನಿಯಮ 18(1) ರಂತೆ Endowmentಗಾಗಿ **23195.93 ಲಕ್ಷ** ರೂಪಾಯಿಗಳನ್ನು ಕಾಯ್ದಿರಿಸಲಾಗಿದೆ. ನಿಯಮ 18(1) ರಲ್ಲಿ ten percent of the fund of the District Mineral Foundation trust shall be earmarked for endowment purpose after closure of mining activities in the affected areas; ಎಂದು ವಿವರಿಸಲಾಗಿದೆ.

**ಕ್ರಿಯಾ ಯೋಜನೆಯ ಹಂತ-1 (2016-17 ಮತ್ತು 2017-18) :**

- ಹಂಚಿಕೆ/ಸಂಗ್ರಹ ಮೊತ್ತ 22242.52 ಲಕ್ಷ ರೂಪಾಯಿಗಳು
- Endowment ಗಾಗಿ (ಶೇ.20 ರಷ್ಟು) 4448.48 ಲಕ್ಷ ರೂಪಾಯಿಗಳು
- ಆಡಳಿತಾತ್ಮಕ ವೆಚ್ಚಕ್ಕಾಗಿ (ಶೇ.5 ರಷ್ಟು) 1112.12 ಲಕ್ಷ ರೂಪಾಯಿಗಳು
- ಅನುಮೋದಿತ ಕ್ರಿಯಾ ಯೋಜನೆಯ ಮೊತ್ತ 16681.81 ಲಕ್ಷ ರೂಪಾಯಿಗಳು
- ಕಾಮಗಾರಿಗಳ ಸಂಖ್ಯೆ: 149
- ಬಿಡುಗಡೆ ಮಾಡಲಾದ ಮೊತ್ತ: 4633.25 ಲಕ್ಷ ರೂಪಾಯಿಗಳು

**ಕ್ರಿಯಾ ಯೋಜನೆಯ ಹಂತ-2 (2017-18) :**

- ಹಂಚಿಕೆ/ಸಂಗ್ರಹ ಮೊತ್ತ 30000.00 ಲಕ್ಷ ರೂಪಾಯಿಗಳು
- Endowment ಗಾಗಿ (ಶೇ.20 ರಷ್ಟು) 6000.00 ಲಕ್ಷ ರೂಪಾಯಿಗಳು
- ಆಡಳಿತಾತ್ಮಕ ವೆಚ್ಚಕ್ಕಾಗಿ (ಶೇ.5 ರಷ್ಟು) 1112.12 ಲಕ್ಷ ರೂಪಾಯಿಗಳು
- ಅನುಮೋದಿತ ಕ್ರಿಯಾ ಯೋಜನೆಯ ಮೊತ್ತ 22500.00 ಲಕ್ಷ ರೂಪಾಯಿಗಳು
- ಕಾಮಗಾರಿಗಳ ಸಂಖ್ಯೆ: 116
- ಬಿಡುಗಡೆ ಮಾಡಲಾದ ಮೊತ್ತ: 4279.33 ಲಕ್ಷ ರೂಪಾಯಿಗಳು

**ಕ್ರಿಯಾ ಯೋಜನೆಯ ಹಂತ-3 (2019-2020) ರಿಂದ 2021-22) :**

- ಹಂಚಿಕೆ ಮೊತ್ತ 1,02,648.40 ಲಕ್ಷ ರೂಪಾಯಿಗಳು
- Endowment ಗಾಗಿ (ಶೇ.10 ರಷ್ಟು) 10264.84 ಲಕ್ಷ ರೂಪಾಯಿಗಳು
- ಆಡಳಿತಾತ್ಮಕ ವೆಚ್ಚಕ್ಕಾಗಿ (ಶೇ.5 ರಷ್ಟು) 5132.42 ಲಕ್ಷ ರೂಪಾಯಿಗಳು
- ಅನುಮೋದಿತ ಕ್ರಿಯಾ ಯೋಜನೆಯ ಮೊತ್ತ 22500.00 ಲಕ್ಷ ರೂಪಾಯಿಗಳು

- ಕಾಮಗಾರಿಗಳ ಸಂಖ್ಯೆ: 473
- ಬಿಡುಗಡೆ ಮಾಡಲಾದ ಮೊತ್ತ: 3660.46 ಲಕ್ಷ ರೂಪಾಯಿಗಳು

**ಕ್ರಿಯಾ ಯೋಜನೆಯ ಹಂತ-4 (2019-2020) ರಿಂದ 2021-22) :**

- ಹಂಚಿಕೆ ಮೊತ್ತ 24826.00 ಲಕ್ಷ ರೂಪಾಯಿಗಳು
- Endowment ಗಾಗಿ (ಶೇ.10 ರಷ್ಟು) 2482.60 ಲಕ್ಷ ರೂಪಾಯಿಗಳು
- ಆಡಳಿತಾತ್ಮಕ ವೆಚ್ಚಕ್ಕಾಗಿ (ಶೇ.5 ರಷ್ಟು) 1241.30 ಲಕ್ಷ ರೂಪಾಯಿಗಳು
- ಕ್ರಿಯಾಯೋಜನೆಗಾಗಿ ಕಾಯ್ದಿರಿಸಿದ ಮೊತ್ತ 21102.10 ಲಕ್ಷ ರೂಪಾಯಿಗಳು
- ಅನುಮೋದಿತ ಕ್ರಿಯಾ ಯೋಜನೆಯ ಮೊತ್ತ 19071.00 ಲಕ್ಷ ರೂಪಾಯಿಗಳು
- ಕಾಮಗಾರಿಗಳ ಸಂಖ್ಯೆ: 284

**ಒಟ್ಟು ನಾಲ್ಕು ಹಂತದ ಕ್ರಿಯಾ ಯೋಜನೆ (2016-17 ರಿಂದ 2021-22) :**

- ಹಂಚಿಕೆ ಮೊತ್ತ 179716.83 ಲಕ್ಷ ರೂಪಾಯಿಗಳು
- Endowment ಗಾಗಿ (ಶೇ.10 ರಷ್ಟು) 23195.93 ಲಕ್ಷ ರೂಪಾಯಿಗಳು
- ಆಡಳಿತಾತ್ಮಕ ವೆಚ್ಚಕ್ಕಾಗಿ (ಶೇ.5 ರಷ್ಟು) 8985.84 ಲಕ್ಷ ರೂಪಾಯಿಗಳು
- ಅನುಮೋದಿತ ಕ್ರಿಯಾ ಯೋಜನೆಯ ಮೊತ್ತ 140423.86 ಲಕ್ಷ ರೂಪಾಯಿಗಳು
- ಕಾಮಗಾರಿಗಳ ಸಂಖ್ಯೆ: 1022
- ಬಿಡುಗಡೆ ಮಾಡಲಾದ ಮೊತ್ತ: 12573.04 ಲಕ್ಷ ರೂಪಾಯಿಗಳು

**ಜಿಲ್ಲಾ ಖನಿಜ ಪ್ರತಿಷ್ಠಾನ ಬಳ್ಳಾರಿ. ಇಲ್ಲಿ 2016-17 ರಿಂದ 2020-21 ನೇ ಸಾಲಿನವರೆಗೆ ಒಟ್ಟು 179716.83 ಲಕ್ಷ ರೂಪಾಯಿಗಳ ಅನುದಾನ ಹಂಚಿಕೆಯಾಗಿರುತ್ತದೆ. ಸದರಿ ಅನುದಾನದಲ್ಲಿ**

- ಆಡಳಿತಾತ್ಮಕ ವೆಚ್ಚ ( ಶೇ. 5ರಷ್ಟು ) ಕ್ಕಾಗಿ ಕಾಯ್ದಿರಿಸಿದ್ದು: 8985.84 ಲಕ್ಷ ರೂಪಾಯಿಗಳು.
- Endowment ಗಾಗಿ ಕಾಯ್ದಿರಿಸಿದ್ದು : 23195.93 ಲಕ್ಷ ರೂಪಾಯಿಗಳು.
- ಕ್ರಿಯಾ ಯೋಜನೆಗಾಗಿ ಕಾಯ್ದಿರಿಸಿದ್ದು: 147535.06 ಲಕ್ಷ ರೂಪಾಯಿಗಳು.

**ಕ್ರಿಯಾ ಯೋಜನೆಗಾಗಿ ಕಾಯ್ದಿರಿಸಿದ ಒಟ್ಟು 147535.06 ಲಕ್ಷ ರೂಪಾಯಿಗಳಲ್ಲಿ**

- High Priority Areas ಗಾಗಿ ಕಾಯ್ದಿರಿಸಿದ್ದು (ಶೇ 60 ರಷ್ಟು ): 88521.036 ಲಕ್ಷ ರೂ.ಗಳು.
- Other Priority Areas ಗಾಗಿ ಕಾಯ್ದಿರಿಸಿದ್ದು (ಶೇ 40 ರಷ್ಟು): 59014.024 ಲಕ್ಷ ರೂ.ಗಳು.

**ನವೆಂಬರ್ 2019 ರ ಅಂತ್ಯಕ್ಕೆ ಖಾತೆಯಲ್ಲಿ ಜಮಾ ಇರುವ ಮೊತ್ತ :**

**ನವೆಂಬರ್** 2019ರ ಅಂತ್ಯಕ್ಕೆ District Mineral Foundation Trust ಖಾತೆಯಲ್ಲಿ **103700.00** ಲಕ್ಷ ರೂಪಾಯಿಗಳ ಅನುದಾನ ಲಭ್ಯತೆ ಇರುತ್ತದೆ. (ಸದರಿ ಮೊತ್ತದಲ್ಲಿ **ನವೆಂಬರ್** ಮಾಹೆಯಲ್ಲಿ **1500.45** ಲಕ್ಷಗಳನ್ನು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.)

➤ ಈ ರಸ್ತೆಯಲ್ಲಿ ಶಿಕ್ಷಣ ಇಲಾಖೆಯ ಹಳೆಯ ಸರ್ಕಾರಿ ಪುಸ್ತಕಗಳ ಡಿಪೋವಿದ್ದು, ಬಳಸಲಾಗುತ್ತಿಲ್ಲ. ಆದ್ದರಿಂದ ಈ ಕಟ್ಟಡವನ್ನು ವಸತಿ ನಿಲಯಕ್ಕಾಗಿ ಯಾವುದಕ್ಕಾಗಿ ಬಳಸಬಹುದೆಂದು ಚಿಂತನೆ ನಡೆಸಿ ವರದಿ ಸಲ್ಲಿಸತಕ್ಕದ್ದು. **(ಕ್ರಮ: ಮು.ಕಾ.ನಿ., ಜಿ.ಪಂ., ತುಮಕೂರು ಜಿಲ್ಲೆ)**





➤ ಈ ರಸ್ತೆಯಲ್ಲಿ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಅತಿಥಿ ಗೃಹ ಬಳಕೆಯಾಗುತ್ತಿರುವುದಿಲ್ಲ. ಆದ್ದರಿಂದ ಸದರಿ ಕಟ್ಟಡವನ್ನು ಮಹಿಳೆಯರ ಹಾಸ್ಟೆಲ್‌ನ್ನಾಗಿ ಏಕೆ ಪರಿವರ್ತಿಸಬಾರದು ಎಂದು ಪರಿಶೀಲಿಸಿ ವರದಿ ಸಲ್ಲಿಸತಕ್ಕದ್ದು. **(ಕ್ರಮ: ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ)**

➤ **ಒಟ್ಟಾರೆ ಈ ರಸ್ತೆಯಲ್ಲಿ ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರರಿಗೆ ಈಗಾಗಲೇ ಹಲವಾರು ಭಾರಿ ಸೂಚಿಸಿದಾಗ್ಯೂ ಸಹ ಯಾವುದೇ ರೀತಿ ಗಣನೆಗೆ ತೆಗೆದುಕೊಳ್ಳದೆ ಬೇಜವ್ದಾರಿಯಿಂದ ಕೆಲಸ ನಿರ್ವಹಿಸಿರುತ್ತಾರೆ. ಆದ್ದರಿಂದ, ಸದರಿ ಗುತ್ತಿಗೆದಾರರ ಕರಾರನ್ನು ಒಂದು ವಾರದೊಳಗೆ ರದ್ದುಗೊಳಿಸತಕ್ಕದ್ದು. ಈ ಆದೇಶವನ್ನು ಪಾಲಿಸದೇ ತಪ್ಪಿದಲ್ಲಿ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಲಾಗುವುದು. (ಕ್ರಮ: ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಅಭಿಯಂತರರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್)**

- **ಡಾ॥ ರಾಧಕೃಷ್ಣ ರಸ್ತೆ:**ಈ ರಸ್ತೆಯನ್ನು ಸ್ಮಾರ್ಟ್ ರಸ್ತೆ ಪ್ಯಾಕೇಜ್ – 3ಬಿ (03 ರಸ್ತೆಗಳು) ಅಡಿಯಲ್ಲಿ ಅಭಿವೃದ್ಧಿ ಪಡಿಸುತ್ತಿದ್ದು, ಸದರಿ ಪ್ಯಾಕೇಜ್‌ಗೆ ದಿನಾಂಕ: 06.03.2019 ರಂದು ಕಾರ್ಯದೇಶ ನೀಡಿ ಈಗಾಗಲೇ 09 ತಿಂಗಳಾಗಿರುತ್ತದೆ. ಈ ರಸ್ತೆಗೆ ದಿನಾಂಕ: 19.10.2019 ರಂದು ಭೇಟಿ ನೀಡಿದಾಗ **ಸಂಬಂಧಪಟ್ಟ ಗುತ್ತಿಗೆದಾರರಿಗೆ ದಿನಾಂಕ: 19.10.2019 ರಿಂದ 26.10.2019 ರೊಳಗಾಗಿ ಸಂಪೂರ್ಣ ಒಂದು ಭಾಗದ ರಸ್ತೆಯಲ್ಲಿ ಛೇಂಬರ್‌ಗಳು, ಪೈಪ್‌ಲೈನ್ ಅಳವಡಿಕೆ, ಡ್ರೈನ್ ನಿರ್ಮಾಣ ಹಾಗೂ ಪಾದಚಾರಿ ಮಾರ್ಗವನ್ನು ಪೂರ್ಣಗೊಳಿಸಲು ಸೂಚಿಸಲಾಗಿತ್ತು. ಆದರೆ ಇನ್ನು ಪಾದಚಾರಿ ಮಾರ್ಗ ಸಂಪೂರ್ಣವಾಗಿ ಪೂರ್ಣಗೊಳಿಸಿರುವುದಿಲ್ಲ.**

ಅದರಲ್ಲೂ ಈ ದಿನದ ವೀಕ್ಷಣೆಯಲ್ಲಿ ಗಮನಿಸಿದ ಪ್ರಮುಖ ಅಂಶಗಳು ಈ ಕೆಳಕಂಡಂತಿದೆ:

➤ ಈ ರಸ್ತೆಯಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿದ್ದು, ಈ ಕೆಳಕಂಡ ಅಂಶಗಳು ಗಮನಕ್ಕೆ ಬಂದಿರುತ್ತದೆ. ಸಂಬಂಧ ಪಟ್ಟವರ ಮೇಲೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

❖ ವಿದ್ಯಾರ್ಥಿ ನಿಲಯದಲ್ಲಿ ವಾರ್ಡನ್ ಇರುವುದಿಲ್ಲ.

❖ ವಿದ್ಯಾರ್ಥಿ ನಿಲಯದಲ್ಲಿ ಸ್ವಚ್ಛತೆ ಕಾಪಾಡಿಕೊಂಡಿರುವುದಿಲ್ಲ.

❖ ವಿದ್ಯಾರ್ಥಿ ನಿಲಯದಲ್ಲಿ ಅಡಿಗೆ ಮಾಡುವವರು ಒಟ್ಟು 240 ಮಕ್ಕಳು ಇರುತ್ತಾರೆ ಎಂದು ಹೇಳುತ್ತಾರೆ. ಆದರೆ ಪ್ರಸ್ತುತ ಅಲ್ಲಿ ಕೇವಲ 30-40 ಮಕ್ಕಳು ಮಾತ್ರ ಇರುವುದು ಕಂಡುಬಂದಿರುತ್ತದೆ.

❖ ವಿದ್ಯಾರ್ಥಿ ನಿಲಯದ ಪಕ್ಕದಲ್ಲಿ ನಿರ್ಮಿಸುತ್ತಿರುವ ಮತ್ತೊಂದು ಹಾಸ್ಟೆಲ್ ಕಟ್ಟಡ ನಿರ್ಮಾಣ ಅಪೂರ್ಣ. ಅದಕ್ಕಾಗಿ ಬಾಕಿ ಅನುದಾನ ಒದಗಿಸುವುದು

**(ಕ್ರಮ: ಮು.ಕಾ.ನಿ., ಜಿ.ಪಂ. ತುಮಕೂರು ಜಿಲ್ಲೆ)**






➤ ಈ ರಸ್ತೆಯಲ್ಲಿನ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಕಛೇರಿ ಮುಂಭಾಗದಲ್ಲಿ ಖಾಲಿ ಜಾಗವಿದ್ದು, ಪಾರ್ಕಿಂಗ್ ವ್ಯವಸ್ಥೆ ನಿರ್ಮಿಸುವ ಬಗ್ಗೆ ಚಿಂತನೆ ನಡೆಸಿ ವರದಿ ಸಲ್ಲಿಸತಕ್ಕದ್ದು. **(ಕ್ರಮ: ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ)**



**ಪ್ರಸ್ತುತ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಅಡಿಯಲ್ಲಿ ಆಯ್ಕೆ ಮಾಡಿಕೊಂಡಿರುವ ಎಲ್ಲಾ ಸ್ಮಾರ್ಟ್ ರಸ್ತೆಗಳಲ್ಲಿ ಸುಮಾರು ಒಟ್ಟು 550-600 ಬೀದಿ ವ್ಯಾಪಾರಿಗಳು ದಿನನಿತ್ಯ ವ್ಯಾಪಾರ ಮಾಡುತ್ತಿದ್ದು, ಇವರನ್ನೆಲ್ಲ ಗಮನದಲ್ಲಿಟ್ಟುಕೊಂಡು ಸೂಕ್ತ ಸ್ಥಳಗಳಲ್ಲಿ ವೆಂಡಿಂಗ್ ಜೋನ್ಸ್‌ಗಳನ್ನು ನಿರ್ಮಿಸಲು ಜಿಲ್ಲಾಧಿಕಾರಿಗಳು ಹಾಗೂ**

4. **ಭೂಸ್ವಾಧೀನ ಪ್ರಕರಣ:**

ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ, ಹೊಸಪೇಟೆ ತಾಲೂಕಿನ 12 ಗ್ರಾಮಗಳು, ಸಂಡೂರು ತಾಲೂಕಿನ 02 ಗ್ರಾಮಗಳು ಹಾಗೂ ಬಳ್ಳಾರಿ ತಾಲೂಕಿನ 21 ಗ್ರಾಮಗಳು ಒಟ್ಟು 35 ಗ್ರಾಮಗಳ ಒಟ್ಟು ವಿಸ್ತೀರ್ಣ 1090 ಎಕರೆ ಜಮೀನನ್ನು ರಾಷ್ಟ್ರೀಯ ಹೆದ್ದಾರಿ-63ಗೆ ಭೂಸ್ವಾಧೀನವಾಗಿದ್ದು, ಪರಿಹಾರ ಪಾವತಿ ಹಂತದಲ್ಲಿ ಬಾಕಿ ಇರುತ್ತದೆ. ಒಟ್ಟು ರೂ.177.46 ಕೋಟಿ ರಲ್ಲಿ ಅಕ್ಟೋಬರ್ 2019ರವರೆಗೆ ರೂ.142.91 ಕೋಟಿ ಪರಿಹಾರ ಪಾವತಿಸಲಾಗಿರುತ್ತದೆ. ರೂ.34.55ಕೋಟಿ ಪರಿಹಾರ ಪಾವತಿಸಲು ಬಾಕಿಯಿದ್ದು, ಭೂಮಾಲೀಕರಿಂದ ದಾಖಲೆಗಳು ಸಲ್ಲಿಸಲು ಬಾಕಿಯಿರುತ್ತದೆ.

ಬಳ್ಳಾರಿ ತಾಲೂಕಿನ 08 ಗ್ರಾಮಗಳ ಒಟ್ಟು ವಿಸ್ತೀರ್ಣ 112 ಹೆಕ್ಟೇರ್ (264.29 ಎಕರೆ) ಜಮೀನನ್ನು ಬಳ್ಳಾರಿ-ಹಿರಿಯೂರ್ ವಿಭಾಗದ ರಾಷ್ಟ್ರೀಯ ಹೆದ್ದಾರಿ-150ಎ ಯೋಜನೆಗೆ ಭೂಸ್ವಾಧಿನವಾಗಿದ್ದು, ಸದರಿ ಪ್ರಕರಣದಲ್ಲಿ ಭೂ ಸ್ವಾಧೀನ ಪೂರ್ಣಗೊಂಡಿದ್ದು, ಪರಿಹಾರ ಪಾವತಿ ಹಂತದಲ್ಲಿ ಬಾಕಿ ಇರುತ್ತದೆ. ಹಾಲಿ 8 ಗ್ರಾಮಗಳು ಜೆ.ಎಂ.ಸಿ. ಪೂರ್ಣಗೊಂಡಿದ್ದು, ಐತೀರ್ಪು ತಯಾರಿಸಿ ಪಿಡಿ, ಎನ್.ಹೆಚ್.ಎ.ಐ., ಹೊಸಪೇಟೆ ಇವರಿಗೆ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಒಟ್ಟು 8 ಗ್ರಾಮಗಳಲ್ಲಿ 4 ಗ್ರಾಮಗಳ ಐತೀರ್ಪುಗಳು ಆರ್.ಓ., ಬೆಂಗಳೂರು ರವರಿಂದ ಅನುಮೋದನೆಯಾಗಿದ್ದು, ಒಟ್ಟು ರೂ.11.902 ಕೋಟಿ ಪರಿಹಾರ ಪಾವತಿಸಿದ್ದು, ಬಾಕಿ ರೂ.1.93 ಕೋಟಿ ಪರಿಹಾರ ಪಾವತಿಸಲು ಪ್ರಗತಿಯಲ್ಲಿರುತ್ತದೆ.

ಹೊಸಪೇಟೆ ತಾಲೂಕಿನ ಅನಂತಶಯನಗುಡಿ ಗ್ರಾಮದ 1022.286 ಚ.ಮೀ. ಮೇಲು ಸೇತುವೆ ನಿರ್ಮಾಣದ ಜಮೀನಿಗೆ ಸಂಬಂಧಿಸಿದಂತೆ ಭೂಬೆಲೆ ನಿಗದಿಗೆ ದಿನಾಂಕ 30.5.2019 ರಂದು ಮತ್ತೊಮ್ಮೆ ಸಭೆ ಕೈಗೊಳ್ಳಲಾಗಿದ್ದು, ಸದರಿ ಸಭೆಯಲ್ಲಿ ಭೂಮಾಲೀಕರು ಭೂಬೆಲೆ ಸಮಿತಿ ನಗದಿಪಡಿಸಿದ ಮೊತ್ತಕ್ಕೆ ಒಪ್ಪಿಕೊಂಡಿರುತ್ತಾರೆ. ಆದರೆ ಸರ್ಕಾರಿ ಜಮೀನಿನಲ್ಲಿ ಸೈಟ್ ಮಂಜೂರು ಮಾಡಬೇಕೆಂದು ಬೇಡಿಕೆ ಇಟ್ಟಿದ್ದು, ನಿಯಮಾನುಸಾರ ಕಾಯ್ದೆಯಲ್ಲಿ ಇದಕ್ಕೆ ಅವಕಾಶವಿರುವುದಿಲ್ಲ. ಈ ಕುರಿತು ಬೇಡಿಕೆ ಇಲಾಖೆ ಹಾಗೂ ಭೂ ಮಾಲೀಕರೊಂದಿಗೆ ಸಭೆ ಕೈಗೊಳ್ಳಲು ಸಹಾ/ಯಕ ಆಯುಕ್ತರು, ಹೊಸಪೇಟೆ ರವರಿಗೆ ಪತ್ರ ಬರೆಯಲಾಗಿದೆ.

ಹರಪನಹಳ್ಳಿ ತಾಲೂಕಿನ ಶಿರಿಗಾನಹಳ್ಳಿ ಗ್ರಾಮದ ಸ.ನಂ.30/ಎ2 ವಿ:1.14 ಎಕರೆ ಜಮೀನನ್ನು ಕೊಟ್ಟೂರು-ಹರಿಹರ ರೈಲ್ವೆ ಬ್ರಾಡ್ ಗೇಜ್ ಲೈನ್ ನಿರ್ಮಾಣಕ್ಕಾಗಿ ಭೂಮಾಲೀಕರೊಂದಿಗೆ ಭೂಬೆಲೆ ಸಮಿತಿ ಸಭೆ ನಡೆಸಿ ದಿ:3.10.2019 ರಂದು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಭೂಸ್ವಾಧಿನ ಕಾಯ್ದೆ ಕಲಂ.26 ರಡಿ ನಿಯಮಾನುಸಾರ ಭೂಬೆಲೆ ಲೆಕ್ಕ ಹಾಕಿರುವ ಬಗ್ಗೆ ಮರು ಪರಿಶೀಲಿಸಿ ಪ್ರಸ್ತಾವನೆಯನ್ನು ಸಲ್ಲಿಸಲು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೊಟ್ಟೂರು-ಹರಿಹರ ರೈಲ್ವೆ ಬ್ರಾಡ್‌ಗೇಜ್ ಲೈನ್ ನಿರ್ಮಾಣ ಯೋಜನೆ, ದಾವಣಗೆರೆ ಇವರಿಗೆ ಸೂಚಿಸಲಾಗಿರುತ್ತದೆ.

ಹೊಸಪೇಟೆ ತಾಲೂಕಿನ ವಿ:47384.35 ಚ.ಮೀ.(11.62 ಎಕರೆ) ಹಾಗೂ ಕೂಡ್ಲಿಗಿ ತಾಲೂಕಿನ ವಿ:56680.86 ಚ.ಮೀ.(13.90 ಎಕರೆ) ಜಮೀನನ್ನು ರಾಷ್ಟ್ರೀಯ ಹೆದ್ದಾರಿ ಯೋಜನೆಗಾಗಿ ಭೂಸ್ವಾಧಿನ ಪ್ರಕರಣ ಐತೀರ್ಪು ಪೂರ್ಣಗೊಂಡಿದ್ದು, ಪರಿಹಾರ ಹಂತದಲ್ಲಿ ಬಾಕಿ ಇರುತ್ತದೆ.

{ಕ್ರಮ: ವಿಶೇಷ ಭೂಸ್ವಾಧೀನಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ, ಬಳ್ಳಾರಿ; ವಿಶೇಷ ಭೂಸ್ವಾಧೀನಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ, ಚಿತ್ರದುರ್ಗ; ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೊಟ್ಟೂರು-ಹರಿಹರ ರೈಲ್ವೆ ಬ್ರಾಡ್‌ಗೇಜ್ ಲೈನ್ ನಿರ್ಮಾಣ ಯೋಜನೆ, ದಾವಣಗೆರೆ.

5. **ವಿದ್ಯಾರ್ಥಿ ನಿಲಯಗಳು:-**

ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ ಮತು ಅಲ್ಪ ಸಂಖ್ಯಾತರ ಇಲಾಖೆಗಳ ವಿದ್ಯಾರ್ಥಿ ನಿಲಯಗಳ ನಿವೇಶನ ಮಂಜೂರಾತಿಗೆ ಸಂಬಂಧಿಸಿದಂತೆ

7 ಪ್ರಕರಣಗಳು ಬಾಕಿಯಿದ್ದು, ಅದರಲ್ಲಿ 02 ಪ್ರಕರಣಗಳಲ್ಲಿ ಅನುಮೋದಿಸಲಾಗಿರುತ್ತದೆ. ಇನ್ನೂ 05 ಪ್ರಕರಣಗಳಲ್ಲಿ ಸ್ಥಳ ಗುರುತಿಸಿ ಪ್ರಸ್ತಾವನ್ನು ಶೀಘ್ರವಾಗಿ ಸಲ್ಲಿಸಲು ಸೂಚಿಸಲಾಯಿತು.

**6. ರೈತರ ಆತ್ಮಹತ್ಯೆ ಪ್ರಕರಣಗಳು:-**

ಜಿಲ್ಲೆಯಲ್ಲಿ ರೈತರ ಆತ್ಮಹತ್ಯೆಗೆ ಸಂಬಂದಿಸಿದಂತೆ ಒಟ್ಟು 07 ಪ್ರಕರಣಗಳು ಬಾಕಿಯಿದ್ದು, ಎಫ್.ಎಸ್.ಎಲ್. ವರದಿಗಾಗಿ ಬಾಕಿಯಿರುತ್ತವೆ. ಸದರಿ ಪ್ರಕರಣಗಳನ್ನು ಇನ್ನು 20 ದಿನದೊಳಗೆ ವಿಲೇಗೊಳಿಸಲು ಸೂಚಿಸಲಾಯಿತು. ಹಾಗೂ ಪರಿಹಾರ ವಿತರಿಸಲು ಬಾಕಿಯಿರುವ 02 ಪ್ರಕರಣಗಳಲ್ಲಿ 15 ದಿನದೊಳಗೆ ಪರಿಹಾರ ವಿತರಿಸಲು ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ರೈತರ ಆತ್ಮಹತ್ಯೆಯಲ್ಲದೇ ಅಕಸ್ಮಿಕವಾಗಿ ಸಂಭವಿಸಿದ ಅವಘಡದಿಂದ ಮೃತರಾದ ರೈತರು, ಹಾವು ಕಡಿತದಿಂದ ಮೃತರಾದ ರೈತರ ಬಗ್ಗೆ ನಿಗದಿತ ನಮೂನೆಯಲ್ಲಿ ತಾಲೂಕುವಾರು ಮಾಹಿತಿಯನ್ನು ಸಿದ್ದಪಡಿಸಿ ಸಲ್ಲಿಸಲು ಸೂಚಿಸಲಾಯಿತು.

{ಕ್ರಮ: ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಬಳ್ಳಾರಿ}

ಜಿಲ್ಲಾಧಿಕಾರಿಗಳು
ಬಳ್ಳಾರಿ

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು
ಬಳ್ಳಾರಿ

22264995